ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
'ಅಮ್ಮಂದಿರ ದಿನ'ದ ನೆಪದಲ್ಲಿ ತಾಯಿ ತತ್ವಕ್ಕೆ ಹಿಡಿದ ಕನ್ನಡಿ



ಸಿಬಿಐ ನಿರ್ದೇಶಕರಾಗಿ ಪ್ರವೀಣ್ ಸೂದ್? 13
ವಿಶ್ವಕಪ್ ಶೂಟಿಂಗ್: 25 ಮೀ. ಪಿಸ್ತೂಲ್ ಸ್ಪರ್ಧೆಯಲ್ಲಿ ಸಾಧನೆ
ಜಲಂಧರ ಲೋಕಸಭಾ ಕ್ಷೇತ್ರ: ಎಎಪಿ ಅಭ್ಯರ್ಥಿ ಸುಶೀಲ್‌ಗೆ ಜಯ 13
ರಿದಮ್ ಸಾಂಗ್ವಾನ್ ವಿಶ್ವದಾಖಲೆ 14

'ಕೈ'ಗೆ ಭಾರೀ ಮತ, ಕಮಲಕ್ಕೆ ಆಘಾತ

ಗದ್ದುಗೆಗೇರಿಸಿದ 'ಗ್ಯಾರಂಟಿ' • ಮೈತ್ರಿ ಸರ್ಕಾರದ 'ಕುಮಾರ' ಕನಸು ಭಗ್ನ • ಬಿಜೆಪಿಗೆ ಮುಳುವಾದ ಭ್ರಷ್ಟಾಚಾರ, ಲಿಂಗಾಯತ ವಿವಾದ

• ವೈ.ಗ. ಜಗದೀಶ್

ಬೆಂಗಳೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿನ ಶೇ 40ರ ಕಮಿಷನ್ ಆರೋಪ, ಆಡಳಿತದಲ್ಲಿ ತೋರಿದ ಅದಕ್ಷತೆ, ಕೋಮುದ್ವೇಷದ ರಾಜಕಾರಣವನ್ನು ಸಹಿಸುವುದಿಲ್ಲ ಎಂದು ಸಾರಿದ ನಾಡಿನ ಜನ, ತಮ್ಮ ಶಕ್ತಿ ಬಳಸಿ ಕಮಲ ಪಡೆಯನ್ನು ಅಧಿಕಾರದಿಂದ ಬದಿಗೆ ಸರಿಸಿದ್ದಾರೆ. 'ಸರ್ವ ಜನಾಂಗದ ಶಾಂತಿಯ ತೋಟ'ದಲ್ಲಿ ಮತ್ತೆ 'ಹಸ್ತ'ಕ್ಕೆ ಅಭಯ ತೋರಿದ ಜನ, ಮತ ಉನ್ಮಾದದ ರಾಜಕಾರಣದ ಬದಲು, ಜನ ಕಲ್ಯಾಣದ ಕನಸಿಗೆ ರೆಕ್ಕೆ ಕಟ್ಟಿ, ವಿಧಾನಸೌಧದ ಮೂರನೇ ಮಹಡಿಗೆ ಏರಿಸಿದ್ದಾರೆ.

ಒಂದು ವರ್ಷದ ಮೈತ್ರಿ ಸರ್ಕಾರದ ಅನಾಹುತ, ನಾಲ್ಕು ವರ್ಷಗಳ ಕಾಲ ರೇಜಿಗೆ ಹುಟ್ಟಿಸಿದ ಕೋಮು ರಾಜಕಾರಣದ ಉಸಾಬರಿಯೇ ಬೇಡ ಎಂದು ನಿಶ್ಚಯಿಸಿದ ಮತದಾರರು, 'ಆಪರೇಷನ್' ಹಂಗಿಗೆ ಹೋಗದಂತೆ ಭಾರಿ ಬಲವನ್ನು ಕಾಂಗ್ರೆಸ್‌ಗೆ ಕೊಟ್ಟಿದ್ದಾರೆ. ಸೋಮವಾರದ ಹೊತ್ತಿಗೆ ಹೊಸ ಸರ್ಕಾರ ಬರಲಿದ್ದು, ಘೋಷಿತ ಐದು 'ಗ್ಯಾರಂಟಿ'ಗಳನ್ನು ಜಾರಿ ಮಾಡುವ, ಆಡಳಿತವನ್ನು ಸರಿದಾರಿಗೆ ತರುವ 'ಸುಶಾಸನಾಧಿಕಾರ'ವನ್ನು 'ಕೈಗೆ' ದಯಪಾಲಿಸಿದ್ದಾರೆ.

ಬರ, ನೆರೆ ಹಾನಿಯ ವೇಳೆ ನಾಡಿಗೆ ಕಾಲಿಡದ ಪ್ರಧಾನಿ ನರೇಂದ್ರ ಮೋದಿ, ರಾಜ್ಯಕ್ಕೆ ಅನುದಾನ ನೀಡಬೇಕಾದಾಗ ತೋರಿದ ನಿರ್ಲಕ್ಷ್ಯವೂ ಚುನಾವಣೆಯಲ್ಲಿ ಪ್ರಮುಖ ಪಾತ್ರವಹಿಸಿದೆ. ರೋಡ್ ಶೋ, ಭಾರಿ ಪ್ರಚಾರ, ತಮ್ಮನ್ನು ಕೊಲ್ಲಲು ಹವಣಿಸಿದ್ದಾರೆ, ತಮ್ಮನ್ನು ಕಳ್ಳ ಎಂದಿದ್ದಾರೆ ಎಂದು ಜನರನ್ನು ಸೆಳೆಯಲು ಮೋದಿ ನಡೆಸಿದ ಭಾವನಾತ್ಮಕ ತಂತ್ರ ಯಾವುದೂ ಫಲಕೊಡಲಿಲ್ಲ. ಕೊನೆಗಳಿಗೆಯಲ್ಲಿ 'ಜೈ ಬಜರಂಗ ಬಲಿ' ಘೋಷಣೆ ಕೂಡ ಮುಳುವಾಯಿತೇ ಹೊರತು, ಬಿಜೆಪಿಗೆ 'ಮರ್ಯಾದಾತ್ಮಕ' ಸೋಲನ್ನು ಕೊಡಲು ಸಾಧ್ಯವಾಗಲಿಲ್ಲ.

ಗೃಹ ಸಚಿವ ಅಮಿತ್ ಶಾ ಚುನಾವಣಾ ಚಾಣಕ್ಯ ಎಂಬ ಅವರ ಅಭಿಮಾನಿಗಳ ಮಾತು ಈ ಚುನಾವಣೆಯಲ್ಲಿ ಬಿಜೆಪಿಗೆ ಲಾಭ ಮಾಡಿಕೊಡಲಿಲ್ಲ. ಜನರನ್ನು ಪ್ರಭಾವಿಸುವ ಶಕ್ತಿಯುಳ್ಳವರೆಂದು ಬಿಂಬಿಸಿಕೊಳ್ಳುವ ಉತ್ತರ ಪ್ರದೇಶದ ಯೋಗಿ ಆದಿತ್ಯನಾಥರ ಮಾತುಗಳು ಕರ್ನಾಟಕದ ಜನರನ್ನು ಆಕರ್ಷಿಸಲಿಲ್ಲ.

ಚುನಾವಣೆ ಹೊತ್ತಿಗೆ ಬಿಜೆಪಿ ಶುರುಮಾಡಿದ ರಾಮ–ಹನುಮ ಮಂದಿರಗಳ ಜಪ ಕಮಲ ಅರಳಿಸಲು ನೆರವಾಗಲೇ ಇಲ್ಲ. ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ನಡೆಸಿದ 'ಗೋಹತ್ಯೆ– ಮತಾಂತರ ನಿಷೇಧ ಕಾಯ್ದೆ'ಯ ತಂತ್ರಗಳು, ಪಠ್ಯ ಪುಸ್ತಕ ಪರಿಷ್ಕರಣೆಯ ಅವಾಂತರ, ಹಿಜಾಬ್, ಹಲಾಲ್, ವ್ಯಾಪಾರಕ್ಕೆ ನಿರ್ಬಂಧ ಎಂಬಿತ್ಯಾದಿ ಪ್ರಯೋಗಗಳು ಅನುಕೂಲಕರವಾಗಲಿಲ್ಲ.

12ನೇ ಪುಟ ನೋಡಿ
ವಿಶೇಷ ಪುಟ/ಫಲಿತಾಂಶ 6,7,8,9,10,11,12



ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸ್ಪಷ್ಟ ಬಹುಮತ ಗಳಿಸಿದ ಹಿನ್ನೆಲೆಯಲ್ಲಿ ಕಾರ್ಯಕರ್ತರು ಬೆಂಗಳೂರಿನಲ್ಲಿ ವಿಜಯೋತ್ಸವ ಆಚರಿಸಿದರು – ಪಿಟಿಐ ಚಿತ್ರ

ಯಾವ ಪಕ್ಷಕ್ಕೆ ಎಷ್ಟು ಮತ?

(ಆವರಣದಲ್ಲಿರುವುದು 2018 ವಿವರ)

	ಕಾಂಗ್ರೆಸ್	ಬಿಜೆಪಿ	ಜೆಡಿಎಸ್	ಇತರೆ
ಪಡೆದ ಒಟ್ಟು ಮತ	1,67,89,272	1,40,96,529	52,05,489	
ಗೆದ್ದ ಸ್ಥಾನಗಳು	135 (80)	66 (104)	19 (37)	4 (3)



ನೋಟಾ 2,69,755 • ಇತರೆ: ಕೆಆರ್‌ಪಿಪಿ, ಸರ್ವೋದಯ ಕರ್ನಾಟಕ, ಪಕ್ಷೇತರ

ಭಾರಿ ಗೆಲುವಿನ ಅಂತರ

1,22,392	78,509	76,122	71,540	64,110
ಡಿ.ಕೆ.ಶಿವಕುಮಾರ್ (ಕನಕಪುರ–ಕಾಂಗ್ರೆಸ್)	ಗಣೇಶ್ ಪ್ರಕಾಶ್ ಹುಕ್ಕೇರಿ (ಚಿಕ್ಕೋಡಿ–ಕಾಂಗ್ರೆಸ್)	ಲಕ್ಷ್ಮಣ ಸವದಿ (ಅಥಣಿ–ಕಾಂಗ್ರೆಸ್)	ಬಾಲಚಂದ್ರ ಜಾರಕಿಹೊಳಿ (ಅರಭಾವಿ–ಬಿಜೆಪಿ)	ಎಸ್.ಆರ್.ವಿಶ್ವನಾಥ್ (ಯಲಹಂಕ–ಬಿಜೆಪಿ)

ಕಡಿಮೆ ಗೆಲುವಿನ ಅಂತರ

16	105	201	248	676
ಸಿ.ಕೆ.ರಾಮಮೂರ್ತಿ (ಜಯನಗರ–ಬಿಜೆಪಿ)	ದಿನೇಶ್ ಗುಂಡೂರಾವ್ (ಗಾಂಧಿನಗರ–ಕಾಂಗ್ರೆಸ್)	ಟಿ.ಡಿ.ರಾಜೇಗೌಡ (ಶೃಂಗೇರಿ–ಕಾಂಗ್ರೆಸ್)	ಕೆ.ವೈ.ನಂಜೇಗೌಡ (ಮಾಲೂರು–ಕಾಂಗ್ರೆಸ್)	ದಿನಕರ ಕೇಶವ ಶೆಟ್ಟಿ (ಕುಮಟಾ–ಬಿಜೆಪಿ)

ಕೈ ಗೆಲುವಿನ ದಾರಿ

1 ಬಿಜೆಪಿ ವಿರುದ್ಧದ ಶೇ 40 ಪರ್ಸೆಂಟ್ ಆರೋಪದ ಬಳಕೆ
2 ಮಹಿಳೆಯರು, ಬಡವರು, ಯುವಕರಿಗೆ ಐದು ಗ್ಯಾರಂಟಿ
3 ಬಿಜೆಪಿಯಿಂದ ಲಿಂಗಾಯತ ಕಡೆಗಣನೆ; ಬಲತಂದ ಅಸ್ತ್ರ
4 ಸಾಮೂಹಿಕ ನಾಯಕತ್ವದ ಒಗ್ಗಟ್ಟು, ವ್ಯವಸ್ಥಿತವಾದ ಚುನಾವಣೆ ತಂತ್ರ
5 ಬಜರಂಗದಳ, ಪಿಎಫ್‌ಐ ನಿಷೇಧಿಸುವ ಪ್ರಸ್ತಾವದ ಪ್ರಯೋಗ

ಬಿಜೆಪಿ ಬೀಳಲು ಕಾರಣ

1 ಮುಳುವಾದ ಭ್ರಷ್ಟಾಚಾರದ ಆರೋಪ
2 ಬಿ.ಎಸ್. ಯಡಿಯೂರಪ್ಪ ಪದಚ್ಯುತಿ, ಅಲಕ್ಷ್ಯ
3 ನಡೆಯದ ಮೋದಿ, ಯೋಗಿ, ಅಮಿತ್ ಶಾ 'ಚಾಣಕ್ಯ ತಂತ್ರ'
4 ಮೀಸಲಾತಿ ಮರು ಹಂಚಿಕೆ, ಒಳಮೀಸಲಾತಿಯ ಒಳಪೆಟ್ಟು
5 ಆಡಳಿತದಲ್ಲಿನ ಅದಕ್ಷತೆ, ಸಮರ್ಥ ನಾಯಕತ್ವ ಕೊರತೆ

ದಳದ ದುಸ್ಥಿತಿ ಏಕೆ?


1 ಕುಟುಂಬದ ಒಳಜಗಳ, ವಂಶ ರಾಜಕಾರಣ
2 ರಾಷ್ಟ್ರೀಯ ಪಕ್ಷದ ದೂತರು ಸಂಪರ್ಕಿಸಿದ್ದಾರೆ ಎಂಬ ಮಾತು
3 ಮೈತ್ರಿ ಸರ್ಕಾರದ ಅವಾಂತರಗಳು ಬೇಡವೆಂಬ ಜನರ ನಿಶ್ಚಯ
4 ಬಜರಂಗದಳ ನಿಷೇಧದ ಕಾಂಗ್ರೆಸ್ ಪ್ರಸ್ತಾವ; ಸಿಗದ ಮುಸ್ಲಿಂ ಮತ
5 ಒಕ್ಕಲಿಗ ಸಿಎಂ ಆಗುವ ಅವಕಾಶ ಕೊಡಿ ಎಂಬ ಡಿಕೆಶಿ ಪ್ರತಿಪಾದನೆ

ವಿಧಾನಸಭೆಗೆ ಸ್ತ್ರೀಶಕ್ತಿ

• ರೂಪಕಲಾ ಎಂ(ಕಾಂಗ್ರೆಸ್)	ಕೆಜಿಎಫ್
• ಕನೀಜ್ ಫಾತಿಮಾ(ಕಾಂಗ್ರೆಸ್)	ಕಲಬುರಗಿ ಉತ್ತರ
• ಲಕ್ಷ್ಮೀ ಹೆಬ್ಬಾಳ್ಕರ(ಕಾಂಗ್ರೆಸ್)	ಬೆಳಗಾವಿ ಗ್ರಾಮೀಣ
• ನಯನಾ ಮೋಟಮ್ಮ (ಕಾಂಗ್ರೆಸ್)	ಮೂಡಿಗೆರೆ
• ಶಶಿಕಲಾ ಜೊಲ್ಲೆ(ಬಿಜೆಪಿ)	ನಿಪ್ಪಾಣಿ
• ಭಾಗೀರಥಿ ಮುರುಳ್ಯ (ಬಿಜೆಪಿ)	ಸುಳ್ಯ
• ಶಾರದಾ ಪೂರ್‍ಯಾನಾಯ್ಕ (ಜೆಡಿಎಸ್)	ಶಿವಮೊಗ್ಗ ಗ್ರಾ.
• ಜಿ. ಕರೆಮ್ಮ (ಜೆಡಿಎಸ್)	ದೇವದುರ್ಗ
• ಲತಾ ಮಲ್ಲಿಕಾರ್ಜುನ(ಪಕ್ಷೇತರ)	ಹರಪನಹಳ್ಳಿ



ಬಿಜೆಪಿಯವರ ಭ್ರಷ್ಟಾಚಾರ, ದುರಾಡಳಿತ, ನಿಷ್ಕ್ರಿಯತೆಗಳಿಂದ ರೋಸಿ ಜನ ಪಕ್ಷಕ್ಕೆ ಅಧಿಕಾರ ನೀಡಿದ್ದಾರೆ. ಈ ಅವಕಾಶವನ್ನು ಜನಪರವಾಗಿ ಆಡಳಿತ ನೀಡಿ ಸದುಪಯೋಗ ಮಾಡಿಕೊಳ್ಳಬೇಕಾಗಿದೆ
ಸಿದ್ದರಾಮಯ್ಯ, ಕಾಂಗ್ರೆಸ್ ನಾಯಕ



ಬಿಜೆಪಿ ಸೋಲಿನ ಹೊಣೆಯನ್ನ ನಾನೇ ಹೊರುತ್ತೇನೆ. ನಮ್ಮ ತಪ್ಪುಗಳನ್ನು ವಿಶ್ಲೇಷಣೆ ಮಾಡಿ, ಅವುಗಳನ್ನು ಸರಿಪಡಿಸಿಕೊಂಡು ಲೋಕಸಭಾ ಚುನಾವಣೆಗೆ ಮರು ಸಿದ್ಧತೆ ಮಾಡಿಕೊಳ್ಳುತ್ತೇವೆ
ಬಸವರಾಜ ಬೊಮ್ಮಾಯಿ, ಮಾಜಿ ಸಿ.ಎಂ



ಪ್ರಜಾಪ್ರಭುತ್ವದಲ್ಲಿ ಜನಾದೇಶವೇ ಅಂತಿಮ. ಸೋಲು, ಗೆಲುವನ್ನು ನಾನು ಸಮಚಿತ್ತದಿಂದ ಸ್ವೀಕರಿಸುತ್ತೇನೆ. ಆದರೆ, ಈ ಸೋಲು ಅಂತಿಮವಲ್ಲ. ಹೋರಾಟ ನಿಲ್ಲುವುದಿಲ್ಲ
ಎಚ್.ಡಿ. ಕುಮಾರಸ್ವಾಮಿ
ಜೆಡಿಎಸ್ ನಾಯಕ

ಕಾಂಗ್ರೆಸ್‌ಗೆ ಅಭಿನಂದನೆ. ಬಿಜೆಪಿ ಬೆಂಬಲಿಸಿದವರಿಗೆ ಧನ್ಯವಾದ. ಮುಂಬರುವ ದಿನಗಳಲ್ಲಿ ಮತ್ತಷ್ಟೂ ಉತ್ಸಾಹದಿಂದ ಕರ್ನಾಟಕದ ಸೇವೆ ಮಾಡುತ್ತೇವೆ
ನರೇಂದ್ರ ಮೋದಿ, ಪ್ರಧಾನಿ

'ದ್ವೇಷದ ಮಾರುಕಟ್ಟೆ' ಬಂದ್ ಆಗಿದ್ದು 'ಪ್ರೀತಿಯ ಅಂಗಡಿಗಳು' ತೆರೆದಿವೆ. ಚುನಾವಣೆಯನ್ನು ದ್ವೇಷ, ಕೆಟ್ಟ ಭಾಷೆಯನ್ನು ಬಳಸದೆಯೇ ಎದುರಿಸಿದ್ದೇವು
ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಇಂದು ಸಿಎಲ್‌ಪಿ ಸಭೆ: 3 ಡಿಸಿಎಂ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೂತನವಾಗಿ ಆಯ್ಕೆಯಾಗಿರುವ ಕಾಂಗ್ರೆಸ್ ಶಾಸಕರ (ಸಿಎಲ್‌ಪಿ) ಸಭೆ ಭಾನುವಾರ ಸಂಜೆ 5.30ಕ್ಕೆ ನಡೆಯಲಿದೆ' ಎಂದು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ತಿಳಿಸಿದ್ದಾರೆ.

'ಸಿಎಲ್‌ಪಿ ಸಭೆಯಲ್ಲಿ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ನಡೆಯಲಿದೆ. ಆಯ್ಕೆಯಾದ ನಾಯಕ ನೂತನ ಮುಖ್ಯಮಂತ್ರಿಯಾಗಿ ಸೋಮವಾರ (ಮೇ 15) ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಜೊತೆಗೆ, ಅಂದೇ ನೂತನ ಸಚಿವರ ಪ್ರಮಾಣವಚನವೂ ನಡೆಯುವ ಸಾಧ್ಯತೆಯಿದೆ' ಎಂದು ಮೂಲಗಳು ತಿಳಿಸಿವೆ.

ಶಾಸಕಾಂಗ ಪಕ್ಷದ ನಾಯಕನಾಗಿ ಸಿದ್ದರಾಮಯ್ಯ ಆಯ್ಕೆಯಾಗುವ ಸಾಧ್ಯತೆ ಇದೆ. ಮೂರು ಉಪ ಮುಖ್ಯಮಂತ್ರಿ ಹುದ್ದೆಯನ್ನು ಸೃಷ್ಟಿಸಿ, ಲಿಂಗಾಯತ ಸಮುದಾಯದ ಎಂ.ಬಿ. ಪಾಟೀಲ, ದಲಿತ ಸಮುದಾಯದ ಜಿ. ಪರಮೇಶ್ವರ ಅಥವಾ ಕೆ.ಎಚ್. ಮುನಿಯಪ್ಪ, ಒಕ್ಕಲಿಗ ಸಮುದಾಯದಿಂದ ಡಿ.ಕೆ. ಶಿವಕುಮಾರ್ ಅವರಿಗೆ ನೀಡುವ ಬಗ್ಗೆಯೂ ಚರ್ಚೆ ನಡೆದಿದೆ. ದಲಿತ ಸಮುದಾಯದಿಂದ ಪರಮೇಶ್ವರ ಅವರಿಗೆ ಉಪ ಮುಖ್ಯಮಂತ್ರಿ ನೀಡಲು ವರಿಷ್ಠರು ಒಲವು ಹೊಂದಿದ್ದಾರೆ ಎನ್ನಲಾಗಿದೆ.



ಕುರ್ಚಿ ಯಾರಿಗೆ?: ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಶನಿವಾರ ನಡೆದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ಮತ್ತು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ/ ರಂಜು ಪಿ

ಬೊಮ್ಮಾಯಿ ರಾಜೀನಾಮೆ

ಬೆಂಗಳೂರು: ಚುನಾವಣೆಯಲ್ಲಿ ಬಿಜೆಪಿ ಸೋಲು ಅನುಭವಿಸಿದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದರು.

ಶಿಗ್ಗಾವಿಯಿಂದ ರಾತ್ರಿ ಬೆಂಗಳೂರಿಗೆ ಮರಳಿದ ಅವರು ನೇರವಾಗಿ ರಾಜಭವನಕ್ಕೆ ತೆರಳಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದರು. ಹೊಸ ಮುಖ್ಯಮಂತ್ರಿ ಪದಗ್ರಹಣದವರೆಗೂ ಉಸ್ತುವಾರಿ ಮುಖ್ಯಮಂತ್ರಿಯಾಗಿ ಮುಂದುವರಿಯಲು ರಾಜ್ಯಪಾಲರು ಸೂಚಿಸಿದ್ದಾರೆ.

ಗೆದ್ದ ಪ್ರಮುಖರು
ಬಸವರಾಜ ಬೊಮ್ಮಾಯಿ
ಸಿದ್ಧರಾಮಯ್ಯ
ಡಿ.ಕೆ.ಶಿವಕುಮಾರ್
ಎಚ್.ಡಿ.ಕುಮಾರಸ್ವಾಮಿ
ಶಾಮನೂರು ಶಿವಶಂಕರಪ್ಪ
ಜಿ.ಪರಮೇಶ್ವರ
ಲಕ್ಷ್ಮಣ ಸವದಿ
ಬಿ.ವೈ.ವಿಜಯೇಂದ್ರ
ಆರಗ ಜ್ಞಾನೇಂದ್ರ

ಸೋತ ಸಚಿವರು
ಗೋವಿಂದ ಕಾರಜೋಳ
ಜೆ.ಸಿ.ಮಾಧುಸ್ವಾಮಿ
ಬಿ.ಸಿ.ಪಾಟೀಲ
ಶಂಕರ ಪಾಟೀಲ ಮುನೇನ ಕೊಪ್ಪ
ಹಾಲಪ್ಪ ಆಚಾರ್
ಬಿ.ಶ್ರೀರಾಮುಲು
ಡಾ.ಕೆ.ಸುಧಾಕರ್
ವಿ.ಸೋಮಣ್ಣ (ಎರಡೂ ಕಡೆ)
ಆರ್.ಅಶೋಕ (ಒಂದು ಕಡೆ)
ನಾರಾಯಣಗೌಡ
ಬಿ.ಸಿ.ನಾಗೇಶ್
ಮುರುಗೇಶ ನಿರಾಣಿ
ಎಂ.ಟಿ.ಬಿ.ನಾಗರಾಜ್

ಸೋತ ಪ್ರಮುಖರು
ಜಗದೀಶ ಶೆಟ್ಟರ್
ವಿಶ್ವೇಶ್ವರ ಹೆಗಡೆ ಕಾಗೇರಿ
ರಮೇಶ್ ಕುಮಾರ್
ಸಿ.ಟಿ.ರವಿ
ಸಾ.ರಾ.ಮಹೇಶ್
ಬಂಡೆಪ್ಪ ಕಾಶೆಂಪೂರ

ರಾಜರಾಜೇಶ್ವರಿನಗರ ಕ್ಷೇತ್ರ: ಕಾಂಗ್ರೆಸ್ ಅಭ್ಯರ್ಥಿ ಕುಸುಮಾಗೆ ಸೋಲು

ಮುನಿರತ್ನಗೆ ಪ್ರಯಾಸದ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಷ್ಠೆಯ ಕಣವಾಗಿದ್ದ ರಾಜರಾಜೇಶ್ವರಿ ವಿಧಾನಸಭೆ ಕ್ಷೇತ್ರದಲ್ಲಿ ಬಿಜೆಪಿಯ ಮುನಿರತ್ನ ಕೊನೆಯ ಏಳು ಸುತ್ತಿನ ಮತ ಎಣಿಕೆಯಲ್ಲಿ ಭರ್ಜರಿ ಮುನ್ನಡೆ ಸಾಧಿಸುವ ಮೂಲಕ ಕಾಂಗ್ರೆಸ್‌ನ ಕುಸುಮಾ ಅವರನ್ನು ಸೋಲಿಸಿದ್ದಾರೆ.

ರಾಜರಾಜೇಶ್ವರಿ ನಗರ ವಾರ್ಡ್‌ನಲ್ಲಿ ಬಿಜೆಪಿಗೇ ಮೀಸಲಾಗಿರುವ ಮತಗಳು ಕೊನೆಯ ಸುತ್ತಿನಲ್ಲಿ ಮುನಿರತ್ನ ಅವರಿಗೆ ಅತಿ ಹೆಚ್ಚಿನ ರೀತಿಯಲ್ಲಿ ಕೈಹಿಡಿದು, ಸೋಲಿನ ದವಡೆಯಿಂದ ಹೊರಗೆಳೆದವು. ಕೊನೆಯ ಐದು ಸುತ್ತಿನಲ್ಲಿ ರಾಜರಾಜೇಶ್ವರಿ ನಗರ ವಾರ್ಡ್‌ನ ಮತಗಳು ಎಣಿಕೆಯಾಗಿದ್ದು, ಅವು ಮುನಿರತ್ನ ಅವರಿಗೆ ಭಾರಿ ಮುನ್ನಡೆ ತಂದುಕೊಟ್ಟ ಜೊತೆಗೆ, ಜಯ ಸಾಧಿಸಲೂ ಕಾರಣವಾದವು.

ರಾಜರಾಜೇಶ್ವರಿ ನಗರ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳ ವಿಷಯದಲ್ಲಿ ಸಾಕಷ್ಟು ವಿರೋಧ ಕಟ್ಟಿಕೊಂಡಿದ್ದ ಮುನಿರತ್ನ ಅವರಿಗೆ ಕುಸುಮಾ ಭಾರಿ ಪೈಪೋಟಿ ನೀಡಿದ್ದರು. ತಮಗೆ ಪ್ರತಿಸ್ಪರ್ಧಿಯೇ ಇಲ್ಲ ಎಂಬಷ್ಟರ ಮಟ್ಟಿಗೆ ಮುನಿರತ್ನ ಉತ್ಸಾಹದಲ್ಲಿದ್ದರು. ಆದರೆ, ದಿನದಿಂದ ದಿನಕ್ಕೆ ಪ್ರಯಾಸ ಹೆಚ್ಚಾಯಿತು. ಕುಸುಮಾ ಅವರ ಬೆನ್ನೆಲುಬಾಗಿ ಸಂಸದ ಡಿ.ಕೆ. ಸುರೇಶ್ ಕಾರ್ಯಕರ್ತರನ್ನು ಒಗ್ಗೂಡಿಸಿದರು. ಕುಸುಮಾ ಮಹಿಳೆಯರ ಒಲವು ಪಡೆಯಲು ಓಡಾಡಿದರು. ಕೊಳೆಗೇರಿಗಳ ಮತಗಳು ಈ ಬಾರಿ ಕಾಂಗ್ರೆಸ್ ಕೈಹಿಡಿದವು. ಮುನಿರತ್ನ ಕಡೆಗಣಿಸಿದ್ದ ಪಕ್ಕಾ ಬಿಜೆಪಿ ಪ್ರದೇಶದ ಮತಗಳೇ ಅವರಿಗೆ ಗೆಲುವು ತಂದುಕೊಟ್ಟವು.

ಕಾಂಗ್ರೆಸ್‌ನಿಂದ 2013 ಹಾಗೂ 2018ರಲ್ಲಿ ಗೆಲುವು ಸಾಧಿಸಿದ್ದ ಮುನಿರತ್ನ, ಆಪರೇಷನ್ ಕಮಲದಿಂದ ಬಿಜೆಪಿ ಸೇರಿದ್ದರು. 2019ರ ಉಪಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿ ಸಚಿವರೂ ಆದರು. ಚುನಾವಣೆ ಸಂದರ್ಭದಲ್ಲಿ ಸಾಕಷ್ಟು ವಿವಾದಗಳು ಸೃಷ್ಟಿಯಾಗಿ, 2018ರಲ್ಲಿ ಮತದಾರರ ಗುರುತಿನ ಚೀಟಿ ಸಂಗ್ರಹದ ವಿಷಯ ಕೋರ್ಟ್ ಮೆಟ್ಟಿಲೇರಿ ಮತದಾನವೇ ವಿಳಂಬವಾಗಿತ್ತು. 2019ರಲ್ಲಿ ಬಿಜೆಪಿಯಿಂದ ಗೆಲುವು ಸಾಧಿಸಿ ಮೇಲೂ ಸಚಿವರಾಗಲು ಸಾಕಷ್ಟು ಪ್ರಯಾಸ ಪಟ್ಟಿದ್ದರು.

26ನೇ ಸುತ್ತಿನ ಮತ ಎಣಿಕೆವರೆಗೆ ಮುನ್ನಡೆಯಲ್ಲಿದ್ದ ಕುಸುಮಾ ಅವರಿಗೆ 27ನೇ ಸುತ್ತಿನಲ್ಲಿ ಹಿನ್ನಡೆಯಾಯಿತು. 26ನೇ ಸುತ್ತಿನ ಅಂತ್ಯಕ್ಕೆ ಕಾಂಗ್ರೆಸ್ 1,07,252 ಮತಗಳಿಸಿತ್ತು. ಬಿಜೆಪಿ 1,06,048 ಮತ ಪಡೆದಿತ್ತು. 27ನೇ ಸುತ್ತಿನಲ್ಲಿ ಮುನಿರತ್ನ 5,242 ಮತ ಪಡೆದರೆ, ಕುಸುಮಾ 2,546 ಮತಗಳನ್ನಷ್ಟೇ ಪಡೆದು ಹಿನ್ನಡೆಯಾದರು. ನಂತರದ ಮೂರು ಸುತ್ತಿನಲ್ಲಿ ಕ್ರಮವಾಗಿ 7913, 6513, 1531 ಮತಗಳನ್ನು ಮುನಿರತ್ನ ಪಡೆದರು. ಇವೇ ಸುತ್ತಿನಲ್ಲಿ ಕುಸುಮಾ ಕ್ರಮವಾಗಿ 2,353, 3,001, 488 ಮತ ಪಡೆದರು.

ಕೊನೆಯ ನಾಲ್ಕು ಸುತ್ತಿನಲ್ಲಿ ಬಿಜೆಪಿ 15,957 ಮತ ಪಡೆದರೆ, ಕಾಂಗ್ರೆಸ್ 5,842 ಮತಗಳನ್ನಷ್ಟೇ ಪಡೆಯಿತು. ಹೀಗಾಗಿ, ಅಂತಿಮವಾಗಿ 1,27,980 ಮತ ಪಡೆದ ಮುನಿರತ್ನ, 11,842 ಮತಗಳ ಅಂತರದಿಂದ ಜಯ ಸಾಧಿಸಿದರು.

ಚಿಕ್ಕಪೇಟೆ ‘ಉದಯ’: ‘ಕೈ’ಗೆ ಮುಳುವಾದ ‘ಕೆಜಿಎಫ್’

ಬೆಂಗಳೂರು: ಜಿದ್ದಾಜಿದ್ದಿಗೆ ಹೆಸರಾದ ಚಿಕ್ಕಪೇಟೆ ಕ್ಷೇತ್ರದಲ್ಲಿ ಮತ್ತೆ ‘ಕಮಲ’ ಅರಳಿದೆ. ಬಿಜೆಪಿ ಅಭ್ಯರ್ಥಿ ಉದಯ್ ಗರುಡಾಚಾರ್ ಸತತ 2ನೇ ಬಾರಿಗೆ ಗೆಲುವಿನ ನಗೆ ಬೀರಿದರೆ, ಕಾಂಗ್ರೆಸ್ ಅಭ್ಯರ್ಥಿ ಆರ್. ವಿ.ದೇವರಾಜ್ ಮತ್ತೆ ನಿರಾಸೆ ಅನುಭವಿಸಿದರು.

ಅಭ್ಯರ್ಥಿಗಳ ಮತಗಳಿಕೆ ಪ್ರಮಾಣ ಗಮನಿಸಿದರೆ ದೇವರಾಜ್ ಅವರಿಗೆ ಪಕ್ಷೇತರ ಅಭ್ಯರ್ಥಿ ಯುಸೂಫ್ ಷರೀಫ್ ಅಲಿಯಾಸ್ ಕೆಜಿಎಫ್ ಬಾಬು ಅವರೇ ಅಡ್ಡಗಾಲು ಆಗಿರುವುದು ಸ್ಪಷ್ಟವಾಗಿದೆ. ಬಾಬು ಅವರು ನಿರೀಕ್ಷೆಗೂ ಮೀರಿ ಮತಗಳಿಸಿದ್ದು ಕಾಂಗ್ರೆಸ್ ಅಭ್ಯರ್ಥಿಯ ಗೆಲುವು ಕಸಿದುಕೊಳ್ಳಲು ಯಶಸ್ವಿ ಆಗಿದ್ದಾರೆ.

ಬಿಜೆಪಿ 57,299 ಮತ ಗಳಿಸಿದ್ದರೆ, ಕಾಂಗ್ರೆಸ್ 45,186 ಮತ ಪಡೆದಿದೆ. ಬಿಜೆಪಿ ಅಭ್ಯರ್ಥಿ 12,113 ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದಾರೆ. ಬಾಬು ಅವರು 20,931 ಮತ ಗಳಿಸಿದ್ದು ಕಾಂಗ್ರೆಸ್ ಲೆಕ್ಕಾಚಾರವನ್ನೇ ಬುಡಮೇಲು ಮಾಡಿದ್ದಾರೆ. ಬಾಬು ಹೆಚ್ಚು ಪ್ರಚಾರ ಮಾಡಿದಂತೆ ಕ್ಷೇತ್ರದಲ್ಲಿ ಬಿಜೆಪಿಗೆ ವರವಾಗುತ್ತಲೇ ಹೋಗಿರುವುದು ಫಲಿತಾಂಶದಲ್ಲಿ ಸ್ಪಷ್ಟವಾಗಿದೆ.

ಕಾಂಗ್ರೆಸ್ ಟಿಕೆಟ್ ಸಿಗದ ಕಾರಣಕ್ಕೆ ಬಾಬು ಬಂಡಾಯವೆದ್ದು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ವರಿಷ್ಠರು ನಾಮಪತ್ರ ವಾಪಸ್ ಪಡೆಯುವಂತೆ ಮನವಿ ಮಾಡಿದ್ದರೂ ಹಿಂದೆ ಸರಿದಿರಲಿಲ್ಲ. ಎರಡು ವರ್ಷದಿಂದಲೂ ಬಾಬು ಕ್ಷೇತ್ರದಾದ್ಯಂತ ಓಡಾಟ ನಡೆಸಿದ್ದು ಅದು ಮತಗಳಾಗಿ ಪರಿವರ್ತನೆಗೊಂಡಿವೆ.


ಕಣದ ಸ್ಪಷ್ಟ ಚಿತ್ರಣ ಲಭ್ಯ ಆಗುತ್ತಿದ್ದಂತೆ ಎಚ್ಚೆತ್ತ ಉದಯ್ ಅವರು ಬಾಬು ಅವರನ್ನು ಖಾಸಗಿ ಹೋಟೆಲ್‌ನಲ್ಲಿ ಭೇಟಿ ಮಾಡಿ ರೂಪಿಸಿದ ‘ತಂತ್ರಗಾರಿಕೆ’ಯೂ ಕಮಲದ ಓಟಕ್ಕೆ ನೆರವಾಗಿದೆ. ತೆರೆಮರೆಯಲ್ಲಿ ಈ ಎಲ್ಲ ಬೆಳವಣಿಗೆಗಳು ನಡೆದರೂ ಕಾಂಗ್ರೆಸ್ ಉದಾಸೀನ ತೋರಿತು. ಅದೇ ಮುಳುವಾಗಿದೆ ಎಂದೇ ವಿಶ್ಲೇಷಿಸಲಾಗುತ್ತಿದೆ.

ಚಾಮರಾಜಪೇಟೆಯಿಂದ ವಲಸೆ ಬಂದಿದ್ದ ಜೆಡಿಎಸ್ ಅಭ್ಯರ್ಥಿ ಇಮ್ರಾನ್ ಪಾಷಾ 1,588 ಹಾಗೂ ಆಮ್ ಆದ್ಮಿ ಪಾರ್ಟಿಯ ಬ್ರಿಜೇಶ್ ಕಾಳಪ್ಪ 600 ಮತ ಪಡೆಯಲಷ್ಟೇ ಶಕ್ತರಾಗಿದ್ದಾರೆ. ಎಎಪಿ ಬಿರುಸಿನ ಪ್ರಚಾರ ನಡೆಸಿದ್ದರೂ ಅದು ಫಲ ಕೊಟ್ಟಿಲ್ಲ. ಬೇರೆ ರಾಜ್ಯದಿಂದ ವಲಸೆ ಬಂದವರು ಕಮಲದತ್ತ ಒಲವು ತೋರಿರುವುದು ಫಲಿತಾಂಶದಲ್ಲಿ ಹೊರಹೊಮ್ಮಿದೆ.

ಇತರೆ ಪಕ್ಷಗಳ ನೀರಸ ಸಾಧನೆ: ಕಾಂಗ್ರೆಸ್ ಪಕ್ಷಕ್ಕೆ ವರ

ಬೆಂಗಳೂರು: ಗುಜರಾತ್, ಉತ್ತರ ಪ್ರದೇಶಗಳ ಚುನಾವಣೆಯಂತೆ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯೇತರ ಪಕ್ಷಗಳ ಮಧ್ಯೆ ಮತ ವಿಭಜನೆ ಆಗದೇ ಇರುವುದು ಅಧಿಕ ಸ್ಥಾನಗಳನ್ನು ಗಳಿಸುವಲ್ಲಿ ಕಾಂಗ್ರೆಸ್‌ಗೆ ವರವಾಗಿದೆ.

ದೆಹಲಿ, ಪಂಜಾಬ್‌ನಲ್ಲಿ ಅಧಿಕಾರದ ಗದ್ದುಗೆ ಹಿಡಿದು ಜನಪರ ಕಾರ್ಯಗಳ ಮೂಲಕ ಗಮನ ಸೆಳೆದಿದ್ದ ಆಮ್ ಆದ್ಮಿ ಪಕ್ಷ ಇಲ್ಲೂ 209 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿತ್ತು. ಕರ್ನಾಟಕ ರಾಷ್ಟ್ರ ಸಮಿತಿ 195, ಬಹುಜನ ಸಮಾಜ ಪಕ್ಷ 133, ಉತ್ತಮ ಪ್ರಜಾಕೀಯ ಪಕ್ಷ 110, ಎಸ್‌ಡಿಪಿಐ 16 ಕ್ಷೇತ್ರಗಳಲ್ಲಿ ಸ್ಪರ್ಧೆ ಒಡ್ಡಿದ್ದವು. ಕಮ್ಯುನಿಸ್ಟ್ ಪಕ್ಷ ಸೇರಿದಂತೆ ಹಲವು ರಾಜಕೀಯ ಪಕ್ಷಗಳೂ ಅಲ್ಲಲ್ಲಿ ಕಣದಲ್ಲಿದ್ದವು. ಆದರೆ, ಕೆಲ ಕ್ಷೇತ್ರಗಳನ್ನು ಹೊರತು ಪಡಿಸಿದರೆ ಈ ಯಾವ ಪಕ್ಷಗಳ ಅಭ್ಯರ್ಥಿಗಳೂ ಸಾವಿರ ಮತಗಳ ಗಡಿ ದಾಟಿಲ್ಲ. ಇದರಿಂದ ಜಾತ್ಯತೀತ ಮತಗಳ ವಿಭಜನೆಯಾಗದೇ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವು ಸುಲಭವಾಗಿದೆ.



ಬಾಗಲಗುಂಟೆಯ ಮಾರಮ್ಮ ದೇವಾಲಯದಲ್ಲಿ ಎಸ್. ಮುನಿರಾಜು ಅವರು ಪೂಜೆ ಸಲ್ಲಿಸಿದರು

ದಾಸರಹಳ್ಳಿ: ಮುನಿರಾಜುಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿದ್ದಾಜಿದ್ದಿ ಕಣವಾಗಿದ್ದ ದಾಸರಹಳ್ಳಿ ಕ್ಷೇತ್ರದಲ್ಲಿ ಬಿಜೆಪಿ ಜಯಭೇರಿ ಬಾರಿಸಿದೆ.

ಬಿಜೆಪಿ ಅಭ್ಯರ್ಥಿ ಎಸ್. ಮುನಿರಾಜು ಅವರು 9,235 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಮರು ಆಯ್ಕೆ ಬಯಸಿದ್ದ ಹಾಲಿ ಶಾಸಕ ಮಂಜುನಾಥ್ ಅವರ ಕನಸು ಭಗ್ನಗೊಂಡಿದೆ.

ಮುನಿರಾಜು ಅವರು 90,901 ಮತಗಳು ಹಾಗೂ ಸಮೀಪದ ಪ್ರತಿಸ್ಪರ್ಧಿ ಜೆಡಿಎಸ್ ಅಭ್ಯರ್ಥಿ ಆರ್. ಮಂಜುನಾಥ್ 81,666 ಮತಗಳನ್ನು ಪಡೆದಿದ್ದಾರೆ.

ಮತ ಎಣಿಕೆಯ ಆರಂಭದ ಸುತ್ತುಗಳಲ್ಲಿ ಮುನಿರಾಜು ಮತ್ತು ಮಂಜುನಾಥ್ ಅವರ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿತ್ತು. ನಂತರ, ಮುನಿರಾಜು ಅವರೇ ಮುನ್ನಡೆ ಸಾಧಿಸಿ ಗೆಲುವಿನ ನಗೆ ಬೀರಿದರು.

2008 ಮತ್ತು 2013ರಲ್ಲಿ ಸತತ ಎರಡು ಬಾರಿ ಆಯ್ಕೆಯಾಗಿದ್ದ ಮುನಿರಾಜು ಅವರು, 2018ರ ವಿಧಾನಸಭಾ ಚುನಾವಣೆಯಲ್ಲಿ ಆರ್. ಮಂಜುನಾಥ್ ವಿರುದ್ಧ ಪರಾಭವಗೊಂಡಿದ್ದರು. ಈಗ ಮತ್ತೊಮ್ಮೆ ಅವರ ವಿರುದ್ಧವೇ ಜಯ ಸಾಧಿಸಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಜಿ. ಧನಂಜಯ 43,425 ಮತಗಳನ್ನು ಮಾತ್ರ ಪಡೆದಿದ್ದಾರೆ. ಆಮ್ ಆದ್ಮಿ ಪಕ್ಷದಿಂದ ಸ್ಪರ್ಧಿಸಿದ್ದ ಕೀರ್ತನ್ ಕುಮಾರ್ ಎಂ. 4,466 ಮತಗಳನ್ನು ಪಡೆಯಲು ಮಾತ್ರ ಶಕ್ತವಾದರು. ಒಟ್ಟು 2,28,688 ಮತಗಳಲ್ಲಿ 2171 ನೋಟಾಕ್ಕೆ ಚಲಾವಣೆಯಾಗಿವೆ.

ನಂಬಿಕೆ ಹುಸಿಗೊಳಿಸುವುದಿಲ್ಲ: ‘ರಾಷ್ಟ್ರೀಯ ಮತ್ತು ರಾಜ್ಯ ನಾಯಕರು ನನಗೆ ನಾಲ್ಕನೇ ಬಾರಿ ಸ್ಪರ್ಧೆ ಮಾಡಲು ಅವಕಾಶ ನೀಡಿದ್ದು, ಅವರ ನಂಬಿಕೆಗೆ ಧಕ್ಕೆ ಬಾರದಂತೆ ನಡೆಯುತ್ತೇನೆ. ನಮ್ಮ ಕಾರ್ಯಕರ್ತರು ಹಗಲು ರಾತ್ರಿ ಎನ್ನದೆ ಶ್ರಮಿಸಿ ನನ್ನ ಗೆಲುವಿಗೆ ಕಾರಣ ಆಗಿದ್ದಾರೆ. ಈ ಕ್ಷೇತ್ರದ ಜನತೆ ನಾನು ಮಾಡಿದ ಅಭಿವೃದ್ಧಿ ಕೆಲಸಗಳ ಮೆಚ್ಚಿ ಮತ್ತೊಮ್ಮೆ ಅವಕಾಶ ನೀಡಿದ್ದಾರೆ ಪ್ರಾಮಾಣಿಕವಾಗಿ ಈ ಕ್ಷೇತ್ರ ಅಭಿವೃದ್ಧಿಗೆ ಕೆಲಸ ಮಾಡುತ್ತೇನೆ’ ಎಂದು ಎಸ್. ಮುನಿರಾಜು ತಿಳಿಸಿದರು.

ರಾಜಾಜಿನಗರ: ಸುರೇಶ್‌ಕುಮಾರ್‌ಗೆ ಜಯ ತಂದ ‘ಮನೆ ಮನೆ ಭೇಟಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಭದ್ರಕೋಟೆಯಾಗಿರುವ ರಾಜಾಜಿನಗರ ಕ್ಷೇತ್ರದಲ್ಲಿ ಈ ಬಾರಿಯೂ ‘ಕಮಲ’ ಅರಳಿದೆ. ‘ಮನೆ ಮನೆ ಭೇಟಿ’ ಕಾರ್ಯಕ್ರಮ ಹಾಗೂ ಕ್ಷೇತ್ರದ ಜನರ ಜೊತೆ ನಿರಂತರ ಒಡನಾಟವಿಟ್ಟುಕೊಂಡಿದ್ದ ಬಿಜೆಪಿಯ ಎಸ್. ಸುರೇಶ್‌ಕುಮಾರ್, ಆರನೇ ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ.

ಬಿಜೆಪಿ ತೊರೆದು ಕಾಂಗ್ರೆಸ್ ಪಕ್ಷ ಸೇರ್ಪಡೆಯಾಗಿ ಕಣದಲ್ಲಿದ್ದ ಪುಟ್ಟಣ್ಣ, ಕೆಲ ಸುತ್ತಿನ ಮತ ಎಣಿಕೆಯಲ್ಲಿ ಉತ್ತಮ ಪೈಪೋಟಿ ನೀಡಿದರೂ ಹಲವು ಸುತ್ತಿನಲ್ಲಿ ಹಿನ್ನಡೆ ಹೊಂದಿ ಪರಾಭವಗೊಂಡಿದ್ದಾರೆ.

ಮಹಾನಗರ ಪಾಲಿಕೆ ಸದಸ್ಯರಾಗಿ ರಾಜಕೀಯ ಜೀವನ ಆರಂಭಿಸಿದ್ದ ಸುರೇಶ್‌ಕುಮಾರ್, ಕ್ಷೇತ್ರದ ಮೇಲೆ ಹಿಡಿತ ಹೊಂದಿದ್ದಾರೆ. ಬಹುತೇಕ ನಿವಾಸಿಗಳ ವೈಯಕ್ತಿಕ ಪರಿಚಯ ಅವರಿಗೆ ಇದೆ. ಇದೇ ಕಾರಣಕ್ಕೆ ಅವರು ಜಯ ಗಳಿಸಿದ್ದಾರೆ ಎಂಬುದು ಸ್ಥಳೀಯರ ಅಭಿಪ್ರಾಯ.

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಸ್ಥಾನದಿಂದ ಕೆಳಗಿಳಿದ ನಂತರ, ಸುರೇಶ್‌ಕುಮಾರ್ ಕ್ಷೇತ್ರದಲ್ಲಿ ಹೆಚ್ಚು ಓಡಾಡುತ್ತಿದ್ದರು. ಚುನಾವಣೆ ಘೋಷಣೆಗೂ ಮುನ್ನವೇ ವಾರ್ಡ್‌ವಾರು ಮನೆಗಳಿಗೆ ಭೇಟಿ ನೀಡುವುದಕ್ಕಾಗಿ ‘ಮನೆ ಮನೆ ಭೇಟಿ’ ಕಾರ್ಯಕ್ರಮ ಆರಂಭಿಸಿದ್ದರು. ಮನೆಗಳಿಗೆ ಹೋಗಿ, ಮತದಾರರ ಕ್ಷೇಮ ವಿಚಾರಿಸುತ್ತಿದ್ದರು. ಈ ಬಾರಿ ತಮಗೆ ಬೆಂಬಲ ನೀಡುವಂತೆ ಕೋರುತ್ತಿದ್ದರು. ಚುನಾವಣೆ ಘೋಷಣೆಯಾಗುತ್ತಿದ್ದಂತೆ, ತಮ್ಮ ಕೆಲಸಗಳ ಕಿರು ಹೊತ್ತಿಗೆಯನ್ನು ಮುದ್ರಿಸಿ ಹಂಚಿದ್ದರು. ಕಾರ್ಯಕರ್ತರೂ ಮತದಾರರ ಬಾಗಿಲಿಗೆ ಹೋಗಿ ಪ್ರಚಾರ ಮಾಡಿದ್ದರು. ಇದುವೇ ಗೆಲುವಿಗೆ ಕಾರಣವೆಂದು ಜನ ಹೇಳುತ್ತಿದ್ದಾರೆ.

ಕ್ಷೇತ್ರದಲ್ಲಿ ಒಕ್ಕಲಿಗ, ಬ್ರಾಹ್ಮಣ ಮತ್ತು ಲಿಂಗಾಯತ ಮತದಾರರ ಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿದೆ. ಉತ್ತರ ಕರ್ನಾಟಕದ ಜನರೂ ನೆಲೆಸಿದ್ದಾರೆ. ಇವರೆಲ್ಲರ ಬಹುಪಾಲು ಮತ ಸೆಳೆದಿರುವ ಸುರೇಶ್‌ಕುಮಾರ್, ವಿಜಯ ಪತಾಕೆ ಹಾರಿಸಿದ್ದಾರೆ.

ಬಿಜೆಪಿ ಸರ್ಕಾರದ ಆಡಳಿತದ ವಿರುದ್ಧ ಕ್ಷೇತ್ರದ ಹಲವು ಜನರಲ್ಲಿ ಆಕ್ರೋಶ ವ್ಯಕ್ತವಾಗಿದ್ದು, 50,306 ಮತದಾರರು ಈ ಬಾರಿ ‘ಕೈ’ಗೆ ಮತ ನೀಡಿದ್ದಾರೆ. ಇದೇ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಡಾ. ಆಂಜನಪ್ಪ ಕೇವಲ 4,038 ಮತ ಪಡೆದಿದ್ದಾರೆ.

‘ಅಖಂಡ’ ಕೈಹಿಡಿಯದ ಪುಲಕೇಶಿನಗರ

ಬೆಂಗಳೂರು: ಭಾರಿ ಸದ್ದು ಮಾಡಿದ ಪುಲಕೇಶಿನಗರ ಅಖಾಡದಲ್ಲಿ ಬಿಎಸ್‌ಪಿಯ ಅಖಂಡ ಶ್ರೀನಿವಾಸಮೂರ್ತಿ ಸೋಲು ಅನುಭವಿಸಿದ್ದರೆ, ಕಾಂಗ್ರೆಸ್ಸಿನ ಎ.ಸಿ. ಶ್ರೀನಿವಾಸ್ ಗೆಲುವಿನ ನಗೆ ಬೀರಿದ್ದಾರೆ.

2018ರ ಚುನಾವಣೆಯಲ್ಲಿ ಕಾಂಗ್ರೆಸ್ಸಿನಿಂದ ಕಣಕ್ಕಿಳಿದಿದ್ದ ಅಖಂಡ ಶ್ರೀನಿವಾಸಮೂರ್ತಿ, ಇಡೀ ರಾಜ್ಯದಲ್ಲಿ ಅತೀ ಹೆಚ್ಚು (81,626) ಮತಗಳ ಅಂತರದಿಂದ ಗೆಲುವು ಕಂಡಿದ್ದರು. ಪಕ್ಷದಿಂದ ಮತ್ತೆ ಟಿಕೆಟ್ ಸಿಗದ ಕಾರಣಕ್ಕೆ ಬಿಎಸ್‌ಪಿಯಿಂದ ಕಣಕ್ಕಿಳಿದಿದ್ದ ಅವರು, ಕಾಂಗ್ರೆಸ್ ಅಭ್ಯರ್ಥಿಗೆ ಕಠಿಣ ಪೈಪೋಟಿ ನೀಡಬಹುದೆಂಬ ನಿರೀಕ್ಷೆ ಹುಸಿಯಾಗಿದೆ. ಎ.ಸಿ. ಶ್ರೀನಿವಾಸ್ ಅವರು 62,210 ಮತಗಳಿಂದ ಏಕಪಕ್ಷೀಯವಾಗಿ ಗೆಲುವು ತಮ್ಮದಾಗಿಸಿಕೊಂಡಿದ್ದಾರೆ. ಇಲ್ಲಿ ಬಿಜೆಪಿಯ ಎ. ಮುರಳಿ 10,624, ಎಸ್‌ಡಿಪಿಐನ ಬಿ.ಆರ್. ಭಾಸ್ಕರಪ್ರಸಾದ್ 4,102 ಮತವಷ್ಟೆ ಪಡೆದಿದ್ದಾರೆ. ಈ ಯಾವ ಅಭ್ಯರ್ಥಿಗಳಿಗೂ ಎ.ಸಿ. ಶ್ರೀನಿವಾಸ್‌ಗೆ ಸರಿಸಮಾನವಾಗಿ ಸ್ಪರ್ಧೆ ನೀಡಲು ಸಾಧ್ಯವಾಗಿಲ್ಲ.

2020ರಲ್ಲಿ ಕ್ಷೇತ್ರ ವ್ಯಾಪ್ತಿಯ ಡಿ.ಜೆ. ಹಳ್ಳಿ, ಕೆ.ಜೆ. ಹಳ್ಳಿಯಲ್ಲಿ ನಡೆದ ಗಲಭೆಯ ಬಳಿಕ ಅಖಂಡ ಅವರು ಮುಸ್ಲಿಂ ಸಮುದಾಯದ ಬೆನ್ನಿಗೆ ನಿಲ್ಲಲಿಲ್ಲವೆಂಬ ಕಾರಣಕ್ಕೆ ಈ ಬಾರಿ ಅವರಿಗೆ ಕಾಂಗ್ರೆಸ್ ಟಿಕೆಟ್ ನಿರಾಕರಿಸಿತ್ತು. ಇದರಿಂದ ಮುನಿಸಿಕೊಂಡು ಕಾಂಗ್ರೆಸ್ ತ್ಯಜಿಸಿದ್ದ ಅವರು ಬಿಎಸ್‌ಪಿ ಸೇರಿದ್ದರು. ತಮ್ಮದಲ್ಲದ ತಪ್ಪಿಗೆ ಟಿಕೆಟ್ ನಿರಾಕರಿಸುವ ಮೂಲಕ ಕಾಂಗ್ರೆಸ್ ನಾಯಕರು ಅನ್ಯಾಯ ಮಾಡಿರುವುದರಿಂದ ಅನುಕಂಪದ ಅಲೆಯಲ್ಲಿ ಕ್ಷೇತ್ರ ಗೆಲ್ಲಬಹುದೆಂದು ಅಖಂಡ ನಿರೀಕ್ಷಿಸಿದ್ದರು. ಆದರೆ, ಮುಸ್ಲಿಂ, ದಲಿತ ಸಮುದಾಯದವರು ನಿರ್ಣಾಯಕರಾಗಿದ್ದ ಇಲ್ಲಿ, ಈ ಎರಡೂ ಸಮುದಾಯಗಳ ಮತದಾರರು ಸಾರಸಗಾಟಾಗಿ ಎ.ಸಿ. ಶ್ರೀನಿವಾಸ್ ಬೆನ್ನಿಗೆ ನಿಂತಿದ್ದಾರೆ.





1. ಯಲಹಂಕ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿಯಿಂದ ಸ್ಪರ್ಧಿಸಿ ಗೆಲುವು ಸಾಧಿಸಿದ ಎಸ್‌.ಆರ್‌.ವಿಶ್ವನಾಥ್ ಅವರನ್ನು ಸಿಂಗನಾಯಕನಹಳ್ಳಿಯಲ್ಲಿ ಕಾರ್ಯಕರ್ತರು ಹೆಗಲಮೇಲೆ ಹೊತ್ತುಕೊಂಡು ಸಂಭ್ರಮಿಸಿದರು
2. ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಜಯಗಳಿಸಿದ ಕೃಷ್ಣಬೈರೇಗೌಡ ಅವರು ಕೊಡಿಗೇಹಳ್ಳಿ ಸಮೀಪದ ಗುಂಡಾಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಕಾರ್ಯಕರ್ತರೊಂದಿಗೆ ಸಂಭ್ರಮಿಸಿದರು

ಸಿ.ವಿ. ರಾಮನ್‌ನಗರ: ಬಿಜೆಪಿ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ವಾಣಿಜ್ಯ ಪ್ರದೇಶಕ್ಕೆ (ಸಿಬಿಡಿ) ಹೊಂದಿಕೊಂಡಿರುವ ಸಿ.ವಿ. ರಾಮನ್‌ನಗರ ಕ್ಷೇತ್ರದಲ್ಲಿ ಈ ಬಾರಿ ಬಿಜೆಪಿಯ ಎಸ್. ರಘು ಗೆಲುವು ಸಾಧಿಸಿದ್ದು, ಈ ಮೂಲಕ ನಾಲ್ಕನೇ ಬಾರಿ ಕ್ಷೇತ್ರವನ್ನು ಬಿಜೆಪಿ ತನ್ನದಾಗಿಸಿಕೊಂಡಿದೆ.

ಪರಿಶಿಷ್ಟ ಜಾತಿ (ಎಸ್‌ಸಿ) ಅಭ್ಯರ್ಥಿಗೆ ಮೀಸಲಾದ ಕ್ಷೇತ್ರದಲ್ಲಿ 2008, 2013 ಹಾಗೂ 2018ರ ಚುನಾವಣೆಯಲ್ಲೂ ರಘು ವಿಜಯಶಾಲಿಯಾಗಿದ್ದರು. ಪರಿಶಿಷ್ಟರು ಹಾಗೂ ಹಿಂದುಳಿದ ವರ್ಗದವರು ಹೆಚ್ಚಿರುವ ಕ್ಷೇತ್ರದಲ್ಲಿ ಮತದಾರರ ಜೊತೆ ರಘು ಉತ್ತಮ ಒಡನಾಟ ಹೊಂದಿದ್ದು, ಇದೇ ಕಾರಣಕ್ಕೆ ಗೆಲುವು ಅವರದ್ದಾಗಿದೆ ಎಂಬುದು ಸ್ಥಳೀಯರ ಅಭಿಪ್ರಾಯ.

ಸಿ.ವಿ. ರಾಮನ್ ನಗರ, ಲಾಲ್ ಬಹದ್ದೂರ್ ನಗರ, ಹೊಸ ಬೈಯಪ್ಪನಹಳ್ಳಿ, ಹೊಯ್ಸಳ ನಗರ, ಹಳೇ ತಿಪ್ಪಸಂದ್ರ, ನ್ಯೂ ತಿಪ್ಪಸಂದ್ರ, ಜಲಕಂಠೇಶ್ವರನಗರ, ಜೀವನ್‌ಬಿಮಾನಗರ ಹಾಗೂ ಕೊನೇನ ಅಗ್ರಹಾರ ವಾರ್ಡ್‌ಗಳಲ್ಲಿ ಕೈಗೊಂಡ ಅಭಿವೃದ್ಧಿ ಕೆಲಸಗಳೂ ರಘು ಕೈ ಹಿಡಿದಿವೆ. ಪಕ್ಷಕ್ಕಿಂತ ರಘು ವೈಯಕ್ತಿಕ ವರ್ಚಸ್ಸು ಉತ್ತಮವಿದೆ. ಹೀಗಾಗಿ, ಅವರು 68,848 ಮತ ಪಡೆದಿದ್ದಾರೆಂದು ಸ್ಥಳೀಯರು ಹೇಳುತ್ತಾರೆ.

ದಯಾನಂದ್ ಸಾಗರ ಕಾಲೇಜಿನಲ್ಲಿ ಸಿವಿಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಬಿ.ಇ ವ್ಯಾಸಂಗ ಮಾಡಿರುವ ರಘು, ಕ್ಷೇತ್ರದ ಅಭಿವೃದ್ಧಿ ಕೆಲಸಗಳಿಗೆ ಹೆಚ್ಚಿನ ಒತ್ತು ನೀಡಿದ್ದಾರೆ. ಪ್ರತಿಯೊಂದು ಕೆಲಸವನ್ನೂ ತಾವೇ ಖುದ್ದಾಗಿ ಪರಿಶೀಲಿಸುತ್ತಾರೆ. ಇದೇ ಕಾರಣಕ್ಕೆ ಜನರು ಇವರನ್ನು ಹೆಚ್ಚು ಇಷ್ಟಪಡುತ್ತಾರೆಂದು ಮತದಾರರು ಅಭಿಪ್ರಾಯಪಟ್ಟಿದ್ದಾರೆ.

ರಘು ಅವರನ್ನು ಮಣಿಸಲು ಕಣಕ್ಕೆ ಇಳಿದಿದ್ದ ಕಾಂಗ್ರೆಸ್‌ನ ಎಸ್. ಆನಂದ್‌ಕುಮಾರ್, 52,602 ಮತ ಪಡೆದು ಎರಡನೇ ಸ್ಥಾನದಲ್ಲಿದ್ದಾರೆ. ಈ ಕ್ಷೇತ್ರದಲ್ಲಿ ಟಿಕೆಟ್ ನೀಡಲು ಕಾಂಗ್ರೆಸ್ ವಿಳಂಬ ಮಾಡಿತ್ತು. ಕೊನೆಗಳಿಗೆಯಲ್ಲಿ ಮಾಜಿ ಕಾರ್ಪೊರೇಟರ್ ಆನಂದ್‌ಕುಮಾರ್ ಅವರನ್ನು ಕಣಕ್ಕೆ ಇಳಿಸಿತ್ತು. ಅವರು ಎಲ್ಲ ಜನರನ್ನು ತಲುಪಲು ಸಾಧ್ಯವಾಗಿರಲಿಲ್ಲ. ವೈಯಕ್ತಿಕ ವರ್ಚಸ್ಸಿನ ಹಿನ್ನಡೆಯಿಂದ ಅವರು ಪರಾಭವಗೊಂಡಿರುವುದಾಗಿ ಸ್ಥಳೀಯರು ಹೇಳುತ್ತಾರೆ.

ಆಮ್ ಆದ್ಮಿ ಪಾರ್ಟಿ ಅಭ್ಯರ್ಥಿ ಮೋಹನ್ ದಾಸರಿ 2,953 ಮತ ಪಡೆದಿದ್ದಾರೆ. ಇದೇ ಕ್ಷೇತ್ರದಲ್ಲಿ 1,982 ಮತಗಳು ನೋಟಾಗೆ ಬಿದ್ದಿವೆ.

ಪ್ರಚಾರ ನಡೆಸದಿದ್ದರೂ ಕೈ ಹಿಡಿದ ಮತದಾರ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆ ಕ್ಷೇತ್ರದಿಂದ ಜಮೀರ್ ಅಹಮದ್ ಖಾನ್ ಅವರು ಮತ್ತೊಮ್ಮೆ ಭರ್ಜರಿ ಗೆಲುವು ದಾಖಲಿಸಿದ್ದಾರೆ.

ಕಾಂಗ್ರೆಸ್‌ನ ಸ್ಟಾರ್ ಪ್ರಚಾರಕರಲ್ಲಿ ಒಬ್ಬರಾಗಿದ್ದ ಜಮೀರ್, ಸ್ವಕ್ಷೇತ್ರಕ್ಕಿಂತ ರಾಜ್ಯದ ಬೇರೆ ಕ್ಷೇತ್ರಗಳಲ್ಲಿಯೇ ತಮ್ಮ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ನಡೆಸಿದ್ದೇ ಹೆಚ್ಚು.

ಸ್ವಕ್ಷೇತ್ರದಲ್ಲಿ ಪ್ರಚಾರ ಉಸ್ತುವಾರಿಯನ್ನು ಆತ್ಮೀಯರು ಹಾಗೂ ಬೆಂಬಲಿಗರಿಗೆ ವಹಿಸಿದ್ದರು. ಬಹಿರಂಗ ಪ್ರಚಾರ ಕೊನೆಯ ದಿನ ಕ್ಷೇತ್ರಕ್ಕೆ ಬಂದು ಮನೆ ಮನೆ ಪ್ರಚಾರ ನಡೆಸಿದ್ದರು.

‘ನಾನು ಚುನಾವಣೆಗೆ ಬರುವ ಅತಿಥಿ ಅಲ್ಲ. ಐದು ವರ್ಷವೂ ನಿಮ್ಮ ಜತೆಗಿರುವ ವ್ಯಕ್ತಿ’ ಎಂದು ಭಾವನಾತ್ಮಕ ಮಾತನ್ನಾಡಿದ್ದರು. ಅದು ಕೈಹಿಡಿದಂತೆ ಕಾಣಿಸುತ್ತಿದೆ. ಜಮೀರ್‌ಗೆ 77,532 ಮತಗಳು ಬಂದಿವೆ. ಮಾಜಿ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ವಿರುದ್ಧ 53,983 ಮತಗಳ ಅಂತರದಲ್ಲಿ ಜಮೀರ್ ಗೆದ್ದಿದ್ದಾರೆ. ಭಾಸ್ಕರ್ ರಾವ್ 23,549 ಮತಗಳನ್ನು ಮಾತ್ರ ಪಡೆದಿದ್ದಾರೆ.

‘ಜಾತಿ ಆಧರಿಸಿ ಮುಖ್ಯಮಂತ್ರಿ ಆಯ್ಕೆ ನಡೆಯಲ್ಲ’

ಪ್ರಜಾವಾಣಿ ವಾರ್ತೆ

ಕೊರಟಗೆರೆ (ತುಮಕೂರು): ಜಾತಿ ಆಧಾರದ ಮೇಲೆ ಮುಖ್ಯಮಂತ್ರಿಯನ್ನು ಆಯ್ಕೆ ಮಾಡುವ ಸಂಪ್ರದಾಯ ಕಾಂಗ್ರೆಸ್‌ನಲ್ಲಿ ಇಲ್ಲ. ವ್ಯಕ್ತಿ ಹಾಗೂ ಅವರ ಶಕ್ತಿಯ ಮೇಲೆ ಮುಖ್ಯಮಂತ್ರಿ ಆಯ್ಕೆ ಮಾಡಲಾಗುತ್ತದೆ ಎಂದು ಡಾ.ಜಿ. ಪರಮೇಶ್ವರ ಹೇಳಿದ್ದಾರೆ.

ಪಟ್ಟಣದಲ್ಲಿ ಶನಿವಾರ ‘ದಲಿತ ಮುಖ್ಯಮಂತ್ರಿ ರೇಸ್’ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಅವರು ಈ ರೀತಿ ಉತ್ತರಿಸಿದರು.

ಕಾಂಗ್ರೆಸ್ ಇತಿಹಾಸದಲ್ಲಿ ಈವರೆಗೆ ಎಂದಿಗೂ ಜಾತಿ ಆಧಾರದಲ್ಲಿ ಮುಖ್ಯಮಂತ್ರಿ ಆಯ್ಕೆ ನಡೆದಿಲ್ಲ. ಸಭೆ ನಡೆಸಿ ಮುಖ್ಯಮಂತ್ರಿ ಆಯ್ಕೆ ನಿರ್ಧರಿಸಲಾಗುವುದು ಎಂದು ಹೇಳಿದರು.

ರಾಜಾನುಕುಂಟೆ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಪ್ರಕರಣ: ಮೂವರು ಆರೋಪಿಗಳ ವಿಚಾರಣೆ

ಪರಿಶಿಷ್ಟರಿಬ್ಬರ ಸಾವು: ತನಿಖೆ ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಾನುಕುಂಟೆ ಠಾಣೆ ವ್ಯಾಪ್ತಿಯಲ್ಲಿ ನಡೆದಿರುವ ನಾಗರಾಜ್ (38) ಹಾಗೂ ರಾಮಯ್ಯ (48) ಅವರಿಬ್ಬರ ಅನುಮಾನಾಸ್ಪದ ಸಾವಿನ ಬಗ್ಗೆ ಪೊಲೀಸರು ತನಿಖೆ ಚುರುಕು-ಗೊಳಿಸಿದ್ದಾರೆ. ಅಪಘಾತ ಸ್ಥಳಕ್ಕೆ ಭೇಟಿ ನೀಡಿ, ಮಾದರಿಗಳನ್ನು ಸಂಗ್ರಹಿಸಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ.

‘ಚಲ್ಲಹಳ್ಳಿ ನಿವಾಸಿಗಳಾದ ನಾಗರಾಜ್ ಹಾಗೂ ರಾಮಯ್ಯ, ಗುರುವಾರ (ಮೇ 11) ಬೆಳಿಗ್ಗೆ 5.30ರ ಸುಮಾರಿಗೆ ಕೆಲಸಕ್ಕೆ ಹೊರಟಿದ್ದರು. ಅವರ ಬೈಕ್‌ಗೆ ಕಾರೊಂದು ಡಿಕ್ಕಿ ಹೊಡೆದಿತ್ತು. ಇದರಿಂದಾಗಿ ಅವರಿಬ್ಬರು ಸ್ಥಳದಲ್ಲಿ ಮೃತಪಟ್ಟಿ-ದ್ದಾರೆ. ಆದರೆ, ಇವರಿಬ್ಬರದ್ದು ಕೊಲೆ ಎಂಬುದಾಗಿ ಸಂಬಂಧಿಕರು ದೂರು ನೀಡಿದ್ದಾರೆ’ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲೆ ಪೊಲೀಸರು ತಿಳಿಸಿದರು.

‘ಕೊಲೆ ಆರೋಪ ಹಾಗೂ ಪರಿಶಿಷ್ಟ ಜಾತಿ– ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳಾದ ಭರತ್, ನಿಶಾಂತ್ ಹಾಗೂ ವಿನಯ್ ಎಂಬುವವರನ್ನು ಈಗಾಗಲೇ ಬಂಧಿಸಲಾಗಿದೆ. ಮೂವರನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದರು.

‘ಪರಿಶಿಷ್ಟ ವರ್ಗದ ನಾಗರಾಜ್ ಅವರು ಕೆಲದಿನಗಳ ಹಿಂದೆಯಷ್ಟೇ ಹೋಟೆಲ್‌ನಲ್ಲಿ ನೀರು ಕುಡಿಯುತ್ತಿ-ದ್ದರು. ಅದನ್ನು ನೋಡಿದ್ದ ಆರೋಪಿ ಭರತ್, ನಾಗರಾಜ್ ಅವರ ಜಾತಿ ನಿಂದಿಸಿ ಬೈದಿದ್ದ. ಜೀವ ಬೆದರಿಕೆ ಸಹ ಹಾಕಿದ್ದ. ಅದೇ ವೈಷಮ್ಯದಿಂದಾಗಿ ಭರತ್ ಹಾಗೂ ಇತರರು ಸೇರಿಕೊಂಡು ಸಂಚು ರೂಪಿಸಿ ನಾಗರಾಜ್-ರಾಮಯ್ಯ ಅವರನ್ನು ಕೊಲೆ ಮಾಡಿರುವ ಸಾಧ್ಯತೆ ಇರುವುದಾಗಿ ಸಂಬಂಧಿಕರು ಆರೋ-ಪಿಸುತ್ತಿದ್ದಾರೆ’ ಎಂದು ಪೊಲೀಸರು ಹೇಳಿದರು.

ನಾಗರಾಜ್-ರಾಮಯ್ಯ ಅವರದ್ದು ಕೊಲೆ ಎಂಬುದಾಗಿ ಸಂಬಂಧಿಕರು ಹಾಗೂ ಗ್ರಾಮಸ್ಥರು ರಾಜಾನುಕುಂಟೆ ಠಾಣೆ ಎದುರು ಪ್ರತಿಭಟನೆ ನಡೆಸಿದ್ದರು.

ಅಪಘಾತ ಸ್ಥಳದಲ್ಲಿ ಮಾದರಿ ಸಂಗ್ರಹ

ಅಪಘಾತ ನಡೆದಿದ್ದ ಸ್ಥಳಕ್ಕೆ ದೊಡ್ಡಬಳ್ಳಾಪುರ ಡಿವೈಎಸ್ಪಿ ನೇತೃತ್ವದ ತಂಡ ಭೇಟಿ ನೀಡಿ, ಮಾಹಿತಿ ಕಲೆ ಹಾಕಿದೆ. ಸ್ಥಳದಲ್ಲಿ ಕೆಲ ಮಾದರಿಗಳನ್ನು ಸಂಗ್ರಹಿಸಿರುವ ವಿಧಿ ವಿಜ್ಞಾನ ಪ್ರಯೋಗಾಲಯ ತಜ್ಞರು, ಸದ್ಯದಲ್ಲೇ ವರದಿ ನೀಡುವ ಸಾಧ್ಯತೆ ಇದೆ. ಬಳಿಕವೇ ಇದು ಅಪಘಾತವೋ ಅಥವಾ ಬೇರೆ ಕಾರಣ ಏನಾದರೂ ಇದೆಯಾ ಎಂಬುದು ತಿಳಿಯಲಿದೆ ಎಂಬುದಾಗಿ ಪೊಲೀಸರು ವಿವರಿಸಿದರು.

ಅಪರಾಧ ಸುದ್ದಿ



ಯಶವಂತಪುರ ಕ್ಷೇತ್ರದ ಶಾಸಕರಾಗಿ ಮರು ಆಯ್ಕೆ ಆಗಿರುವ ಬಿಜೆಪಿಯ ಎಸ್‌.ಟಿ.ಸೋಮಶೇಖರ್ ಅವರು ಬೆಂಬಲಿಗರೊಡನೆ ಸಂಭ್ರಮಿಸಿದರು

ಪಾಕಿಸ್ತಾನ್ ಜಿಂದಾಬಾದ್ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಳಗಾವಿ ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಆಸೀಫ್ (ರಾಜು) ಸೇಠ್ ಗೆಲುವಿನ ಸಂಭ್ರಮದಲ್ಲಿ ಪಾಲ್ಗೊಂಡ ಕೆಲ ಕಿಡಿಗೇಡಿಗಳು ‘ಪಾಕಿಸ್ತಾನ್ ಜಿಂದಾಬಾದ್’ ಘೋಷಣೆ ಕೂಗಿದರು.

ಮತ ಎಣಿಕೆ ಕೇಂದ್ರದ ಬಳಿ ಕಾಂಗ್ರೆಸ್ ಧ್ವಜ ಹಿಡಿದು ಬಂದ ಕೆಲವರು ‘ಜಿಂದಾಬಾದ್ ಜಿಂದಾಬಾದ್, ಪಾಕಿ ಸ್ತಾನ್ ಜಿಂದಾಬಾದ್’ ಎಂದು ಮೂರು ಬಾರಿ ಘೋಷಣೆ ಮೊಳಗಿಸಿದರು. ಹತ್ತಿರದಲ್ಲೇ ಇದ್ದ ಪೊಲೀಸರು ಯುವ ಕರ ಬಳಿ ಹೋಗಿ ‘ಈ ರೀತಿ ಮಾತು ತೆಗೆದರೆ ಪರಿಸ್ಥಿತಿ ನೆಟ್ಟಗೆ ಇರುವುದಿಲ್ಲ’ ಎಂದು ಎಚ್ಚರಿಕೆ ನೀಡಿದರು. ಆದರೆ, ಆರೋಪಿಗಳನ್ನು ವಶಕ್ಕೆ ತೆಗೆದುಕೊಳ್ಳ-ಲಿಲ್ಲ. ಪಾಕ್ ಪರ ಘೋಷಣೆ ಕೂಗಿದ ವಿಡಿಯೊ ತುಣುಕು ಸಂಜೆಗೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತು.

‘ಆರ್‌ಪಿಡಿ ಕಾಲೇಜು ಬಳಿ ನಡೆದ ವಿಜಯೋತ್ಸವ ವೇಳೆ ಪಾಕಿಸ್ತಾನ್ ಜಿಂದಾಬಾಂದ್ ಎಂದು ಕೆಲವರು ಕೂಗಿ ದ್ದಾರೆ. ಐನೂರಕ್ಕೂ ಹೆಚ್ಚು ಯುವಕರು ಅಲ್ಲಿದ್ದರು. ಎಲ್ಲರೂ ಮುಖಕ್ಕೆ ಬಣ್ಣ ಬಳಿದುಕೊಂಡಿದ್ದರು. ಯಾರು ಕೂಗಿದ್ದು ಎಂದು ಗುರುತಿಸಲು ಆಗಿಲ್ಲ’ ಎಂದು ಇನ್‌ಸ್ಪೆಕ್ಟರ್ ದಯಾನಂದ ಶೇಗುಣಸಿ ತಿಳಿಸಿದರು.

ಶೂಟೌಟ್: 5 ಮಂದಿ ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ವಿಜಯಪುರ: ನಗರದ ಚಾಂದಪುರ ಕಾಲೊನಿಯಲ್ಲಿ ಮೇ 6ರಂದು ನಡೆದ ಹೈದರ್ ನದಾಫ್ (35) ಶೂಟೌಟ್ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಐವರು ಆರೋಪಿಗಳನ್ನು ಬಂಧಿಸಿದ್ದಾರೆ.

ಶೇಕ್ ಅಹ್ಮದ ಮೋದಿ (41), ಸೈಯ್ಯದ್ ಆಸಿಫ್‌ವುಲ್ ಖಾದ್ರಿ (40), ಶಾನವಾಜ್ ದಫೇದಾರ್(41), ಫಯಾಜ ಮುರ್ಶದ(32), ಮೈಬೂಬ ಮಿರಜಕರ (39) ಅವರನ್ನು ವಶಕ್ಕೆ ಪಡೆದು, ವಿಚಾರಣೆಗೆ ಒಳಪ-ಡಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಚ್.ಡಿ.ಆನಂದ ಕುಮಾರ್ ತಿಳಿಸಿದ್ದಾರೆ.

ಆರೋಪಿಗಳ ಬಳಿಯಿಂದ ಕೃತ್ಯಕ್ಕೆ ಬಳಸಿದ 2 ಕಾರು, 1 ಬೈಕ್, ಮೊಬೈಲ್, ಎರಡು ಕಂಟ್ರಿ ಪಿಸ್ತೂಲ್ ಹಾಗೂ 8 ಜೀವಂತ ಗುಂಡುಗಳನ್ನು ವಶಪಡಿಸಿ-ಕೊಂಡಿದ್ದಾರೆ.

ಘಟನೆ ವಿವರ: ಮೇ 6ರಂದು ಬೆಳಿಗ್ಗೆ ಹೈದರ್ ನದಾಫ್ ಅವರನ್ನು ಆರೋಪಿಗಳು ಗುಂಡು ಹಾರಿಸಿ ಹತ್ಯೆ ಮಾಡಿದ್ದರು. ಈ ಸಂಬಂಧ ಹೈದರ್ ಅವರ ಪತ್ನಿ, ಮಹಾನಗರ ಪಾಲಿಕೆ ವಾರ್ಡ್ ನಂ.19ರ ಸದಸ್ಯ ನಿಶಾತಾ ನದಾಫ್ ಅವರು ಪೊಲೀಸರಿಗೆ ದೂರು ನೀಡಿದ್ದರು.



ಹೈದರ್ ನದಾಫ್

ಮಹಾನಗರ ಪಾಲಿಕೆ ಚುನಾವಣೆಯ ಸೋಲಿನಿಂದ ಹತಾಶರಾದ ಆರೋಪಿಗಳು ದ್ವೇಷದಿಂದ ಹತ್ಯೆ ಮಾಡಿದ್ದಾರೆ ಎಂದು ನಿಶಾತಾ ನದಾಫ್ ದೂರಿನಲ್ಲಿ ತಿಳಿಸಿದ್ದರು.

ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ನಡೆದ ಈ ಶೂಟೌಟ್ ಪ್ರಕರಣವು ನಗರವಾಸಿಗಳನ್ನು ಬೆಚ್ಚಿ-ಬೀಳಿಸಿತ್ತು.

ಈ ಸಂಬಂಧ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರು ವಿಶೇಷ ತನಿಖಾ ತಂಡವನ್ನು ರಚಿಸಿದ್ದರು. ತಂಡವು ಆರೋಪಿಗಳ ಹೆಡೆಮುರಿ ಕಟ್ಟುವಲ್ಲಿ ಯಶಸ್ವಿಯಾಗಿದೆ.

ಕಾಂಗ್ರೆಸ್–ಬಿಜೆಪಿ ವಿರುದ್ಧ ಎಫ್‌ಐಆರ್ ದಾಖಲು

ಮತಗಟ್ಟೆ ಬಳಿ ಅಕ್ರಮ: ಚುನಾವಣೆ ಕೆಲಸಕ್ಕೆ ಅಡ್ಡಿ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತಗಟ್ಟೆ ಬಳಿ ಅಕ್ರಮವಾಗಿ ಗುಂಪು ಸೇರಿ ಮತದಾರರಿಗೆ ಆಮಿಷವೊಡ್ಡುತ್ತ ಚುನಾವಣೆ ಕೆಲಸಕ್ಕೆ ಅಡ್ಡಿಪಡಿಸಿದ್ದ ಆರೋಪದಡಿ ಕಾಂಗ್ರೆಸ್ ಹಾಗೂ ಬಿಜೆಪಿ ಕಾರ್ಯಕರ್ತರ ವಿರುದ್ಧ ಬಸವೇಶ್ವರನಗರ ಠಾಣೆಯಲ್ಲಿ ಎರಡು ಎಫ್‌ಐಆರ್ ದಾಖಲಾಗಿವೆ.

‘ಮೇ 10ರಂದು ಮತದಾನ ಸಂದರ್ಭದಲ್ಲಿ ನಡೆದಿರುವ ಘಟನೆ ಸಂಬಂಧ ಚುನಾವಣಾ ಅಧಿಕಾರಿಗಳು ದೂರು ನೀಡಿದ್ದಾರೆ. ಕಾಂಗ್ರೆಸ್ ಹಾಗೂ ಬಿಜೆಪಿ ಕಾರ್ಯಕರ್ತರ ಮೇಲೆ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ವಾರ್ಡ್ ನಂಬರ್ 2ರಲ್ಲಿರುವ ಜಗದ್ಗುರು ಜಯದೇವ ಹೈಸ್ಕೂಲ್ ಮತಗಟ್ಟೆಯ 100 ಮೀಟರ್ ಒಳಗಿನ ನಿರ್ಬಂಧಿತ ಪ್ರದೇಶದಲ್ಲಿ ಅಕ್ರಮವಾಗಿ ಸೇರಿದ್ದ ಎರಡೂ ಪಕ್ಷಗಳ ಕಾರ್ಯಕರ್ತರು, ತಮ್ಮ ಪರ ಅಭ್ಯರ್ಥಿ-ಗಳಿಗೆ ಮತ ನೀಡುವಂತೆ ಆಮಿಷವೊ-ಡ್ಡುತ್ತಿದ್ದರು. ಚುನಾವಣಾಧಿಕಾರಿಗಳು ಸ್ಥಳಕ್ಕೆ ಹೋಗುತ್ತಿದ್ದಂತೆ ಆರೋಪಿಗಳು, ಓಡಿ ಹೋಗಿದ್ದಾರೆ. ಜೊತೆಗೆ, ಅಧಿಕಾರಿಗಳು ಜಪ್ತಿ ಮಾಡಿದ್ದ ಕರಪತ್ರ-ಗಳನ್ನೂ ಕಸಿದುಕೊಂಡು ಹೋಗಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ಕುರುಬರಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮತದಾನ ಕೇಂದ್ರದ ಬಳಿಯೂ ಅಕ್ರಮವಾಗಿ ಗುಂಪು ಸೇರಿದ್ದ ಎರಡೂ ಪಕ್ಷಗಳ ಕಾರ್ಯಕರ್ತರು, ಮತದಾರರನ್ನು ಅಡ್ಡಗಟ್ಟಿ ಪ್ರಚಾರ ಮಾಡುತ್ತಿದ್ದರು. ‘ಪ್ರತಿಸ್ಪರ್ಧಿ ಬಿಜೆಪಿ ಅಭ್ಯರ್ಥಿ ಪರ ಬೆಂಬಲಿಗರು ಅಕ್ರಮವಾಗಿ ಪ್ರಚಾರ ಮಾಡುತ್ತಿದ್ದಾರೆ’ ಎಂದು ಆರೋಪಿಸಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದರು. ಸ್ಥಳದಲ್ಲಿ ಬಿಜೆಪಿ ಕಾರ್ಯಕರ್ತರೂ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಸ್ಥಳಕ್ಕೆ ಹೋಗಿದ್ದ ಚುನಾವಣಾಧಿಕಾರಿಗಳು, ಭದ್ರತಾ ಸಿಬ್ಬಂದಿ ಸಹಾಯದಿಂದ ಎಲ್ಲರನ್ನೂ ಚದುರಿಸಿದ್ದರು. ನಂತರ, ಠಾಣೆಗೆ ಬಂದು ಕಾರ್ಯಕರ್ತರ ವಿರುದ್ಧ ದೂರು ನೀಡಿದ್ದಾರೆ. ಈ ಸಂಬಂಧ ಪ್ರತ್ಯೇಕ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಎಸ್ಸೆಸ್ಸೆಲ್ಸಿ ಸಾಧಕರು

ನೆಲಮಂಗಲ: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಪಟ್ಟಣದ ಎಂಇಎಸ್ ಶಾಲೆಯ ವಿದ್ಯಾರ್ಥಿಗಳಾದ ಸಿ.ಪ್ರಿಯಾಂಕ 612 (ಶೇ 97.92), ಎಂ.ದರ್ಶನ್ 604 (ಶೇ 96.64) ಹಾಗೂ ಪಿ.ಪ್ರೀತಂ 596 (ಶೇ 95.36) ಉತ್ತಮ ಸಾಧನೆ ಮಾಡಿದ್ದಾರೆ.



ಸಿ.ಪ್ರಿಯಾಂಕ



ಎಂ.ದರ್ಶನ್



ಪಿ.ಪ್ರೀತಂ

ನಗರದಲ್ಲಿ ಇಂದು

ಚಂದ್ರಶೇಖರ ಕಂಬಾರ ಅವರ ‘ಸಾವಿರದ ಶರಣವ್ವ ಕನ್ನಡದ ತಾಯೇ’, ‘ಕಿತ್ತೂರು ಚೆನ್ನಮ್ಮ’ ಮತ್ತು ‘ಅಮೋಘವರ್ಷ ನೃಪತುಂಗ’ ಪುಸ್ತಕಗಳ ಬಿಡುಗಡೆ: ಟಿ.ಎಸ್. ನಾಗಾಭರಣ, ಅತಿಥಿಗಳು: ಬಸವರಾಜ ಕಲ್ಗುಡಿ, ನಾರಾಯಣ ರಾಯಚೂರ್, ಗಜಾನನ ಶರ್ಮ, **ಆಯೋಜನೆ:** ಅಂಕಿತ ಪುಸ್ತಕ, ಬುಕ್ ಬ್ರಹ್ಮ, ಬೆಳಿಗ್ಗೆ 10.30 (ಆನ್‌ಲೈನ್ ಕಾರ್ಯಕ್ರಮ)



ನಾಗಾಭರಣ

ಆದಿ ಶಂಕರಾಚಾರ್ಯರ ಮತ್ತು ಬಸವೇಶ್ವರ ಜಯಂತಿ: ಉದ್ಘಾಟನೆ: ಎಲ್. ಮಂಜುನಾಥ್ ಸ್ವಾಮಿ, ಅಧ್ಯಕ್ಷತೆ: ಮಿಶ್ರಾ, ಅತಿಥಿಗಳು: ಎಂ.ವಿ. ರಾಮಸ್ವಾಮಿ ರಾಜು, ಎಸ್.ಪಿ. ರಾಮಕೃಷ್ಣ, ಇಂ.ಎಂ.ಕೆ. ವಿಜಯ ಭಾಸ್ಕರ್, **ಆಯೋಜನೆ:** ಬಲಮುರಿ ವಿಘ್ನೇಶ್ವರ ಮತ್ತು ಬಾಲಾಂಜನೇಯ ಸೇವಾ ಸಮಿತಿ ಟ್ರಸ್ಟ್, **ಸ್ಥಳ:** ದೇವಾಲಯದ ಆವರಣ, ಬಸವೇಶ್ವರನಗರ, ಬೆಳಿಗ್ಗೆ 10.30ರಿಂದ

ಚಿಗುರು: ಅತಿಥಿಗಳು: ಅನಿಲ್ ಕೆ. ಸೋಗಿ, ಸ್ವಾತಿ ಕೆ., ಮಧು ಎಂ., **ಅಧ್ಯಕ್ಷತೆ:** ನರಸಿಂಗ ನಾಯ್ಕ, **ಆಯೋಜನೆ:** ಭಾರತ್ ಎಲೆಕ್ಟ್ರಾನಿಕ್ಸ್ ಲಲಿತ ಕಲಾ ಸಂಘ, **ಸ್ಥಳ:** ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಮಧ್ಯಾಹ್ನ 2.30

ಭರತನಾಟ್ಯ ರಂಗಪ್ರವೇಶ: ಈಶಾ ಸಿ. ಹೇಮಾಣಿ, ಅತಿಥಿಗಳು: ನ್ಯಾನ್ಸಿ ಅಬ್ರಾಹಮ್, ಲಕ್ಷ್ಮಿ ಗೋಪಾಲಸ್ವಾಮಿ, ಎಂ. ಸೂರ್ಯಪ್ರಸಾದ್, ಕರುಣಾ ವಿಜಯೇಂದ್ರ, ವಿದ್ಯಾ ನಟರಾಜನ್, **ಆಯೋಜನೆ:** ನೃತ್ಯಾಭ್ಯಾಸ ಡಾನ್ಸ್ ಸ್ಕೂಲ್, **ಸ್ಥಳ:** ಎಡಿಎ ರಂಗಮಂದಿರ, ಜೆ.ಸಿ ರಸ್ತೆ, ಸಂಜೆ 5.30

ನಾಗಮಂಗಲ: ಮೂರು ಮಕ್ಕಳು ನೀರುಪಾಲು

ನಾಗಮಂಗಲ: ಇಲ್ಲಿನ ಚನ್ನವಣ್ಣಿಕಟ್ಟೆಯ ನೀರಿನಲ್ಲಿ ಈಜು ಕಲಿಯಲು ತೆರಳಿದ್ದ ತಾಲ್ಲೂಕಿನ ಕದಬಹಳ್ಳಿಯ ಜನತಾ ಕಾಲೊನಿ ನಿವಾಸಿಗಳಾದ ಅಂಜಪ್ಪ ಶೆಟ್ಟಿ ಅವರ ಮಗ ಚಿರಂಜೀವಿ(10), ಪುಟ್ಟರಾಜು ಅವರ ಮಗ ಶರತ್ (11) ಮತ್ತು ಕೃಷ್ಣಕುಮಾರ್ ಅವರ ಮಗ ಪ್ರಜ್ವಲ್ (11) ನೀರಿನಲ್ಲಿ ಮುಳುಗಿ ಮೃತಪಟ್ಟರು.

ಸ್ಥಳಕ್ಕೆ ಡಿವೈಎಸ್ಪಿ ಲಕ್ಷ್ಮೀನಾರಾ-ಯಣ ಪ್ರಸಾದ್ , ಸಿಪಿಐ ನಿರಂಜನ್ ಭೇಟಿ ನೀಡಿದ್ದರು.

ಅಗ್ನಿಶಾಮಕ ದಳದ ಸಿಬ್ಬಂದಿ ಮೃತದೇಹಗಳನ್ನು ಹೊರಗೆ ತೆಗೆದರು. ಘಟನೆಯ ಕುರಿತು ಬಿಂಡಿಗನವಿಲೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆನೇಕಲ್‌ನಲ್ಲಿ ಶಿವಣ್ಣ ಹ್ಯಾಟ್ರಿಕ್ ಗೆಲುವು

ಆನೇಕಲ್: ಕಾಂಗ್ರೆಸ್ ಅಭ್ಯರ್ಥಿ ಬಿ.ಶಿವಣ್ಣ ಹ್ಯಾಟ್ರಿಕ್ ಗೆಲುವು ಸಾಧಿಸಿದ್ದಾರೆ. 1,34,797 ಮತ ಪಡೆಯುವ ಮೂಲಕ 31,325 ಮತಗಳ ಅಂತರದಲ್ಲಿ ಗೆಲುವು ಪಡೆದಿದ್ದಾರೆ. ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್.ಸಿ.ಹುಲ್ಲ-ಹಳ್ಳಿ 1,03,472 ಮತ ಪಡೆದು ಪರಾಭವಗೊಂಡರು.

21 ಸುತ್ತುಗಳಲ್ಲಿ ಮತ ಎಣಿಕೆ ನಡೆದಿದ್ದು ಒಂದು ಸುತ್ತು ಹೊರತುಪಡಿಸಿ ಉಳಿದ 20 ಸುತ್ತು-ಗಳಲ್ಲಿಯೂ ಶಿವಣ್ಣ ಲೀಡ್ ಕಾಯ್ದುಕೊಂಡರು. ಕಸಬಾ ಹೋಬಳಿಯಲ್ಲಿ 11,419 ಮತಗಳ ಲೀಡ್ ಪಡೆದಿದ್ದಾರೆ. ಚುನಾವಣೆ ಹಿನ್ನೆಲೆಯಲ್ಲಿ ಕಾರ್ಯಕರ್ತರು, ಮುಖಂಡರು ಹಗಲಿರುಳು ಶ್ರಮಿಸಿದ್ದಾರೆ. ಶಾಸಕ ರಾಮಲಿಂಗಾರೆಡ್ಡಿ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಈ ಭಾಗದಲ್ಲಿ ಕೆಲಸ ಮಾಡಿದ್ದಾರೆ. ರಾಹುಲ್ ಗಾಂಧಿ ಅವರ ರೋಡ್ ಶೋ ನಂತರ ಕಾರ್ಯಕರ್ತರಲ್ಲಿ ಮತ್ತಷ್ಟು ಉತ್ಸಾಹ ಹೆಚ್ಚಾಯಿತು ಎಂದು ಕಾಂಗ್ರೆಸ್ ಅಭ್ಯರ್ಥಿ ಶಿವಣ್ಣ ಹೇಳಿದರು. ತಾಲ್ಲೂಕಿನ ವಿವಿಧೆಡೆ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದರು.

ಗಾಂಧಿನಗರ, ಜಯನಗರದಲ್ಲಿ ಗೆಲುವಿನ ಅಂತರಕ್ಕಿಂತ ನೋಟಾ ಮತಗಳು ಅಧಿಕ

ಫಲಿತಾಂಶದ ಮೇಲೆ 'ನೋಟಾ' ಪರಿಣಾಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಗಾಂಧಿನಗರ, ಜಯನಗರ ವಿಧಾನಸಭೆ ಕ್ಷೇತ್ರದಲ್ಲಿ ಅಭ್ಯರ್ಥಿಗಳ ಗೆಲುವಿನ ಅಂತರಕ್ಕಿಂತ ನೋಟಾ ಮತಗಳೇ ಅಧಿಕವಿದೆ. ಬಹುತೇಕ ಕ್ಷೇತ್ರಗಳಲ್ಲಿ 2 ಸಾವಿರಕ್ಕೂ ಅಧಿಕ ಮತಗಳು ನೋಟಾಕ್ಕೆ ಚಲಾವಣೆಯಾಗಿವೆ.

ಚುನಾವಣೆ ಕಣದಲ್ಲಿ ಇರುವ ಅಭ್ಯರ್ಥಿಗಳಿಗೆ ಮತ ಚಲಾಯಿಸಲು ಇಷ್ಟ ಇಲ್ಲದೆ ಇದ್ದರೆ ನೋಟಾಗೆ ಮತ ಚಲಾಯಿಸುವ ಅವಕಾಶವನ್ನು ಚುನಾವಣಾ ಆಯೋಗ ನೀಡಿದೆ. ಇತ್ತೀಚಿನ ಚುನಾವಣೆಗಳಲ್ಲಿ ನೋಟಾಕ್ಕೆ ಮತ ಚಲಾಯಿಸುವವರ ಸಂಖ್ಯೆ ಹೆಚ್ಚ-ಳವಾಗುತ್ತಿದ್ದು, ಇದು ಅಭ್ಯರ್ಥಿಗಳ ಲೆಕ್ಕಾಚಾರವನ್ನು ತಲೆ ಕೆಳಗೆ ಮಾಡುತ್ತಿದೆ. ಗಾಂಧಿನಗರದಲ್ಲಿ ದಿನೇಶ್ ಗುಂಡೂರಾವ್ ಅವರು 54,118 ಮತಗಳಿಸಿದರೆ, ಸಪ್ತಗಿರಿ ಗೌಡ ಅವರು 54,013 ಮತ ಪಡೆದುಕೊಂಡರು. ಗೆಲುವಿನ ಅಂತರ 105 ಮತಗಳು ಮಾತ್ರ. ಈ ಕ್ಷೇತ್ರದಲ್ಲಿ 1,692 ಮಂದಿ ನೋಟಾ ಚಲಾಯಿಸಿದ್ದಾರೆ. ಇದು ಫಲಿತಾಂಶದ ಮೇಲೆ ಪರಿಣಾಮ ಬೀರಿದೆ.

ಜಯನಗರದಲ್ಲಿಯೂ ಚುನಾವಣೆ ಫಲಿತಾಂಶದಲ್ಲಿ ಗೆಲುವಿನ ಅಂತರಕ್ಕಿಂತ ನೋಟಾ ಮತಗಳೇ ಹೆಚ್ಚಿವೆ. ಕಾಂಗ್ರೆಸ್‌ನ ಸೌಮ್ಯಾ ರೆಡ್ಡಿ ಹಾಗೂ ಬಿಜೆಪಿಯ ಸಿ.ಕೆ. ರಾಮಮೂರ್ತಿ ತಲಾ 57 ಸಾವಿರ ಮತ ಪಡೆದಿದ್ದರು. ಗೆಲುವಿನ ಅಂತರ ಎರಡಂಕಿ ಇದ್ದಿದ್ದರಿಂದ ಗೊಂದಲ ಸೃಷ್ಟಿಯಾಗಿ, ಮರು ಎಣಿಕೆ ನಡೆಯಿತು. ಈ ಕ್ಷೇತ್ರದಲ್ಲಿ 1,184 ಮತಗಳು ನೋಟಾಕ್ಕೆ ಚಲಾವಣೆಯಾಗಿದೆ.

ಮಹದೇವಪುರ ವಿಧಾನಸಭೆ ಕ್ಷೇತ್ರದಲ್ಲಿ 4,758 ಮಂದಿ ನೋಟಾಕ್ಕೆ ಮತ ಹಾಕಿದ್ದಾರೆ. ಬೆಂಗಳೂರಿನ 28 ಕ್ಷೇ-ತ್ರಗಳಲ್ಲಿ ನೋಟಾಕ್ಕೆ ಚಲಾವಣೆಯಾದ ಗರಿಷ್ಠ ಮತಗಳು ಇವಾಗಿವೆ. ಕೆ.ಆರ್. ಪುರದಲ್ಲಿ 4,377 ಹಾಗೂ ಬೆಂಗಳೂರು ದಕ್ಷಿಣದಲ್ಲಿ 3,997 ಮತಗಳು ನೋಟಾಕ್ಕೆ ಚಲಾವಣೆಯಾಗಿದೆ.

ರಾಜರಾಜೇಶ್ವರಿನಗರ, ಮಹಾಲ-ಕ್ಷ್ಮಿಲೇಔಟ್, ಮಲ್ಲೇಶ್ವರ, ಸರ್ವಜ್ಞನ-ಗರ, ಪದ್ಮನಾಭನಗರ, ಬೊಮ್ಮನಹಳ್ಳಿ, ಬ್ಯಾಟರಾಯನಪುರ, ಯಶವಂತಪುರ, ದಾಸರಹಳ್ಳಿ ಹಾಗೂ ಆನೇಕಲ್‌ನಲ್ಲಿ ತಲಾ 2 ಸಾವಿರಕ್ಕೂ ಅಧಿಕ ಮತಗಳು ನೋಟಾಕ್ಕೆ ಚಲಾಯಿಸಲ್ಪಟ್ಟಿದೆ.

ಸ್ಪರ್ಧೆ ಒಡ್ಡದ ಎಎಪಿ, ಕೆಆರ್‌ಎಸ್

ಬೆಂಗಳೂರು: ನಗರದ 28 ವಿಧಾನಸಭೆ ಕ್ಷೇತ್ರಗಳಲ್ಲಿ ಆಮ್ ಆದ್ಮಿ ಪಕ್ಷ (ಎಎಪಿ), ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ (ಕೆಆರ್‌ಎಸ್) ಮತ್ತಿತರ ಪಕ್ಷಗಳು ಶೂನ್ಯ ಸಾಧನೆ ಮಾಡಿದ್ದು, ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳಿಗೆ ಸ್ಪರ್ಧೆ ಒಡ್ಡಲು ವಿಫಲವಾಗಿವೆ.

ದೆಹಲಿ ಹಾಗೂ ಪಂಜಾಬ್‌ನಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿರುವ ಆಮ್ ಆದ್ಮಿ ಪಕ್ಷ (ಎಎಪಿ) ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲೂ ಅಚ್ಚರಿ ಮೂಡಿಸುವ ತವಕದಲ್ಲಿತ್ತು. ನಗರದ ವಿವಿಧ ಕ್ಷೇತ್ರಗಳಿಗೆ ಸಾಫ್ಟ್‌ವೇರ್ ಎಂಜಿನಿಯರ್‌ಗಳು, ಎಂಬಿಎ ಪದವೀಧರರು, ಮಾಜಿ ಸೈನಿಕರು, ವೈದ್ಯರು, ವಕೀಲರು, ವಿದೇಶಗಳಲ್ಲಿ ಕೆಲಸ ಮಾಡಿದ್ದವರಿಗೆ ಟಿಕೆಟ್ ಘೋಷಿಸಿತ್ತು. ಆದರೆ, ಅವರು ಪ್ರಬಲ ಅಭ್ಯರ್ಥಿಗಳನ್ನು ಎದುರಿಸಿ, ಗೆಲುವು ಸಾಧಿಸುವಲ್ಲಿ ವಿಫಲರಾಗಿದ್ದಾರೆ.

ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿದ್ದ, ನಿವೃತ್ತ ಕೆಎಎಸ್ ಅಧಿಕಾರಿ ಕೆ.ಮಥಾಯ್ ಶಾಂತಿನಗರ ಕ್ಷೇತ್ರದಲ್ಲಿ ಎಎಪಿಯಿಂದ ಸ್ಪರ್ಧಿಸಿದ್ದರು. ಅವರು ಪ್ರಮುಖ ರಾಜಕೀಯ ಪಕ್ಷದ ಅಭ್ಯರ್ಥಿಗಳಿಗೆ ಸವಾಲು ಹಾಕಬಹುದು ಎಂಬ ಲೆಕ್ಕಾಚಾರ ರಾಜಕೀಯ ವಲಯದಲ್ಲಿತ್ತು. ಆದರೆ, ಶೇ 1.34ರಷ್ಟು ಮಾತ್ರ ಮತ ಪಡೆದಿದ್ದಾರೆ. ಪುಲಿಕೇಶಿ ನಗರದಿಂದ ಸ್ಪರ್ಧಿಸಿದ್ದ ಸಾಫ್ಟ್‌ವೇರ್ ಎಂಜಿನಿಯರ್ ಸುರೇಶ್ ರಾಥೋಡ್ ಶೇ 0.53ರಷ್ಟು ಮತ ಪಡೆದಿದ್ದಾರೆ. ಕ್ಷೇತ್ರದಲ್ಲಿ ವಿಜೇತರಾದ ಕಾಂಗ್ರೆಸ್ ಅಭ್ಯರ್ಥಿ ಎ.ಸಿ. ಶ್ರೀನಿವಾಸ್ ಶೇ 66.72ರಷ್ಟು ಮತ ಪಡೆದಿದ್ದಾರೆ.

ಸುರತ್ಕಲ್‌ನಲ್ಲಿ ಎಂಜಿನಿಯರಿಂಗ್ ಪದವಿ ಪಡೆದು, ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ನಗರದಲ್ಲಿ ಆರುಶಿ ಫೌಂಡೇಶನ್ ಸ್ಥಾಪಿಸಿರುವ ಮೋಹನ ದಾಸರಿ ಸಿ.ವಿ. ರಾಮನ್ ನಗರದಲ್ಲಿ ಸ್ಪರ್ಧಿಸಿದ್ದರು. ಅವರು ಶೇ 2.29ರಷ್ಟು ಮಾತ್ರ ಮತ ಪಡೆದಿದ್ದಾರೆ. ದೇಶದ ಪ್ರಮುಖ ತೈಲ ಕಂಪನಿಗಳಲ್ಲಿ ಸಲಹೆಗಾರರಾಗಿ ಕೆಲಸ ಮಾಡಿದ್ದ 70 ವರ್ಷದ ಸೀತಾರಾಮ್ ಗುಂಡಪ್ಪ, ಬೊಮ್ಮನಹಳ್ಳಿಯಿಂದ ಸ್ಪರ್ಧಿಸಿದ್ದರು. ಅವರು ಶೇ 0.92ರಷ್ಟು ಮಾತ್ರ ಮತ ಪಡೆದಿದ್ದಾರೆ.

ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷವು ಕಳೆದ ಒಂದು ವರ್ಷದಿಂದ ನಿರಂತರವಾಗಿ ಅಭ್ಯರ್ಥಿಗಳನ್ನು ಗುರುತಿಸುವ ಕೆಲಸ ಮಾಡಿ, 300ಕ್ಕೂ ಹೆಚ್ಚು ಆಕಾಂಕ್ಷಿಗಳ ಸಂದರ್ಶನ ನಡೆಸಿತ್ತು. ನಗರದಲ್ಲಿ 24 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಹಾಕಿತ್ತು. ಅವರು ಸಹ ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿ-ಗಳಿಗೆ ಸ್ಪರ್ಧೆ ಒಡ್ಡಲು ವಿಫಲರಾಗಿದ್ದಾರೆ. ಅದೇ ರೀತಿ, ಉತ್ತಮ ಪ್ರಜಾಕೀಯ ಪಕ್ಷದ ಅಭ್ಯರ್ಥಿಗಳಿಗೆ ಸಹ ಹೆಚ್ಚಿನ ಪ್ರಮಾಣದಲ್ಲಿ ಮತ ಪಡೆಯಲು ಸಾಧ್ಯವಾಗಿಲ್ಲ.

ನೆಲಮಂಗಲದಲ್ಲಿ ಕಾಂಗ್ರೆಸ್ ಗೆಲುವು

ಪ್ರಜಾವಾಣಿ ವಾರ್ತೆ



ಎನ್‌.ಶ್ರೀನಿವಾಸ್

ನೆಲಮಂಗಲ: ಕಾಂಗ್ರೆಸ್ ಅಭ್ಯರ್ಥಿ ಎನ್.ಶ್ರೀನಿವಾಸ್ ಅವರು 84,229 ಮತಗಳನ್ನು ಪಡೆದು ಜೆಡಿಎಸ್ ಶಾಸಕರಾಗಿದ್ದ ಡಾ.ಕೆ.ಶ್ರೀನಿವಾಸಮೂರ್ತಿ ಅವರ ವಿರುದ್ಧ 31,978 ಮತಗಳ ಭಾರಿ ಅಂತರದ ಗೆಲುವು ಸಾಧಿಸಿದ್ದಾರೆ.

ಜೆಡಿಎಸ್‌ನ ಡಾ.ಕೆ.ಶ್ರೀನಿವಾಸ ಮೂರ್ತಿ ಅವರು 52,251 ಮತಗಳನ್ನು ಪಡೆದಿದ್ದಾರೆ. ಕಳೆದ ಎರಡು ಬಾರಿ ಶಾಸಕರಾಗಿದ್ದ ಇವರು ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿದ್ದರು. ಬಿಜೆಪಿ ಅಭ್ಯರ್ಥಿ ಸಪ್ತಗಿರಿ ಶಂಕರ್ ನಾಯಕ್ ಅವರಿಗೆ 30,582 ಮತಗಳಿಗೆ ತೃಪ್ತರಾ-ಗಿದ್ದಾರೆ. ಚುನಾವಣೆ ಇನ್ನೇನು ಹತ್ತಿರ-ವಾಗುತ್ತಿದ್ದಂತೆ ಕಾಂಗ್ರೆಸ್‌ನಿಂದ ಬಿಜೆಪಿಗೆ ಸಪ್ತಗಿರಿ ಬಂದಿದ್ದರು. ಉಳಿದ ಪಕ್ಷಗಳು, ಪಕ್ಷೇತರರು 2000 ಮತಗಳ ಗಡಿ ದಾಟಿಲ್ಲ. 979 ನೋಟಾ ಮತ ಬಂದಿವೆ.



ನೆಲಮಂಗಲ ಪಟ್ಟಣದ ಸುಭಾಷ್‌ನಗರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಿಹಿ ಹಂಚಿ, ಪಟಾಕಿ ಸಿಡಿಸಿ ಸಂಭ್ರಮಾಚರಣೆ ಮಾಡಿದರು.



ಸಂಭ್ರಮಾಚರಣೆ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಭರ್ಜರಿ ಜಯ ಗಳಿಸಿದ ನಂತರ ಕೆಪಿಸಿಸಿ ಕಚೇರಿ ಮುಂಭಾಗದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಾಚರಣೆ ಮಾಡಿದರು

–ಪ್ರಜಾವಾಣಿ ಚಿತ್ರ/ ರಂಜು ಪಿ

'ದಲಿತ ಸಿ.ಎಂ. ರೇಸ್‌ನಲ್ಲಿ ಇಲ್ಲ'

ದೇವನಹಳ್ಳಿ: 'ನಾನು ದಲಿತ ಮುಖ್ಯಮಂತ್ರಿ ರೇಸ್‌ನಲ್ಲಿ ಇಲ್ಲ. ಹೈಕಮಾಂಡ್ ತೀರ್ಮಾನಕ್ಕೆ ನಾವೆಲ್ಲರೂ ಬದ್ಧರಾಗಿದ್ದೇವೆ' ಎಂದು ದೇವನಹಳ್ಳಿ ಮೀಸಲು ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆಲುವು ಸಾಧಿಸಿರುವ ಕೆ.ಎಚ್ ಮುನಿಯಪ್ಪ ಸ್ಪಷ್ಟವಾಗಿ ಹೇಳಿದ್ದಾರೆ.

ಶನಿವಾರ ಫಲಿತಾಂಶದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹತ್ತು ವರ್ಷಗಳಿಂದ ದೇವನ ಹಳ್ಳಿಯಲ್ಲಿ ಕಾಂಗ್ರೆಸ್ ಗೆದ್ದಿರಲಿಲ್ಲ. ಈ ಬಾರಿ ಜನರು ಆಶೀರ್ವಾದ ಮಾಡಿದ್ದಾರೆ. ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ನೀಡಿರುವ ಗ್ಯಾರಂಟಿ ಕಾರ್ಯಕ್ರಮ-ಗಳನ್ನು ಜಾರಿಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು' ಎಂದು ತಿಳಿಸಿದರು.

ಬಿಜೆಪಿ ಕೈಜಾರಿದ ಪುತ್ತೂರು

• ಉದಯ ಯು

ಮಂಗಳೂರು: ಬಂಡಾಯದ ಬಿಸಿ ತಣಿಸಲು ವಿಫಲವಾಗಿದ್ದು ಹಾಗೂ ಅತಿಯಾದ ಆತ್ಮವಿಶ್ವಾಸ ಬಿಜೆಪಿ ಪುತ್ತೂರು ವಿಧಾನಸಭಾ ಕ್ಷೇತ್ರವನ್ನು ಕಳೆದುಕೊಳ್ಳುವಂತೆ ಮಾಡಿದೆ.

ಬಿಜೆಪಿಯು ಪುತ್ತೂರಿನಲ್ಲಿ ಶಾಸಕ ಸಂಜೀವ ಮಠಂದೂರು ಬದಲಿಗೆ ಆಶಾ ತಿಮ್ಮಪ್ಪ ಗೌಡ ಅವರಿಗೆ ಟಿಕೆಟ್ ನೀಡಿತು. 2018ರ ಚುನಾವಣೆಯ ಸಂದರ್ಭದಲ್ಲೇ ಬಿಜೆಪಿ ಟಿಕೆಟ್ ಆಕಾಂ-ಕ್ಷಿಯಾಗಿದ್ದ ಅರುಣ್‌ಕುಮಾರ್ ಪುತ್ತಿಲ ಅವರು ಬಂಡಾಯದ ಧ್ವನಿ ಎತ್ತಿದರು.

'ಈ ಕ್ಷೇತ್ರದಲ್ಲಿ ಬಂಡಾಯ ಅಭ್ಯರ್ಥಿ 20 ಸಾವಿರಕ್ಕೂ ಹೆಚ್ಚು ಮತ ಪಡೆದ ಉದಾಹರಣೆ ಇಲ್ಲ. ಆದ್ದರಿಂದ, ಜಿಲ್ಲಾ ಪಂಚಾಯಿತಿಯ ಮಾಜಿ ಅಧ್ಯಕ್ಷೆ ಆಶಾ ಅವರನ್ನು ಗೆಲ್ಲಿಸುತ್ತೇವೆ' ಎಂಬ ವಿಶ್ವಾಸದಲ್ಲಿ ಬಿಜೆಪಿ ಇತ್ತು. ಜೊತೆಗೆ ಪುತ್ತಿಲ ಅವರ ಜೊತೆಗಿದ್ದ ಹಿಂದುತ್ವ ವಾದಿ ಕಾರ್ಯಕರ್ತರ ಶಕ್ತಿಯನ್ನು ಅಳೆಯುವುದರಲ್ಲೂ ಬಿಜೆಪಿ ವಿಫಲವಾಯಿತು. ಪರಿಣಾಮ, ಕಾಂಗ್ರೆಸ್ ಅಭ್ಯರ್ಥಿ ಅಶೋಕ್ ಕುಮಾರ್ ರೈ ಗೆಲುವು ಸಾಧಿಸಿದರು.

ಇನ್ನೊಂದೆಡೆ, ಪುತ್ತಿಲ ಅವರು 'ನಾನು ಹಿಂದೆಯೂ ಬಿಜೆಪಿ, ಈಗಲೂ ಬಿಜೆಪಿ, ಮುಂದೆಯೂ ಬಿಜೆಪಿಯವನೇ ಆಗಿರುತ್ತೇನೆ' ಎಂದು ಪ್ರಚಾರ ಮಾಡಿದರು. ಯೋಗಿ ಆದಿತ್ಯನಾಥ ಅವರು ಪುತ್ತೂರಿನಲ್ಲಿ ರೋಡ್‌ಶೋ ಮಾಡಿದ್ದನ್ನು ಸಹ ಪುತ್ತಿಲ ಸ್ವಾಗತಿಸಿದರು. ಪ್ರಚಾರದುದ್ದಕ್ಕೂ 'ಬಿಜೆಪಿ ಧಾಟಿ'ಯಲ್ಲೇ ಮಾತನಾಡಿದರು.

ಕಾಂಗ್ರೆಸ್ ಪಕ್ಷದಲ್ಲೂ ಬಂಡಾಯ ಇತ್ತು. ಆದರೆ, ಸಕಾಲದಲ್ಲಿ ಅದನ್ನು ಶಮನಗೊಳಿಸುವಲ್ಲಿ ಪಕ್ಷ ಯಶಸ್ವಿಯಾಯಿತು. ಬಿಜೆಪಿ ಸಂಸದ ಡಿ.ವಿ.ಸದಾನಂದ ಗೌಡ ಅವರ ಆಪ್ತ-ರೆನಿಸಿಕೊಂಡಿದ್ದ ಅಶೋಕ್ ಕುಮಾರ ರೈ ಅವರನ್ನು ಕಣಕ್ಕಿಳಿಸಿದ್ದಕ್ಕೆ ಕಾಂಗ್ರೆಸ್ ಸ್ಥಳೀಯ ನಾಯಕತ್ವದಲ್ಲಿ ತೀವ್ರ ಅಸಮಾಧಾನವಿತ್ತು. ಆದರೆ ಅದು ಬಹಿ-ರಂಗವಾಗದಂತೆ ಪಕ್ಷದ ಹೈಕಮಾಂಡ್ ನೋಡಿಕೊಂಡಿತು. ಸ್ಥಳೀಯ ನಾಯಕರೆಲ್ಲರೂ ಜೊತೆಯಾಗಿ ಓಡಾಡಿ ಪ್ರಚಾರ ಮಾಡಿದ್ದು ಸಹ ಗೆಲುವಿಗೆ ಕಾಣಿಕೆ ನೀಡಿತು.

ಸುಮಾರು 3 ದಶಕಗಳ ಬಳಿಕ ಪುತ್ತೂರು ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿಗೆ ಈ ರೀತಿಯ ಸೋಲಾಗಿದೆ. ಪಕ್ಷದ ಅಭ್ಯರ್ಥಿ 37,558 ಮತ ಪಡೆದು ಮೂರನೇ ಸ್ಥಾನಕ್ಕೆ ಕುಸಿಯುವಂತಾಗಿದೆ. ತನ್ನ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲೇ ಆಗಿರುವ ಈ ಬೆಳವಣಿಗೆಯು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರಿಗೂ ಮುಜುಗರ ತರುವಂಥದ್ದಾಗಿದೆ. ಪುತ್ತಿಲ ಅವರಿಗೆ ಟಿಕೆಟ್ ತಪ್ಪಿಸುವುದರಲ್ಲಿ ನಳಿನ್ ಕುಮಾರ್ ಕೈವಾಡವೂ ಇತ್ತು ಎಂದು ಸ್ಥಳೀಯರು ಆರೋಪಿಸಿದ್ದರು.



ಮಲ್ಲೇಶ್ವರದ ಶಾಸಕರ ಕಚೇರಿ ಬಳಿ ಶನಿವಾರ ಜಮಾಯಿಸಿದ್ದ ಬಿಜೆಪಿ ಕಾರ್ಯಕರ್ತರು ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರನ್ನು ಹೆಗಲ ಮೇಲೆ ಹೊತ್ತುಕೊಂಡು ಸಂಭ್ರಮಿಸಿದರು

ಅಶ್ವತ್ಥನಾರಾಯಣ ಪುನರಾಯ್ಕೆ: ಕಾರ್ಯಕರ್ತರ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದಿಂದ ಸತತ ನಾಲ್ಕನೇ ಬಾರಿಗೆ ಆಯ್ಕೆಯಾಗಿರುವ ಡಾ. ಸಿ ಎನ್ ಅಶ್ವತ್ಥ-ನಾರಾಯಣ ಅವರ ಗೆಲುವನ್ನು ಬಿಜೆಪಿ ಕಾರ್ಯಕರ್ತರು ಮತ್ತು ಅಭಿಮಾನಿಗಳು ಶನಿವಾರ ಸಂಭ್ರಮಿಸಿದರು.

ಮಲ್ಲೇಶ್ವರದಲ್ಲಿರುವ ಶಾಸಕರ ಕಚೇರಿ ಬಳಿ ಜಮಾಯಿಸಿದ ಜನರು ಕುಣಿದು ಕುಪ್ಪಳಿಸಿ ಸಂಭ್ರಮಪಟ್ಟರು.

ಈ ಸಂದರ್ಭದಲ್ಲಿ ಮಾತನಾಡಿದ ಡಾ. ಸಿ. ಎನ್. ಅಶ್ವತ್ಥನಾರಾಯಣ, 'ಕ್ಷೇತ್ರದ ಪ್ರತಿನಿಧಿಯಾಗಿ ಏನೇನು ಕೆಲಸಗಳು ಆಗಬೇಕಿದೆಯೋ ಅದನ್ನು ಮುಂದುವರಿಸುತ್ತೇನೆ. ರಸ್ತೆ, ನೀರು, ಶಿಕ್ಷಣ, ಆರೋಗ್ಯ, ಮೂಲಸೌಕರ್ಯ ಸೇರಿ ಇಲ್ಲಿನ ಸರ್ವಾಂಗೀಣ ಅಭಿವೃದ್ಧಿಗೆ ಈ ಹಿಂದಿನಂತೆಯೇ ಒತ್ತು ನೀಡುತ್ತೇನೆ' ಎಂದು ಹೇಳಿದರು.

ಸತತ ಎಂಟನೇ ಗೆಲುವಿನ ಶ್ರೇಯ

ಡಿಕೆಶಿಗೆ ದಾಖಲೆ ಅಂತರದ ಜಯ

• ಆರ್. ಜಿತೇಂದ್ರ

ರಾಮನಗರ: ಕನಕಪುರದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ 1.22 ಲಕ್ಷ ಮತಗಳ ಅಂತರದಿಂದ ಗೆಲುವು ದಾಖಲಿಸಿದ್ದಾರೆ. ಇದು ಈ ಬಾರಿಯ ಚುನಾವಣೆಯಲ್ಲೇ ಗರಿಷ್ಠ ಅಂತರದ ಗೆಲುವಿನ ದಾಖಲೆಯಾಗಿದೆ.

ಶಿವಕುಮಾರ್‌ರನ್ನು ಕನಕಪುರದಲ್ಲಿ-ಯೇ ಕಟ್ಟಿಹಾಕುವ ಸಲುವಾಗಿ ಇನ್ನಿಲ್ಲದ ಪ್ರಯತ್ನ ನಡೆಸಿದ್ದ ಬಿಜೆಪಿ ಹೈಕಮಾಂಡ್ ಸಚಿವ ಆರ್. ಅಶೋಕ ಅವರನ್ನು ಕಣಕ್ಕೆ ಇಳಿಸಿತ್ತು. ಆದರೆ, ಕೇವಲ 19,753 ಮತಗಳೊಂದಿಗೆ ಮೂರನೇ ಸ್ಥಾನಕ್ಕೆ ಕುಸಿದ ಆರ್. ಅಶೋಕ ಸೇರಿದಂತೆ ಕಣದಲ್ಲಿದ್ದ ಯಾರೂ ಠೇವಣಿ ಉಳಿಸಿಕೊಳ್ಳಲು ಸಾಧ್ಯವಾಗಿಲ್ಲ. ಜೆಡಿಎಸ್ ಅಭ್ಯರ್ಥಿ ಬಿ. ನಾಗರಾಜು 20,631 ಮತ ಪಡೆದು ಎರಡನೇ ಸ್ಥಾ-ನದಲ್ಲಿದ್ದಾರೆ.

ಡಿ.ಕೆ. ಸಹೋದರರು ಕನಕಪುರದ-ಲ್ಲಿ ಅಬೇಧ್ಯ ಕೋಟೆ ನಿರ್ಮಿಸಿಕೊಂಡಿ-ದ್ದು ಅದನ್ನು ಬೇಧಿಸಲು ಪ್ರತಿಪಕ್ಷಗಳಿಗೆ ಆಗಿಲ್ಲ. ಈ ಬಾರಿ ಡಿ.ಕೆ. ಸಹೋದರರು ರೂಪಿಸಿದ ತಂತ್ರ ಯಶಸ್ಸು ಕಂಡಿದೆ. ಬಿಜೆಪಿಗೆ ಬೂತ್ ಮಟ್ಟದಲ್ಲಿ ಸಂಘಟನೆಯ ಕೊರತೆ ಕಾಡಿದೆ. ಜೆಡಿಎಸ್ ನಾಯಕರ ನಿರ್ಲಕ್ಷ್ಯದಿಂದಾಗಿ ಆ ಪಕ್ಷದ ಮತಗಳೂ ಕಡಿಮೆ ಆಗಿವೆ.

ಎಂಟನೇ ಜಯ: ಅಂದ ಹಾಗೇ, ವಿಧಾನಸಭೆ ಚುನಾವಣೆಯಲ್ಲಿ ಶಿವಕುಮಾರ್‌ಗೆ ಇದು ಸತತ ಎಂಟನೇ ಗೆಲುವು. 1985ರಲ್ಲಿ ಸಾತನೂರು ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಎಚ್.ಡಿ. ದೇವೇಗೌಡರ ಎದುರು ಸೋಲು ಕಂಡಿದ್ದ ಡಿಕೆಶಿ 1989ರಿಂದ 2004ರವರೆಗೆ ಅದೇ ಕ್ಷೇತ್ರದಿಂದ ನಾಲ್ಕು ಬಾರಿ ಸತತವಾಗಿ ಆಯ್ಕೆ ಆಗಿದ್ದಾರೆ. 2008ರ ಕ್ಷೇತ್ರ ಪುನರ್ ವಿಂಗಡನೆ ಸಂದರ್ಭ ಸಾತನೂರು ಕ್ಷೇತ್ರವು ಕನಕಪುರ ಕ್ಷೇತ್ರದಲ್ಲಿ ವಿಲೀನ ಆಗಿದ್ದು, ಕನಕಪುರಕ್ಕೆ ವಲಸೆ ಬಂದ ಶಿವಕುಮಾರ್ ಇಲ್ಲಿಯೂ ಗೆಲುವಿನ ಓಟ ಮುಂದುವರಿಸಿದ್ದಾರೆ. 2008ರಿಂದ ಈವರೆಗೆ ಕನಕಪುರದಲ್ಲಿ ಅವರನ್ನು ಮಣಿಸಲು ಯಾರಿಗೂ ಸಾಧ್ಯವಾಗಿಲ್ಲ.



ರಾಮನಗರರ ಮತ ಎಣಿಕೆ ಕೇಂದ್ರದ ಸಮೀಪ ಶನಿವಾರ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು

5ನೇ ಮುಖ್ಯಮಂತ್ರಿ ಆಗುತ್ತಾರಾ?

ಕಾಂಗ್ರೆಸ್ ಬಹುಮತ ಗಳಿಸಿದ ಬೆನ್ನಲ್ಲೇ, ಡಿಕೆಶಿ ಮುಖ್ಯಮಂತ್ರಿ ಹುದ್ದೆಗೇರಲು ಪ್ರಯತ್ನ ನಡೆಸಿದ್ದಾರೆ. ಹಾಗೇನಾದರೂ ಆದಲ್ಲಿ ರಾಮನಗರ ಜಿಲ್ಲೆಯಿಂದ ಆಯ್ಕೆಯಾದ ಐದನೇ ಮುಖ್ಯಮಂತ್ರಿ ಎಂಬ ಶ್ರೇಯ ಅವರದ್ದಾಗಲಿದೆ.

ವಿಧಾನಸೌಧ ನಿರ್ಮಾತೃ, ರಾಜ್ಯದ ಎರಡನೇ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ರಾಮನಗರದವರು. 1983ರಲ್ಲಿ ಕನಕಪುರದಲ್ಲಿ ಉಪ ಚುನಾವಣೆ ಗೆದ್ದು ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿ ಆಗಿದ್ದರು. 1994ರಲ್ಲಿ ಎಚ್.ಡಿ. ದೇವೇಗೌಡ ಹಾಗೂ 2004 ಮತ್ತು 2018ರಲ್ಲಿ ಎಚ್.ಡಿ. ಕುಮಾರಸ್ವಾಮಿ ರಾಮನಗರದಿಂದ ಆಯ್ಕೆಯಾಗಿ ರಾಜ್ಯದ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ್ದರು.

ಕುಸಿದ ಎಚ್‌ಡಿಕೆ ಗೆಲುವಿನ ಅಂತರ

ರಾಮನಗರ: ತೀವ್ರ ಕುತೂಹಲ ಕೆರಳಿಸಿದ್ದ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಪ್ರಚಾರದ ಹೊರತಾಗಿಯೂ ಬಿಜೆಪಿ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಸೋಲು ಕಂಡಿದ್ದಾರೆ.

ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಸಮಾಧಾನಕರ ಗೆಲುವು ದಾಖಲಿಸಿದ್ದಾರೆ. ಆದರೆ, ಕಳೆದ ಬಾರಿ ಇಲ್ಲಿಂದ 22 ಸಾವಿರ ಮತಗಳ ಅಂತರದಿಂದ ಗೆದ್ದಿದ್ದ ಕುಮಾರಸ್ವಾಮಿ ಗೆಲುವಿನ ಅಂತರ ಈ ಬಾರಿ 15,915ಕ್ಕೆ ಇಳಿದಿದೆ.

ಕೆಲವರಿಗೆ ಬಹುಅಂತರದ ವಿಜಯ • ಬಹುತೇಕರಿಗೆ ಪ್ರಯಾಸದ ಗೆಲುವು

ಬದಲಾವಣೆಗಿಲ್ಲ ಅವಕಾಶ; ಪ್ರಭಾವಳಿಗೇ ಮಣೆ

• ಆರ್. ಮಂಜುನಾಥ್

ಬೆಂಗಳೂರು: ವೈಯಕ್ತಿಕ ವರ್ಚಸ್ಸು ಹಾಗೂ ಪಕ್ಷಗಳ ಸಿದ್ಧಾಂತಕ್ಕೆ ಅಂಟಿಕೊಳ್ಳುವ ಪ್ರಕ್ರಿಯೆಯನ್ನು ಮುಂದುವರಿಸಿರುವ ರಾಜಧಾನಿಯ ಮತದಾರರು, ಮತ್ತೆ ಅದೇ ಪಕ್ಷ ಹಾಗೂ ವ್ಯಕ್ತಿಗಳಿಗೆ ಮಣೆ ಹಾಕಿದ್ದಾರೆ. ಈ ನಿಟ್ಟಿನಲ್ಲಿ ಸ್ಥಾನಗಳ ಸಂಖ್ಯೆಯಲ್ಲಿ ಬಿಜೆಪಿ ಯಥಾಸ್ಥಿತಿ ಕಾಯ್ದುಕೊಂಡಿದ್ದರೆ, ಕಾಂಗ್ರೆಸ್ ಒಂದು ಸ್ಥಾನವನ್ನು ಹೆಚ್ಚಿಸಿಕೊಂಡಿದೆ. ಜೆಡಿಎಸ್ ಇದ್ದ ಒಂದು ಸ್ಥಾನವನ್ನೂ ಕಳೆದುಕೊಂಡು ಶೂನ್ಯವಾಗಿದೆ.

ನಗರದ 28 ವಿಧಾನಸಭೆ ಕ್ಷೇತ್ರಗಳಲ್ಲಿ ಒಂದೆರಡು ಕ್ಷೇತ್ರಗಳನ್ನು ಹೊರತುಪಡಿಸಿದರೆ, ಹ್ಯಾಟ್ರಿಕ್ ಗೆಲುವು ಸಾಧಿಸಿದವರಿಂದ ಹಿಡಿದು ಮತ್ತೆ ಕಣದಲ್ಲಿದ್ದವರಿಗೆ ಗೆಲುವು ಸುಲಭವಾಗಿರಲ್ಲ. ನೂರಾರು ಕೋಟಿ ಅಭಿವೃದ್ಧಿ ಕಾರ್ಯಗಳು ಮುಂದಿದ್ದರೂ ಮತದಾರ ಸುಲಭವಾಗಿ ವಿಜಯಮಾಲೆಯನ್ನು ಹಾಕಿಲ್ಲ. ಜಿದ್ದಾಜಿದ್ದಿಯ ಹೋರಾಟದಲ್ಲಿ ಅಂತಿಮವಾಗಿ ಗೆದ್ದು ನಗೆಬೀರುವ ಮುನ್ನ ಸಾಕಷ್ಟು ಆತಂಕ ಮನೆ ಮಾಡಿತ್ತು. ಪ್ರಧಾನಿಯವರ ದೀರ್ಘ ರ‍್ಯಾಲಿ, ಎಐಸಿಸಿ ಮುಖಂಡರ ರ‍್ಯಾಲಿಗಳು ಮತದಾರರ ಮೇಲೆ ಪ್ರಭಾವ ಬೀರಿಲ್ಲ.

ರಾಜಧಾನಿ ಬೆಂಗಳೂರು ಕಾಂಗ್ರೆಸ್ ಹಾಗೂ ಬಿಜೆಪಿಗೆ ಪ್ರತಿಷ್ಠೆಯ ಜಿಲ್ಲೆ. ಇಲ್ಲಿ ಪ್ರತಿಬಾರಿಯೂ ರಾಷ್ಟ್ರೀಯ ಪಕ್ಷಗಳು ಜಿದ್ದಾಜಿದ್ದಿನ ಹೋರಾಟ ನಡೆಸುತ್ತಿವೆ. ವೈಯಕ್ತಿಕ ಪ್ರಭಾವಳಿಯನ್ನೇ ನಂಬಿಕೊಂಡಿರುವ ಪಕ್ಷಗಳು ಅಂತಹ ವ್ಯಕ್ತಿಗಳಿಗೇ ಮತ್ತೆ ಟಿಕೆಟ್ ನೀಡುವ ಮೂಲಕ ತಮ್ಮ ಸ್ಥಾನಗಳನ್ನು ಉಳಿಸಿಕೊಂಡಿವೆ.

ಬಿಜೆಪಿ ಸರ್ಕಾರದ ಆಡಳಿತ ವಿರೋಧಿ ಹಾಗೂ ಕಾಂಗ್ರೆಸ್ ಪರವಾದ ಅಲೆ ಬೆಂಗಳೂರಿನ ಮತದಾರರ ಮೇಲೆ ಅಂತಹ ಪ್ರಭಾವ ಬೀರಿಲ್ಲ. ವ್ಯಕ್ತಿ ಪ್ರಭಾವಳಿಗೆ ಮತ್ತೆ ಇಲ್ಲಿ ಅವಕಾಶ ಸಿಕ್ಕಿದ್ದು, ಕಾಂಗ್ರೆಸ್ ಹಾಗೂ ಬಿಜೆಪಿಗಳ ಹಾಲಿ ಶಾಸಕರೇ ಗೆಲುವು ಸಾಧಿಸಿದ್ದಾರೆ. ಇವರಿಗೆ ಗೆಲುವು ಅಷ್ಟು ಸುಲಭವಾಗಿರಲ್ಲ. ಆದರೂ, ಜಯ ದಾಖಲಿಸುವಷ್ಟು ಮತಗಳು ಅವರ ಖಾತೆಗೆ ಬಂದಿವೆ.

ಕಾಂಗ್ರೆಸ್‌ನ ರಾಮಲಿಂಗಾರೆಡ್ಡಿ, ಕೃಷ್ಣ ಬೈರೇಗೌಡ, ಕೆ.ಜೆ. ಜಾರ್ಜ್, ದಿನೇಶ್ ಗುಂಡೂರಾವ್, ಎಂ. ಕೃಷ್ಣಪ್ಪ, ಜಮೀರ್ ಅಹಮದ್ ಖಾನ್, ಬೈರತಿ ಸುರೇಶ್ ತಮ್ಮ ಗೆಲುವನ್ನು ಮುಂದುವರಿಸಿದ್ದಾರೆ. ಅದೇ ರೀತಿ, ಬಿಜೆಪಿಯ ಆರ್. ಅಶೋಕ, ಸುರೇಶ್ ಕುಮಾರ್, ಅಶ್ವತ್ಥನಾರಾಯಣ, ರಘು, ರವಿ ಸುಬ್ರಮಣ್ಯ, ಸತೀಶ್ ರೆಡ್ಡಿ, ಎಸ್.ಆರ್. ವಿಶ್ವನಾಥ್, ಎಸ್.ಟಿ. ಸೋಮಶೇಖರ್, ಎಂ. ಕೃಷ್ಣಪ್ಪ ಅವರ ಜಯಕ್ಕೆ ಅಡ್ಡಿಯಾಗಿಲ್ಲ.

ಪುಲಕೇಶಿನಗರದಲ್ಲಿ ಕಾಂಗ್ರೆಸ್ ಟಿಕೆಟ್ ಬಯಸಿದ್ದ ಅಖಂಡ ಶ್ರೀನಿವಾಸ ಮೂರ್ತಿ ಬಿಎಸ್‌ಪಿಯಿಂದ ಸ್ಪರ್ಧಿಸಿದ್ದರು. ಆದರೆ, ಕಾಂಗ್ರೆಸ್ ಶ್ರೀನಿವಾಸ್ ಅವರನ್ನು ಕಣಕ್ಕಿಳಿಸಿ, ಭಾರಿ ಜಯ ಗಳಿಸುವ ಮೂಲಕ ಇದು ಕಾಂಗ್ರೆಸ್‌ನದೇ ಕ್ಷೇತ್ರ ಎಂಬುದನ್ನು ಸಾಬೀತುಪಡಿಸಿದೆ. ಇಲ್ಲಿ ಅಭ್ಯರ್ಥಿ ಬದಲಾಗಿದ್ದು, ಕಾಂಗ್ರೆಸ್ ಕ್ಷೇತ್ರ ಉಳಿಸಿಕೊಂಡಿದೆ.

ಮಹದೇವಪುರದಲ್ಲಿ ಬಿಜೆಪಿ ಅರವಿಂದ ಲಿಂಬಾವಳಿ ಅವರ ಬದಲಿಗೆ ಅವರ ಪತ್ನಿ ಮಂಜುಳಾ ಅವರನ್ನು ಕಣಕ್ಕಿಳಿಸಿತು. ಕಾಂಗ್ರೆಸ್ ಎಚ್. ನಾಗೇಶ್ ಅವರನ್ನು ಇಲ್ಲಿಗೆ ತಂದು ನಿಲ್ಲಿಸಿದರೂ, ಬಿಜೆಪಿಯ ಪ್ರಾಬಲ್ಯವನ್ನು ಕಸಿದುಕೊಳ್ಳಲಾಗಿಲ್ಲ. ಹೀಗಾಗಿ, ವ್ಯಕ್ತಿ ಬದಲಾದರೂ ಬಿಜೆಪಿ ಕ್ಷೇತ್ರದಲ್ಲಿ ವಿಜಯ ಸಾಧಿಸಿತು.

ಗೋವಿಂದರಾಜನಗರದಲ್ಲಿ ವಿ. ಸೋಮಣ್ಣ ಅವರ ಬದಲಿಗೆ ಮಾಜಿ ಕಾರ್ಪೊರೇಟರ್ ಉಮೇಶ್ ಶೆಟ್ಟಿ ಅವರು ಬಿಜೆಪಿಯಿಂದ ಕಣದಲ್ಲಿದ್ದರು. ಸೋಮಣ್ಣ ಅವರಿಗೂ ಆತಂಕ ತಂದಿದ್ದ ಕಾಂಗ್ರೆಸ್‌ನ ಪ್ರಿಯಕೃಷ್ಣ ಅವರಿಗೆ ಉಮೇಶ್ ಶೆಟ್ಟಿ ಪ್ರತಿಸ್ಪರ್ಧಿಯಾಗಲಿಲ್ಲ. ಸೋಮಣ್ಣ ಅವರಿಗೇ ಸೋಲುಣಿಸಲು ಸಿದ್ಧರಾಗಿದ್ದ ತಂದೆ–ಮಗ (ಕೃಷ್ಣಪ್ಪ-ಪ್ರಿಯಕೃಷ್ಣ) ಅವರಿಗೆ ವಿಜಯಮಾಲೆ ಸಂದಿದೆ.

ದಾಸರಹಳ್ಳಿ ಕ್ಷೇತ್ರವನ್ನು ಕಳೆದ ಬಾರಿ ಕಳೆದುಕೊಂಡಿದ್ದ ಬಿಜೆಪಿ ಈ ಬಾರಿ ಗೆಲುವು ಸಾಧಿಸಲು ಶತಾಯಗತಾಯ ಪ್ರಯತ್ನಪಟ್ಟಿತ್ತು. ಕಾಂಗ್ರೆಸ್ ಒಡಕಿನ ಲಾಭ ಪಡೆದುಕೊಂಡಿದ್ದ ಜೆಡಿಎಸ್‌ಗೆ ಈ ಬಾರಿ ಬಿಜೆಪಿಯ ಎಸ್. ಮುನಿರಾಜು ಪ್ರಬಲ ಸ್ಪರ್ಧಿಯಾಗಿದ್ದರು. ಈ ಕ್ಷೇತ್ರದಲ್ಲಿ ಎರಡು ಬಾರಿ ಗೆದ್ದಿದ್ದ ಮುನಿರಾಜು, ಈ ಬಾರಿ ಮತ್ತೆ ಗೆಲುವು ಸಾಧಿಸುವಲ್ಲಿ ಸಫಲರಾಗಿದ್ದಾರೆ.

ಮಾಜಿ ಕಾರ್ಪೊರೇಟರ್‌ಗಳಿಗೆ ಸೋಲು: ಸಿ.ಕೆ. ರಾಮಮೂರ್ತಿ ಹೊರತುಪಡಿಸಿದಂತೆ ಬಿಬಿಎಂಪಿ ಮಾಜಿ ಕಾರ್ಪೊರೇಟರ್‌ಗಳ ವಿಧಾನಸಭೆ ಮೆಟ್ಟಿಲೇರುವ ಆಶಯ ಕನಸಾಗಿಯೇ ಉಳಿಯಿತು. ಬಿಜೆಪಿಯಿಂದ ಆರು ಹಾಗೂ ಕಾಂಗ್ರೆಸ್‌ನಿಂದ ಇಬ್ಬರು ಮಾಜಿ ಕಾರ್ಪೊರೇಟರ್‌ಗಳು ವಿಧಾನಸಭೆ ಚುನಾವಣೆಯ ಕಣದಲ್ಲಿದ್ದರು.

ಬಿಜೆಪಿಯಿಂದ ಪದ್ಮನಾಭರೆಡ್ಡಿ (ಸರ್ವಜ್ಞನಗರ), ಎಚ್. ರವೀಂದ್ರ (ವಿಜಯನಗರ), ಎನ್.ಚಂದ್ರ (ಶಿವಾಜಿನಗರ), ಶಿವಕುಮಾರ್ (ಶಾಂತಿನಗರ), ಉಮೇಶ್ ಶೆಟ್ಟಿ (ಗೋವಿಂದರಾಜನಗರ) ಹಾಗೂ ಆನಂದಕುಮಾರ್ (ಸಿ.ವಿ. ರಾಮನ್‌ನಗರ), ಕಾಂಗ್ರೆಸ್‌ನಿಂದ ಕೇಶವಮೂರ್ತಿ (ಮಹಾಲಕ್ಷ್ಮಿ ಲೇಔಟ್) ಸ್ಪರ್ಧಿಸಿದ್ದರು.

ಜೆಡಿಎಸ್ 'ಶೂನ್ಯ'

ಬೆಂಗಳೂರು ನಗರದಲ್ಲಿ ಅಸ್ತಿತ್ವ ಉಳಿಸಿಕೊಳ್ಳಲು ಭಾರಿ ಕಸರತ್ತು ನಡೆಸುತ್ತಿರುವ 'ಮಣ್ಣಿನ ಮಕ್ಕಳ ಪಕ್ಷ' ಜೆಡಿಎಸ್ ಈ ಬಾರಿ ಒಂದೂ ಕ್ಷೇತ್ರದಲ್ಲಿ ಗೆಲುವು ಸಾಧಿಸದೆ ಶೂನ್ಯ ಸುತ್ತಿದೆ. ಈ ಹಿಂದೆ, ಜಮೀರ್ ಅಹಮದ್ ಖಾನ್ ಜೆಡಿಎಸ್‌ನಲ್ಲಿದ್ದಾಗ ಚಾಮರಾಜಪೇಟೆ ಅದರ ತೆಕ್ಕೆಯಲ್ಲಿತ್ತು. ಪುಲಕೇಶಿನಗರದಲ್ಲಿ ಅಖಂಡ ಶ್ರೀನಿವಾಸ ಮೂರ್ತಿ ಕೂಡ ಜೆಡಿಎಸ್‌ನಿಂದ ಗೆಲುವು ಸಾಧಿಸಿದ್ದರು. ಕೆ. ಗೋಪಾಲಯ್ಯ ಮಹಾಲಕ್ಷ್ಮಿ ಲೇಔಟ್‌ನಲ್ಲಿ ಜೆಡಿಎಸ್‌ಗೆ ಗೆಲುವು ತಂದುಕೊಟ್ಟಿದ್ದರು. ಜಮೀರ್, ಅಖಂಡ, ಗೋಪಾಲಯ್ಯ ಪಕ್ಷ ತೊರೆದ ಮೇಲೆ ಆ ಕ್ಷೇತ್ರಗಳು ಜೆಡಿಎಸ್ ಕೈಬಿಟ್ಟವು. ಕಳೆದ ಬಾರಿ ದಾಸರಹಳ್ಳಿಯಲ್ಲಿ ಒಕ್ಕಲಿಗರ ಮತಗಳನ್ನು ಒಟ್ಟುಗೂಡಿಸಿಕೊಂಡು ಕಾಂಗ್ರೆಸ್ ಒಳಜಗಳದ ಲಾಭ ಪಡೆದು ಬಿಜೆಪಿಯ ಎಸ್. ಮುನಿರಾಜು ಅವರನ್ನು ಸೋಲಿಸಿ ಜೆಡಿಎಸ್‌ನಿಂದ ಆರ್. ಮಂಜುನಾಥ ಗೆಲುವು ಸಾಧಿಸಿದ್ದರು. ಆದರೆ ಈ ಬಾರಿ ಅದೂ ಕೈಬಿಟ್ಟಿದೆ.

ದಾಸರಹಳ್ಳಿ ಬಿಟ್ಟರೆ ಜೆಡಿಎಸ್ ಕಣ್ಣಿಟ್ಟಿದ್ದು ಯಶವಂತಪುರದಲ್ಲಿ. ಮತ್ತೆ ಒಕ್ಕಲಿಗ ಸಮುದಾಯವನ್ನು ತನ್ನತ್ತ ಸೆಳೆದುಕೊಳ್ಳಲು ಮೂರು ಬಾರಿ ಸೋತಿದ್ದ ಜವರಾಯಿಗೌಡ ಅವರನ್ನೇ ಕಣಕ್ಕಿಳಿಸಿತು. ಎಚ್.ಡಿ. ದೇವೇಗೌಡ, ಕುಮಾರಸ್ವಾಮಿ ಇಬ್ಬರೂ ಅಬ್ಬರದ ಪ್ರಚಾರ ಮಾಡಿದರು. ಆದರೆ, 'ಭೂಮಾಫಿಯಾ'ದ ಕಳಂಕದಿಂದ ಜಯರಾಯಿಗೌಡ ಅವರಿಗೆ ಮತ್ತೆ ಗೆಲುವು ಸಾಧ್ಯವಾಗಲಿಲ್ಲ. ಇನ್ನು, ಬಸವನಗುಡಿಯಲ್ಲಿ ಇಬ್ಬರು ಬ್ರಾಹ್ಮಣರ ನಡುವೆ ಒಕ್ಕಲಿಗ ಮತಗಳನ್ನು ಸೆಳೆದುಕೊಂಡು ಜಯ ಕಾಣುವ ಕನಸೂ ನುಚ್ಚುನೂರಾಗಿದೆ. ರಾಜಧಾನಿ ಬೆಂಗಳೂರಿನಲ್ಲಿ ಜೆಡಿಎಸ್ ಯಾವ ಜಯವನ್ನೂ ಕಾಣದೆ, ವಿಫಲವಾಗಿದೆ.

ಪಕ್ಷ	ಶಾಸಕರು
2023ರಲ್ಲಿ ಪಕ್ಷ ಬಲಾಬಲ	
ಬಿಜೆಪಿ	16
ಕಾಂಗ್ರೆಸ್	12
2018ರಲ್ಲಿ ಪಕ್ಷ ಬಲಾಬಲ	
ಕಾಂಗ್ರೆಸ್	15
ಬಿಜೆಪಿ	11
ಜೆಡಿಎಸ್	2
2019ರ ಉಪ ಚುನಾವಣೆ ನಂತರ	
ಬಿಜೆಪಿ	15
ಕಾಂಗ್ರೆಸ್	12
ಜೆಡಿಎಸ್	1
2013ರಲ್ಲಿ ಪಕ್ಷ ಬಲಾಬಲ	
ಕಾಂಗ್ರೆಸ್	13
ಬಿಜೆಪಿ	12
ಜೆಡಿಎಸ್	3
2008ರಲ್ಲಿ ಪಕ್ಷ ಬಲಾಬಲ	
ಬಿಜೆಪಿ	17
ಕಾಂಗ್ರೆಸ್	10
ಜೆಡಿಎಸ್	1

ಅತಿ ಹೆಚ್ಚು ಅಂತರದಿಂದ ಗೆದ್ದವರು

ಕ್ಷೇತ್ರ	ಅಭ್ಯರ್ಥಿ	ಪಕ್ಷ	ಅಂತರ
ಯಲಹಂಕ	ಎಸ್.ಆರ್. ವಿಶ್ವನಾಥ್	ಬಿಜೆಪಿ	64,110
ಪುಲಕೇಶಿನಗರ	ಎ.ಸಿ.ಶ್ರೀನಿವಾಸ್	ಕಾಂಗ್ರೆಸ್	62,210
ಪದ್ಮನಾಭನಗರ	ಆರ್. ಅಶೋಕ	ಬಿಜೆಪಿ	55,175
ಬಸವನಗುಡಿ	ರವಿ ಸುಬ್ರಮಣ್ಯ	ಬಿಜೆಪಿ	54,978
ಚಾಮರಾಜಪೇಟೆ	ಜಮೀರ್ ಅಹ್ಮದ್ ಖಾನ್	ಕಾಂಗ್ರೆಸ್	53,953
ಮಹಾಲಕ್ಷ್ಮಿ ಲೇಔಟ್	ಕೆ.ಗೋಪಾಲಯ್ಯ	ಬಿಜೆಪಿ	51,165
ಸರ್ವಜ್ಞನಗರ	ಕೆ.ಜೆ.ಜಾರ್ಜ್	ಕಾಂಗ್ರೆಸ್	55,768

ಅತಿಹೆಚ್ಚು ಬಾರಿ ವಿಧಾನಸಭೆ ಪ್ರವೇಶಿಸಿದವರು

ರಾಮಲಿಂಗಾರೆಡ್ಡಿ	8	ರವಿ ಸುಬ್ರಮಣ್ಯ	4
ಆರ್. ಅಶೋಕ	7	ಸಿ.ಎನ್. ಅಶ್ವತ್ಥನಾರಾಯಣ	4
ದಿನೇಶ್ ಗುಂಡೂರಾವ್	6	ಎನ್.ಎ. ಹ್ಯಾರಿಸ್	4
ಕೆ.ಜೆ. ಜಾರ್ಜ್	6	ಎಂ. ಕೃಷ್ಣಪ್ಪ (ವಿಜಯನಗರ)	4
ಕೃಷ್ಣಬೈರೇಗೌಡ	6	ಎಂ. ಕೃಷ್ಣಪ್ಪ (ಬೆಂ.ದಕ್ಷಿಣ)	4
ಸುರೇಶ್ ಕುಮಾರ್	6	ಸತೀಶ್ ರೆಡ್ಡಿ	4
ಎಸ್.ರಘು	5	ಎಸ್.ಆರ್. ವಿಶ್ವನಾಥ್	4
ಜಮೀರ್ ಅಹಮದ್ ಖಾನ್	5		





ಜಯನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸೌಮ್ಯ ರೆಡ್ಡಿ ಬೆಂಬಲಿಗರು ಮತಎಣಿಕೆ ಕೇಂದ್ರದಲ್ಲಿ ಪೊಲೀಸರೊಂದಿಗೆ ವಾಗ್ವಾದ ನಡೆಸಿದರು (ಎಡಚಿತ್ರ) ಬಿಜೆಪಿ ಅಭ್ಯರ್ಥಿ ಸಿ.ಕೆ. ರಾಮಮೂರ್ತಿ ಮತ ಎಣಿಕೆ ಕೇಂದ್ರದ ಮುಂದೆ ಕಾರ್ಯಕರ್ತರೊಂದಿಗಿದ್ದರು –ಪ್ರಜಾವಾಣಿ ಚಿತ್ರಗಳು/ ಕಿಶೋರ್ ಕುಮಾರ್ ಬೋಳಾರ್

ಎಣಿಕೆಯಲ್ಲಿ ಕಾಂಗ್ರೆಸ್‌ಗೆ ಮುನ್ನಡೆ; ಮರು ಎಣಿಕೆಯಲ್ಲಿ ಬಿಜೆಪಿ ಮುನ್ನಡೆ: ಗೊಂದಲ ಸೃಷ್ಟಿ

ಜಯನಗರ ಮರುಎಣಿಕೆ: ಉದ್ವಿಗ್ನ ವಾತಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಷ್ಠಿತ ಬಡಾವಣೆಗಳ ಜಯನಗರ ವಿಧಾನಸಭೆ ಕ್ಷೇತ್ರದ ಮತ ಎಣಿಕೆಯಲ್ಲಿ ಗೊಂದಲ ಸೃಷ್ಟಿಯಾಗಿ, ಕಾಂಗ್ರೆಸ್ ಹಾಗೂ ಬಿಜೆಪಿ ಕಾರ್ಯಕರ್ತರು ಪರಸ್ಪರ ಕೂಗಾಟ, ತಳ್ಳಾಟದಲ್ಲಿ ತೊಡಗಿದ್ದರು. ಸ್ಥಳದಲ್ಲಿ ಉದ್ವಿಗ್ನ ವಾತಾವರಣ ಸೃಷ್ಟಿಯಾಗಿ, ಪೊಲೀಸರು ಹೆಚ್ಚಿನ ಭದ್ರತೆ ಒದಗಿಸಿದರು. ತಡರಾತ್ರಿಯವರೆಗೂ ಗೊಂದಲವಿತ್ತು.

ಮರು ಎಣಿಕೆ ವಿಚಾರದಲ್ಲಿ ಅಕ್ರಮವಾಗಿದೆ ಎಂದು ಕಾಂಗ್ರೆಸ್ ಹಾಗೂ ಬಿಜೆಪಿ ನಾಯಕರು ಪರಸ್ಪರ ಆರೋಪಿಸಿದ್ದರು. ಎಲ್ಲ ಸುತ್ತುಗಳ ಮತ ಎಣಿಕೆ ಮುಗಿದ ಮೇಲೆ ಕಾಂಗ್ರೆಸ್‌ನ ಸೌಮ್ಯ ರೆಡ್ಡಿ 294 ಮತಗಳ ಅಂತರದಿಂದ ಬಿಜೆಪಿಯ ಸಿ.ಕೆ. ರಾಮಮೂರ್ತಿ ಅವರಿಗಿಂತ ಮುಂದಿದ್ದರು. ಈ ಸಂದರ್ಭದಲ್ಲಿ ರಾಮಮೂರ್ತಿ ಮರು ಎಣಿಕೆಗೆ ಮನವಿ ಮಾಡಿದರು. ಅದನ್ನು ಪುರಸ್ಕರಿಸಿದ ಚುನಾವಣೆ ಅಧಿಕಾರಿ ಮರು ಎಣಿಕೆ ಮಾಡಿದರು. ಆಗ ಬಿಜೆಪಿ ಅಭ್ಯರ್ಥಿಗೆ ಮುನ್ನಡೆ ದೊರೆಯಿತು.

'ಮರುಎಣಿಕೆಯಲ್ಲಿ ಅಕ್ರಮವಾಗಿದೆ' ಎಂದು ಕಾಂಗ್ರೆಸ್ ಕಾರ್ಯಕರ್ತರು ಘೋಷಣೆ ಕೂಗಿದರು. ಇದರ ವಿರುದ್ಧ ಬಿಜೆಪಿಯವರೂ ಘೋಷಣೆ ಕೂಗಿದರು. ಕಾಂಗ್ರೆಸ್ ಮುಖಂಡರಾದ ಡಿ.ಕೆ. ಶಿವಕುಮಾರ್, ರಾಮಲಿಂಗಾರೆಡ್ಡಿ ಸ್ಥಳದಲ್ಲಿ ಕುಳಿತು ಚುನಾವಣೆ ಅಧಿಕಾರಿ ವಿರುದ್ಧ ಆರೋಪಿಸಿದರು. 'ಸಂಸದ ತೇಜಸ್ವಿ ಸೂರ್ಯ ಅವರನ್ನು ಏಕೆ ಒಳಗೆ ಬಿಟ್ಟಿರಿ' ಎಂದು ಪ್ರಶ್ನಿಸಿದರು. ಸ್ಥಳದಲ್ಲಿ ಉದ್ವಿಗ್ನ ವಾತಾವರಣ ಸೃಷ್ಟಿಯಾಯಿತು.

ಜಯನಗರದ ಎಸ್‌ಎಸ್‌ಎಂಆರ್‌ವಿ ಪಿಯು ಕಾಲೇಜಿನಲ್ಲಿ ಮತ ಎಣಿಕೆ ಕೇಂದ್ರದ ಸುತ್ತ ಸಾಕಷ್ಟು ಜನರು ಸೇರಿದ್ದರು. ಸಂಸದ ಡಿ.ಕೆ. ಸುರೇಶ್ ಹಾಗೂ ಬೆಂಬಲಿಗರು ಮತ ಎಣಿಕೆ ಕೇಂದ್ರದ ಒಳಗೆ ಹೋಗಲು ಗೇಟ್ ಅನ್ನು ತಳ್ಳಾಡಿದರು. ಪೊಲೀಸರು ಮಧ್ಯಪ್ರವೇಶಿಸಿ ಅವರನ್ನು ಸಮಾಧಾನಗೊಳಿಸಿದರು.

'ಮತ ಮರು ಎಣಿಕೆ ಸಂದರ್ಭದಲ್ಲಿ ಅಂಚೆ ಮತಗಳನ್ನು ಸೇರಿಸಲಾಗಿದೆ. ಮೊದಲು ತಿರಸ್ಕರಿಸಿದ ಅಂಚೆ ಮತಗಳನ್ನು ಪರಿಗಣನೆಗೆ ತೆಗೆದುಕೊಂಡು ಚುನಾವಣೆ ಅಧಿಕಾರಿಗಳು ಅಕ್ರಮ ಎಸಗಿದ್ದಾರೆ. ಮೊದಲು ಎಣಿಕೆ ಮುಗಿದ ಸಂದರ್ಭದಲ್ಲಿ ಸೌಮ್ಯ ರೆಡ್ಡಿ ಮುಂದಿದ್ದರು. ಸುಮಾರು 160 ಮತಗಳ ಅಂತರವಿತ್ತು. ಆದರೆ, ತಿರಸ್ಕೃತ ಮತಗಳನ್ನು ಸೇರಿಸಿಕೊಂಡು 17 ಮತಗಳ ಅಂತರದಿಂದ ಬಿಜೆಪಿಯ ಸಿ.ಕೆ. ರಾಮಮೂರ್ತಿ ಗೆದ್ದಿದ್ದಾರೆ ಎಂದು ಘೋಷಿಸಲು ಹೊರಟರು. ಅದಕ್ಕೆ ನಮ್ಮ ವಿರೋಧವಿದೆ' ಎಂದು ಕಾಂಗ್ರೆಸ್ ಮುಖಂಡ ರಾಮಲಿಂಗಾರೆಡ್ಡಿ ಹೇಳಿದರು.

'ಸೌಮ್ಯ ರೆಡ್ಡಿ 160 ಮತಗಳಿಂದ ಮುಂದಿದ್ದಾರೆ ಎಂದು ವೆಬ್ ಸೈಟ್‌ನಲ್ಲೂ ಪ್ರಕಟಿಸಲಾಗಿತ್ತು. ಅದನ್ನು ಫಲಿತಾಂಶ ಎಂದು ಪ್ರಕಟಿಸಿ ಎಂಬುದು ನಮ್ಮ ಒತ್ತಾಯ. ಆದರೆ ಇಲ್ಲಿನ ಕೆಲವು ಅಧಿಕಾರಿಗಳು ಬಿಜೆಪಿ ಪರವಾಗಿ ಕೆಲಸ ಮಾಡಿ, ತಿರಸ್ಕೃತ ಮತಗಳನ್ನೆಲ್ಲ ಸರಿ ಎಂದು ಪರಿಗಣಿಸಿದ್ದಾರೆ' ಎಂದು ಆರೋಪಿಸಿದರು.

'ಮತಗಳ ಎಣಿಕೆಯನ್ನು ಎಣಿಕೆ ಕೇಂದ್ರದಲ್ಲಿರುವ ಬೋರ್ಡ್‌ನಲ್ಲಿ ಸಂಪೂರ್ಣವಾಗಿ ಬರೆಯಲಾಗಿದೆ. ಅದನ್ನು ಎಣಿಕೆ ಮಾಡಿ ಫಲಿತಾಂಶ ಪ್ರಕಟಿಸಬೇಕು ಎಂಬುದು ನಮ್ಮ ಒತ್ತಾಯ. ಅದರಂತೆ ಸಿ.ಕೆ. ರಾಮಮೂರ್ತಿ ಗೆದ್ದಿದ್ದಾರೆ. ಆದರೆ ಕಾಂಗ್ರೆಸ್‌ನವರು ಬಿಡುತ್ತಿಲ್ಲ' ಎಂದು ಬಿಜೆಪಿ ಮುಖಂಡ ಆರ್. ಅಶೋಕ ತಿಳಿಸಿದರು.

'ಯಾವ ಮತಗಳನ್ನು ಪರಿಗಣಿಸಬೇಕು, ಪರಿಗಣಿಸಬಾರದು ಎಂಬುದು ನಿಯಮಗಳ ಪುಸ್ತಕದಲ್ಲಿ ವಿವರವಾಗಿ ಬರೆಯಲಾಗಿದೆ. ಅದರಂತೆ ಇಬ್ಬರು ಚುನಾವಣೆ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿದ್ದಾರೆ. ನಿಯಮಗಳು ಏನು ಎಂಬುದನ್ನು ರಾಮಲಿಂಗಾರೆಡ್ಡಿ ಅವರ ಮುಂದೆಯೇ ನಮಗೂ ಅಧಿಕಾರಿಗಳು ತಿಳಿಸಿದ್ದಾರೆ. ಅದರಂತೆ ಕ್ರಮ ಕೈಗೊಳ್ಳಬೇಕು ಎಂಬುದು ನಮ್ಮ ಒತ್ತಾಯವಾಗಿದೆ' ಎಂದರು.

'ಮತ ಎಣಿಕೆ ಕೇಂದ್ರಕ್ಕೆ ಸಂಸದ ತೇಜಸ್ವಿ ಸೂರ್ಯ ಹೋಗಬಾರದು ಎಂದಿದ್ದಾರೆ. ಆದರೆ, ಅದಕ್ಕೂ ಮೊದಲು ಎಣಿಕೆ ಕೇಂದ್ರದಲ್ಲಿ ಹೋಗಿ ಕುಳಿತಿದ್ದು ರಾಮಲಿಂಗಾರೆಡ್ಡಿ ಹಾಗೂ ಅವರ ಬೆಂಬಲಿಗರು. ನಾವು ಬಂದು ಅವರನ್ನೆಲ್ಲ ಹೊರಗೆ ಕಳಿಸಿದೆವು. ಈಗ ಜನರನ್ನೆಲ್ಲ ಕರೆದುಕೊಂಡು ಬಂದು ರೌಡಿಸಂ ಮಾಡುತ್ತಿದ್ದಾರೆ. ಈಗಲೇ ಇವರ ಗೂಂಡಾಗಿರಿ, ದೌರ್ಜನ್ಯ ಆರಂಭವಾಗಿದೆ' ಎಂದು ಅಶೋಕ ದೂರಿದರು.

'ಗಾಂಧಿನಗರದಲ್ಲಿ ದಿನೇಶ್ ಗುಂಡೂರಾವ್ ಕಡಿಮೆ ಅಂತರದಲ್ಲಿ ಗೆದ್ದರು. ನಾವು ಅದನ್ನು ಒಪ್ಪಿಕೊಂಡಿಲ್ಲವೇ? ಇವರು ಸೋಲನ್ನು ಒಪ್ಪಿಕೊಳ್ಳಬೇಕು. ಸುಮ್ಮನೇ ಆರೋಪ, ದೌರ್ಜನ್ಯ, ಗಲಾಟೆ ಮಾಡುತ್ತಿದ್ದಾರೆ' ಎಂದರು.



ಜಯದ ನಂತರ ಸಿ.ಕೆ. ರಾಮಮೂರ್ತಿ ಬೆಂಬಲಿಗರು ಸಂಭ್ರಮಿಸಿದರು. ಸಂಸದ ತೇಜಸ್ವಿ ಸೂರ್ಯ ಇದ್ದರು –ಪ್ರಜಾವಾಣಿ ಚಿತ್ರ/ ರಂಜು ಪಿ.



ಕಾಂಗ್ರೆಸ್ ಅಭ್ಯರ್ಥಿ ಸೌಮ್ಯ ರೆಡ್ಡಿ ಮತ ಎಣಿಕೆ ಕೇಂದ್ರದಿಂದ ಹೊರಬಂದ ಸಂದರ್ಭ

16 ಮತದಿಂದ ಬಿಜೆಪಿಗೆ ಜಯ

ಜಯನಗರ ವಿಧಾನಸಭೆ ಕ್ಷೇತ್ರದ ಫಲಿತಾಂಶ ಹಲವು ಅಡೆತಡೆಗಳನ್ನು ಮೀರಿ ತಡರಾತ್ರಿ ಪ್ರಕಟಗೊಂಡಿತು. ಬಿಜೆಪಿಯ ಸಿ.ಕೆ. ರಾಮಮೂರ್ತಿ ಅವರು ಕಾಂಗ್ರೆಸ್ ನ ಸೌಮ್ಯ ರೆಡ್ಡಿ ವಿರುದ್ಧ 16 ಮತಗಳಿಂದ ವಿಜಯ ಸಾಧಿಸಿದರು.

ಮರು ಎಣಿಕೆ ಪ್ರಕ್ರಿಯೆಯಲ್ಲಾದ ಗೊಂದಲದಿಂದ ತಡರಾತ್ರಿಯವರೆಗೂ ಫಲಿತಾಂಶ ಘೋಷಣೆಯಾಗಿರಲಿಲ್ಲ. ಮೂರು ಬಾರಿ ಮತ ಎಣಿಕೆ ಮಾಡಲಾಯಿತು. ಅಧಿಕಾರಿಗಳ ಈ ಮರು ಎಣಿಕೆಯನ್ನು ಕಾಂಗ್ರೆಸ್ ಮುಖಂಡರು ಒಪ್ಪದೇ ಗೊಂದಲ ಸೃಷ್ಟಿಯಾಗಿತ್ತು.

ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿಗಳು ಮತ್ತು ನಾಯಕರು ತಮ್ಮದೇ ವಾದ ಮಂಡಿಸಿ ಅವರಂತೆಯೇ ಫಲಿತಾಂಶ ಘೋಷಣೆಯಾಗಬೇಕೆಂದು ಒತ್ತಾಯಿಸಿದರು.

ಜಯನಗರ ಮತ ಎಣಿಕೆ ಕೇಂದ್ರಕ್ಕೆ ಬಂದ ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಅವರು ಮತ ಎಣಿಕೆ ಕೇಂದ್ರದಲ್ಲಿ ಅಧಿಕಾರಿಗಳು ಮರು ಎಣಿಕೆ ಸಂದರ್ಭದಲ್ಲಿ ಕೈಗೊಂಡ ಕ್ರಮಗಳನ್ನು ಪರಿಶೀಲಿಸಿದರು. ನಂತರ ಬಿಜೆಪಿ ಗೆಲುವನ್ನು ನಿರ್ಧರಿಸಲಾಯಿತು. ಸಿ.ಕೆ. ರಾಮಮೂರ್ತಿ ಅವರಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಸಾರ್ವಜನಿಕರ ಪ್ರತಿಕ್ರಿಯೆ

'ಜನತೆಯ ಏಳಿಗೆಗೆ ಶ್ರಮಿಸಲಿ'



ಕನ್ನಡಿಗರು ಭ್ರಷ್ಟ, ಮತೀಯ, ವಿಭಜಕ ರಾಜಕಾರಣಿಗಳನ್ನು ತಿರಸ್ಕರಿಸಿದ್ದಾರೆ. ರಾಜ್ಯದ ಕಲ್ಯಾಣ ಮತ್ತು ಅಸ್ಮಿತೆಗಾಗಿ ಕೆಲಸ ಮಾಡುವ ನಾಯಕರನ್ನು ಚುನಾಯಿಸಿದ್ದಾರೆ. ನಮ್ಮ ನಾಯಕರು ಭಾರತದ ವೈವಿಧ್ಯಮಯ ಧರ್ಮ, ಜಾತಿ, ಭಾಷೆ, ಮತದವರನ್ನು ಒಗ್ಗೂಡಿಸಿ ಪ್ರಗತಿ ಪಥದೆಡೆ ಕೊಂಡೊಯ್ಯಬೇಕು. ಯುವಜನತೆಗೆ ವಿದ್ಯಾಭ್ಯಾಸ, ಉದ್ಯೋಗ, ಆರೋಗ್ಯ, ಮೂಲ ಸೌಲಭ್ಯ ನೀಡಬೇಕು. ನಮ್ಮ ತೆರಿಗೆ ಹಣ ರಾಜ್ಯದ ಏಳಿಗೆಗೆ ಸರಿಯಾದ ರೀತಿಯಲ್ಲಿ ವ್ಯಯ ಮಾಡಬೇಕು. ಆಯ್ಕೆಯಾದ ನಾಯಕರು ರಾಜ್ಯದ, ಜನತೆಯ ಏಳಿಗೆಗೆ ಶ್ರಮಿಸಲಿ.

ಸುಚಿತ್ರ, ವಕೀಲರು

'ರಾಜ್ಯದಲ್ಲಿ ಸಾಮರಸ್ಯದ ಗಾಳಿ ಬೀಸಲಿ'



ರಾಜ್ಯದಲ್ಲಿ ಸಾಮರಸ್ಯದ ಗಾಳಿ ಬೀಸಿದೆ. ರಾಜ್ಯದಲ್ಲಿ ಆಡಳಿತ ವಿರೋಧಿ ಅಲೆಯಲ್ಲಿ ಬಿಜೆಪಿ ಛಿದ್ರವಾಗಿದೆ. ಸರ್ಕಾರ ಜನರ ದಿನ ನಿತ್ಯದ ಅಗತ್ಯಗಳ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೆ ಕೇವಲ ಅನಗತ್ಯ ವಿಷಯಗಳಲ್ಲೇ ಕಾಲ ತಳ್ಳಿದ್ದಕ್ಕೆ ಜನ ಸರಿಯಾದ ತಕ್ಕ ಪಾಠ ಕಲಿಸಿದ್ದಾರೆ. ಡಬಲ್ ಎಂಜಿನ್ ಸರ್ಕಾರವೆಂದು ಭಾಷಣ ಮಾಡಿದ ನಾಯಕರು ಕರ್ನಾಟಕಕ್ಕೆ ನ್ಯಾಯುತವಾಗಿ ಸ್ಪಂದಿಸಿಲ್ಲ. ಕಾಂಗ್ರೆಸಿನ ಎಲ್ಲ ನಾಯಕರ ಒಗ್ಗಟಿನ ಮಂತ್ರ, ಚುನಾವಣಾ ತಯಾರಿ, ಜನಪರ ಪ್ರಣಾಳಿಕೆ ಮತ್ತು ಶಿಸ್ತುಬದ್ಧ ಪ್ರಚಾರ ಮ್ಯಾಜಿಕ್ ನಂಬರನ್ನು ದಾಟಿಸಿದೆ. ನೂತನ ಸರ್ಕಾರ ಜನಪರ ಆಡಳಿತ ನೀಡಲಿ.

ತ್ರಿಲೋಚನ ಕೆ.ಆರ್., ಸಾಫ್ಟ್‌ವೇರ್ ಎಂಜಿನಿಯರ್

'ಆಶ್ವಾಸನೆಗಳನ್ನು ಪೂರ್ಣಗೊಳಿಸಿ'



ಆಡಳಿತ ವಿರೋಧಿ ಅಲೆಯ ಸಂಪೂರ್ಣ ಲಾಭ ಪಡೆದುಕೊಂಡ ಕಾಂಗ್ರೆಸ್ ಚುನಾವಣೆಯಲ್ಲಿ ಭರ್ಜರಿ ಜಯ ದಾಖಲಿಸಿದೆ. ಸಮುದಾಯಗಳ ಮಧ್ಯ ದ್ವೇಷ ಬಿತ್ತುವ ಮೂಲಕ ಸರ್ವ ಜನಾಂಗದ ಶಾಂತಿಯ ತೋಟದಲ್ಲಿ ಧರ್ಮ ರಾಜಕಾರಣ ಮಾಡುತ್ತಿದ್ದ ಬಿಜೆಪಿಗೆ ಜನ ಒಳ್ಳೆಯ ಪಾಠ ಕಲಿಸಿದ್ದಾರೆ. ಕಾಂಗ್ರೆಸ್ ಜನರಿಗೆ ನೀಡಿರುವ ಆಶ್ವಾಸನೆಗಳನ್ನು ಪೂರ್ಣಗೊಳಿಸಬೇಕು. ಯುವಕರಿಗೆ ಉದ್ಯೋಗ ಕಲ್ಪಿಸಲು ಕ್ರಮ ಕೈಗೊಳ್ಳಬೇಕು. ಆರೋಗ್ಯ, ಮೂಲ ಸೌಲಭ್ಯ ಅಭಿವೃದ್ಧಿಗೆ ಆದ್ಯತೆ ನೀಡಲಿ.

ಗಾಯತ್ರಿ, ಗೃಹಿಣಿ

'ಅಚ್ಚರಿಗಳಿಗೆ ಸಾಕ್ಷಿಯಾದ ಚುನಾವಣೆ'



ಅನಿರೀಕ್ಷಿತ ಅಚ್ಚರಿಗಳಿಗೆ ಕಾರಣವಾದ ಚುನಾವಣೆಯಲ್ಲಿ ಕಾಂಗ್ರೆಸ್ ಜಯ ಸಾಧಿಸಿದೆ. ಅಡುಗೆ ಅನಿಲ, ಪೆಟ್ರೋಲ್ ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆಯ ಜನ ತತ್ತರಿಸಿದರು. ಆಡಳಿತರೂಢ ಬಿಜೆಪಿಯನ್ನು ಜನ ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ. ಚುನಾವಣೆಯ ಸಂಧರ್ಭದಲ್ಲಿ ಕಾಂಗ್ರೆಸ್‌ನ ಗ್ಯಾರಂಟಿಗಳ ಮುಂದೆ ಬಿಜೆಪಿ, ಜೆಡಿಎಸ್ ನೀಡಿದ ಆಶ್ವಾಸನೆಗಳಿಗೆ ಜನ ಸೊಪ್ಪ ಹಾಕಿಲ್ಲ. ಮತದಾರರು ಡಬಲ್ ಎಂಜಿನ್ ಸರ್ಕಾರವನ್ನು ಕಡೆಗಣಿಸಿ ಸಂಪೂರ್ಣ ಬಹುಮತ ನೀಡುವುದರ ಮೂಲಕ ಅತಂತ್ರ ಸರ್ಕಾರಕ್ಕೆ ತೆರೆ ಎಳೆದಿದ್ದಾರೆ.

ಬೈಲ ಮೂರ್ತಿ, ಬ್ಯಾಂಕ್ ಉದ್ಯೋಗಿ

'ಸಂಚಾರ ದಟ್ಟಣೆ ನಿಯಂತ್ರಿಸಿ'



ಡಬಲ್ ಎಂಜಿನ್ ಸರ್ಕಾರದ ಭ್ರಷ್ಟಾಚಾರದಿಂದ ಬೇಸತ್ತ ಜನ ಬಿಜೆಪಿಗೆ ತಕ್ಕ ಪಾಠ ಕಲಿಸಿದ್ದಾರೆ. ಕಾಂಗ್ರೆಸ್ ನೀಡಿರುವ ಗ್ಯಾರಂಟಿಗಳನ್ನು ಮೊದಲನೇ ಸಂಪುಟದಲ್ಲೇ ಈಡೇರಿಸಬೇಕು. ನಗರದ ಸಂಚಾರ ದಟ್ಟಣೆ, ರಸ್ತೆ ಗುಂಡಿಗಳಿಂದ ಸಾರ್ವಜನಿಕರಿಗೆ ಮುಕ್ತಗೊಳಿಸಬೇಕು. ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ನಿಯಂತ್ರಿಸಬೇಕು. ಕಾಂಗ್ರೆಸ್ ಯುವ ಜನರಿಗೆ ಯುವನಿಧಿ ನೀಡುವುದರ ಜತೆಗೆ ಉದ್ಯೋಗ ಸೃಷ್ಠಿಯತ್ತ ಗಮನ ನೀಡಬೇಕು. ಕರ್ನಾಟಕವನ್ನು ಸರ್ವ ಜನಾಂಗದ ಶಾಂತಿಯ ತೋಟವನ್ನಾಗಿ ಮಾಡಬೇಕು.

ಹೇಮಾ, ವಿದ್ಯಾರ್ಥಿನಿ

'ಪ್ರಜಾಪ್ರಭುತ್ವದ ಆಶಯಗಳಿಗೆ ಜಯ'



ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವೈಫಲ್ಯದ ಕುರಿತು ಜನರ ಬೇಸರ ಇಲ್ಲಿ ಮತವಾಗಿ ಪರಿವರ್ತನೆಯಾಗಿದೆ. ಜನರ ಆಶೋತ್ತರಗಳಿಗೆ ಸ್ಪಂದಿಸುವ ಕಾಂಗ್ರೆಸ್‌ಗೆ ಜನ ಬಹುಮತ ನೀಡಿದ್ದಾರೆ. ಪ್ರಜಾಪ್ರಭುತ್ವದ ಆಶೋತ್ತರಗಳಿಗೆ ಜಯವಾಗಿದೆ. ಜನಸಾಮಾನ್ಯರ ನೋವುಗಳಿಗೆ ನೂತನ ಸರ್ಕಾರ ಸ್ಪಂದಿಸಲಿ ಮತ್ತು ಇದು ಮುಂದಿನ ಚುನಾವಣೆಗಳಿಗೆ ಆಶಾದಾಯಕವಾಗಲಿ.

ಯತೀಶ್ ಕುಮಾರ್ ಶಿವಣ್ಣ
ನಿರ್ದೇಶಕ, ಬಯೋಟೆಕ್ ಕಂಪನಿಯ ಮಾರಾಟ ವಿಭಾಗ

'ನಿರುದ್ಯೋಗ ನಿವಾರಿಸಲಿ'



ರಾಜ್ಯದಲ್ಲಿ ಖಾಲಿ ಇರುವ ಸರ್ಕಾರಿ ಹುದ್ದೆಗಳನ್ನು ಕೂಡಲೇ ನೇಮಕಾತಿ ಮಾಡಿಕೊಳ್ಳಬೇಕು. ಈ ನೇಮಕಾತಿ ಪ್ರಕ್ರಿಯೆಯನ್ನು ನಿಷ್ಪಕ್ಷಪಾತವಾಗಿ ನಡೆಸಬೇಕು. ಯಾವುದೇ ಹಗರಣಗಳನ್ನು ನಡೆಯದಂತೆ ನೋಡಿಕೊಳ್ಳಬೇಕು. ಸರ್ಕಾರಿ ಕೆಲಸಕ್ಕೆ ಸೇರಬೇಕೆನ್ನುವ ಅಭ್ಯರ್ಥಿಗಳ ಹಿತಾಸಕ್ತಿಗಳನ್ನು ರಕ್ಷಿಸುವ ಕೆಲಸವಾಗಬೇಕು. ರಾಜ್ಯದಲ್ಲಿರುವ ನಿರುದ್ಯೋಗವನ್ನು ನಿವಾರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು.

ಲಾವಣ್ಯ, ಶಿಕ್ಷಕಿ

'ಜನಪರ ಕೆಲಸಗಳನ್ನು ಮಾಡಲಿ'



ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸ್ಪಷ್ಟ ಬಹುಮತ ದೊರೆತಿದೆ. ಈಗ ಕಾಂಗ್ರೆಸ್ ಉತ್ತಮ ಆಡಳಿತ ನೀಡಬೇಕು. ಆಡಳಿತ ಜನರ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿರಬೇಕು. ಆದರೆ, ಎಲ್ಲ ಪಕ್ಷಗಳು ಅಧಿಕಾರವನ್ನು ಹಣ ಗಳಿಕೆಯ ದಾರಿ ಮಾಡಿಕೊಂಡಿವೆ. ಆದರೆ, ಕಾಂಗ್ರೆಸ್ ಜನರ ಈ ಅಭಿಪ್ರಾಯವನ್ನು ಸುಳ್ಳು ಮಾಡಿಸುವ ನಿಟ್ಟಿನಲ್ಲಿ ಜನಪರ ಕೆಲಸಗಳನ್ನು ಮಾಡಬೇಕು.

ದೀಕ್ಷಾ ಸಿಂಗ್ ಡಿ., ಬೆಂಗಳೂರು

ಅಲ್ಪ ಮತಗಳಿಂದ ಗೆದ್ದ ದಿನೇಶ್ ಗುಂಡೂರಾವ್

ಬೆಂಗಳೂರು: ಹಾಲಿ ಶಾಸಕರಾಗಿದ್ದ ದಿನೇಶ್ ಗುಂಡೂರಾವ್ ಅವರಿಗೆ ಸುಲಭದ ಗೆಲುವು ಎಂಬ ಲೆಕ್ಕಾಚಾರ ಇದ್ದ ಗಾಂಧಿನಗರದಲ್ಲಿ ಅಲ್ಪ ಮತಗಳ ಅಂತರದಲ್ಲಿ ಜಯ ದಾಖಲಿಸಿದ್ದಾರೆ.

ಈ ಮೂಲಕ ಅವರು ಆರನೇ ಬಾರಿ ವಿಧಾನಸಭೆ ಪ್ರವೇಶಿಸಿದ್ದಾರೆ. ಬಿಜೆಪಿ ಅಭ್ಯರ್ಥಿ ಸಪ್ತಗಿರಿಗೌಡ ವಿರುದ್ಧ ಕೇವಲ 105 ಮತಗಳ ಅಂತರದಿಂದ ದಿನೇಶ್ ಗುಂಡೂರಾವ್ ಗೆಲುವು ಸಾಧಿಸಿದರು. ಅವರು 54,118 ಮತ ಪಡೆದಿದ್ದರೆ, ಬಿಜೆಪಿ ಹಿರಿಯ ಮುಖಂಡ ರಾಮಚಂದ್ರೇಗೌಡ ಅವರ ಪುತ್ರ ಸಪ್ತಗಿರಿಗೌಡ 54,013 ಮತ ಪಡೆಯುವ ಮೂಲಕ ಭಾರಿ ಪೈಪೋಟಿ ನೀಡಿದರು. ಕಳೆದ ಬಾರಿಯೂ ಸ್ಪರ್ಧಿಸಿ 37,284 ಮತಗಳನ್ನು ಪಡೆದಿದ್ದ ಸಪ್ತಗಿರಿ ಗೌಡ ಈ ಬಾರಿ ಹೆಚ್ಚು ಮತಗಳನ್ನು ಪಡೆದಿದ್ದಾರೆ. ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಕೃಷ್ಣಯ್ಯ ಶೆಟ್ಟಿ 6,871 ಮತ ಪಡೆದಿದ್ದು, ಇದು ದಿನೇಶ್ ಗುಂಡೂರಾವ್ ಅವರಿಗೆ ಸುಲಭದ ಗೆಲುವಿಗೆ ಅಡ್ಡಿಯಾಗಿರಬಹುದು ಎಂದು ಅಂದಾಜಿಸಲಾಗಿದೆ. ಮೊದಲ ಸುತ್ತುಗಳಲ್ಲಿ ಹಿನ್ನಡೆ ಕಾಯ್ದುಕೊಂಡಿದ್ದ ದಿನೇಶ್ ಗುಂಡೂರಾವ್, ಅಂತಿಮವಾಗಿ 105 ಮತಗಳ ಅಂತರದಲ್ಲಿ ಗೆದ್ದಿದ್ದಾರೆ. ಮರು ಮತಗಳ ಎಣಿಕೆಗೆ ಸಪ್ತಗಿರಿಗೌಡ ಮನವಿ ಸಲ್ಲಿಸಿದ್ದು, ಫಲಿತಾಂಶ ಘೋಷಣೆಯಾಗಿದ್ದರಿಂದ ಅಧಿಕಾರಿಗಳು ಮನವಿ ತಿರಸ್ಕರಿಸಿದರು. ಜೆಡಿಎಸ್‌ನ ವಿ.ನಾರಾಯಣಸ್ವಾಮಿ 12,857 ಮತ ಗಳಿಸಿದ್ದಾರೆ.

ಕೊಡಗು: ಬಿಜೆಪಿಯ ಭದ್ರಕೋಟೆ 'ಕೈ'ವಶ

ಮಡಿಕೇರಿ: ಸತತ 19 ವರ್ಷಗಳಿಂದ ಬಿಜೆಪಿಯ ಭದ್ರಕೋಟೆಯಾಗಿದ್ದ ಕೊಡಗು ಜಿಲ್ಲೆಯ ಎರಡೂ ಕ್ಷೇತ್ರಗಳನ್ನು ಕಾಂಗ್ರೆಸ್ ವಶಕ್ಕೆ ಪಡೆದಿದೆ. ಮಡಿಕೇರಿ ಕ್ಷೇತ್ರದಲ್ಲಿ ಎಂ.ಪಿ. ಅಪ್ಪಚ್ಚು ರಂಜನ್ ಅವರನ್ನು ಡಾ.ಮಂತರ್‌ಗೌಡ 4,402 ಮತಗಳ ಅಂತರದಿಂದ, ವಿರಾಜಪೇಟೆಯಲ್ಲಿ ಕೆ.ಜಿ.ಬೋಪಯ್ಯ ಅವರನ್ನು ಎ.ಎಸ್.ಪೊನ್ನಣ್ಣ 4,291 ಮತಗಳ ಅಂತರದಿಂದ ಸೋಲಿಸಿದ್ದಾರೆ.

ಜಿಲ್ಲೆಯಲ್ಲಿ ಆಡಳಿತ ವಿರೋಧಿ ಅಲೆ ಇತ್ತು. ಒಬ್ಬರೇ ಸತತ ಮೂರು ಅವಧಿಯಿಂದಲೂ ಶಾಸಕರಾಗಿದ್ದು, ಬದಲಾವಣೆ ಬೇಕೆಂಬ ಆಗ್ರಹವಿದ್ದರೂ ಬಿಜೆಪಿ ಹೈಕಮಾಂಡ್ ಹಿರಿಯರಿಗೇ ಮಣೆ ಹಾಕಿತ್ತು. ಅದರ ಲಾಭ ಪಡೆದ ಕಾಂಗ್ರೆಸ್ ಹೊಸ ಮುಖಗಳಿಗೆ ಟಿಕೆಟ್ ನೀಡಿ ತಂತ್ರ ರೂಪಿಸಿತ್ತು.





1.ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಿಜ್ವಾನ್ ಅರ್ಷದ್ ಅವರು ತಮ್ಮ ಬೆಂಬಲಿಗರೊಂದಿಗೆ ಸಂಭ್ರಮಿಸಿದರು. 2. ರಿಜ್ವಾನ್ ಅರ್ಷದ್ ಅವರ ಕುಟುಂಬಸ್ಥರು ಸಂತಸ ವ್ಯಕ್ತಪಡಿಸಿದರು 3. ಗಾಂಧಿನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ದಿನೇಶ್ ಗುಂಡೂರಾವ್ ಶನಿವಾರ ಗೆಲುವು ಪಡೆದ ಬಳಿಕ ಬುಲ್ ಟೆಂಪಲ್ ರಸ್ತೆಯಲ್ಲಿ ಕಾರ್ಯಕರ್ತರೊಂದಿಗೆ ಸಂತಸ ಹಂಚಿಕೊಂಡರು
ಪ್ರಜಾವಾಣಿ ಚಿತ್ರಗಳು/ ಪ್ರಶಾಂತ್ ಎಚ್‌ಜಿ.

ಖರ್ಗೆ, ಸಿದ್ದರಾಮಯ್ಯ, ಡಿಕೆಶಿ ಮನೆ ಎದುರು ಸಂಭ್ರಮ • ಪಕ್ಷದ ಬಾವುಟ ಹಿಡಿದು 'ಕೈ' ಪರ ಜಯಘೋಷ, ಬಣ್ಣ ಎರಚಿ ನೃತ್ಯ ಮಾಡಿದ ಕಾರ್ಯಕರ್ತರು

ಕಾಂಗ್ರೆಸ್ ಜಯಭೇರಿ: ರಾಜಧಾನಿಯಲ್ಲಿ ಸಂಭ್ರಮ



ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ ಸಂಭ್ರಮಿಸಿದರು



ಗೆಲುವಿನ ಬಳಿಕ ಬೆಂಬಲಿಗರೊಂದಿಗೆ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಉದಯ ಗರುಡಾಚಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸುತ್ತಿದ್ದಂತೆಯೇ ರಾಜಧಾನಿಯ ಕೈ ಕಾರ್ಯಕರ್ತರಲ್ಲಿ ಸಂಭ್ರಮ ಮನೆ ಮಾಡಿತ್ತು.

ಶನಿವಾರ ಬೆಳಿಗ್ಗೆ 8ಕ್ಕೆ ನಗರದ ನಾಲ್ಕು ಕೇಂದ್ರಗಳಲ್ಲಿ ಮತ ಎಣಿಕೆ ಆರಂಭವಾಯಿತು. ನಿಗದಿತ ಸಮಯಕ್ಕೂ ಮೊದಲೇ ಎಣಿಕೆ ಕೇಂದ್ರ ಬಳಿಯಲ್ಲಿ ಕಾರ್ಯಕರ್ತರು ನೆರೆದಿದ್ದರು. ಸಮಯ ಕಳೆದಂತೆ ಆಯಾ ಸುತ್ತಿನ ಎಣಿಕೆಯ ವಿವರಗಳು ಬರಲಾರಂಭಸಿದವು. ಮುನ್ನಡೆ ಕಾಯ್ದುಕೊಂಡವರು ಸಂಭ್ರಮಿಸಿದರು.

ಬಸವನಗುಡಿ ಬಿಎಂಎಸ್ ಮಹಿಳಾ ಕಾಲೇಜಿನಲ್ಲಿ ರಾಜರಾಜೇಶ್ವರಿ ನಗರ, ಶಿವಾಜಿನಗರ, ಶಾಂತಿನಗರ, ಗಾಂಧಿನಗರ, ರಾಜಾಜಿನಗರ, ಚಾಮರಾಜಪೇಟೆ, ಚಿಕ್ಕಪೇಟೆ ಕ್ಷೇತ್ರದ ಎಣಿಕೆ ನಡೆಯಿತು. ಜಯನಗರ ಎಸ್.ಎಸ್.ಎಂ.ಆರ್.ವಿ. ಪಿಯು ಕಾಲೇಜಿನಲ್ಲಿ ಗೋವಿಂದರಾಜನಗರ, ವಿಜಯನಗರ, ಬಸವನಗುಡಿ, ಪದ್ಮನಾಭನಗರ, ಬಿ.ಟಿ.ಎಂ ಲೇಔಟ್, ಜಯನಗರ, ಬೊಮ್ಮನಹಳ್ಳಿ ಕ್ಷೇತ್ರದ ಎಣಿಕೆ ಕಾರ್ಯಗಳು ನಡೆದವು.

ವಸಂತನಗರದ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಕೆಆರ್ ಪುರಂ, ಮಹಾಲಕ್ಷ್ಮಿ ಲೇಔಟ್, ಮಲ್ಲೇಶ್ವರ, ಹೆಬ್ಬಾಳ, ಪುಲಿಕೇಶಿನಗರ, ಸರ್ವಜ್ಞ ನಗರ, ಸಿ.ವಿ.ರಾಮನ್‌ನಗರ ಕ್ಷೇತ್ರದ ಎಣಿಕೆ ಕಾರ್ಯ ನಡೆಯಿತು. ವಿಠಲ ಮಲ್ಯ ರಸ್ತೆಯಯ ಸೇಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲ್‌ನಲ್ಲಿ ಯಲಹಂಕ, ಬ್ಯಾಟರಾಯನಪುರ, ಯಶವಂತಪುರ, ದಾಸರಹಳ್ಳಿ, ಮಹದೇವಪುರ, ಬೆಂಗಳೂರು ದಕ್ಷಿಣ, ಆನೇಕಲ್ ಕ್ಷೇತ್ರದ ಎಣಿಕೆ ಕಾರ್ಯಗಳು ನಡೆದವು. ಈ ಕೇಂದ್ರಗಳ ಬಳಿಯಲ್ಲೂ ಆಯಾ ಅಭ್ಯರ್ಥಿಗಳ ಬೆಂಬಲಿಗರು ನೆರೆದಿದ್ದರು.

ಗಾಂಧಿನಗರ, ರಾಜರಾಜೇಶ್ವರಿ ನಗರ, ರಾಜಾಜಿನಗರದ ಮತ ಎಣಿಕೆ ಕಾರ್ಯವು ಅತ್ಯಂತ ಕುತೂಹಲ ಮೂಡಿಸಿತು. ಮೂರು ಕ್ಷೇತ್ರಗಳಲ್ಲೂ ಕಾಂಗ್ರೆಸ್, ಬಿಜೆಪಿ ಅಭ್ಯರ್ಥಿಗಳು ಮುನ್ನಡೆ- ಹಿನ್ನಡೆ ಅನುಭವಿಸುತ್ತಿದ್ದರು. ಇದು ಅಭ್ಯರ್ಥಿಗಳ ಹಾಗೂ ಕಾರ್ಯಕರ್ತರ ಎದೆಬಡಿತ ಹೆಚ್ಚಿಸಿತ್ತು. ತಮ್ಮ ಅಭ್ಯರ್ಥಿ ಪರವಾಗಿ ಫಲಿತಾಂಶ ಬರುತ್ತಿದಂತೆಯೇ ಕೇಕೆ ಹಾಕಿ ಸಂಭ್ರಮಿಸುತ್ತಿದ್ದರು.

ಕುಟುಂಬಸ್ಥರ ಸಂಭ್ರಮ: ಆಯಾ ಅಭ್ಯರ್ಥಿಗಳು ಜಯದತ್ತ ದಾಪುಗಾಲು ಇಡುತ್ತಿದ್ದಂತೆ ಕುಟುಂಬಸ್ಥರು ಎಣಿಕೆ ಕೇಂದ್ರಕ್ಕೆ ಬಂದರು. ವಿಜೇತರಿಗೆ ಪುಷ್ಪಗುಚ್ಛ ನೀಡಿ ಶುಭಾಶಯ ಕೋರಿದರು. ಬಣ್ಣಎರಚಿ ಸಂಭ್ರಮಿಸಿದರು.

ಅಭ್ಯರ್ಥಿಗಳ ಕಚೇರಿ, ಮನೆಗಳ ಎದುರೂ ಬೆಂಬಲಿಗರು ಪಟಾಕಿ ಸಿಡಿಸಿ ಕಾಂಗ್ರೆಸ್ ಪರವಾಗಿ ಜಯಘೋಷ ಮೊಳಗಿಸಿದರು. ರೇಸ್ ಕೋರ್ಸ್ ರಸ್ತೆ, ಕ್ವಿನ್ಸ್ ರಸ್ತೆಯಲ್ಲಿರುವ ಕೆಪಿಸಿಸಿ ಕಚೇರಿ ಎದುರೂ ಕಲಾ ತಂಡಗಳ ಜತೆಗೆ ಕಾಂಗ್ರೆಸ್ ಕಾರ್ಯಕರ್ತರು ನೃತ್ಯ ಮಾಡಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖಂಡರಾದ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಮನೆ ಎದುರು ಸಂಭ್ರಮವಿತ್ತು. ಕಾಂಗ್ರೆಸ್‌ಗೆ ಬಹುಮತ ಸಿಗುತ್ತಿದ್ದಂತೆ ಗುಂಪು ಗುಂಪಾಗಿ ಮನೆ ಬಳಿ ಬಂದ ಕಾರ್ಯಕರ್ತರು, ಬಣ್ಣ ಎರಚಿ ನೃತ್ಯ ಮಾಡಿ ಸಂಭ್ರಮಿಸಿದರು. ಪಕ್ಷದ ಬಾವುಟ ಹಿಡಿದು, ಕಾಂಗ್ರೆಸ್ ಪರ ಘೋಷಣೆ ಕೂಗಿದರು. ಮುಖಂಡರಿಗೆ ಹಸ್ತಲಾಘವ ನೀಡಿ ಅಭಿನಂದಿಸಿದರು.



ಚಾಮರಾಜಪೇಟೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಜಮೀರ್ ಅಹ್ಮದ್ ಖಾನ್ ಗೆಲುವಿನ ಬಳಿಕ ಕಾರ್ಯಕರ್ತರು ಕುಣಿದಾಡಿದರು

'ಬಿಜೆಪಿ ವಿರುದ್ಧ ಜನಾಕ್ರೋಶದ ಪ್ರತಿಬಿಂಬ'

ಬೆಂಗಳೂರು: 'ಆಡಳಿತ ಪಕ್ಷದ ಹೀನಾಯ ಸೋಲಿಗೆ ಡಬಲ್ ಎಂಜಿನ್ ಸರ್ಕಾರದ ಭ್ರಷ್ಟಾಚಾರ ಮತ್ತು ಆಡಳಿತ ವಿರೋಧಿ ಅಲೆಗೆ ಈ ಜನಾಕ್ರೋಶ ಸಾಕ್ಷಿ' ಎಂದು ಸೋಷಿಯಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾದ (ಎಸ್‌ಯುಸಿಐ) ರಾಜ್ಯ ಕಾರ್ಯದರ್ಶಿ ಕೆ. ಉಮಾ ಹೇಳಿದರು.

'ಆಡಳಿತಾರೂಢ ಬಿಜೆಪಿ ಪಕ್ಷದ ಹೀನಾಯವಾದ ಸೋಲಿಗೆ ಬೆಲೆ ಏರಿಕೆ, ನಿರುದ್ಯೋಗ, ಮಹಿಳೆಯರ ಮೇಲಿನ ದೌರ್ಜನ್ಯಗಳು, ವಿದ್ಯಾರ್ಥಿ ವಿರೋಧಿ ನೀತಿಗಳು, ರೈತ-ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ತೀವ್ರ ಜನಾಕ್ರೋಶವೇ ಕಾರಣವಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಅನೈತಿಕವಾಗಿ ಆಪರೇಷನ್ ಕಮಲದ ಮೂಲಕ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಜನರ ಸಮಸ್ಯೆಗಳನ್ನು ಕಡೆಗಣಿಸಿ, ಅತೀವ ಭ್ರಷ್ಟಾಚಾರ, ಕೋಮುವಾದಿ ರಾಜಕಾರಣದಲ್ಲಿ ಮುಳುಗಿತ್ತು. ಕೇಂದ್ರ ಸರ್ಕಾರವೂ ಕೂಡ ಬಂಡವಾಳಶಾಹಿ ಪರ, ರೈತ-ಕಾರ್ಮಿಕ ವಿರೋಧಿ ನೀತಿಗಳನ್ನು ಹೇರುತ್ತಲೇ ಬಂದಿದೆ. ಲೈಂಗಿಕ ದೌರ್ಜನ್ಯದ ವಿರುದ್ಧ ಮಹಿಳಾ ಕುಸ್ತಿ ಪಟುಗಳು ಧರಣಿ ನಡೆಸಿದರೂ ಅದಕ್ಕೆ ಮೂರು ಕಾಸಿನ ಬೆಲೆಯನ್ನೂ ನೀಡಲಿಲ್ಲ. ಜನರನ್ನು ಕೇವಲ ಕೋಮುವಾದ, ಹುಸಿ ರಾಷ್ಟ್ರೀಯತೆಯಂತಹ ಭಾವನಾತ್ಮಕ ವಿಷಯಗಳಲ್ಲಿ ಮುಳುಗಿಸಿ, ಮೋದಿಯವರ ಮುಖವನ್ನೇ ಮುಂದಿಟ್ಟು ಚುನಾವಣೆ ಗೆಲ್ಲಬಹುದೆಂಬ ಭಂಡ ರಾಜಕಾರಣವನ್ನು ರಾಜ್ಯದ ಜನತೆ ಮುಲಾಜಿಲ್ಲದೆ ತಿರಸ್ಕರಿಸಿದ್ದಾರೆ' ಎಂದು ತಿಳಿಸಿದರು.

'ಪ್ರಧಾನಿ ನರೇಂದ ಮೋದಿ, ಅಮಿತ್ ಶಾ ಸೇರಿ ಕೇಂದ್ರದ ಘಟಾನುಘಟಿ ನಾಯಕರು ರಾಜ್ಯದಲ್ಲಿ ಬೀಡುಬಿಟ್ಟರೂ, ಬಿಜೆಪಿಯನ್ನು ಗೆಲ್ಲಿಸಲಾಗಲಿಲ್ಲ. ರಾಜಕೀಯವಾಗಿ ಬಿಜೆಪಿ ಸೋತಿದೆಯಾದರೂ, ಮುಂದೆ ಬರುವ ಸರ್ಕಾರವು ಕೂಡ ಜನವಿರೋಧಿ ನೀತಿಗಳನ್ನು ತಳೆಯದಂತೆ ತಡೆಯಲು, ಒಡೆದು ಆಳುವ ದುಷ್ಟ ರಾಜಕೀಯವನ್ನು ಹಿಮ್ಮೆಟ್ಟಿಸಲು, ಜನತೆ ಜಾಗರೂಕವಾಗಿರಬೇಕೆಂದು ಹಾಗೂ ಜನಹೋರಾಟಗಳನ್ನು ಬಲಪಡಿಸಬೇಕು' ಎಂದು ತಿಳಿಸಿದ್ದಾರೆ.

ಕಾರ್ಯಕರ್ತರನ್ನು ಸಂತೈಸಿದ ಶೆಟ್ಟರ್

ಹುಬ್ಬಳ್ಳಿ: ಇಲ್ಲಿನ ಬಾದಾಮಿ ನಗರದಲ್ಲಿರುವ ಜಗದೀಶ ಶೆಟ್ಟರ್ ಅವರ ನಿವಾಸ 'ಪ್ರಕಲ್ಪ' ಇಡೀ ದಿನ ಬಿಕೋ ಎನ್ನುತ್ತಿತ್ತು. ಎಲ್ಲ ಕಾರ್ಯಕರ್ತರೂ ಮ್ಲಾನವದನರಾಗಿದ್ದರು.

ಫಲಿತಾಂಶ ಘೋಷಣೆಯಾಗುತ್ತಿದ್ದಂತೆ ಕಾರ್ಯಕರ್ತರೊಬ್ಬರು ಕಣ್ಣೀರು ಸುರಿಸಿದರು. ಕೈಯಲ್ಲಿನ ವಾಚ್ ಕಿತ್ತೆಸೆದು, ಕುರ್ಚಿ ಗುದ್ದಿ ಹತಾಶೆ ವ್ಯಕ್ತಪಡಿಸಿದರು. ಕೆಲವು ಮಹಿಳಾ ಕಾರ್ಯಕರ್ತೆಯರು ಶೆಟ್ಟರ್ ಅವರಿಗೆ ಧೈರ್ಯ ತುಂಬಿದರು.

ಶೆಟ್ಟರ್ ಮತ ಎಣಿಕೆ ಕೇಂದ್ರಕ್ಕೆ ತೆರಳದೆ ಇಡೀ ದಿನ ಮನೆಯಲ್ಲೇ ಕುಳಿತು ಟಿ.ವಿಯಲ್ಲೇ ಮಾಹಿತಿ ಪಡೆದರು. ಕುಟುಂಬ ಸದಸ್ಯರೂ ಹೊರಗೆ ಬರಲಿಲ್ಲ. ಕೆಲವೇ ಕಾರ್ಯಕರ್ತರು, ಅಭಿಮಾನಿಗಳನ್ನು ಬಿಟ್ಟರೆ ಮನೆಯತ್ತ ಯಾರೂ ಸುಳಿಯಲಿಲ್ಲ.

ಸಮಚಿತ್ತದಿಂದ ಇದ್ದ ಜಗದೀಶ ಶೆಟ್ಟರ್ ಅವರು ಮಧ್ಯಾಹ್ನ 2.30ರ ಸುಮಾರಿಗೆ ಮನೆಯಿಂದ ಹೊರ ಬಂದು ಮಾಧ್ಯಮದವರಿಗೆ ಪ್ರತಿಕ್ರಿಯಿಸಿದರು. 'ಕಾರ್ಯಕರ್ತರು ನಿರಾಶರಾಗಬಾರದು. ನಾನು ಸೋತಿದ್ದರೂ ರಾಜ್ಯದಲ್ಲಿ ನಮ್ಮದೇ ಸರ್ಕಾರ ಬಂದಿದೆ. ಎಲ್ಲರೂ ಒಟ್ಟಾಗಿ ಕೆಲಸ ಮಾಡೋಣ' ಎಂದು ದುಃಖದಲ್ಲಿದ್ದ ಕಾರ್ಯಕರ್ತರನ್ನು ಸಂತೈಸಿದರು.

ದಕ್ಷಿಣ ಭಾರತ ಬಿಜೆಪಿ ಮುಕ್ತವಾಗುತ್ತಿದೆ: ಖರ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇದು ದೊಡ್ಡ ಗೆಲುವು. ಬಿಜೆಪಿಯವರು ಕಾಂಗ್ರೆಸ್ ಮುಕ್ತ ಭಾರತ ಮಾಡುತ್ತೇವೆ ಎಂದಿದ್ದರು. ಈಗ ದಕ್ಷಿಣ ಭಾರತ ಬಿಜೆಪಿ ಮುಕ್ತವಾಗುತ್ತಿದೆ' ಎಂದು ವಿಧಾನಸಭೆ ಚುನಾವಣೆಯಲ್ಲಿ ಪಕ್ಷಕ್ಕೆ ಸಿಕ್ಕಿದ ಗೆಲುವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿಶ್ಲೇಷಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ವಿಧಾನಸೌಧದ ಮೇಲೆ ಕಾಂಗ್ರೆಸ್ ಬಾವುಟ ಹಾರಲಿದೆ ಎಂದು ಮೊದಲೇ ಹೇಳಿದ್ದೆ. ಈ ಗೆಲುವಿನಿಂದ ಇಡೀ ದೇಶದಲ್ಲಿ ಹೊಸ ಉತ್ಸಾಹ ಬಂದಿದೆ' ಎಂದರು.

'ಬಿಜೆಪಿಯವರು ನಮ್ಮ ಪಕ್ಷದ ಬಗ್ಗೆ ಲಘುವಾಗಿ, ಕೆಣಕಿ ಮಾತನಾಡುತ್ತಿದ್ದರು. ಅಹಂಕಾರದಿಂದ ಮಾತನಾಡಿದರೆ ಜನರು ಒಪ್ಪುವುದಿಲ್ಲ. ಇದು ಪ್ರಜಾಪ್ರಭುತ್ವ. ಜನರ ಮುಂದೆ ತಗ್ಗಿ ಬಗ್ಗಿ ನಡೆಯಬೇಕು' ಎಂದು ಖರ್ಗೆ, 'ಇದು ಯಾರೊಬ್ಬರ ಗೆಲುವೂ ಅಲ್ಲ. ರಾಜ್ಯದ ಜನತೆಯ ಗೆಲುವು' ಎಂದು ಹೇಳಿದರು.

'ಎಲ್ಲರೂ ಒಗ್ಗೂಡಿ ಕೆಲಸ ಮಾಡಿದ ಕಾರಣ ಜಯ ಸಿಕ್ಕಿದೆ. ಒಗ್ಗಟ್ಟು ಇಲ್ಲದಿದ್ದರೆ ಕಳೆದ ಚುನಾವಣೆಯಂತೆ ಆಗುತ್ತಿತ್ತು. ಬಿಜೆಪಿಯವರು ಅಹಂಕಾರದಿಂದ ಹೇಳಿಕೊಂಡು ಅಡ್ಡಾಡುತ್ತಿದ್ದರು. ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯಬೇಕೆಂದು ನಿರ್ಧರಿಸಿ ಜನ ಕಾಂಗ್ರೆಸ್‌ನ್ನು ಗೆಲ್ಲಿಸಿದ್ದಾರೆ' ಎಂದೂ ಹೇಳಿದ ಅವರು, 'ಗ್ಯಾರಂಟಿಗಳನ್ನು ಮೊದಲ ಸಂಪುಟ ಸಭೆಯಲ್ಲಿಯೇ ಈಡೇರಿಸಬೇಕು' ಎಂದು ಪಕ್ಷದ ನಾಯಕರಿಗೆ ಸಲಹೆ ನೀಡಿದರು.

ಡಿ.ಕೆ. ಶಿವಕುಮಾರ್ ಮಾತನಾಡಿ, 'ಇದು ನನ್ನ ಗೆಲುವೂ ಅಲ್ಲ. ಸಿದ್ದರಾಮಯ್ಯ ಅವರ ಗೆಲುವೂ ಅಲ್ಲ. ಜನರ ಗೆಲುವು. ಜನರ ಮುಖದಲ್ಲಿ ಈಗ ನಗು ಅರಳುತ್ತಿದೆ. ರಾಜ್ಯಕ್ಕೆ ಮೂರೂವರೆ ವರ್ಷದಿಂದ ಹಿಡಿದ ಗ್ರಹಣ ಬಿಟ್ಟಿದೆ' ಎಂದರು.

ಸಿದ್ದರಾಮಯ್ಯ ಮಾತನಾಡಿ, 'ಈ ಬಾರಿ ಕಾಂಗ್ರೆಸ್ ಪಕ್ಷಕ್ಕೆ ಎಲ್ಲ ಜಾತಿ, ಧರ್ಮಗಳ ಜನರ ಮತಗಳು ಬಂದಿದೆ. ಕಾಂಗ್ರೆಸ್ ಒಂದು ಜಾತ್ಯತೀತ ಪಕ್ಷ ಎಂಬುದು ಇದರಿಂದ ಸಾಬೀತಾಗಿದೆ. ಜನ ನಮ್ಮ ಮೇಲೆ ವಿಶ್ವಾಸ ಇಟ್ಟು ಆಶೀರ್ವಾದ ಮಾಡಿದ್ದಾರೆ. ಅವರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ' ಎಂದರು.

ಸುದ್ದಿಗೋಷ್ಠಿಗೂ ಮೊದಲು ಕೈ ಎತ್ತಿ ಹಿಡಿದುಕೊಂಡು ನಗೆ ಬೀರಿದ ಮುಖಂಡರು, ಒಗ್ಗಟ್ಟಿನ ಮಂತ್ರ ಪಠಿಸಿದರು. ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಬಿ.ಕೆ. ಹರಿಪ್ರಸಾದ್ ಇದ್ದರು.

ಮೋದಿ ರೋಡ್ ಶೋ: ಯಾರಿಗೆ ವಿಜಯಮಾಲೆ?

ಬೆಂಗಳೂರು: ವಿಧಾನಸಭೆ ಚುನಾವಣೆ ಮತದಾನದ ಹೊಸ್ತಿಲಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ನಗರದಲ್ಲಿ ಮೂರು ಹಂತದ ರೋಡ್ ಶೋ ನಡೆಸಿ ಸಂಚಲನ ಮೂಡಿಸಿದ್ದರು. ಆದರೆ, ಈ ರೋಡ್‌ಶೋ ಫಲಿತಾಂಶದ ಮೇಲೆ ನಿರೀಕ್ಷಿತ ಪರಿಣಾಮ ಬೀರಿಲ್ಲ. ಅಭ್ಯರ್ಥಿಗಳ ವರ್ಚಸ್ಸು ಮತ್ತು ಪಕ್ಷದ ಬಲಾಬಲದ ಮೇಲೆಯೇ ಫಲಿತಾಂಶ ನಿರ್ಧಾರವಾಗಿದೆ ಎಂದು ವಿಶ್ಲೇಷಿಸಲಾಗಿದೆ.

ಏ.29ರಂದು ಮಾಗಡಿ ರಸ್ತೆ, ಹೊಸಹಳ್ಳಿ ಗೊಲ್ಲರಪಾಳ್ಯ, ಬ್ಯಾಡರಹಳ್ಳಿ, ಅಂಜನಾನಗರ, ಹೇರೋಹಳ್ಳಿ, ಸುಂಕದಕಟ್ಟೆ, ಕೊಟ್ಟಿಗೆಪಾಳ್ಯದಲ್ಲಿ ರೋಡ್ ಶೋ ನಡೆಸಿದ್ದರು. ಈ ವ್ಯಾಪ್ತಿಯಲ್ಲಿ ಯಶವಂತಪುರ ಹಾಗೂ ಆರ್‌ಆರ್ ನಗರ ಕ್ಷೇತ್ರಗಳು ಬರುತ್ತವೆ. ಎರಡೂ ಕ್ಷೇತ್ರದಲ್ಲೂ ಬಿಜೆಪಿ ಅಭ್ಯರ್ಥಿಗಳೇ ಗೆದ್ದಿದ್ದಾರೆ.

ಮೇ 6ರಂದು ಹೃದಯ ಭಾಗದಲ್ಲಿ ಮೋದಿ ರೋಡ್ ಶೋ ನಡೆಸಿದ್ದರು. ಬೆಂಗಳೂರು ದಕ್ಷಿಣ, ಪದ್ಮನಾಭನಗರ, ಬಸವನಗುಡಿ, ಚಿಕ್ಕಪೇಟೆಯಲ್ಲಿ ಬಿಜೆಪಿ ಅಭ್ಯರ್ಥಿಗಳೇ ಜಯಭೇರಿ ಬಾರಿಸಿದ್ದಾರೆ. ಗೋವಿಂದರಾಜನಗರ, ಚಾಮರಾಜಪೇಟೆ, ಗಾಂಧಿನಗರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ವಿಜಯಮಾಲೆ ಸಿಕ್ಕಿದೆ. ರಾಜಾಜಿನಗರ, ಮಹಾಲಕ್ಷ್ಮಿ ಲೇಔಟ್, ಮಲ್ಲೇಶ್ವರದಲ್ಲಿ 'ಕಮಲ' ಅರಳಿದೆ.

ಮೇ 7ರಂದು ಮಹದೇವಪುರ, ಕೆ.ಆರ್.ಪುರ, ಸಿ.ವಿ. ರಾಮನ್‌ನಗರ, ಸರ್ವಜ್ಞನಗರ, ಶಿವಾಜಿನಗರ, ಶಾಂತಿನಗರದಲ್ಲಿ ಪ್ರಧಾನಿಯವರು ರೋಡ್ ಶೋ ನಡೆಸಿದ್ದರು. ಇಲ್ಲಿ ತಲಾ ಮೂರು ಕ್ಷೇತ್ರಗಳಲ್ಲಿ ಕಾಂಗ್ರೆಸ್, ಬಿಜೆಪಿ ಅಭ್ಯರ್ಥಿಗಳು ಗೆದ್ದಿದ್ದಾರೆ. 18 ಕ್ಷೇತ್ರಗಳಲ್ಲಿ ನಡೆದಿದ್ದ ರೋಡ್ ಶೋ ಪೈಕಿ 12ರಲ್ಲಿ ಬಿಜೆಪಿ ಹಾಗೂ 6 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಜಯಗಳಿಸಿದ್ದಾರೆ.

'ರಾಹುಲ್ ವಿರುದ್ಧದ ದ್ವೇಷಕ್ಕೆ ಉತ್ತರ'

ಬೆಂಗಳೂರು: 'ರಾಹುಲ್ ಗಾಂಧಿ ವಿರುದ್ಧದ ಷಡ್ಯಂತ್ರ, ದ್ವೇಷ ರಾಜಕೀಯ ಮಾಡುತ್ತಿದ್ದ ಬಿಜೆಪಿಗೆ ರಾಜ್ಯದ ಜನ ತಕ್ಕ ಉತ್ತರ ನೀಡಿದ್ದಾರೆ' ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ಪ್ರತಿಕ್ರಿಯಿಸಿದ್ದಾರೆ.

'ಭ್ರಷ್ಟ, ಕೋಮುವಾದಿ ಬಿಜೆಪಿಯನ್ನು ಅಧಿಕಾರದಿಂದ ಕೆಳಗಿಳಿಸಿರುವ ರಾಜ್ಯದ ಮತದಾರರು, ಕಾಂಗ್ರೆಸ್‌ಗೆ ಅಭೂತಪೂರ್ವ ಬಹುಮತ ನೀಡಿದ್ದಾರೆ. ಕೋಲಾರದಲ್ಲಿ ಲೋಕಸಭಾ ಚುನಾವಣೆ ವೇಳೆ ಮಾಡಿದ್ದ ಭಾಷಣವನ್ನು ಮುಂದಿಟ್ಟುಕೊಂಡು ರಾಹುಲ್ ಗಾಂಧಿ ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಿದರು. ರಾಜ್ಯದಲ್ಲಿ ಕಾಂಗ್ರೆಸ್‌ಗೆ ಭಾರಿ ಬಹುಮತ ನೀಡುವ ಮೂಲಕ ಜನರು ರಾಹುಲ್ ಗಾಂಧಿಯವರ ವಿರುದ್ಧದ ಷಡ್ಯಂತ್ರಕ್ಕೆ ಉತ್ತರ ನೀಡಿದ್ದಾರೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಧರ್ಮದ ಹೆಸರಿನಲ್ಲಿ ಮೋಸ ಮಾಡುವ ಪ್ರಯತ್ನ ಹೆಚ್ಚು ದಿನ ಮುಂದುವರಿಯುವುದಿಲ್ಲ ಎಂಬ ಸಂದೇಶವನ್ನು ಜನ ರವಾನಿಸಿದ್ದಾರೆ. 2019ರಲ್ಲಿ ಆಪರೇಷನ್ ಕಮಲ ನಡೆಸಿ ಕಾಂಗ್ರೆಸ್, ಜೆಡಿಎಸ್ ಶಾಸಕರನ್ನು ಖರೀದಿಸಿ ಸರ್ಕಾರ ರಚಿಸಿದ್ದ ಬಿಜೆಪಿ, ಆರಂಭದ ದಿನಗಳಿಂದಲೂ ಮತೀಯ ಗೂಂಡಾಗಿರಿಗೆ ಪ್ರಚೋದನೆ ನೀಡುತ್ತಾ ಶಾಂತಿ ಕದಡುವ ಪ್ರಯತ್ನ ಮಾಡಿತ್ತು' ಎಂದು ದೂರಿದ್ದಾರೆ.

'ರೋಡ್ ಶೋ, ಪ್ರಚಾರದ ಹೆಸರಿನಲ್ಲಿ ಕರ್ನಾಟಕದ ಜನರನ್ನು ಮತ್ತೆ ವಂಚಿಸುವ ಬಿಜೆಪಿ ನಾಯಕರ ಪ್ರಯತ್ನ ವಿಫಲವಾಗಿದೆ. ರಾಜ್ಯದ ಉದ್ದಗಲಕ್ಕೆ ಜನರು ಬದಲಾವಣೆಯ ಪರ ಮತ ಚಲಾಯಿಸಿರುವುದೇ ಇದಕ್ಕೆ ಸಾಕ್ಷಿ. ಕಾಂಗ್ರೆಸ್ ನೀಡಿದ ಗ್ಯಾರಂಟಿಗಳಲ್ಲಿ ನಂಬಿಕೆ ಇರಿಸಿದ್ದು, ಸ್ವಚ್ಛ ಮತ್ತು ಭ್ರಷ್ಟಾಚಾರ ರಹಿತ ಆಡಳಿತವನ್ನು ನಮ್ಮ ಪಕ್ಷ ನೀಡಲಿದೆ' ಎಂದು ತಿಳಿಸಿದ್ದಾರೆ.

ಆಡಳಿತ ವಿರೋಧಿ ಅಲೆ ಕಾರಣ: ಸಚಿವ ಜೋಶಿ

ಹುಬ್ಬಳ್ಳಿ: 'ರಾಜ್ಯದಲ್ಲಿ ಬಿಜೆಪಿ ಸೋಲಿಗೆ ಬಹುಶಃ ಆಡಳಿತ ವಿರೋಧಿ ಅಲೆ ಕಾರಣವಾಗಿರಬಹುದು. ಶೀಘ್ರ ಕೋರ್ ಕಮಿಟಿ ಸಭೆ ನಡೆಸಿ ಎಲ್ಲಿ ಎಡವಿದ್ದೇವೆ ಎನ್ನುವ ಕುರಿತು ಚರ್ಚಿಸಲಾಗುವುದು' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

'ಸೋಲು, ಗೆಲುವು ಸಹಜ. ಸೋಲನ್ನು ಸವಾಲಾಗಿ ಸ್ವೀಕರಿಸಿ, ಮುಂದಿನ ಚುನಾವಣೆಗೆ ಸಂಘಟನಾತ್ಮಕವಾಗಿ ಸಿದ್ಧತೆ ನಡೆಸುತ್ತೇವೆ' ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಜನರು ಕೊಟ್ಟ ತೀರ್ಪನ್ನು ಸ್ವೀಕರಿಸುತ್ತೇವೆ. ಕಾಂಗ್ರೆಸ್ ಸರ್ಕಾರ ರಚಿಸುವುದು ನಿಶ್ಚಿತವಾಗಿದ್ದು, ಪ್ರಣಾಳಿಕೆಯಲ್ಲಿ ನೀಡಿದ ಎಲ್ಲ ಭರವಸೆಗಳನ್ನು ಈಡೇರಿಸುವ ಆಶಾಭಾವನೆ ಇದೆ. ಕೇಂದ್ರ ಸರ್ಕಾರ ಸಂಪೂರ್ಣ ಸಹಕಾರ ನೀಡಲಿದ್ದು, ರಾಜ್ಯದ ಅಭಿವೃದ್ಧಿಯೆಡೆಗೆ ಗಮನ ಹರಿಸಲಿ' ಎಂದು ಆಶಿಸಿದರು.

'ಗುಜರಾತ್ ಮಾದರಿ ಚುನಾವಣೆ ಎಂದು ನಾವ್ಯಾರೂ ಹೇಳಿಲ್ಲ. ಹಿರಿಯರನ್ನು, ಲಿಂಗಾಯತರನ್ನು ಕಡೆಗಣಿಸಿದ್ದಾರೆ ಎನ್ನುವ ಆರೋಪದಲ್ಲಿಯೂ ಹುರುಳಿಲ್ಲ. ಹಿರಿಯರಿಗೂ, ಲಿಂಗಾಯತ ನಾಯಕರಿಗೂ ಪಕ್ಷದಲ್ಲಿ ಉತ್ತಮ ಸ್ಥಾನ ನೀಡಿ ಗೌರವಿಸಿದ್ದೇವೆ' ಎಂದರು.

30 ವರ್ಷಗಳ ಬಳಿಕ ಶಾಸಕಿ ಆಯ್ಕೆ

ಪ್ರಜಾವಾಣಿ ವಾರ್ತೆ



ಕರೆಮ್ಮ

ರಾಯಚೂರು: ಜಿಲ್ಲೆಯಲ್ಲಿ 30 ವರ್ಷಗಳ ಬಳಿಕ ಶಾಸಕಿಯೊಬ್ಬರು ದಾಖಲೆ ಮತಗಳ ಅಂತರದಿಂದ ಆಯ್ಕೆಯಾಗಿದ್ದಾರೆ.

ಪರಿಶಿಷ್ಟ ಪಂಗಡಕ್ಕೆ ಮೀಸಲಾದ ದೇವದುರ್ಗ ವಿಧಾನಸಭೆ ಕ್ಷೇತ್ರದಿಂದ ಜೆಡಿಎಸ್ ಶಾಸಕಿಯಾಗಿ ಕರೆಮ್ಮ ಆಯ್ಕೆಯಾಗಿದ್ದು, ನಾಲ್ಕು ಬಾರಿ ಗೆದ್ದ ಬಿಜೆಪಿ ಅಭ್ಯರ್ಥಿ ಕೆ.ಶಿವನಗೌಡ ನಾಯಕ ಅವರನ್ನು 34,256 ಮತಗಳ ಅಂತರದಿಂದ ಪರಾಭವಗೊಳಿಸಿದ್ದಾರೆ. 1994ರಲ್ಲಿ ದೇವದುರ್ಗದಿಂದ ಜನತಾದಳ ಶಾಸಕಿ ಯಾಗಿ ಬಿ.ಟಿ.ಲಲಿತಾ ನಾಯಕ ಆಯ್ಕೆಯಾಗಿದ್ದರು.

ಐದನೇ ಬಾರಿ ಶಾಸಕ: ಜಿಲ್ಲೆಯ ಸಿಂಧನೂರು ವಿಧಾನಸಭೆ ಕ್ಷೇತ್ರದಿಂದ ಕಾಂಗ್ರೆಸ್ ಶಾಸಕರಾಗಿ ಹಂಪನಗೌಡ ಬಾದರ್ಲಿ ಅವರು ಐದನೇ ಬಾರಿ ಆಯ್ಕೆಯಾಗಿದ್ದಾರೆ.

ಶಾಸಕನಾಗಿ ಆಯ್ಕೆಯಾದ ನಿವೃತ್ತ ಜವಾನ

ಪ್ರಜಾವಾಣಿ ವಾರ್ತೆ

ಜಗಳೂರು: ತಾಲ್ಲೂಕಿನ ಚಿಕ್ಕಮ್ಮನ ಹಟ್ಟಿ ಗ್ರಾಮದ ಬಡ, ಬುಡಕಟ್ಟು ಕುಟುಂಬದಲ್ಲಿ ಜನಿಸಿ, 3 ದಶಕಗಳ ಕಾಲ ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ 'ಜವಾನ'ನಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಬಿ. ದೇವೇಂದ್ರಪ್ಪ ಈಗ ಜಗಳೂರು ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿ ಗಮನ ಸೆಳೆದಿದ್ದಾರೆ.

ಅನೇಕ ಆಕಾಂಕ್ಷಿಗಳ ನಡುವೆ ಕೊನೆಯ ಕ್ಷಣದಲ್ಲಿ ಕಾಂಗ್ರೆಸ್ ಟಿಕೆಟ್ ಪಡೆದು ಸ್ಪರ್ಧಿಸಿದ್ದ ಇವರು, ರೋಚಕ ಹಣಾಹಣಿಯಲ್ಲಿ ಹಾಲಿ ಶಾಸಕ ರಾಮಚಂದ್ರ ವಿರುದ್ಧ 874 ಮತಗಳ ಅಂತರದಲ್ಲಿ ಗೆದ್ದಿದ್ದಾರೆ.

ಪಟ್ಟಣದ ಅಮರಭಾರತಿ ವಿದ್ಯಾಕೇಂದ್ರದಲ್ಲಿ ಡಿ. ಗ್ರೂಪ್ (ಜವಾನ) ನೌಕರರಾಗಿ 30 ವರ್ಷ ಸೇವೆ ಸಲ್ಲಿಸಿದ್ದಾರೆ. ಬಡತನವನ್ನು ತಿಳಿದಿದ್ದರಿತಿರುವ ಇವರು ಇಬ್ಬರೂ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿದ್ದಾರೆ. ಹಿರಿಯ ಪುತ್ರ ಆರೋಗ್ಯ ಇಲಾಖೆಯ ಸೇವೆಯಲ್ಲಿದ್ದರೆ, ಕಿರಿಯ ಪುತ್ರ ಎಂಬಿಬಿಎಸ್ ಪದವಿ ಪಡೆದು ವೈದ್ಯರಾಗಿ ತಾಲ್ಲೂಕಿನ ಸೊಕ್ಕೆ, ಬಿದರಕೆರೆ ಗ್ರಾಮದಲ್ಲಿ ಸೇವೆ ಸಲ್ಲಿಸಿ ನಂತರ ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆ ಬರೆದು, ಐಆರ್‌ಎಸ್ ಸೇವೆಗೆ ಆಯ್ಕೆಯಾಗಿ, ಆದಾಯ ತೆರಿಗೆ ಇಲಾಖೆಯ ರಾಜ್ಯ ಆಯುಕ್ತರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಬಿ. ದೇವೇಂದ್ರಪ್ಪ ಅವರು ನಿವೃತ್ತಿ ನಂತರ 2013ರಲ್ಲಿ ರಾಜಕೀಯ ಪ್ರವೇಶಿಸಿ ಜೆಡಿಎಸ್ ಅಭ್ಯರ್ಥಿಯಾಗಿ ಜಗಳೂರು ಕ್ಷೇತ್ರದಿಂದ ಸ್ಪರ್ಧಿಸಿ ಪರಾಭವಗೊಂಡಿದ್ದರು.

ಸೋತರೂ ಪ್ರಯತ್ನ ಕೈಬಿಡದೇ ಕಾಂಗ್ರೆಸ್ ಸೇರಿ ಈಗ ವಿಧಾನಸಭೆಗೆ ಆಯ್ಕೆಯಾಗಿದ್ದಾರೆ.

ಪ್ರಭಾವಿ ಸಚಿವನನ್ನು ಸೋಲಿಸಿದ ಚಿಕ್ಕಬಳ್ಳಾಪುರದ ಸಾಮಾನ್ಯ ಹುಡುಗ

ಸತತ 'ಪರಿಶ್ರಮ'ದಿಂದ ಮೇಲೆದ್ದ ಪ್ರದೀಪ್ ಈಶ್ವರ್

• ಡಿ.ಎಂ.ಕುರ್ಕೆ ಪ್ರಶಾಂತ್

ಚಿಕ್ಕಬಳ್ಳಾಪುರ: ಏಳೆಂಟು ವರ್ಷಗಳ ಹಿಂದೆ ಚಿಕ್ಕಬಳ್ಳಾಪುರದ ರಸ್ತೆಗಳಲ್ಲಿ ಸಾಮಾನ್ಯನಂತೆ ಓಡಾಡುತ್ತಿದ್ದ, ವಾಸಿಸುತ್ತಿದ್ದ ಕೊಠಡಿ ಬಾಡಿಗೆ ಕಟ್ಟಲು ಹಣವಿಲ್ಲದ ಹುಡುಗ ಈಗ ಚಿಕ್ಕಬಳ್ಳಾಪುರದ ಶಾಸಕ!

ಪ್ರಭಾವಿ ಸಚಿವ ಡಾ.ಕೆ.ಸುಧಾಕರ್ ಅವರನ್ನು ಸೋಲಿಸುವ ಮೂಲಕ ರಾಜ್ಯದ ಗಮನ ಸೆಳೆದಿರುವ 38 ವರ್ಷದ ಪ್ರದೀಪ್ ಈಶ್ವರ್ ಅವರ ಬದುಕು ಅನೇಕ ರೋಚಕ ತಿರುವುಗಳ ಸಿನಿಮಾ ಕತೆಯಂತಿದೆ. ಪೆರೇಸಂದ್ರ ಗ್ರಾಮದ ಪ್ರದೀಪ್ ಅವರು ಚಿಕ್ಕ ವಯಸ್ಸಿನಲ್ಲಿಯೇ ತಂದೆ, ತಾಯಿಯನ್ನು ಕಳೆದುಕೊಂಡ ನತದೃಷ್ಟ. ಈ ಅನಾಥನಿಗೆ ವಿದ್ಯಾಭ್ಯಾಸ, ಆಶ್ರಯ ನೀಡಿದ್ದು ತುಮಕೂರಿನ ಸಿದ್ಧಗಂಗಾ ಮಠ. ಪಿಯು ಶಿಕ್ಷಣದ ನಂತರ ಪ್ರದೀಪ್ ಬದುಕು ಕಟ್ಟಿಕೊಳ್ಳಲು ಆಯ್ಕೆ ಮಾಡಿಕೊಂಡಿದ್ದು ಚಿಕ್ಕಬಳ್ಳಾಪುರವನ್ನು. ಮಕ್ಕಳಿಗೆ ಮನೆ ಪಾಠ ಹೇಳಿಕೊಡುತ್ತಿದ್ದ ಅವರು ಕೆಲ ಸಮಯ ಕಾಲೇಜುಗಳಲ್ಲಿ ಉಪನ್ಯಾಸಕನಾಗಿ ಕೆಲಸ ಮಾಡಿದರು. ಈ ವೇಳೆ ಸ್ಥಳೀಯ ಖಾಸಗಿ ವಾಹಿನಿಯೊಂದರಲ್ಲಿ 'ಲೈಫ್ ಈಸ್ ಬ್ಯೂಟಿಫುಲ್' ಹೆಸರಿನ ಕಾರ್ಯಕ್ರಮ ನಡೆಸಿಕೊಟ್ಟರು. ತನ್ನ ಸ್ವಂತ ಬದುಕು ಸುಂದರವಾಗಿಲ್ಲದಿದ್ದರೂ ಮತ್ತೊಬ್ಬರಿಗೆ ಸ್ಫೂರ್ತಿ ತುಂಬುವ, ಅವರ ಬದುಕು ಹಸನಗೊಳಿಸುವ ಕಾರ್ಯಕ್ರಮ ಅದಾಗಿತ್ತು.

ಬಡತನ, ಅವಮಾನ, ಮೂದಲಿಕೆ ಮಾತುಗಳನ್ನು ಅನುಭವಿಸಿದವರು. ಪ್ರದೀಪ್ ಈ ಮಟ್ಟಕ್ಕೆ ಬೆಳೆಯಲು ಕಾರಣ ಅವರಲ್ಲಿರುವ ಧೈರ್ಯ ಮತ್ತು ವಾಕ್ ಚಾತುರ್ಯ.



ಪ್ರದೀಪ್ ಈಶ್ವರ್ ಅವರನ್ನು ಹೊತ್ತು ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮ ಆಚರಿಸಿದರು — ಪ್ರಜಾವಾಣಿ ಚಿತ್ರ: ಬಿ.ಆರ್. ಮಂಜುನಾಥ್

2018ರ ವಿಧಾನಸಭೆ ಚುನಾವಣೆ ಅವರ ಬದುಕಿಗೆ ತಿರುವು ನೀಡಿತು. ಪಕ್ಷೇತರ ಅಭ್ಯರ್ಥಿ ಕೆ.ವಿ.ನವೀನ್ ಕಿರಣ್ ಪರವಾಗಿ ಸ್ಟಾರ್ ಪ್ರಚಾರಕ ಎನಿಸಿದರು. ಡಾ.ಕೆ.ಸುಧಾಕರ್ ಅವರನ್ನು ಉದ್ದೇಶಿಸಿ ಜಾಲತಾಣಗಳಲ್ಲಿ ಎತ್ತಿದ್ದ ಪ್ರಶ್ನೆಗಳು ಸ್ಥಳೀಯ ರಾಜಕೀಯ ವಲಯದಲ್ಲಿ ಸಂಚಲನಕ್ಕೆ ಕಾರಣವಾಯಿತು.

ಈ ಚುನಾವಣೆ ಮುಗಿಯುವ ವೇಳೆ ಅವರ ವಿರುದ್ಧ 20ಕ್ಕೂ ಹೆಚ್ಚು ಪ್ರಕರಣ ದಾಖಲಾದವು. ದೈಹಿಕ ಹಲ್ಲೆ ನಡೆದವು. ಪೊಲೀಸ್ ಠಾಣೆಯ ಎದುರು ಪ್ರದೀಪ್ ಒಬ್ಬರೇ ಪ್ರತಿಭಟನೆಗೆ ಮುಂದಾದ ಸಮಯದಲ್ಲಿ ಪೊಲೀಸ್ ಇಲಾಖೆಯ ಸುಮಾರು 50 ಸಿಬ್ಬಂದಿಯನ್ನು ಕಾವಲಿಗೆ ನಿಯೋಜಿಸಿದ್ದು ಎಲ್ಲರ ಗಮನ ಸೆಳೆದಿತ್ತು. ಪ್ರದೀಪ್ ಜಾಮೀನಿನ ಮೇಲೆ ಹೊರ ಬಂದಾಗ ಅವರನ್ನು ಪಟಾಕಿ ಸಿಡಿಸಿ ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಸಹ ಮಾಡಲಾಗಿತ್ತು.


ಚುನಾವಣೆಯಲ್ಲಿ ಡಾ.ಕೆ. ಸುಧಾಕರ್ ಗೆಲುತ್ತಿದ್ದಂತೆ ಪ್ರದೀಪ್ ಚಿಕ್ಕಬಳ್ಳಾಪುರ ತೊರೆದರು. ಕೆಲ ಸಮಯ ತಮಿಳುನಾಡು ಸೇರಿದಂತೆ ವಿವಿಧ ರಾಜ್ಯಗಳಲ್ಲಿದ್ದರು. ಹೊರ ರಾಜ್ಯ ಸುತ್ತಿ ಮತ್ತೆ ಬೆಂಗಳೂರಿಗೆ ಬಂದ ಅವರಲ್ಲಿ ಏನಾದರೂ ಸಾಧಿಸಬೇಕು ಎನ್ನುವ ಛಲವಿತ್ತು. ಆಗ ಹುಟ್ಟಿಕೊಂಡಿದ್ದೇ 'ಪರಿಶ್ರಮ ನೀಟ್ ಅಕಾಡೆಮಿ'. 2018ರ ಚುನಾವಣೆಯಲ್ಲಿ ಪ್ರದೀಪ್ ಅವರ ಧೈರ್ಯ ನೋಡಿದ್ದ ಕಾಂಗ್ರೆಸ್ ನಾಯಕರು ಅರ್ಜಿ ಸಲ್ಲಿಸದಿದ್ದರೂ ಪ್ರದೀಪ್ ಅವರನ್ನು ಕರೆದು ಟಿಕೆಟ್ ನೀಡಿದರು. ಅಹಿಂದ ಜಾತಿ ಲೆಕ್ಕಾಚಾರ, ಡಾ.ಕೆ. ಸುಧಾಕರ್ ವಿರುದ್ಧದ ಆಡಳಿತ ವಿರೋಧಿ ಅಲೆ ಪ್ರದೀಪ್ ಅವರನ್ನು ಗೆಲುವಿನ ದಡ ಮುಟ್ಟಿಸಿತು.

ಚಿಕ್ಕಬಳ್ಳಾಪುರದ ಬೀದಿಗಳಲ್ಲಿ ಬದುಕು ಕಟ್ಟಿಕೊಳ್ಳಲು ಅಲೆದಾಡುತ್ತಿದ್ದ ಹುಡುಗನನ್ನು ಇಂದು ಅದೇ ರಸ್ತೆಗಳಲ್ಲಿ 'ನಮ್ಮ ಶಾಸಕ' ಎಂದು ಜನರು ಹೊತ್ತು ಮೆರೆಸಿದ್ದಾರೆ.

ತಾರಾ ಪ್ರಚಾರಕರ ಉಪಸ್ಥಿತಿ ನೀಡಿದ ಫಲವೆಷ್ಟು...

ರಾಜ್ಯದ ಈ ವಿಧಾನಸಭಾ ಚುನಾವಣೆಯ ಕಣ ಪ್ರಚಾರದ ಸ್ವರೂಪದಿಂದಲೇ ಗಮನ ಸೆಳೆದಿತ್ತು. ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳ ನಾಯಕರು ಕ್ಷೇತ್ರಗಳಲ್ಲಿ ಇಳಿದು, ತಮ್ಮ ಪರವಾಗಿ ತಮ್ಮ ಪಕ್ಷದ ಅಭ್ಯರ್ಥಿಗಳ ಪರವಾಗಿ ಪ್ರಚಾರ ನಡೆಸಿದ್ದರು. ಸಿನಿಮಾ ತಾರೆಯರೂ ಪಕ್ಷಗಳ ಅಭ್ಯರ್ಥಿಗಳ ಪರವಾಗಿ ದೊಡ್ಡಮಟ್ಟದಲ್ಲಿ ಪ್ರಚಾರ ನಡೆಸಿದ್ದು ಈ ಬಾರಿಯ ವಿಶೇಷ. ಆದರೂ ಹೆಚ್ಚು ಸದ್ದು ಮಾಡಿದ್ದು, ಕಾಂಗ್ರೆಸ್ ಮತ್ತು ಬಿಜೆಪಿಯ ರಾಷ್ಟ್ರೀಯ ನಾಯಕರ ಪ್ರಚಾರವೇ. ಎರಡೂ ಪಕ್ಷಗಳ ರಾಷ್ಟ್ರೀಯ ನಾಯಕರು ರಾಜ್ಯದ ಹಲವು ಜಿಲ್ಲೆಗಳಲ್ಲಿ ಪ್ರಚಾರ ನಡೆಸಿದ್ದಾರೆ. ಪ್ರಚಾರದಲ್ಲಿ ರಾಜ್ಯದ ನಾಯಕರೇ ಮುಖ್ಯವಾದರೂ, ರಾಷ್ಟ್ರೀಯ ನಾಯಕರ ಉಪಸ್ಥಿತಿಯ ಮೆರುಗೇ ಬೇರೆ. ಈ ಪ್ರಚಾರಗಳು ಮತಗಳನ್ನು ಸೆಳೆಯುವಲ್ಲಿ, ಆ ಮತಗಳು ಗೆಲುವಾಗಿ ಮಾರ್ಪಾಡಾಗುವುದರಲ್ಲಿ ಪಾತ್ರವಹಿಸಿವೆಯೇ ಎಂಬುದರ ಚಿತ್ರಣ ಇಲ್ಲಿದೆ


ರಾಹುಲ್, ಪ್ರಿಯಾಂಕಾ ಗಾಂಧಿ ಪ್ರಚಾರ ನಡೆಸಿದ ಜಿಲ್ಲೆಗಳು



ಕಾಂಗ್ರೆಸ್ ಪರವಾಗಿ ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತು ರಾಹುಲ್ ಗಾಂಧಿ ಹೆಚ್ಚು ಪ್ರಚಾರ ನಡೆಸಿದ್ದರು. ಇಬ್ಬರೂ ಸಾರ್ವಜನಿಕ ಸಭೆ ಮತ್ತು ಸಾರ್ವಜನಿಕ ರ್‍ಯಾಲಿಗಳನ್ನು ನಡೆಸಿದರೂ ಗಮನ ಸೆಳೆದದ್ದು, ಜನಸಾಮಾನ್ಯರೊಂದಿಗೆ ಅವರು ಬೆರೆತ ರೀತಿ. ಪ್ರಿಯಾಂಕಾ ಅವರ ಮನೆ–ಮನೆ ಭೇಟಿ, ಸಾರ್ವಜನಿಕರೊಂದಿಗೆ ಸಂವಾದ, ಬೆಂಗಳೂರಿನ ಬಿಎಂಟಿಸಿ ಬಸ್‌ನಲ್ಲಿ ರಾಹುಲ್ ಪ್ರಯಾಣ, ಫುಡ್ ಡೆಲಿವರಿ ಹುಡುಗರೊಂದಿಗೆ ಸ್ಕೂಟರ್ ಸವಾರಿ, ಮಕ್ಕಳೊಂದಿಗೆ ತಿಂಡಿ ಸವಿದದ್ದು ಹೆಚ್ಚು ಗಮನ ಸೆಳೆದಿತ್ತು. ರಾಹುಲ್ ಮತ್ತು ಪ್ರಿಯಾಂಕಾ ಪ್ರಚಾರ ನಡೆಸಿದ ಜಿಲ್ಲೆಗಳಲ್ಲಿ ಕಾಂಗ್ರೆಸ್ ಉತ್ತಮ ಸಾಧನೆಯನ್ನೇ ಮಾಡಿದೆ.


ಬಿಜೆಪಿ ಪರವಾಗಿ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜ್ಯದ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ಪ್ರವಾಸ ನಡೆಸಿದ್ದರು. ಅಮಿತ್ ಶಾ ಅವರಂತೂ ಎಲ್ಲಾ ಜಿಲ್ಲೆಗಳಲ್ಲಿ ಸಾರ್ವಜನಿಕ ರ್‍ಯಾಲಿಗಳು, ಸಾರ್ವಜನಿಕ ಸಭೆಗಳನ್ನು ನಡೆಸಿದ್ದರು. ಪ್ರಧಾನಿ ಮೋದಿ ಅವರು ಹಲವು ಜಿಲ್ಲೆಗಳಲ್ಲಿ ದೊಡ್ಡ ಮಟ್ಟದ ರೋಡ್ ಶೋಗಳನ್ನು ನಡೆಸಿದ್ದರು. ಚುನಾವಣೆ ಘೋಷಣೆಯಾಗುವ ಮುನ್ನ ಮತ್ತು ಚುನಾವಣೆ ಘೋಷಣೆಯಾದ ನಂತರ ಮೋದಿ ಅವರು ನಡೆಸಿದ ರೋಡ್ ಶೋಗಳೆಲ್ಲಾ ಹೆಚ್ಚು ಸುದ್ದಿಯಾಗಿದ್ದವು. ಮೇ 6 ಮತ್ತು ಮೇ 7ರಂದು ಬೆಂಗಳೂರಿನಲ್ಲಿ ಅವರು ನಡೆಸಿದ ಮತ್ತು ನಡೆಸಲು ಯೋಜಿಸಿದ್ದ ರೋಡ್ ಶೋಗಳಿಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಮೋದಿ ಅವರನ್ನು ನೋಡಲು ಜನರು ಕಿಕ್ಕಿರಿದು ತುಂಬಿದ್ದರೂ, ರಸ್ತೆ ತಡೆ ನಡೆಸಿದ್ದರಿಂದ ಸಾರ್ವಜನಿಕರ ಆಕ್ರೋಶ ದೊಡ್ಡಮಟ್ಟದಲ್ಲೇ ಇತ್ತು.

ನರೇಂದ್ರ ಮೋದಿ, ಅಮಿತ್ ಶಾ ಪ್ರಚಾರ ನಡೆಸಿದ ಜಿಲ್ಲೆಗಳು




ಮತದಾನದ ಸ್ವರೂಪ 2018ರಿಂದ 2023ಕ್ಕೆ ಬದಲಾದ ಚಿತ್ರಣ

ರಾಜ್ಯದ ವಿಧಾನಸಭೆಗೆ 2018ರಲ್ಲಿ ನಡೆದಿದ್ದ ಚುನಾವಣೆಯಲ್ಲಿ ಜನರು ಮಾಡಿದ್ದ ಮತದಾನದ ಸ್ವರೂಪಕ್ಕೂ, 2023ರ ಚುನಾವಣೆಯಲ್ಲಿ ರಾಜ್ಯದ ಜನರು ಮಾಡಿರುವ ಮತದಾನದ ಸ್ವರೂಪಕ್ಕೂ ಬಹಳ ವ್ಯತ್ಯಾಸವಿದೆ. ಹಿಂದಿನ ಚುನಾವಣೆಯಲ್ಲಿ ರಾಜ್ಯದ ಹಲವು ಭಾಗಗಳಲ್ಲಿ ಬಿಜೆಪಿ ಪ್ರಾಬಲ್ಯ ಸಾಧಿಸಿತ್ತು. ಆದರೆ, ಈ ಚುನಾವಣೆಯಲ್ಲಿ ಆ ಪ್ರಾಬಲ್ಯವನ್ನು ಕಾಂಗ್ರೆಸ್ ಮುರಿದಿದೆ. 2018ರಲ್ಲಿ ಕೆಲವು ಜಿಲ್ಲೆಗಳಲ್ಲಿ ಬಿಜೆಪಿ ಜಯಭೇರಿ ಬಾರಿಸಿತ್ತು. ಅಂತಹ ಹಲವು ಜಿಲ್ಲೆಗಳಲ್ಲಿ ಕಾಂಗ್ರೆಸ್ ಈ ಬಾರಿ ಎಲ್ಲಾ ಕ್ಷೇತ್ರಗಳನ್ನು ಗೆದ್ದುಕೊಂಡಿದೆ. ಜೆಡಿಎಸ್‌ಗೆ ಗೆದ್ದ ಕ್ಷೇತ್ರಗಳಲ್ಲೂ ಗಣನೀಯ ಬದಲಾವಣೆಯಾಗಿದೆ



ಪರಿಶಿಷ್ಟರಿಗೆ ಕಾಂಗ್ರೆಸ್ ಮೆಚ್ಚು



- ಈ ಬಾರಿಯ ಚುನಾವಣೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಿರಿಸಿದ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಹೆಚ್ಚು ಸ್ಥಾನಗಳನ್ನು ಗದ್ದುಕೊಂಡಿದೆ. ಮೀಸಲಾತಿ ಹೆಚ್ಚಳ ಮತ್ತು ಒಳಮೀಸಲಾತಿ ವಿಚಾರಗಳು ಚುನಾವಣೆಯಲ್ಲಿ ಪರಿಣಾಮ ಬೀರಿದಂತೆ ಕಾಣುತ್ತದೆ
- ಪರಿಶಿಷ್ಟ ಜಾತಿಗಳಿಗೆ ಮೀಸಲಿರಿಸಿದ್ದ 36 ಕ್ಷೇತ್ರಗಳಲ್ಲಿ ಕಾಂಗ್ರೆಸ್ 21 ಕ್ಷೇತ್ರಗಳನ್ನು ಗೆದ್ದುಕೊಂಡಿದೆ. ಬಿಜೆಪಿ ಸಹ ಇಂತಹ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದ್ದು, 12 ಕ್ಷೇತ್ರಗಳಲ್ಲಿ ಜಯ ಸಾಧಿಸಿದೆ. ಜೆಡಿಎಸ್ ಮೂರು ಕ್ಷೇತ್ರಗಳಿಗೆ ತೃಪ್ತಿಪಟ್ಟುಕೊಂಡಿದೆ
- ಪರಿಶಿಷ್ಟ ಪಂಗಡಗಳಿಗೆ ಮೀಸಲಿರಿಸಿದ 15 ಕ್ಷೇತ್ರಗಳಲ್ಲಿ, ಕಾಂಗ್ರೆಸ್ 14 ಕ್ಷೇತ್ರಗಳನ್ನು ಗೆದ್ದುಕೊಂಡಿದೆ. ಜೆಡಿಎಸ್ 1 ಕ್ಷೇತ್ರವನ್ನು ತನ್ನದಾಗಿಸಿಕೊಂಡಿದ್ದರೆ, ಬಿಜೆಪಿಯದ್ದು ಇಲ್ಲಿ ಶೂನ್ಯ ಸಾಧನೆ

ಪರಿಶಿಷ್ಟ ಜಾತಿಗಳಲ್ಲಿ ವಿಧಾನಸಭೆ ಪ್ರವೇಶಿಸಿದ ಉಪಜಾತಿಗಳ ಪ್ರತಿನಿಧಿಗಳು



ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 14-5-1998

ಭಾರತದಿಂದ ಮತ್ತೆ 2 ಅಣ್ವಸ್ತ್ರ ಸಾಧನ ಸ್ಫೋಟ

ನವದೆಹಲಿ, ಮೇ 13 (ಪಿಟಿಐ)– ರಾಜಸ್ಥಾನದ ಪೋಖ್ರಾನ್‌ನಲ್ಲಿ ಮೂರು ಅಣ್ವಸ್ತ್ರ ಸಾಧನಗಳ ಪರೀಕ್ಷಾರ್ಥ ಸ್ಫೋಟವನ್ನು ಯಶಸ್ವಿಗೊಳಿಸಿದ ಎರಡೇ ದಿನದಲ್ಲಿ ಭಾರತ ಇಂದು ಅದೇ ಪ್ರದೇಶದಲ್ಲಿ ಮತ್ತೆರಡು ಅಣ್ವಸ್ತ್ರ ಪರೀಕ್ಷೆ ನಡೆಸಿದೆ.

ಈ 2 ಅಣ್ವಸ್ತ್ರ ಸ್ಫೋಟದೊಂದಿಗೆ ಯೋಜಿತ ಅಣ್ವಸ್ತ್ರ ಸರಣಿ ಪರೀಕ್ಷಾ ಕಾರ್ಯಕ್ರಮ ಪೂರ್ಣಗೊಂಡಂತಾಗಿದೆ. ಸೋಮವಾರ ಮಧ್ಯಾಹ್ನ 3 ಅಣ್ವಸ್ತ್ರ ಸ್ಫೋಟ ನಡೆಸಿದ್ದಕ್ಕಾಗಿ ಅಮೆರಿಕವು ಭಾರತದ ವಿರುದ್ಧ ದಿಗ್ಬಂಧನ ಹೇರಿತ್ತು.

50 ವರ್ಷಗಳ ಹಿಂದೆ

ಸೋಮವಾರ, 14-5-1973

ನ್ಯಾಯಾಂಗದಲ್ಲಿ ಮತ್ತೆ ಜನತೆಗೆ ವಿಶ್ವಾಸ ಬರುವ ಕ್ರಮಕ್ಕಾಗಿ ಆಗ್ರಹ

ನವದೆಹಲಿ, ಮೇ 13– ಮೂವರು ಅತ್ಯಂತ ಹಿರಿಯ ನ್ಯಾಯಾಧೀಶರ ಸೇವಾ ಹಿರಿತನವನ್ನು ಕಡೆಗಣಿಸಿರುವುದರಿಂದ ನುಚ್ಚುನೂರಾಗಿರುವ ನ್ಯಾಯಾಂಗದ ಸ್ವಾತಂತ್ರ್ಯ ಹಾಗೂ ಅದರ ಉನ್ನತ ಪರಂಪರೆಯಲ್ಲಿ ಜನತೆಗೆ ಮತ್ತೆ ನಂಬಿಕೆ ಬರುವಂತೆ ರಾಷ್ಟ್ರಪತಿ ವಿ.ವಿ. ಗಿರಿಯವರು ಕ್ರಮಕೈಗೊಳ್ಳಬೇಕೆಂದು ಒತ್ತಾಯ ಮಾಡಿ ನಾಲ್ಕು ವಿರೋಧ ಪಕ್ಷಗಳು ಇಂದು ಮನವಿ ಪತ್ರವೊಂದನ್ನು ಸಲ್ಲಿಸಿದವು.

ಕಾನೂನು ಆಯೋಗದ ವರದಿ ಸಂಬಂಧ ಸರ್ಕಾರದ ನಿಲುವು ಸ್ಪಷ್ಟಪಡಿಸುವುದರಲ್ಲಿ ಇನ್ನಷ್ಟು ವಿಳಂಬವಾಗಬಾರದು ಎಂದು ಅವರು ಕೇಳಿದ್ದಾರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಮೇ 14, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಕೃಷ್ಣದಶಮಿ ಗಂ. 26-47 ನಕ್ಷತ್ರ: ಶತಭಿಷ ಗಂ. 10-16, ಯೋಗ: ಐಂದ್ರ ಗಂ. 06-35 ನಂತರ ವೈಧೃತಿ ಗಂ. 27-56 ಕರಣ: ವಣಿಜ ಗಂ. 15-44, ಮೇಷ ಮಾಸದ 30 ನೇ ದಿನ,
ಮಳೆನಕ್ಷತ್ರ: ಕೃತ್ತಿಕ 1, ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-08 ಸೂರ್ಯಾಸ್ತ : 06-45
ಮುಸ್ಲಿಂ ದಿನಾಂಕ : 23 ಶವ್ವಾಲ್
ದಿನ ವಿಶೇಷ : ರೆಗೋಷನ್ ಭಾನುವಾರ, ಅದೃಷ್ಟ ಸಂಖ್ಯೆ : 5, 11

ಮೇಷ: ಬಹುಕಾಲದ ಬಳಿಕ ವೃತ್ತಿ ಕ್ಷೇತ್ರದಿಂದ ಮರಳಿ, ಸಂಬಂಧಿಕರನ್ನು ಭೇಟಿಯಾಗುವ ಭಾಗ್ಯ ನಿಮ್ಮದಾಗುತ್ತದೆ. ನಿರಂತರ ಪ್ರಯತ್ನದಿಂದಾಗಿ ಕ್ರೀಡಾಕ್ಷೇತ್ರದಲ್ಲಿನ ನಿಮ್ಮ ಹೆಸರು ಉತ್ತಮ ಸ್ಥಾನ ತಲುಪುತ್ತದೆ.

ವೃಷಭ: ಕಾರ್ಯಸಾಧನೆಗೆ ನಿಮ್ಮ ಪ್ರಯತ್ನದ ಹೊರತಾಗಿ ದೈವಬಲ ಇರಬೇಕಾಗುತ್ತದೆ ಎಂದು ಅರಿತುಕೊಂಡು ಅದಕ್ಕೆ ಬೇಕಾದ ವ್ಯವಸ್ಥೆ ಮಾಡಿ. ಕಚೇರಿಗಳ ಇಂದಿನ ರಜೆ ನಿಮ್ಮ ಮೇಲೆ ಪರಿಣಾಮ ಬೀರುತ್ತದೆ.

ಮಿಥುನ: ಇತರರೊಂದಿಗೆ ವಾಗ್ವಾದ ನಡೆಸಿ ಪಡೆದ ವಸ್ತುವನ್ನು ಬೇಜವಬ್ದಾರಿತನದಿಂದ ಹಾಳು ಮಾಡಿಕೊಳ್ಳುವಿರಿ. ಪ್ರಯಾಣದ ನಂತರವು ನಿಮ್ಮ ಲವಲವಿಕೆಯ ಓಡಾಟ ಇತರರ ಅಸೂಯೆಗೆ ಕಾರಣವಾಗುತ್ತದೆ.

ಕರ್ಕಾಟಕ: ಸಭೆಯಲ್ಲಿ ನಿಮ್ಮ ಸ್ಥಾನ ಹಾಗೂ ಇತಿಮಿತಿ ಅರಿಯದ ಹೊರತು ಕನಿಷ್ಠ ಗೌರವವೂ ನಿಮಗೆ ಸಿಗದು. ಪಾರಂಪರಿಕವಾಗಿ ಹಿಂದಿನ ಕಾಲದಲ್ಲಿ ಬಳಸುತ್ತಿದ್ದ ನಿಮ್ಮ ಮನೆಯಲ್ಲಿರುವ ವಸ್ತುವನ್ನು ಕಳೆಯಬೇಡಿ.

ಸಿಂಹ: ಮನೆಯ ದುರಸ್ತಿ ಕೆಲಸಗಳನ್ನು ಮಾಡಿಸುವ ಅನಿವಾರ್ಯ ಬರಲಿದೆ. ಸಹಾಯ ಗುಣ ಹೊಂದಿರುವ ಕಾರಣದಿಂದ ಸಹಪಾಠಿಗಳೊಂದಿಗಿನ ಬಾಂಧವ್ಯ ಉತ್ತಮಗೊಳ್ಳುವುದು. ಅಗತ್ಯ ಕಾರ್ಯಗಳಲ್ಲಿ ವಿಳಂಬ ತೋರಿಬರುವ ಸಾಧ್ಯತೆ.

ಕನ್ಯಾ: ಆರಕ್ಷಕ ಸಿಬ್ಬಂದಿಗೆ ಹೆಚ್ಚಿನ ಕೆಲಸ ಒದಗಿ ಬರಲಿದೆ. ನಿಮ್ಮ ಬುದ್ಧಿವಂತಿಕೆ, ನಡೆ-ನುಡಿಯಿಂದ ಸಮಸ್ಯೆಗಳು ಹಿಮದಂತೆ ಕರಗಲಿವೆ. ವ್ಯಾವಹಾರಿಕ ಪಾಲುದಾರರ ಜೊತೆಯಲ್ಲಿ ಉತ್ತಮ ಬಾಂಧವ್ಯವನ್ನು ಹೊಂದುವಿರಿ.

ತುಲಾ: ಪರಿಶ್ರಮದಿಂದ ಬಹುದಿನಗಳ ಅಥವಾ ನಿಮ್ಮ ಹಿರಿಯರ ಕನಸನ್ನು ನನಸಾಗಿಸುವಿರಿ. ಆಹಾರ ಪದಾರ್ಥದ ವ್ಯಾಪಾರ ಮಾಡುವವರಿಗೆ ನಷ್ಟ ಸಂಭವ ಸಾಧ್ಯತೆ. ಆಂಜನೇಯನ ಮೊರೆ ಹೋಗುವುದರಿಂದ ಕಾರ್ಯ ಸಿದ್ಧಿ.

ವೃಶ್ಚಿಕ: ಇಂದು ವರಿಷ್ಠ ಅಧಿಕಾರಿಗಳಿಗೆ ವಿಶೇಷ ಸ್ಥಾನಮಾನ, ಅಧಿಕಾರ ಪ್ರಾಪ್ತವಾಗಲಿದೆ. ತಾಂತ್ರಿಕ ಕ್ಷೇತ್ರದ ಸಾಧನೆಗಾಗಿ ಕೆಲವರಿಗೆ ಪ್ರಶಸ್ತಿ ಲಭಿಸುವ ಸಾಧ್ಯತೆ. ವಿದ್ಯಾರ್ಥಿಗಳಿಗೆ ಮಿತ್ರರ ಸಹವಾಸ ಅನುಕೂಲವಾಗಿ ಕಂಡುಬರುವುದು.

ಧನು: ಉತ್ಸಾಹದಿಂದ ಕೆಲಸ ಆರಂಭಿಸಿದಲ್ಲಿ ಸಮಸ್ಯೆಗಳು ತಾನಾಗಿಯೇ ಪರಿಹಾರಗೊಳ್ಳಲಿವೆ. ರಚನಾತ್ಮಕ ಕೆಲಸಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುವುದರಿಂದ ಸಂತಸ. ನೆರೆ ಹೊರೆಯವರೊಡನೆ ಉತ್ತಮ ಬಾಂಧವ್ಯ ಹೊಂದುವಿರಿ.

ಮಕರ: ನಿವೇಶನ ಕೊಳ್ಳಲು ಸೂಕ್ತ ಸ್ಥಳದ ಹುಡುಕಾಟ ನಡೆಸುವಿರಿ. ಮಕ್ಕಳ ವಿದ್ಯಾಭ್ಯಾಸದಿಂದ ಸಮಾಧಾನ. ವಿದ್ಯಾರ್ಥಿಗಳು ಅತ್ಯಂತ ಪೈಪೋಟಿ ಎದುರಿಸಬೇಕಾಗುವುದು. ನಿಮ್ಮ ಯೋಜನೆಗಳ ಕಾರ್ಯಗತಕ್ಕೆ ಹೆಚ್ಚಿನ ಪ್ರಯತ್ನ ಅಗತ್ಯ.

ಕುಂಭ: ನಿಮಗೆ ಎದುರಾಗುವ ಸನ್ನಿವೇಶಗಳಿಂದಾಗಿ ಯಾವ ದಿಕ್ಕಿನಲ್ಲಿ ಸಾಗಬೇಕೆಂಬ ಗೊಂದಲ ಕಾಡಲಿದೆ. ಕೃಷಿ ಯೋಜನೆಗಳ ಬಗ್ಗೆ ಚಿಂತಿಸುವ ಅಗತ್ಯವಿಲ್ಲ. ಸ್ನೇಹಿತನಿಗಾಗಿ ಹಣವನ್ನು ಖರ್ಚು ಮಾಡುವ ಸ್ಥಿತಿ ಬರುವುದು.

ಮೀನ: ಪ್ರತೀ ಕಾರ್ಯಕ್ಕೂ ಹಲವು ಬಾರಿ ಪ್ರಯತ್ನ ಪಡಬೇಕಾದೀತು. ನ್ಯಾಯಾಲಯದಲ್ಲಿರುವ ಪ್ರಕರಣಗಳನ್ನು ನಿಮ್ಮ ವಿರುದ್ಧ ತಿರುಗಿಸುವ ಷಡ್ಯಂತ್ರ ನಡೆಯಬಹುದು. ನಿರುದ್ಯೋಗಿಗಳ ಬಯಕೆ ಈಡೇರಿಕೆಯಿಂದ ಸಂತಸ.

ಪದಬಂಧ 5318


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ವಿಷಯವನ್ನು ಅರಿತುಕೊಳ್ಳುವಿಕೆ (6)
4.ಶಿವನಿಂದ ಪ್ರಾರಂಭವಾದ ಮುಷ್ಕರ! (4)
5.ರಸ ಒಸರುತ್ತಿರುವ ಜಿಹ್ವೆ (3)
7.ಬಂಗಾರ ಇಲ್ಲಿದೆ (3)
9.ಕೆಟ್ಟ ಸುದ್ದಿಯಿದು (3)
12.ಕರಿಯ ಮರಿ ಬಿದ್ದಿರುವ ಆಳವಾದ ಗುಂಡಿ (3)
13.ಅದೇ ತಾನೆ ಮೂಡುತ್ತಿರುವ ಸೂರ್ಯ (4)
15.ಅಧಿಕಾರ ಸ್ವೀಕಾರದ ಮೊದಲಲ್ಲಿ ಮಾಡುವಪ್ರತಿಜ್ಞೆ (6)

ಮೇಲಿಂದ ಕೆಳಕ್ಕೆ

1.ಈ ಡಿಸ್ಟ್ರಿಬ್ಯೂಟರ್ ಪಕ್ಕಾ ಕನ್ನಡಿಗ! (4)
2.ದುಡ್ಡು ಇಲ್ಲಿ ಉಲ್ಟಾ ಆಗಿದೆ (2)
3.ನೆಂಟರ ಸಮೂಹ (3)
6.ಪರಿಮಳ ಇಲ್ಲಿ ಹರಡಿದೆ! (4)
7.ಷರತ್ತು ಅಥವಾ ಒಪ್ಪಂದ (3)
8.ಈತ ಲೆಕ್ಕ ಬರೆಯುವವನು (4)
10.ಪೂರ್ಣ ಅರಿವು (4)
11.ಮಣ್ಣಿನಿಂದ ಪಾತ್ರೆಗಳನ್ನು ಮಾಡುವವನು (3)
14.ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ (2)



5317ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಶಯನಗೃಹ 4.ಸರ್ವಜ್ಞ
5.ವರಾತ 6.ವದನ
7.ತಕಲಿ 9.ರಕೆ
10.ಅಂಗ 12.ಮಸುಕು
14.ಜನಾಂಗ 15.ಸುಮ್ಮಾನ
16.ಗುಲಾಮ 17.ನವತರುಣ

ಮೇಲಿಂದ ಕೆಳಕ್ಕೆ:
1.ಶತಮಾನ 2.ನಡವಳಿಕೆ
3.ಹವನ 4.ಸತತ
8.ಕಡಗ 9.ರಕ್ಷಿಸು
10.ಅಂಕಗಣಿತ 11.ಸುಮಬಾಣ
13.ಕುಸುಮ 14.ಜನನ

ಸುಡೊಕು 5704

	7			6			5	3
2					5			
		1	2			4		9
		2					4	
4				9				5
	1		3		2		7	
	2			1		8		
1			8					4
	8			3	7		1	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5703 ಸುಡೊಕು

7	9	2	5	3	1	4	6	8
4	1	5	6	8	7	3	2	9
6	8	3	4	9	2	1	5	7
5	3	4	7	1	9	6	8	2
1	2	6	8	5	4	7	9	3
8	7	9	2	6	3	5	4	1
9	4	7	3	2	5	8	1	6
3	6	1	9	4	8	2	7	5
2	5	8	1	7	6	9	3	4

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸಂಪಾದಕೀಯ

ಚುನಾವಣೆ ಫಲಿತಾಂಶ ದೃಢ ಸರ್ಕಾರಕ್ಕೆ ಜನಾದೇಶ

ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಕರ್ನಾಟಕದ ಮತದಾರರು ನೀಡಿದ ತೀರ್ಪು ನಿಚ್ಚಳವಾಗಿದೆ, ಸಂದೇಶ ಸ್ಪಷ್ಟವಾಗಿದೆ. 2018ರಲ್ಲಿ ನಡೆದ ಚುನಾವಣೆಯಲ್ಲಿ ಯಾವುದೇ ಪಕ್ಷಕ್ಕೂ ಸರಳ ಬಹುಮತ ಸಿಕ್ಕಿರಲಿಲ್ಲ. ಹಾಗಾಗಿಯೇ ಕಾಂಗ್ರೆಸ್–ಜೆಡಿಎಸ್ ಜೊತೆ ಸೇರಿ ಸರ್ಕಾರ ರಚಿಸಬೇಕಾದ ಅನಿವಾರ್ಯ ಸೃಷ್ಟಿಯಾಗಿತ್ತು. ಬಳಿಕ, ಈ ಎರಡೂ ಪಕ್ಷಗಳ ಹಲವು ಶಾಸಕರನ್ನು 'ಆಪರೇಷನ್ ಕಮಲ' ಮೂಲಕ ಸೆಳೆದುಕೊಂಡ ಬಿಜೆಪಿ ಸರ್ಕಾರ ರಚಿಸಿತು. ಕರ್ನಾಟಕವು ಅನೈತಿಕ ಮತ್ತು ಅಸಹ್ಯಕರ ರಾಜಕಾರಣಕ್ಕೆ ಸಾಕ್ಷಿಯಾಗಬೇಕಾಯಿತು. ಬಹುಮತವನ್ನು 'ಸೃಷ್ಟಿ'ಸಿಕೊಂಡಿದ್ದ ಬಿಜೆಪಿಯು ಮುಖ್ಯಮಂತ್ರಿಯಾಗಿ ಬಿ.ಎಸ್. ಯಡಿಯೂರಪ್ಪ ಅವರನ್ನು ಆಯ್ಕೆ ಮಾಡಿತು. ಆದರೆ, ಅರ್ಧದಲ್ಲಿಯೇ ಅವರನ್ನು ಇಳಿಸಿ, ಬಸವರಾಜ ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿ ಮಾಡಿತು. ಇಂತಹುದಕ್ಕೆಲ್ಲ ಅವಕಾಶವೇ ಇರಬಾರದು ಎಂದು ಮತದಾರರು ನಿರ್ಧರಿಸಿದ್ದಾರೆ ಎಂಬುದನ್ನು ಈ ಬಾರಿಯ ಫಲಿತಾಂಶವು ಸಾರಿ ಹೇಳಿದೆ. ಬಿಜೆಪಿ ನೇತೃತ್ವದ ಸರ್ಕಾರದ ಆಡಳಿತಾವಧಿಯ ಉದ್ದಕ್ಕೂ ಭ್ರಷ್ಟಾಚಾರ ಮತ್ತು ಅದಕ್ಷತೆಯ ಆರೋಪಗಳು ಕೇಳಿಬಂದವು. ಗುತ್ತಿಗೆ ಹಣ ಪಡೆಯಬೇಕಿದ್ದರೆ ಶೇ 40ರಷ್ಟು ಕಮಿಷನ್ ನೀಡಬೇಕಾಗಿದೆ ಎಂದು ಗುತ್ತಿಗೆದಾರರ ಸಂಘದ ಅಧ್ಯಕ್ಷ ಮಾಡಿದ ಆರೋಪವು ರಾಜ್ಯದಲ್ಲಿ ಬಿಜೆಪಿಗೆ ದುಬಾರಿ ಅನಿಸಿಕೊಂಡಿತು. ಸರ್ಕಾರಿ ಕಚೇರಿಗಳಲ್ಲಿಯೂ ವ್ಯಾಪಕವಾಗಿದ್ದ ಲಂಚಗುಳಿತನದಿಂದ ಜನರು ಪರಿತಪಿಸಿದ್ದರು. ಬೊಮ್ಮಾಯಿ ನೇತೃತ್ವದ ಸಂಪುಟದಲ್ಲಿ ಸಚಿವರಾಗಿದ್ದ ಹೆಚ್ಚಿನವರು ಸೋತಿದ್ದಾರೆ ಎಂಬುದು ಆಡಳಿತ ವಿರೋಧಿ ಅಲೆ ಎಷ್ಟು ಬಲವಾಗಿತ್ತು ಎಂಬುದಕ್ಕೆ ಪುರಾವೆ ಒದಗಿಸುತ್ತದೆ. ಬೆಲೆ ಏರಿಕೆಯು ಜನರನ್ನು ಹೈರಾಣಾಗಿಸಿತ್ತು ಎಂಬುದು ತಳಮಟ್ಟದ ವಾಸ್ತವ. ಅಡುಗೆ ಅನಿಲ ಸಿಲಿಂಡರ್ ಬೆಲೆಯು ₹ 1,100 ದಾಟಿದ್ದು ಬಡವರು ಮತ್ತು ಮಧ್ಯಮ ವರ್ಗದವರ ಬೆನ್ನು ಮುರಿಯುವಂತೆ ಮಾಡಿತ್ತು. ಅಗತ್ಯ ವಸ್ತುಗಳ ಬೆಲೆಯೂ ಗಗನಮುಖಿಯಾಗಿಯೇ ಇದ್ದುದರಿಂದ ನಿತ್ಯದ ವೆಚ್ಚವು ಜನರಿಗೆ ಹೊರೆಯಾಯಿತು. ಪಠ್ಯಪುಸ್ತಕ ಪರಿಷ್ಕರಣೆಯಂತಹ ವಿಚಾರವನ್ನು ಕೂಡ ಬಿಜೆಪಿ ಸರ್ಕಾರವು ಕೋಮು ಧ್ರುವೀಕರಣಕ್ಕೆ ಬಳಸಿಕೊಂಡಿತು. ಧರ್ಮದ ಆಧಾರದಲ್ಲಿ ಜನರನ್ನು ವಿಭಜಿಸುವ ಯತ್ನ ನಿರಂತರವಾಗಿ ನಡೆದಿದೆ ಎಂಬುದು ಕೂಡ ಪ್ರಜ್ಞಾವಂತ ಜನರ ಕಳವಳಕ್ಕೆ ಕಾರಣವಾಗಿತ್ತು. ಕೋವಿಡ್ ಸಾಂಕ್ರಾಮಿಕ, ಅತಿವೃಷ್ಟಿ, ಪ್ರವಾಹದ ಸಂದರ್ಭದಲ್ಲಿ ಕೇಂದ್ರದ ನಾಯಕತ್ವವು ರಾಜ್ಯವನ್ನು ನಿರ್ಲಕ್ಷಿಸಿತು, ಜಿಎಸ್‌ಟಿ ಬಾಕಿ ಪಾವತಿಯಲ್ಲಿಯೂ ಅಸಡ್ಡೆ ತೋರಿತು ಎಂಬ ಆರೋಪಗಳು ಜನರಿಗೆ ನಿಜ ಎನ್ನಿಸುವಷ್ಟು ವಾಸ್ತವಕ್ಕೆ ಹತ್ತಿರವಿದ್ದವು. ಈ ಎಲ್ಲವೂ ಚುನಾವಣೆ ಘೋಷಣೆಗೆ ಬಹಳ ಮುನ್ನವೇ ಆಡಳಿತ ವಿರೋಧಿ ಅಲೆ ಸೃಷ್ಟಿಸಿದ್ದವು ಎಂಬುದರಲ್ಲಿ ಸಂದೇಹವಿಲ್ಲ.



> ಬಿಜೆಪಿಯ ಪ್ರಚಾರವು ರಕ್ಷಣಾತ್ಮಕ ಆಟಕ್ಕೆ ಸೀಮಿತವಾಗಿದ್ದರೆ, ಕಾಂಗ್ರೆಸ್‌ನ ಪ್ರಚಾರವು ಸೃಜನಶೀಲವಾಗಿತ್ತು. ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯು ಪ್ರತಿಸ್ಪರ್ಧಿ ಪಕ್ಷಗಳಿಗಿಂತ ಉತ್ತಮವಾಗಿತ್ತು

ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವು ಸಕಾರಾತ್ಮಕ ಧೋರಣೆ ಇರಿಸಿಕೊಂಡು ಚುನಾವಣಾ ಪ್ರಚಾರ ನಡೆಸಿತು ಎಂಬುದು ಎದ್ದು ಕಾಣುವಂತಿತ್ತು. ನಾಯಕರ ನಡುವಣ ಒಗ್ಗಟ್ಟು ಪ್ರದರ್ಶನವು ಜನರಲ್ಲಿ ಭರವಸೆ ಮೂಡಿಸಬಹುದು ಎಂಬ ಕಾಂಗ್ರೆಸ್‌ನ ಲೆಕ್ಕಾಚಾರವು ಹುಸಿಯಾಗಲಿಲ್ಲ. ಅದಕ್ಕೆ ಪ್ರತಿಯಾಗಿ, ಬಿಜೆಪಿಯಲ್ಲಿ ರಾಜ್ಯ ಮಟ್ಟದ ಗಟ್ಟಿ ನಾಯಕರು ಇರಲಿಲ್ಲ. ಬಿಜೆಪಿಯ ವರಿಷ್ಠ ಮುಖಂಡರಾದ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ವರ್ಚಸ್ಸು ಬಳಸಿಯೇ ಗೆಲ್ಲಬಹುದು ಎಂಬ ಬಿಜೆಪಿಯ ಯೋಚನೆಯೂ ಕೈ ಹಿಡಿಯಲಿಲ್ಲ. ಜನರ ಸಂಕಷ್ಟ, ಸ್ಥಳೀಯ ವಿಚಾರಗಳೇ ಚುನಾವಣೆಯ ವಿಷಯವಾದಾಗ ಕೇಂದ್ರದ ಪ್ರಬಲ ನಾಯಕತ್ವವು ಮೋಡಿ ಮಾಡುವುದು ಸಾಧ್ಯವಾಗಲಿಲ್ಲ. ಕಾಂಗ್ರೆಸ್‌ನ ಕೇಂದ್ರ ನಾಯಕತ್ವವು ದುರ್ಬಲವಾಗಿದ್ದರೂ ರಾಜ್ಯದ ನಾಯಕರು ಬೆವರು ಸುರಿಸಿದ್ದು ಹುಸಿ ಹೋಗಲಿಲ್ಲ. ಬಿಜೆಪಿಯ ಪ್ರಚಾರವು ರಕ್ಷಣಾತ್ಮಕ ಆಟಕ್ಕೆ ಸೀಮಿತವಾಗಿದ್ದರೆ, ಕಾಂಗ್ರೆಸ್‌ನ ಪ್ರಚಾರವು ಸೃಜನಶೀಲವಾಗಿತ್ತು. ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯು ಪ್ರತಿಸ್ಪರ್ಧಿ ಪಕ್ಷಗಳಿಗಿಂತ ಉತ್ತಮವಾಗಿತ್ತು. 'ಸಮಾಜದಲ್ಲಿ ದ್ವೇಷ ಬಿತ್ತುವ ಬಜರಂಗ ದಳದಂತಹ ಸಂಘಟನೆಗಳ ನಿಷೇಧ' ಎಂಬ ಭರವಸೆಯನ್ನು ಧರ್ಮದ ನೆಲೆಯಲ್ಲಿ ಬಳಸಿಕೊಳ್ಳಲು ಮೋದಿಯವರೂ ಸೇರಿದಂತೆ ಬಿಜೆಪಿ ನಾಯಕರು ಪ್ರಯತ್ನಿಸಿದರು. ಹನುಮಾನ್ ಚಾಲೀಸ ಪಠಣಕ್ಕೆ ಅಭಿಯಾನದ ಸ್ವರೂಪ ಕೊಡುವ ಯತ್ನವೂ ನಡೆಯಿತು. ಆದರೆ, ಜಾತಿ–ಧರ್ಮಕ್ಕಿಂತ ಕಾಂಗ್ರೆಸ್ ಪಕ್ಷವು ಮತದಾರರ ಮನದಲ್ಲಿ ಮೂಡಿಸಿದ ಜನಕಲ್ಯಾಣ ಕಾರ್ಯಕ್ರಮಗಳ ಕನಸುಗಳಿಗೇ ಜನರು ಮಾರುಹೋದರು. ಕಾಂಗ್ರೆಸ್ ಪಕ್ಷದ 'ಗ್ಯಾರಂಟಿ'ಗಳಾದ 'ಯುವನಿಧಿ', 'ಗೃಹಜ್ಯೋತಿ', 'ಅನ್ನಭಾಗ್ಯ', 'ಗೃಹಲಕ್ಷ್ಮಿ' ಮತ್ತು 'ಶಕ್ತಿ' ಭರವಸೆಗಳಿಂದ ಜನರು ಆಕರ್ಷಿತರಾದರು. ಕೋವಿಡ್ ಸಾಂಕ್ರಾಮಿಕದಿಂದಾದ ಸಂಕಷ್ಟ, ನಿರುದ್ಯೋಗ ಮತ್ತು ಹಣದುಬ್ಬರ ತೀವ್ರವಾಗಿರುವ ಈ ಸಂದರ್ಭದಲ್ಲಿ ಜನರಿಗೆ ಇಂತಹ ಯೋಜನೆಗಳ ಅಗತ್ಯವೂ ಇದೆ. ನಿರುದ್ಯೋಗಿ ಯುವಜನರಿಗೆ ನಿರುದ್ಯೋಗ ಭತ್ಯೆ ನೀಡುವ ಯುವನಿಧಿ ಯೋಜನೆಯಿಂದಾಗಿ ಯುವಜನರು ಕಾಂಗ್ರೆಸ್‌ನತ್ತ ಆಕರ್ಷಿತರಾಗಿರುವ ಸಾಧ್ಯತೆ ಇದೆ. ರಾಜ್ಯ ಸರ್ಕಾರದ ಮೇಲಿದ್ದ ಭ್ರಷ್ಟಾಚಾರ ಆರೋಪ, ಕೇಂದ್ರವು ರಾಜ್ಯವನ್ನು ಕಡೆಗಣಿಸಿದೆ ಎಂಬ ಆರೋಪವನ್ನು ಜನರಿಗೆ ಮನದಟ್ಟು ಮಾಡುವಲ್ಲಿ ಕಾಂಗ್ರೆಸ್ ಯಶಸ್ಸು ಕಂಡಿದ್ದೇ ಗೆಲುವಿಗೆ ದೊಡ್ಡ ಕೊಡುಗೆ ಕೊಟ್ಟಿದೆ. ಹಿರಿತಲೆಗಳನ್ನು ಬದಿಗೆ ಸರಿಸಿ, ಹೊಸ ಮುಖಗಳಿಗೆ ಅವಕಾಶ ನೀಡುವ ಕಾರ್ಯತಂತ್ರವು ಬಿಜೆಪಿ ತೀರಾ ಪಾತಾಳಕ್ಕೆ ಕುಸಿಯುವುದನ್ನು ತಡೆದಿದೆ. ಈ ಕಾರ್ಯತಂತ್ರವು ಬಿಜೆಪಿಗೆ ಹೊಸ ಹುಮ್ಮಸ್ಸು ತರಬಹುದು. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಒಂದು ಲಕ್ಷ ಹುದ್ದೆಗಳನ್ನು ಭರ್ತಿ ಮಾಡುವ ಭರವಸೆಯನ್ನು ಕಾಂಗ್ರೆಸ್ ಕೊಟ್ಟಿದೆ. ಅದನ್ನು ನೆರವೇರಿಸುವುದರ ಜೊತೆಗೆ ಲಕ್ಷಾಂತರ ಉದ್ಯೋಗವನ್ನು ಸೃಷ್ಟಿಸಬೇಕಾದ ದೊಡ್ಡ ಸವಾಲು ಹೊಸ ಸರ್ಕಾರದ ಮುಂದೆ ಇದೆ. ಇದಷ್ಟೇ ಅಲ್ಲದೆ ಹೊಸ ಸರ್ಕಾರಕ್ಕೆ ಸವಾಲುಗಳ ಸರಮಾಲೆಯೇ ಎದುರಾಗಲಿದೆ. ಸರ್ಕಾರ ರಚನೆಯಾದ ಕೆಲವೇ ವಾರಗಳಲ್ಲಿ ಮುಂಗಾರು ಋತು ಆರಂಭವಾಗಲಿದೆ. ಕಳೆದ ಕೆಲ ವರ್ಷಗಳಲ್ಲಿ ಪ್ರತಿ ಬಾರಿಯೂ ಮುಂಗಾರು ಋತು ರಾಜ್ಯದಲ್ಲಿ ಅಲ್ಲೋಲ ಕಲ್ಲೋಲಕ್ಕೆ ಕಾರಣವಾಗಿದೆ. ಅತಿವೃಷ್ಟಿ, ಪ್ರವಾಹ ಎದುರಿಸುವ ಸಿದ್ಧತೆಯನ್ನು ಸರ್ಕಾರವು ಆರಂಭದಲ್ಲಿಯೇ ಮಾಡಿಕೊಳ್ಳಬೇಕು. ರೈತರ, ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸುವ ದಿಸೆಯಲ್ಲಿ ಯೋಜನೆಗಳನ್ನು ರೂಪಿಸಬೇಕಿದೆ. ಕೊಟ್ಟ ಭರವಸೆಗಳನ್ನು ಪ್ರಾಮಾಣಿಕವಾಗಿ ಮತ್ತು ದಕ್ಷವಾಗಿ ಈಡೇರಿಸಬೇಕಿದೆ. ಇಲ್ಲದೇ ಹೋದರೆ, ಈ ಭರವಸೆಗಳನ್ನು ನಂಬಿ ಮತ ಹಾಕಿರುವ ಮತದಾರ ಮುನಿಯುತ್ತಾನೆ ಎಂಬುದನ್ನು ಕಾಂಗ್ರೆಸ್ ಪಕ್ಷವು ಗಮನದಲ್ಲಿ ಇರಿಸಿಕೊಳ್ಳಬೇಕಿದೆ. ಮೂರು ದಶಕಗಳಲ್ಲಿಯೇ ಇಷ್ಟೊಂದು ಬಹುಮತವನ್ನು ಮತದಾರ ಯಾವ ಪಕ್ಷಕ್ಕೂ ಕೊಟ್ಟಿರಲಿಲ್ಲ ಎಂಬುದು ಕಾಂಗ್ರೆಸ್‌ನ ಹೊಣೆಗಾರಿಕೆಯು ಇನ್ನೂ ಹೆಚ್ಚುವಂತೆ ಮಾಡಿದೆ.





ಮಂಗಳೂರಿನ ಸುರತ್ಕಲ್ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ ಆವರಣದ ಮತ ಎಣಿಕೆ ಕೇಂದ್ರದ ಬಳಿ ಸುರಿವ ಮಳೆಯ ನಡುವೆಯೂ ಬಿಜೆಪಿ ಕಾರ್ಯಕರ್ತರು ಶನಿವಾರ ಸಂಭ್ರಮಾಚರಣೆಯಲ್ಲಿ ತೊಡಗಿದ್ದರು –ಪ್ರಜಾವಾಣಿ ಚಿತ್ರ/ಫಕ್ರುದ್ದೀನ್ ಎಚ್ (ಎಡಚಿತ್ರ). ಹಾಸನ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಸ್ವರೂಪ್ ಪ್ರಕಾಶ್ ಗೆಲುವು ಸಾಧಿಸಿದ ಬಳಿಕ ಕಾರ್ಯಕರ್ತರು, ಬೈಕ್ ರ್‍ಯಾಲಿಯೊಂದಿಗೆ ಅದ್ದೂರಿ ಮೆರವಣಿಗೆ ನಡೆಸಿದರು

ಗೆಲುವಿನ ಕೇಕೆ; 'ಕೈ'ಗೆ ಜನಮತ ಹೇಗೆ?

• ರಾಜೇಶ್ ರೈ ಚಟ್ಲ

ಸುದ್ದಿ ವಿಶ್ಲೇಷಣೆ

ಸರ್ಕಾರದ ವಿರುದ್ಧದ ಶೇ 40ರಷ್ಟು ಕಮಿಷನ್ (ಭ್ರಷ್ಟಾಚಾರ) ಆರೋಪ, ಆಡಳಿತ ವಿರೋಧಿ ಸುನಾಮಿ ಬಿಜೆಪಿಯನ್ನು ಅಪ್ಪಳಿಸಿರುವ ಜತೆಗೆ, ಜನಾಕರ್ಷಕ ಐದು 'ಗ್ಯಾರಂಟಿ'ಗಳು ಕಾಂಗ್ರೆಸ್ ಪಕ್ಷವನ್ನು ಗೆಲುವಿನ ಅಲೆಯಲ್ಲಿ ತೇಲಾಡುವಂತೆ ಮಾಡಿದೆ. ಮೋದಿ, ಶಾ, ನಡ್ಡಾ ತಂತ್ರಗಾರಿಕೆಯ ನಡುವೆಯೂ ಸಾಧಿಸಿದ ಈ ಅಭೂತಪೂರ್ವ ಯಶಸ್ಸು 'ಕೈ' ಪಾಳಯದಲ್ಲಿ ಇನ್ನಿಲ್ಲದ ಸಂಭ್ರಮ ಮೂಡಿಸಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆನಂದಭಾಷ್ಪ ಸುರಿಸುವಂತೆ ಮಾಡಿದೆ. ಸಿದ್ದರಾಮಯ್ಯ ಸೇರಿದಂತೆ ಪಕ್ಷದ ನಾಯಕರ ಖುಷಿಯನ್ನು ಇಮ್ಮಡಿಗೊಳಿಸಿದೆ.

ದಾವಣಗೆರೆಯಲ್ಲಿ ಆಗಸ್ಟ್‌ನಲ್ಲಿ ನಡೆದ 'ಸಿದ್ದರಾಮೋತ್ಸವ'ಕ್ಕೆ (ಸಿದ್ದರಾಮಯ್ಯ 75ನೇ ಜನ್ಮದಿನದ ಅಮೃತ ಮಹೋತ್ಸವ) ಬಂದಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನಡುವಿನ ಒಗ್ಗಟ್ಟಿನ ಸಂದೇಶ ಸಾರಿದ್ದರು. ಆ ಮೂಲಕ, ಚುನಾವಣೆಗೆ 10 ತಿಂಗಳು ಇರುವಾಗಲೇ ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿದ್ದರು. ನಂತರ ಕಾಂಗ್ರೆಸ್ ಹಮ್ಮಿಕೊಂಡ ಭಾರತ್ ಜೋಡೊ, ಸ್ವಾತಂತ್ರ್ಯ ನಡಿಗೆ, ಮೇಕೆದಾಟು ಯಾತ್ರೆ, ಪ್ರಜಾಧ್ವನಿ ಸೇರಿದಂತೆ ಹಲವು ಯಾತ್ರೆಗಳಲ್ಲಿ ಜನರು ಎದುರಿಸುತ್ತಿರುವ ಸಮಸ್ಯೆ, ಸವಾಲುಗಳನ್ನೇ ಬಿಂಬಿಸಿ ಜನಾಭಿಪ್ರಾಯ ಮೂಡಿಸುವಲ್ಲಿ ಯಶಸ್ವಿಯಾಗಿತ್ತು. ಮತದಾರ ಒಲವು ದೊಡ್ಡ ಮಟ್ಟದಲ್ಲಿ ಕಾಂಗ್ರೆಸ್ ಕಡೆ ವಾಲಲು ಬಿಜೆಪಿ ಸರ್ಕಾರದ ವಿರುದ್ಧದ ಆಡಳಿತ ವಿರೋಧಿ ಅಲೆ ಪ್ರಮುಖ ಕಾರಣ. ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಮತ್ತು ಅನುದಾನರಹಿತ ಖಾಸಗಿ ಶಾಲೆಗಳ ಒಕ್ಕೂಟ ಪ್ರಧಾನಿಗೆ ನೀಡಿದ ದೂರನ್ನೇ ಮುಂದಿಟ್ಟು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿರುದ್ಧ ಶೇ 40 ಕಮಿಷನ್ ಆರೋಪ ಮಾಡಿದ ಕಾಂಗ್ರೆಸ್ ನಾಯಕರು, 'ಪೇಸಿಎಂ' ಅಭಿಯಾನವನ್ನೇ ಆರಂಭಿಸಿದ್ದರು. ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಎಲ್ಲ ನಾಯಕರೂ ಭ್ರಷ್ಟಾಚಾರ ಆರೋಪವನ್ನೇ 'ಅಸ್ತ್ರ'ವಾಗಿ ಪ್ರಯೋಗಿಸಿದ್ದು, ಜಾಹೀರಾತು ರೂಪದಲ್ಲಿ ಪ್ರಕಟಿಸಿದ್ದೂ ಕಾಂಗ್ರೆಸ್‌ಗೆ ಮತ ತಂದುಕೊಟ್ಟಿದೆ.

ಬೆಲೆ ಏರಿಕೆ, ನಿರುದ್ಯೋಗವನ್ನು ಚುನಾವಣಾ ವಿಷಯ ಮಾಡಿದ ಕಾಂಗ್ರೆಸ್, ಆ ಬೆನ್ನಲ್ಲೇ 'ಗ್ಯಾರಂಟಿ' ಭರವಸೆಗಳನ್ನು ಘೋಷಿಸಿತು. ಇವು ಅಖಾಡದಲ್ಲಿ ಭಾರಿ ಸದ್ದು ಮಾಡಿದವು. ಮುಸ್ಲಿಮರ ಮೀಸಲಾತಿ ರದ್ದು ಮಾಡಿ ಲಿಂಗಾಯತರು, ಒಕ್ಕಲಿಗರಿಗೆ ಹಂಚಿರುವುದನ್ನು ವಿರೋಧಿಸಿ, ಮೀಸಲಾತಿಯನ್ನು ಶೇ 75ಕ್ಕೆ ಏರಿಸುತ್ತೇವೆಂಬ ಕಾಂಗ್ರೆಸ್ ನಾಯಕರ ಆಶ್ವಾಸನೆಯೂ ಕೆಲಸ ಮಾಡಿದೆ. ಒಗ್ಗಟ್ಟಿನ ಪರಿಶ್ರಮ ಕೂಡಾ ಕಾಂಗ್ರೆಸ್ ಅಭೂತಪೂರ್ವ ಗೆಲುವು ದಕ್ಕಿಸಿಕೊಳ್ಳಲು ಕಾರಣವಾಗಿದೆ. ಬಿ.ಎಸ್. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಪಟ್ಟದಿಂದ ಕೆಳಗಿಳಿಸಿದ, ಜಗದೀಶ ಶೆಟ್ಟರ್, ಲಕ್ಷ್ಮಣ ಸವದಿಗೆ ಟಿಕೆಟ್ ನಿರಾಕರಿಸಿದ ಬಿಜೆಪಿ ನಡೆಯನ್ನೇ ಮುಂದಿಟ್ಟು, ಲಿಂಗಾಯತ ಸಮುದಾಯವನ್ನು ನಿರ್ಲಕ್ಷಿಸಲಾಗುತ್ತಿದೆ ಎಂದು ನಡೆಸಿದ ಪ್ರಚಾರ ಕೂಡಾ ಕಾಂಗ್ರೆಸ್‌ಗೆ ಲಾಭ ತಂದುಕೊಟ್ಟಿದೆ.

ಬಜರಂಗದಳ ನಿಷೇಧ ಭರವಸೆ ಪ್ರಸ್ತಾಪ ಕಾಂಗ್ರೆಸ್ ಪಾಲಿಕೆ ಕಂಟಕ ಆಗಬಹುದೆಂಬ ಮಾತು ಕೇಳಿಬಂದಿತ್ತು. ಈ ಪ್ರಸ್ತಾಪವನ್ನು ಬಲವಾಗಿ ವಿರೋಧಿಸಿದ ಬಿಜೆಪಿ, 'ಬಜರಂಗ ಬಲಿ ಕೀ ಜೈ' ಎಂಬ ಘೋಷಣೆ ಮಾಡಿತು. ಆದರೆ, ಈ ವಿಷಯ ಮುಸ್ಲಿಂ ಹಾಗೂ ಬಜರಂಗದಳದಿಂದ ಕಿರುಕುಳ ಅನುಭವಿಸಿದ್ದ ಹಿಂದು ಮತಗಳ ಧ್ರುವೀಕರಣದ ಮೂಲಕ ಕಾಂಗ್ರೆಸ್ಸಿಗೇ ಅನುಕೂಲ ಮಾಡಿಕೊಟ್ಟಿದೆ. ಯಾವುದೇ ಭಾವನಾತ್ಮಕ ವಿಚಾರಗಳು ಮತದಾರರ ಮನಸ್ಸಿಗೆ ನಾಟಲಿಲ್ಲ. ಆಝಾನ್, ಹಲಾಲ್, ಹಿಜಾಬ್ ವಿವಾದಗಳೂ ಚುನಾವಣೆಯಲ್ಲಿ ಸದ್ದು ಮಾಡಲಿಲ್ಲ. ಬದಲಾಗಿ 'ಸರ್ವಜನಾಂಗದ ಶಾಂತಿಯ ತೋಟ' ನಿರ್ಮಾಣದ ಕಾಂಗ್ರೆಸ್ ಕರೆಗೆ ಜನ ಮನ್ನಣೆ ನೀಡಿದ್ದಾರೆ.

'ಕಾರ್ಯತಂತ್ರ'ವೇ ಅಸ್ತ್ರ

ಚುನಾವಣಾ ತಂತ್ರಗಾರ ಸುನೀಲ್ ಕನುಗೋಲು ನೇತೃತ್ವದ ತಂಡ ರಾಜ್ಯದಾದ್ಯಂತ ಕ್ಷೇತ್ರವಾರು ನಡೆಸಿದ್ದ ಸಮೀಕ್ಷೆ ಆಧರಿಸಿ ಅಭ್ಯರ್ಥಿಗಳ ಆಯ್ಕೆ. ಇದನ್ನು ಆಧರಿಸಿ ಸಿದ್ಧಪಡಿಸಿದ ಕಾರ್ಯತಂತ್ರ, ಪಕ್ಷದ 'ವಾರ್ ರೂಂ'ನಲ್ಲಿ ಕುಳಿತು ಮಾಜಿ ಐಎಎಸ್ ಅಧಿಕಾರಿ ಕೆ. ಸಸಿಕಾಂತ್ ಸೆಂಥಿಲ್ ಸದ್ದಿಲ್ಲದೆ ರೂಪಿಸಿದ ತಂತ್ರಗಾರಿಕೆಯೂ ಕಾಂಗ್ರೆಸ್ ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸಿದೆ. ಬಿಜೆಪಿ ವಿರುದ್ಧದ ಆರೋಪಗಳಿಗೆ ಪ್ರಚಾರ ನೀಡಿ, ಜಾಹೀರಾತನ್ನು ಮತದಾರರಿಗೆ ನಾಟುವಂತೆ ವಿನ್ಯಾಸಗೊಳಿಸಿ ಜನಾಕರ್ಷಕಗೊಳಿಸುವಲ್ಲೂ ಈ ಇಬ್ಬರ ಕೊಡುಗೆ ಇದೆ.

ಭ್ರಷ್ಟಾಚಾರ, ದುರಾಡಳಿತ, ಬೆಲೆ ಏರಿಕೆಗೆ ಬೆಲೆ ತೆತ್ತ ಬಿಜೆಪಿ

• ಎಸ್. ರವಿಪ್ರಕಾಶ್

'ಈ ಬಾರಿಯ ಸರ್ಕಾರ ಬಿಜೆಪಿಯ ಬಹುಮತದ ಸರ್ಕಾರ' ಎಂಬ ಘೋಷ ವಾಕ್ಯದ ಮೂಲಕ ಪ್ರಧಾನಿ ನರೇಂದ್ರ ಮೋದಿ ಮತ್ತು ಇತರ ನಾಯಕರ ಮೂಲಕ ಅಬ್ಬರದ ಪ್ರಚಾರ ನಡೆಸಿದ್ದ ಬಿಜೆಪಿ ಹೀನಾಯವಾಗಿ ಸೋತಿದೆ. ಚುನಾವಣೆಯಲ್ಲಿ ಶತಾಯಗತಾಯ ಗೆದ್ದೇ ಗೆಲ್ಲಬೇಕು ಎಂದು ಬಿಜೆಪಿ ವರಿಷ್ಠರು ಮಾಡಿದ ಎಲ್ಲ 'ಪ್ರಯೋಗ'ಗಳೂ ಜನಾಕ್ರೋಶದ ಅಲೆಯ ಮುಂದೆ ತರಗೆಲೆಯಂತೆ ತೂರಿ ಹೋಗಿವೆ.

ಭ್ರಷ್ಟಾಚಾರ, ಬೆಲೆ ಏರಿಕೆ, ದುರಾಡಳಿತ, ಲಿಂಗಾಯತ ನಾಯಕರ ನಿರ್ಲಕ್ಷ್ಯ, ಕ್ಷೇತ್ರಗಳಲ್ಲಿ ಸ್ಥಳೀಯ ಶಾಸಕರ ವಿರೋಧಿ ಅಲೆ ಬಿಜೆಪಿಯ ಚಾಣಕ್ಯರ ತಂತ್ರಗಳನ್ನೂ ಮಣ್ಣು ಮುಕ್ಕುವಂತೆ ಮಾಡಿವೆ. ಘಟಾನುಘಟಿ ಸಚಿವರೇ ಸೋತು ಹೋಗಿದ್ದಾರೆ. ಗೆದ್ದವರೂ ಕೂಡ ಅತಿ ಪ್ರಯಾಸದಿಂದ ಗೆದ್ದಿದ್ದಾರೆ. ಆಡಳಿತ ವಿರೋಧಿ ಅಲೆಯ ಆಕ್ರೋಶದ ಮೇಲೆ ಪರದೆ ಹಾಕಿ ನಡೆಸಿದ ಭರ್ಜರಿ ಪ್ರಚಾರವೂ ಫಲ ನೀಡಲಿಲ್ಲ.

ರಾಷ್ಟ್ರೀಯ ನಾಯಕರಾದ ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಸೇರಿದಂತೆ ಯಾರಿಂದಲೂ ಕರ್ನಾಟಕದಲ್ಲಿ ಬಿಜೆಪಿಯನ್ನು ಗೆಲುವಿನ ದಡ ಮುಟ್ಟಿಸಲು ಸಾಧ್ಯವಾಗಲಿಲ್ಲ.

ಭ್ರಷ್ಟಾಚಾರ, ಶೇ 40ರ ಲಂಚದ ಕುರಿತಾಗಿ ಕಾಂಗ್ರೆಸ್ ಸುಮಾರು ಒಂದೂವರೆ ವರ್ಷಗಳ ಹಿಂದೆ ಸರ್ಕಾರದ ವಿರುದ್ಧ ಬಳಸಿದ ಅಸ್ತ್ರ ಬಿಜೆಪಿಗೆ ಪ್ರಬಲ ಪೆಟ್ಟು ನೀಡಿತು. ಅಲ್ಲದೇ, ಭ್ರಷ್ಟಾಚಾರದ ಬಿಸಿ ಸಾರ್ವಜನಿಕರನ್ನು ತಟ್ಟಿದ್ದು ವಾಸ್ತವ. ಇದರಿಂದಾಗಿ ಸ್ಥಳೀಯ ಮಟ್ಟದಲ್ಲಿ ಬಿಜೆಪಿ ಶಾಸಕರ ವಿರುದ್ಧ ಆಡಳಿತ ವಿರೋಧಿ ಅಲೆ ದಟ್ಟವಾಗಿತ್ತು. ಅಗತ್ಯ ವಸ್ತುಗಳ ಬೆಲೆ ಏರಿಕೆ ಸಾರ್ವಜನಿಕರ ಜೀವನವನ್ನು ಹೈರಾಣವಾಗಿಸಿತ್ತು. ಕೋವಿಡ್ ಅವಧಿಯಲ್ಲಿನ ಜನರ ಜೀವನ ದುಸ್ತರವಾಗಿತ್ತು. ಆ ಅವಧಿಯಲ್ಲಿ ಕೋವಿಡ್ ನಿರ್ವಹಣೆಯಲ್ಲಿ ನಡೆದ ವ್ಯಾಪಕ ಭ್ರಷ್ಟಾಚಾರವೂ ಜನರನ್ನು ಬಾಧಿಸಿತ್ತು.

ಬಿ.ಎಸ್.ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಒತ್ತಾಯಪೂರ್ವಕವಾಗಿ ಇಳಿಸಿದ ಬಳಿಕ ಬಿಜೆಪಿ ಲಿಂಗಾಯತರ ನಾಯಕರನ್ನು ಮೂಲೆಗುಂಪು ಮಾಡುತ್ತಿದೆ ಎಂಬ ಕಾಂಗ್ರೆಸ್ ಪ್ರಚಾರ ಆ ಸಮುದಾಯದ ಮನಸಿನಲ್ಲಿ ಗಟ್ಟಿಯಾಗಿ ಬೇರೂರಿತ್ತು. ಇದರ ಸುಳಿವು ಅರಿತ ಬಿಜೆಪಿ ವರಿಷ್ಠರು ಯಡಿಯೂರಪ್ಪ ಅವರನ್ನು ಬಿಜೆಪಿ ಸಂಸದೀಯ ಮಂಡಳಿ ಸದಸ್ಯರನ್ನಾಗಿ ಮಾಡಿದ್ದೂ ಅಲ್ಲದೇ, ಚುನಾವಣಾ ಪ್ರಚಾರದಲ್ಲಿ ಮುಂಚೂಣಿಗೆ ತಂದರು. ಈ ಮೂಲಕ ಯಡಿಯೂರಪ್ಪ ಅವರನ್ನು ನಿರ್ಲಕ್ಷ್ಯ ಮಾಡಿಲ್ಲ ಎಂಬ ಸಂದೇಶ ರವಾನೆ ಮಾಡುವ ಪ್ರಯತ್ನ ನಡೆಸಿತು. ಆದರೆ, ಚುನಾವಣೆ ಹೊಸ್ತಿಲಲ್ಲೇ ಜಗದೀಶ ಶೆಟ್ಟರ್ ಮತ್ತು ಲಕ್ಷ್ಮಣ ಸವದಿ ಅವರಿಗೆ ಟಿಕೆಟ್ ನಿರಾಕರಿಸಲಾಯಿತು. ಅವರು ಬಂಡಾಯವೆದ್ದಾಗ ಲಿಂಗಾಯತ ನಾಯಕರ ನಿರ್ಲಕ್ಷ್ಯ ಮತ್ತೆ ಮುನ್ನೆಲೆಗೆ ಬಂದಿತು. ಇಬ್ಬರೂ ಕಾಂಗ್ರೆಸ್ ಸೇರಿದರು. ಲಿಂಗಾಯತರ ನಿರ್ಲಕ್ಷ್ಯವನ್ನು ಅಸ್ತ್ರವಾಗಿ ಕಾಂಗ್ರೆಸ್ ಬಳಸಿತು. ಇದೂ ಕೂಡ ಬಿಜೆಪಿ ಸೋಲಿಗೆ ಕಾರಣವಾಗಿದೆ.

ಪ್ರವಾಹ ಮತ್ತು ಕೋವಿಡ್ ಸಂಕಷ್ಟದ ಬಳಿಕ ಜನಜೀವನ ಸುಧಾರಣೆ ಮತ್ತು ಉತ್ತಮ ಆಡಳಿತ ದತ್ತ ಗಮನಹರಿಸದ ಸರ್ಕಾರ ಅನಗತ್ಯ ವಿವಾದಗಳನ್ನು ಮೈಮೇಲೆಎಳೆದುಕೊಂಡಿತು. ಪಠ್ಯ ಪುಸ್ತಕ ಪರಿಷ್ಕರಣೆ, ಹಿಜಾಬ್, ಹಲಾಲ್‌ನಂತಹ ವಿವಾದಗಳು ಭುಗಿಲೆದ್ದವು. ಇದರಿಂದ ಬೇಸತ್ತರು. ಆರ್ಥಿಕ ಸಂಕಷ್ಟವು ಬಡ ಮತ್ತು ಮಧ್ಯಮ ವರ್ಗವನ್ನು ಹೈರಾಣಾಗಿಸಿತ್ತು. ಇದರ ನಿವಾರಣೆಯತ್ತ ಗಮನಹರಿಸದೇ ಇರುವುದರಿಂದ ಜನ ಸಿಟ್ಟಾಗಿರುವುದು ಫಲಿತಾಂಶದಲ್ಲಿ ವ್ಯಕ್ತವಾಗಿದೆ.

ಚುನಾವಣೆ ಹೊಸ್ತಿಲಲ್ಲೇ ಹಿನ್ನಡೆಯ ವಾಸನೆ ಹಿಡಿದಿದ್ದ ಮುಖ್ಯಮಂತ್ರಿ ಬೊಮ್ಮಾಯಿ ಮೀಸಲಾತಿ ಪ್ರಮಾಣದ ಅಸ್ತ್ರ ಪ್ರಯೋಗ ಮಾಡಿದರು. ಮುಸ್ಲಿಂ ಮೀಸಲಾತಿ ರದ್ದು ಮಾಡಿ, ಒಕ್ಕಲಿಗ, ಲಿಂಗಾಯತರ ಮೀಸಲಾತಿ ಹೆಚ್ಚಿಸಿದರು. ಇದು ಚುನಾವಣೆಯಲ್ಲಿ ಬ್ರಹ್ಮಾಸ್ತ್ರವಾಗದೇ, ಬಿಜೆಪಿಗೆ ತಿರುಗುಬಾಣವಾಯಿತು.

ಗದ್ದುಗೆಯ ಕನಸಲ್ಲಿ ನೆಲೆ ಕಳೆದುಕೊಂಡ ಜೆಡಿಎಸ್

• ವಿ.ಎಸ್. ಸುಬ್ರಹ್ಮಣ್ಯ

ಈ ಬಾರಿಯೂ ಅತಂತ್ರ ಸ್ಥಿತಿ ನಿರ್ಮಾಣವಾಗಿ ನಿರಾಯಾಸವಾಗಿ ಮೈತ್ರಿ ಸರ್ಕಾರದ ಚುಕ್ಕಾಣಿ ಹಿಡಿದು ಗದ್ದುಗೆ ಏರಬಹುದು ಎಂಬ ಕನಸು ಕಾಣುತ್ತಿದ್ದ ಜೆಡಿಎಸ್, ಕಾಂಗ್ರೆಸ್ ಪರ ಎದ್ದ ಅಲೆಯಲ್ಲಿ ತೀವ್ರ ಆಘಾತ ಅನುಭವಿಸಿದೆ. ಕಳೆದ ಚುನಾವಣೆಗೆ ಹೋಲಿಸಿದರೆ ಜೆಡಿಎಸ್ ಶಾಸಕರ ಸಂಖ್ಯೆ ಅರ್ಧದಷ್ಟು ಕುಸಿದಿದ್ದು, ಹಲವು ಜಿಲ್ಲೆಗಳಲ್ಲಿ ಪಕ್ಷ ನೆಲೆ ಕಳೆದುಕೊಂಡಿದೆ.

2013ರ ಚುನಾವಣೆಯಲ್ಲಿ ಜೆಡಿಎಸ್ 40 ಕ್ಷೇತ್ರಗಳಲ್ಲಿ ಗೆದ್ದಿತ್ತು. 2018ರ ಚುನಾವಣೆಗೂ ಮುನ್ನ ಏಳು ಮಂದಿ ಕಾಂಗ್ರೆಸ್ ಸೇರಿದ್ದರೆ, ಮೂವರು ಬಿಜೆಪಿಗೆ ಹೋಗಿದ್ದರು. ಒಬ್ಬರು ನಿಧನರಾಗಿದ್ದರು. ಆಗ ಜೆಡಿಎಸ್‌ನ ಬಲ 29ಕ್ಕೆ ಕುಸಿದಿತ್ತು. ಸಂಕಷ್ಟದ ಸ್ಥಿತಿಯಲ್ಲಿ ಚುನಾವಣೆ ಎದುರಿಸಿದ್ದ ಜೆಡಿಎಸ್, 2018ರಲ್ಲಿ 37 ಸ್ಥಾನಗಳೊಂದಿಗೆ ಮೇಲೆದ್ದು ಬಂದಿತ್ತು. ಕಾಂಗ್ರೆಸ್ ಜತೆಗೆ ಸಮ್ಮಿಶ್ರ ಸರ್ಕಾರ ರಚಿಸಿ ಮುಖ್ಯಮಂತ್ರಿ ಗಾದಿಯನ್ನೂ ಗಳಿಸಿತ್ತು.

ಈ ಬಾರಿಯೂ 40ರಿಂದ 50 ಸ್ಥಾನ ಗೆದ್ದರೆ ಅತಂತ್ರ ಸ್ಥಿತಿಯ ಲಾಭ ಪಡೆದು ಸುಲಭವಾಗಿ ಅಧಿಕಾರದ ಗದ್ದುಗೆ ಏರಬಹುದು ಎಂಬ ಲೆಕ್ಕಾಚಾರ ಜೆಡಿಎಸ್‌ನಲ್ಲಿತ್ತು. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ ಕುಮಾರಸ್ವಾಮಿ ಅವರು ಅದೇ ಉಮೇದಿನಲ್ಲಿ ರಾಜ್ಯದ ಆಯ್ದ ಕ್ಷೇತ್ರಗಳನ್ನು ಕೇಂದ್ರೀಕರಿಸಿ ಪ್ರಚಾರ ಮಾಡಿದ್ದರು.

ಚುನಾವಣಾ ವೇಳಾಪಟ್ಟಿ ಘೋಷಣೆಗೆ ಮೂರು ತಿಂಗಳ ಮೊದಲೇ 93 ಕ್ಷೇತ್ರಗಳ ಅಭ್ಯರ್ಥಿಗಳನ್ನೂ ಪ್ರಕಟಿಸಿತ್ತು. ಆದರೆ, ಎರಡನೇ ಹಂತದಲ್ಲಿ ಹಾಸನ ಕ್ಷೇತ್ರದ ಅಭ್ಯರ್ಥಿಯ ಆಯ್ಕೆಯ ವಿಚಾರದಲ್ಲಿ ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡರ ಕುಟುಂಬದಲ್ಲಿ ಸೃಷ್ಟಿಯಾದ ಭಿನ್ನಮತ ಹಲವು ದಿನಗಳ ಕಾಲ ಪಕ್ಷವನ್ನು ಕಾಡಿತ್ತು.

ಕೊನೆಯ ಸುತ್ತಿನಲ್ಲಿ ವಿವಿಧ ಪಕ್ಷಗಳಿಂದ ವಲಸ ಬಂದವರಿಗೆ ಟಿಕೆಟ್ ನೀಡಿದ ಜೆಡಿಎಸ್, ಅದರಿಂದಲೂ ಸಾಕಷ್ಟು ಲಾಭವಾಗಬಹುದು ಎಂಬ ನಿರೀಕ್ಷೆ ಇರಿಸಿಕೊಂಡಿತ್ತು. ಒಕ್ಕಲಿಗರ ಬಾಹುಳ್ಯದ ಕ್ಷೇತ್ರಗಳಲ್ಲಿ ತಮ್ಮ ಬಲವನ್ನು ಕಸಿಯಲು ಯಾರಿಗೂ ಸಾಧ್ಯವಾಗಬಹುದು ಎಂಬ ಬಲವಾದ ವಿಶ್ವಾಸವೂ ದೇವೇಗೌಡರ ಕುಟುಂಬದಲ್ಲಿತ್ತು.

ಚುನಾವಣೆಯ ಫಲಿತಾಂಶ ಜೆಡಿಎಸ್ ನಾಯಕರ ಲೆಕ್ಕಾಚಾರವನ್ನೇ ಬುಡಮೇಲು ಮಾಡಿದೆ. ಜೆಡಿಎಸ್‌ನ ಭದ್ರ ಕೋಟೆಗಳಂತಿದ್ದ ಮಂಡ್ಯ, ರಾಮನಗರ, ತುಮಕೂರು, ಕೋಲಾರ ಜಿಲ್ಲೆಗಳಲ್ಲಿ ಭಾರಿ ಹಿನ್ನಡೆಯಾಗಿದೆ. ಕುಮಾರಸ್ವಾಮಿ ಪ್ರತಿನಿಧಿಸುವ ರಾಮನಗರ ಜಿಲ್ಲೆಯಲ್ಲಿ ಮಗ ನಿಖಿಲ್ ಕುಮಾರಸ್ವಾಮಿ ಅವರನ್ನು ಗೆಲ್ಲಿಸಿಕೊಳ್ಳುವುದಕ್ಕೂ ಸಾಧ್ಯವಾಗಿಲ್ಲ.

ದೇವೇಗೌಡರ ತವರು ಜಿಲ್ಲೆ ಹಾಸನದಲ್ಲೂ ಈ ಬಾರಿ ಜೆಡಿಎಸ್‌ನ ಹಿಡಿತ ಸಡಿಲವಾಗಿದೆ. ಅಲ್ಲಿಯೂ ಜೆಡಿಎಸ್ ನಿರಾಯಾಸವಾಗಿ ಯಾವ ಕ್ಷೇತ್ರವನ್ನೂ ಗೆದ್ದಿಲ್ಲ. ಮಂಡ್ಯದಲ್ಲಿ ಜೆಡಿಎಸ್ ಬಲ ತೀರಾ ಕುಗ್ಗಿದೆ. ಕಿತ್ತೂರು ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಭಾಗದಲ್ಲೂ ಹಿಂದೆ ಇದ್ದ ಎಲ್ಲ ಕ್ಷೇತ್ರಗಳನ್ನು ಉಳಿಸಿಕೊಳ್ಳುವುದಕ್ಕೆ ಜೆಡಿಎಸ್‌ಗೆ ಸಾಧ್ಯವಾಗಿಲ್ಲ. ಕೆಲವು ಜಿಲ್ಲೆಗಳಲ್ಲಷ್ಟೇ ಜೆಡಿಎಸ್‌ಗೆ ಪ್ರಾತಿನಿಧ್ಯ ದಕ್ಕಿದೆ.

'ಜೆಡಿಎಸ್ 123 ಸ್ಥಾನಗಳನ್ನು ಗೆದ್ದು ಸ್ವತಂತ್ರವಾಗಿ ಅಧಿಕಾರ ಹಿಡಿಯಲಿದೆ' ಎಂದೇ ಕುಮಾರಸ್ವಾಮಿ ಹೇಳುತ್ತಿದ್ದರು. ಆದರೆ, ಅವರ ಚುನಾವಣಾ ತಯಾರಿ ಮೈತ್ರಿ ಸರ್ಕಾರ ರಚನೆಗೆ ಬೇಕಿರುವ ಬಲ ಹೊಂದಾಣಿಕೆಗೆ ಸೀಮಿತವಾಗಿತ್ತು ಎಂಬುದು ರಹಸ್ಯವಾಗೇನೂ ಉಳಿದಿರಲಿಲ್ಲ. ಚುನಾವಣಾ ಪ್ರಚಾರದ ಮಧ್ಯದಲ್ಲೇ ಹೇಳಿಕೆ ನೀಡಿದ್ದ ಅವರು, 'ಮೈತ್ರಿಗಾಗಿ ರಾಷ್ಟ್ರೀಯ ಪಕ್ಷಗಳ ದೂತರು ಬಂದಿದ್ದಾರೆ' ಎನ್ನುವ ಮೂಲಕ ತಮ್ಮ ಗುರಿ ಏನು ಎಂಬುದನ್ನು ಹೊರಗೆಡವಿದ್ದರು.

ಜೆಡಿಎಸ್ ಸಮ್ಮಿಶ್ರ ಸರ್ಕಾರ ರಚನೆಗಾಗಿಯೇ ಹಂಬಲಿಸುತ್ತಿದೆ ಎಂಬ ಸಂದೇಶ ಪಕ್ಷಕ್ಕೆ ಪ್ರತಿಕೂಲ ಪರಿಣಾಮ ಉಂಟು ಮಾಡಿದಂತಿದೆ. ಒಕ್ಕಲಿಗ ಮತದಾರರ ಬಾಹುಳ್ಯದ ಅನೇಕ ಕ್ಷೇತ್ರಗಳು ಜೆಡಿಎಸ್ ತೆಕ್ಕೆಯಿಂದ ಕಾಂಗ್ರೆಸ್ ಕೈಗೆ ಈ ಬಾರಿ ಜಾರಿವೆ. 'ಈ ಬಾರಿ ನನಗೆ ಅವಕಾಶ ಕೊಡಿ' ಎನ್ನುವ ಮೂಲಕ ಒಕ್ಕಲಿಗರೊಬ್ಬರು ಮುಖ್ಯಮಂತ್ರಿಯಾಗಲು ಬೆಂಬಲ ನೀಡಬೇಕೆಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಹಳೆ ಮೈಸೂರು ಭಾಗದಲ್ಲಿ ಚುನಾವಣಾ ಪ್ರಚಾರದಲ್ಲಿ ಮಾಡಿದ ಮನವಿಯೂ ಜೆಡಿಎಸ್ ಬಲ ಕುಸಿತಕ್ಕೆ ಕಾರಣವಾಗಿರುವ ಸಾಧ್ಯತೆ ಇದೆ.

ಸೋಲಿನ ಹೊಣೆ ಹೊರುತ್ತೇನೆ: ನಳಿನ್

ಬೆಂಗಳೂರು: 'ವಿಧಾನಸಭಾ ಚುನಾವಣೆಯ ಫಲಿತಾಂಶ ಅನಿರೀಕ್ಷಿತ. ಪಕ್ಷಕ್ಕೆ ಹಿನ್ನಡೆಯಾಗಿದೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷನಾಗಿ ಸೋಲಿನ ಹೊಣೆ ಹೊರುತ್ತೇನೆ' ಎಂದು ನಳಿನ್ ಕುಮಾರ್ ಕಟೀಲ್ ಪ್ರತಿಕ್ರಿಯಿಸಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಜವಾಬ್ದಾರಿಯುತ ವಿರೋಧ ಪಕ್ಷವಾಗಿ ಕಾರ್ಯನಿರ್ವಹಿಸುತ್ತೇವೆ. ಸೋಲಿಗೆ ಕಾರಣಗಳನ್ನು ವಿಶ್ಲೇಷಿಸುತ್ತೇವೆ ಎಂದು ಹೇಳಿದರು.

ಸದನಕ್ಕೆ ಬರುವ ಅತಿ ಹಿರಿಯರು
ಶಾಮನೂರು ಶಿವಶಂಕರಪ್ಪ (92)
ಜಿ. ಹಂಪಯ್ಯ ನಾಯಕ್ (84)
ಎಂ.ವೈ. ಪಾಟೀಲ್ (82)
ಎಚ್‌.ವೈ. ಮೇಟಿ (77)
ಆರ್‌.ವಿ. ದೇಶಪಾಂಡೆ (76)

ಚಿಕ್ಕವಯಸ್ಸಿನ ಶಾಸಕರು
ದರ್ಶನ್ ಧ್ರುವನಾರಾಯಣ (28)
ಧೀರಜ್ ಮುನಿರಾಜು (31)
ನಾರಾ ಭರತ್‌ರೆಡ್ಡಿ (33)
ಡಾ. ಚಂದ್ರು ಲಮಾಣಿ (34)
ಅವಿನಾಶ್ ಜಾಧವ್ (34)
ಡಾ. ಮಂಥರ್‌ಗೌಡ (38)
ಪ್ರದೀಪ್ ಈಶ್ವರ್ (38)
ಪ್ರಿಯಕೃಷ್ಣ (39)
ಜಿ.ಡಿ. ಹರೀಶ್‌ಗೌಡ (36)
ಸ್ವರೂಪ್ ಪ್ರಕಾಶ್ (40)

ಮುಖ್ಯಮಂತ್ರಿ ಆಗಿದ್ದವರು
ಎಚ್‌.ಡಿ. ಕುಮಾರಸ್ವಾಮಿ
ಸಿದ್ದರಾಮಯ್ಯ
ಬಸವರಾಜ ಬೊಮ್ಮಾಯಿ

ಆಯ್ಕೆಯಾದ ಮಾಜಿ ಮುಖ್ಯಮಂತ್ರಿ ಮಕ್ಕಳು
ಬಸವರಾಜ ಬೊಮ್ಮಾಯಿ
ಎಚ್‌.ಡಿ. ಕುಮಾರಸ್ವಾಮಿ
ಎಚ್‌.ಡಿ. ರೇವಣ್ಣ
ಬಿ.ವೈ. ವಿಜಯೇಂದ್ರ
ಮಧು ಬಂಗಾರಪ್ಪ
ದಿನೇಶ ಗುಂಡೂರಾವ್
ಅಜಯ್ ಧರ್ಮಸಿಂಗ್

ಸೋತ ಮಾಜಿ, ಹಾಲಿ ಸ್ಪೀಕರ್‌ಗಳು
ವಿಶ್ವೇಶ್ವರ ಹೆಗಡೆ ಕಾಗೇರಿ
ಕೆ.ಜಿ. ಬೋಪಯ್ಯ
ಜಗದೀಶ ಶೆಟ್ಟರ್
ಕೆ.ಆರ್. ರಮೇಶ್ ಕುಮಾರ್

ಬಿಜೆಪಿ ಕಚೇರಿ, ಬೊಮ್ಮಾಯಿ ಮನೆ ಕಾರ್ಯಕರ್ತರಿಲ್ಲದೆ ಭಣ ಭಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾ ಚುನಾವಣೆ ಫಲಿತಾಂಶ ಹೊರಬಿದ್ದು ಕಾಂಗ್ರೆಸ್ ಪಕ್ಷ ಮುನ್ನಡೆ ಸಾಧಿಸುತ್ತಿದ್ದಂತೆ, ನಗರದಲ್ಲಿರುವ ಬಿಜೆಪಿ ಮುಖ್ಯ ಕಚೇರಿ ಹಾಗೂ ಮುಖಂಡರ ಮನೆಗಳು ಶನಿವಾರ ಭಣ ಭಣ ಎನ್ನುತ್ತಿದ್ದವು. ಬಿಜೆಪಿಗೆ ತೀವ್ರ ಮುಖಭಂಗವಾಗಿದ್ದರಿಂದ ಕಚೇರಿ ಹಾಗೂ ಮುಖಂಡರ ಮನೆಯತ್ತ ಕಾರ್ಯಕರ್ತರು ಸುಳಿಯಲಿಲ್ಲ.

ಮಲ್ಲೇಶ್ವರದಲ್ಲಿರುವ ಬಿಜೆಪಿ ಕಚೇರಿ 'ಜಗನ್ನಾಥ್ ಭವನ'ದ ಮುಖ್ಯ ಬಾಗಿಲನ್ನು ಬೆಳಿಗ್ಗೆಯಿಂದ ಬಂದ್ ಮಾಡಲಾಗಿತ್ತು. ಕೆಲಸಗಾರರು ಮಾತ್ರ ಒಳಗಿದ್ದರು. ಮಧ್ಯಾಹ್ನ ಕಾಂಗ್ರೆಸ್‌ಗೆ ನಿಖರ ಬಹುಮತ ಬರುತ್ತಿದ್ದಂತೆ, ಕೆಲಸಗಾರರು ಒಬ್ಬೊಬ್ಬರಾಗಿ ಕಾಲ್ಕಿತ್ತರು. ಸಂಜೆ ಕೆಲ ಮುಖಂಡರು ಕಚೇರಿಗೆ ಬಂದು ತರಾತುರಿಯಲ್ಲಿ ಹೊರಟು ಹೋದರು. ಆದರೆ, ಅವರ ಜೊತೆಗಿನ ಕಾರ್ಯಕರ್ತರು ತೀರಾ ಕಡಿಮೆ ಇದ್ದರು.

ಆರ್‌.ಟಿ. ನಗರ ಹಾಗೂ ರೇಸ್‌ಕೋರ್ಸ್ ರಸ್ತೆಯಲ್ಲಿರುವ ಬಸವರಾಜ ಬೊಮ್ಮಾಯಿ ಅವರ ಎರಡೂ ಮನೆಗಳ ಆವರಣ ಬಿಕೋ ಎನ್ನುತ್ತಿತ್ತು. ಡಾಲರ್ಸ್ ಕಾಲೊನಿಯಲ್ಲಿರುವ ಬಿ.ಎಸ್. ಯಡಿಯೂರಪ್ಪ ಮನೆ ಬಳಿಯೂ ಬೆಳಿಗ್ಗೆಯಿಂದ ಕಾರ್ಯಕರ್ತರ ಸುಳಿವು ಇರಲಿಲ್ಲ.

ಬೊಮ್ಮಾಯಿ ಮನೆ ಮುಂದೆ ಭದ್ರತೆಗಾಗಿ ನಿಯೋಜನೆಗೊಂಡಿದ್ದ ಪೊಲೀಸರು ಮಾತ್ರ ಕಾಣಿಸಿದರು. ಪೊಲೀಸ್ ಜೀಪು ನಿಂತಿತ್ತು. ಕರ್ತವ್ಯ ನಿರತ ಪೊಲೀಸರು, ಚುನಾವಣೆ ಫಲಿತಾಂಶದ ಕುತೂಹಲಕ್ಕಾಗಿ ಮೊಬೈಲ್ ಮೊರೆ ಹೋಗಿದ್ದರು.

ಚುನಾವಣೆ ಪ್ರಚಾರ ಆರಂಭಿಸಿದ ನಂತರ ಕೆಲ ಬಾರಿ ಮಾತ್ರ ಬೊಮ್ಮಾಯಿ ಅವರು ಬೆಂಗಳೂರಿಗೆ ಬಂದಿದ್ದರು. ಉಳಿದಂತೆ ಹುಬ್ಬಳ್ಳಿ– ಧಾರವಾಡ, ಶಿಗ್ಗಾಂವಿ ಕ್ಷೇತ್ರಗಳಲ್ಲಿ ಹೆಚ್ಚು ಪ್ರಚಾರ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು. ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಪ್ರತಿ ದಿನ ಜನರಿಂದ ಗಿಜಿಗಿಡುತ್ತಿದ್ದ ಬೊಮ್ಮಾಯಿ ಮನೆ ಶನಿವಾರ ಭಣಗುಡುತ್ತಿತ್ತು.



ಮಲ್ಲೇಶ್ವರದಲ್ಲಿರುವ ಬಿಜೆಪಿ ಮುಖ್ಯ ಕಚೇರಿಯ ಪ್ರವೇಶ ಬಾಗಿಲನ್ನು ಶನಿವಾರ ಬಂದ್ ಮಾಡಲಾಗಿತ್ತು

ದೇವೇಗೌಡರ ಮನೆ ಬಳಿಯೂ ಸುಳಿಯದ ಕಾರ್ಯಕರ್ತರು: ಚುನಾವಣೆಯಲ್ಲಿ ಜೆಡಿಎಸ್ ಸಹ ಹಿನ್ನಡೆ ಸಾಧಿಸಿದೆ. ಪದ್ಮನಾಭನಗರದಲ್ಲಿರುವ ಜೆಡಿಎಸ್ ವರಿಷ್ಠ ಎಚ್. ಡಿ.ದೇವೇಗೌಡ ಅವರ ಮನೆ ಬಳಿಯೂ ಹೆಚ್ಚು ಕಾರ್ಯಕರ್ತರು ಸುಳಿಯಲಿಲ್ಲ.

ಗೆಲುವು ಕಂಡ ಅಪ್ಪ ಮಕ್ಕಳು					
ತಂದೆ	ಕ್ಷೇತ್ರ	ಪಕ್ಷ	ಮಕ್ಕಳು	ಕ್ಷೇತ್ರ	ಪಕ್ಷ
ಕೆ.ಎಚ್.ಮುನಿಯಪ್ಪ	ದೇವನಹಳ್ಳಿ	ಕಾಂಗ್ರೆಸ್	ಎಂ.ರೂಪಕಲಾ	ಕೆಜಿಎಫ್	ಕಾಂಗ್ರೆಸ್
ಶಾಮನೂರು ಶಿವಶಂಕರಪ್ಪ	ದಾವಣಗೆರೆ ದಕ್ಷಿಣ	ಕಾಂಗ್ರೆಸ್	ಎಸ್.ಎಸ್. ಮಲ್ಲಿಕಾರ್ಜುನ್	ದಾವಣಗೆರೆ ಉತ್ತರ	ಕಾಂಗ್ರೆಸ್
ಎ.ಮಂಜು	ಅರಕಲಗೂಡು	ಜೆಡಿಎಸ್	ಡಾ.ಮಂತರ್‌ಗೌಡ	ಮಡಿಕೇರಿ	ಕಾಂಗ್ರೆಸ್
ಜಿ.ಟಿ.ದೇವೇಗೌಡ	ಚಾಮುಂಡೇಶ್ವರಿ	ಜೆಡಿಎಸ್	ಜಿ.ಡಿ.ಹರೀಶ್ ಗೌಡ	ಹುಣಸೂರು	ಜೆಡಿಎಸ್
ಎಂ.ಕೃಷ್ಣಪ್ಪ	ವಿಜಯನಗರ	ಕಾಂಗ್ರೆಸ್	ಪ್ರಿಯಕೃಷ್ಣ	ಗೋವಿಂದರಾಜ ನಗರ	ಕಾಂಗ್ರೆಸ್

ಬಿಜೆಪಿ ಶೂನ್ಯ ಸಾಧನೆಯ ಜಿಲ್ಲೆಗಳು

• ಕೊಡಗು • ಕೋಲಾರ • ಮಂಡ್ಯ • ಚಾಮರಾಜನಗರ • ಚಿಕ್ಕಮಗಳೂರು • ಯಾದಗಿರಿ • ಬಳ್ಳಾರಿ • ರಾಮನಗರ • ಚಿಕ್ಕಬಳ್ಳಾಪುರ

'ಕೋಮುವಾದಿ ಶಕ್ತಿಗಳಿಗೆ ಮಣೆ ಹಾಕದ ಜನರು'

ಬೆಂಗಳೂರು: 'ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ರಾಜ್ಯದ ಜನರು ಕೋಮುವಾದಿ ಶಕ್ತಿಗಳಿಗೆ ಮಣೆ ಹಾಕದೆ, ಬಹುತ್ವ ಭಾರತದ ಘನತೆಯನ್ನು ಹೆಚ್ಚಿಸಿದ್ದಾರೆ. ಸೌಹಾರ್ದ ಕರ್ನಾಟಕದ ಅಸ್ಮಿತೆಯನ್ನು ಕಾಪಾಡಿದ್ದಾರೆ' ಎಂದು ಸಾಹಿತಿಗಳು ಹಾಗೂ ಚಿಂತಕರು ಅಭಿಮತ ವ್ಯಕ್ತಪಡಿಸಿದ್ದಾರೆ.

ಸಮಾನ ಮನಸ್ಕರ ಒಕ್ಕೂಟದ ಕೆ. ಮರುಳಸಿದ್ದಪ್ಪ, ಜಿ. ರಾಮಕೃಷ್ಣ, ಪ್ರೊ.ಎಸ್. ಜಿ. ಸಿದ್ಧರಾಮಯ್ಯ, ವಿಜಯಾ, ನಿರಂಜನಾರಾಧ್ಯ ವಿ.ಪಿ., ಶ್ರೀಪಾದ ಭಟ್, ಬಂಜಗೆರೆ ಜಯಪ್ರಕಾಶ್, ರಾಜೇಂದ್ರ ಚೆನ್ನಿ, ಕೆ.ಎಸ್. ವಿಮಲಾ, ಜಾಣಗೆರೆ ವೆಂಕಟರಾಮಯ್ಯ, ಎಲ್‌.ಎನ್. ಮುಕುಂದರಾಜ್, ಲೀಲಾ ಸಂಪಿಗೆ, ಡಾ. ವಸುಂಧರಾ ಭೂಪತಿ ಹಾಗೂ ಕೆ. ಷರೀಫಾ ಜಂಟಿ ಹೇಳಿಕೆ ಬಿಡುಗಡೆ ಮಾಡಿದ್ದಾರೆ. 'ಚುನಾವಣೆಯಲ್ಲಿ ಗೆಲುವು ಸಾಧಿಸಿರುವ ಪಕ್ಷ ಜನರ ನಿರೀಕ್ಷೆಗಳನ್ನು ಹುಸಿಗೊಳಿಸದೆ, ಉತ್ತಮ ಆಡಳಿತವನ್ನು ನೀಡಬೇಕು. ಸೌಹಾರ್ದ ಕರ್ನಾಟಕದ ಬೆಳವಣಿಗೆಗೆ ನೈತಿಕ ಹೊಣೆಗಾರಿಕೆಯಿಂದ ದುಡಿಯಬೇಕು. ಇದು ಜನರ ಪರವಾಗಿ ನಮ್ಮ ಒಕ್ಕೂಟದ ಆಗ್ರಹ' ಎಂದು ಹೇಳಿದ್ದಾರೆ.

ಜೆಡಿಎಸ್‌ಗೆ ಅಧಿಕೃತ ಪಕ್ಷದ ಮಾನ್ಯತೆ ಇಲ್ಲ?

ಬೆಂಗಳೂರು: ವಿಧಾನಸಭೆಯಲ್ಲಿ ಈ ಬಾರಿ ಜೆಡಿಎಸ್‌ಗೆ ಅಧಿಕೃತ ಪಕ್ಷದ ಮಾನ್ಯತೆ ಸಿಗುವ ಸಾಧ್ಯತೆ ಇಲ್ಲ.

224 ಕ್ಷೇತ್ರಗಳಲ್ಲಿ 22 ಸ್ಥಾನಗಳನ್ನು ಗೆದ್ದಿದ್ದರೆ ಈ ಮಾನ್ಯತೆ ಸಿಗುತ್ತಿತ್ತು. ಒಟ್ಟು ಸ್ಥಾನಗಳಲ್ಲಿ ಹತ್ತನೇ ಒಂದರಷ್ಟು ಸ್ಥಾನಗಳನ್ನು ಗೆಲ್ಲಬೇಕಿತ್ತು. ಆ ಪ್ರಯತ್ನದಲ್ಲಿ ಜೆಡಿಎಸ್ ವಿಫಲವಾಗಿದೆ.

'ನಿಯಮದ ಪ್ರಕಾರ ಅಧಿಕೃತ ಪಕ್ಷದ ಸ್ಥಾನ ಸಿಗುವುದಿಲ್ಲ. ಆದರೆ, ಜೆಡಿಎಸ್ ರಾಜ್ಯದ ಅತ್ಯಂತ ಹಳೆಯ ಪಕ್ಷವಾಗಿರುವುದು ಮಾತ್ರವಲ್ಲದೇ, ಆ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಪ್ರಧಾನಿ ಆಗಿದ್ದವರು. ಮುಂದೆ ಬರುವ ವಿಧಾನ ಸಭಾಧ್ಯಕ್ಷರು ಸೌಜನ್ಯದ ಕಾರಣಕ್ಕೆ ಅಧಿಕೃತ ಪಕ್ಷದ ಮಾನ್ಯತೆ ಮತ್ತು ಕೊಠಡಿಯನ್ನು ನೀಡಬಹುದಾಗಿದೆ' ಎಂದು ವಿಧಾನಸಭಾ ಸಚಿವಾಲಯದ ಮೂಲಗಳು ಹೇಳಿವೆ.

ಕಿತ್ತೂರು ಕರ್ನಾಟಕ- ವಿಜೇತರ ವಿವರ

ಬೆಳಗಾವಿ ಜಿಲ್ಲೆ – 18

ನಿಪ್ಪಾಣಿ
ಶಶಿಕಲಾ ಜೊಲ್ಲೆ 73,348
ಗೆಲುವಿನ ಅಂತರ 7,292
ಪ್ರತಿಸ್ಪರ್ಧಿ– ಉತ್ತಮ ಪಾಟೀಲ (ಎನ್‌ಸಿಪಿ)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಚಿಕ್ಕೋಡಿ- ಸದಲಗಾ
ಗಣೇಶ ಹುಕ್ಕೇರಿ 1,28,349
ಗೆಲುವಿನ ಅಂತರ 78,509
ಪ್ರತಿಸ್ಪರ್ಧಿ:ರಮೇಶ ಕತ್ತಿ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಕಾಂಗ್ರೆಸ್)**

ಅಥಣಿ
ಲಕ್ಷ್ಮಣ ಸವದಿ 1,31,404
ಗೆಲುವಿನ ಅಂತರ 76,122
ಪ್ರತಿಸ್ಪರ್ಧಿ: ಮಹೇಶ ಕುಮಠಳ್ಳಿ (ಬಿಜೆಪಿ)
2018ರಲ್ಲಿ ಗೆದ್ದ ಪಕ್ಷ **(ಕಾಂಗ್ರೆಸ್)** 2019ರಲ್ಲಿ **(ಬಿಜೆಪಿ)**

ಕಾಗವಾಡ
ರಾಜು ಕಾಗೆ 83,387
ಗೆಲುವಿನ ಅಂತರ 8,827
ಪ್ರತಿಸ್ಪರ್ಧಿ–ಶ್ರೀಮಂತ ಪಾಟೀಲ
2018ರಲ್ಲಿ ಗೆದ್ದ ಪಕ್ಷ **(ಕಾಂಗ್ರೆಸ್)** 2019ರಲ್ಲಿ **(ಬಿಜೆಪಿ)**

ಕುಡಚಿ (ಎಸ್‌ಸಿ)
ಮಹೇಂದ್ರ ತಮ್ಮಣ್ಣವರ 85,321
ಗೆಲುವಿನ ಅಂತರ 25,243
ಪ್ರತಿಸ್ಪರ್ಧಿ: ಪಿ.ರಾಜೀವ್ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ರಾಯಬಾಗ (ಎಸ್‌ಸಿ)
ದುರ್ಯೋಧನ ಐಹೊಳೆ 57,500
ಗೆಲುವಿನ ಅಂತರ 2,570
ಪ್ರತಿಸ್ಪರ್ಧಿ: ಶಂಭು ಕಲ್ಲೋಳಕರ (ಪಕ್ಷೇತರ)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಹುಕ್ಕೇರಿ
ನಿಖಿಲ್ ಕತ್ತಿ 1,03,574
ಗೆಲುವಿನ ಅಂತರ 42,551
ಪ್ರತಿಸ್ಪರ್ಧಿ: ಎ.ಬಿ.ಪಾಟೀಲ(ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಅರಭಾವಿ
ಬಾಲಚಂದ್ರ ಜಾರಕಿಹೊಳಿ 1,14,242
ಗೆಲುವಿನ ಅಂತರ 70,568
ಪ್ರತಿಸ್ಪರ್ಧಿ– ಭೀಮಪ್ಪ ಗಡಾದ (ಪಕ್ಷೇತರ)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಗೋಕಾಕ
ರಮೇಶ ಜಾರಕಿಹೊಳಿ 1,05,313
ಗೆಲುವಿನ ಅಂತರ 25,412
ಪ್ರತಿಸ್ಪರ್ಧಿ– ಡಾ.ಮಹಾಂತೇಶ ಕಡಾಡಿ (ಕಾಂಗ್ರೆಸ್)
2018ರಲ್ಲಿ ಗೆದ್ದ ಪಕ್ಷ **(ಕಾಂಗ್ರೆಸ್)** 2019ರಲ್ಲಿ **(ಬಿಜೆಪಿ)**

ಯಮಕನಮರಡಿ (ಎಸ್‌ಟಿ)
ಸತೀಶ ಜಾರಕಿಹೊಳಿ 1,00,290
ಗೆಲುವಿನ ಅಂತರ 57,211
ಪ್ರತಿಸ್ಪರ್ಧಿ– ಬಸವರಾಜ ಹುಂದ್ರಿ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಕಾಂಗ್ರೆಸ್)**

ಬೆಳಗಾವಿ ಉತ್ತರ
ಆಸೀಫ್ (ರಾಜು) ಸೇಠ್ 69,184
ಗೆಲುವಿನ ಅಂತರ 4,231
ಪ್ರತಿಸ್ಪರ್ಧಿ– ಡಾ.ರವಿ ಪಾಟೀಲ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಬೆಳಗಾವಿ ದಕ್ಷಿಣ
ಅಭಯ ಪಾಟೀಲ 77,094
ಗೆಲುವಿನ ಅಂತರ 12,308
ಪ್ರತಿಸ್ಪರ್ಧಿ– ರಮಾಕಾಂತ ಕೊಂಡೊಸ್ಕರ್ (ಎಂಇಎಸ್)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಬೆಳಗಾವಿ ಗ್ರಾಮಾಂತರ
ಲಕ್ಷ್ಮೀ ಹೆಬ್ಬಾಳಕರ 1,07,619
ಗೆಲುವಿನ ಅಂತರ 56,016
ಪ್ರತಿಸ್ಪರ್ಧಿ: ನಾಗೇಶ ಮನ್ನೋಳಕರ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಕಾಂಗ್ರೆಸ್)**

ಖಾನಾಪುರ
ವಿಠಲ ಹಲಗೇಕರ 91,834
ಗೆಲುವಿನ ಅಂತರ 54,629
ಪ್ರತಿಸ್ಪರ್ಧಿ: ಡಾ.ಅಂಜಲಿ ನಿಂಬಾಳಕರ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ **(ಕಾಂಗ್ರೆಸ್)**

ಚನ್ನಮ್ಮನ ಕಿತ್ತೂರು
ಬಾಬಾಸಾಹೇಬ ಪಾಟೀಲ 77,536
ಗೆಲುವಿನ ಅಂತರ 2,993
ಪ್ರತಿಸ್ಪರ್ಧಿ– ಮಹಾಂತೇಶ ದೊಡ್ಡಗೌಡರ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಬೈಲಹೊಂಗಲ
ಮಹಾಂತೇಶ ಕೌಜಲಗಿ 58,408
ಗೆಲುವಿನ ಅಂತರ 2,778
ಪ್ರತಿಸ್ಪರ್ಧಿ– ಜಗದೀಶ ಮೆಟಗುಡ್ಡ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಕಾಂಗ್ರೆಸ್)**

ಸವದತ್ತಿ ಯಲ್ಲಮ್ಮ
ವಿಶ್ವಾಸ ವೈದ್ಯ 71,224
ಗೆಲುವಿನ ಅಂತರ 14,695
ಪ್ರತಿಸ್ಪರ್ಧಿ: ರತ್ನಾ ಮಾಮನಿ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ರಾಮದುರ್ಗ
ಅಶೋಕ ಪಟ್ಟಣ 80,294
ಗೆಲುವಿನ ಅಂತರ 11,730
ಪ್ರತಿಸ್ಪರ್ಧಿ– ಚಿಕ್ಕರೇವಣ್ಣ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಬಾಗಲಕೋಟೆ ಜಿಲ್ಲೆ – 7

ಮುಧೋಳ (ಎಸ್‌ಸಿ)
ಆರ್.ಬಿ. ತಿಮ್ಮಾಪುರ 77,298
ಗೆಲುವಿನ ಅಂತರ 17,335
ಪ್ರತಿಸ್ಪರ್ಧಿ: ಗೋವಿಂದ ಕಾರಜೋಳ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ತೇರದಾಳ
ಸಿದ್ದು ಸವದಿ 77,265
ಗೆಲುವಿನ ಅಂತರ 10,745
ಪ್ರತಿಸ್ಪರ್ಧಿ: ಸಿದ್ದು ಕೊಣ್ಣೂರ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಜಮಖಂಡಿ
ಜಗದೀಶ ಗುಡಗುಂಟಿ 81,937
ಗೆಲುವಿನ ಅಂತರ 4,716
ಪ್ರತಿಸ್ಪರ್ಧಿ: ಆನಂದ ನ್ಯಾಮಗೌಡ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ **(ಕಾಂಗ್ರೆಸ್)**

ಬೀಳಗಿ
ಜೆ.ಟಿ. ಪಾಟೀಲ 95,652
ಗೆಲುವಿನ ಅಂತರ 11,129
ಪ್ರತಿಸ್ಪರ್ಧಿ: ಮುರುಗೇಶ ನಿರಾಣಿ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಬಾದಾಮಿ
ಭೀಮಸೇನ ಚಿಮ್ಮನಕಟ್ಟಿ 65,845
ಗೆಲುವಿನ ಅಂತರ 9,725
ಪ್ರತಿಸ್ಪರ್ಧಿ: ಶಾಂತಗೌಡ ಪಾಟೀಲ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಕಾಂಗ್ರೆಸ್)**

ಬಾಗಲಕೋಟೆ
ಎಚ್.ವೈ. ಮೇಟಿ 79,336
ಗೆಲುವಿನ ಅಂತರ 5,878
ಪ್ರತಿಸ್ಪರ್ಧಿ: ವೀರಣ್ಣ ಚರಂತಿಮಠ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಹುನಗುಂದ
ವಿಜಯಾನಂದ ಕಾಶಪ್ಪನವರ 78,434
ಗೆಲುವಿನ ಅಂತರ 30,007
ಪ್ರತಿಸ್ಪರ್ಧಿ: ದೊಡ್ಡನಗೌಡ ಪಾಟೀಲ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ವಿಜಯಪುರ ಜಿಲ್ಲೆ – 8

ಮುದ್ದೇಬಿಹಾಳ
ಸಿ.ಎಸ್.ನಾಡಗೌಡ 79,483
ಗೆಲುವಿನ ಅಂತರ 7,637
ಪ್ರತಿಸ್ಪರ್ಧಿ:ಎ.ಎಸ್.ಪಾಟೀಲ ನಡಹಳ್ಳಿ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ದೇವರಹಿಪ್ಪರಗಿ
ಭೀಮನಗೌಡ (ರಾಜುಗೌಡ) **ಪಾಟೀಲ** 65,952
ಗೆಲುವಿನ ಅಂತರ 20,175
ಪ್ರತಿಸ್ಪರ್ಧಿ: ಸೋಮನಗೌಡ ಪಾಟೀಲ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಬಸವನ ಬಾಗೇವಾಡಿ
ಶಿವಾನಂದ ಪಾಟೀಲ 68,126
ಗೆಲುವಿನ ಅಂತರ 24,863
ಪ್ರತಿಸ್ಪರ್ಧಿ:ಎಸ್.ಕೆ.ಬೆಳ್ಳುಬ್ಬಿ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಕಾಂಗ್ರೆಸ್)**

ಬಬಲೇಶ್ವರ
ಎಂ.ಬಿ.ಪಾಟೀಲ 93,923
ಗೆಲುವಿನ ಅಂತರ 15,216
ಪ್ರತಿಸ್ಪರ್ಧಿ:ವಿಜುಗೌಡ ಪಾಟೀಲ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಕಾಂಗ್ರೆಸ್)**

ವಿಜಯಪುರ ನಗರ
ಬಸನಗೌಡ ಪಾಟೀಲ ಯತ್ನಾಳ 94,201
ಗೆಲುವಿನ ಅಂತರ 8,223
ಪ್ರತಿಸ್ಪರ್ಧಿ:ಅಬ್ದುಲ್ ಹಮೀದ್ ಮುಶ್ರೀಫ್ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ನಾಗಠಾಣ (ಎಸ್‌ಸಿ)
ವಿಠಲ ಕಟಕಧೋಂಡ 78,990
ಗೆಲುವಿನ ಅಂತರ 30,815
ಪ್ರತಿಸ್ಪರ್ಧಿ:ಸಂಜೀವ ಐಹೊಳೆ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಜೆಡಿಎಸ್)**

ಇಂಡಿ
ಯಶವಂತರಾಯಗೌಡ ಪಾಟೀಲ 71,785
ಗೆಲುವಿನ ಅಂತರ 10,329
ಪ್ರತಿಸ್ಪರ್ಧಿ: ಬಿ.ಡಿ.ಪಾಟೀಲ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ **(ಕಾಂಗ್ರೆಸ್)**

ಸಿಂದಗಿ
ಅಶೋಕ ಮನಗೂಳಿ 87,621
ಗೆಲುವಿನ ಅಂತರ 7,808
ಪ್ರತಿಸ್ಪರ್ಧಿ:ರಮೇಶ ಭೂಸನೂರ (ಬಿಜೆಪಿ)
2018ರಲ್ಲಿ ಗೆದ್ದ ಪಕ್ಷ:**(ಜೆಡಿಎಸ್)** 2021ರಲ್ಲಿ **(ಬಿಜೆಪಿ)**

ಧಾರವಾಡ ಜಿಲ್ಲೆ – 7

ನವಲಗುಂದ
ಎನ್.ಎಚ್.ಕೋನರಡ್ಡಿ 86,081
ಗೆಲುವಿನ ಅಂತರ 22,199
ಪ್ರತಿಸ್ಪರ್ಧಿ: ಶಂಕರ ಪಾಟೀಲ ಮುನೇನಕೊಪ್ಪ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಕುಂದಗೋಳ
ಎಂ.ಆರ್.ಪಾಟೀಲ 76,105
ಗೆಲುವಿನ ಅಂತರ 35,341
ಪ್ರತಿಸ್ಪರ್ಧಿ: ಕುಸುಮಾವತಿ ಶಿವಳ್ಳಿ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ **(ಕಾಂಗ್ರೆಸ್)**

ಧಾರವಾಡ
ವಿನಯ ಕುಲಕರ್ಣಿ 89,333
ಗೆಲುವಿನ ಅಂತರ 18,037
ಪ್ರತಿಸ್ಪರ್ಧಿ: ಅಮೃತ ದೇಸಾಯಿ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಹು – ಧಾ ಪೂರ್ವ (ಎಸ್‌ಸಿ)
ಪ್ರಸಾದ ಅಬ್ಬಯ್ಯ 85,426
ಗೆಲುವಿನ ಅಂತರ 32,370
ಪ್ರತಿಸ್ಪರ್ಧಿ: ಡಾ. ಕ್ರಾಂತಿ ಕಿರಣ್ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಕಾಂಗ್ರೆಸ್)**

ಹುಬ್ಬಳ್ಳಿ- ಧಾರವಾಡ ಕೇಂದ್ರ
ಮಹೇಶ ಟೆಂಗಿನಕಾಯಿ 95,064
ಗೆಲುವಿನ ಅಂತರ 34,289
ಪ್ರತಿಸ್ಪರ್ಧಿ: ಜಗದೀಶ ಶೆಟ್ಟರ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಹುಬ್ಬಳ್ಳಿ ಧಾರವಾಡ ಪಶ್ಚಿಮ
ಅರವಿಂದ ಬೆಲ್ಲದ 1,01,410
ಗೆಲುವಿನ ಅಂತರ 38,693
ಪ್ರತಿಸ್ಪರ್ಧಿ: ದೀಪಕ ಚಿಂಚೋರೆ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಕಲಘಟಗಿ
ಸಂತೋಷ ಲಾಡ್ 85,761
ಗೆಲುವಿನ ಅಂತರ 14,357
ಪ್ರತಿಸ್ಪರ್ಧಿ: ನಾಗರಾಜ ಛಬ್ಬಿ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಗದಗ ಜಿಲ್ಲೆ – 4

ಶಿರಹಟ್ಟಿ (ಎಸ್‌ಸಿ)
ಡಾ.ಚಂದ್ರು ಲಮಾಣಿ 74,489
ಗೆಲುವಿನ ಅಂತರ 28,520
ಪ್ರತಿಸ್ಪರ್ಧಿ;ರಾಮಕೃಷ್ಣ ದೊಡ್ಡಮನಿ (ಪಕ್ಷೇತರ)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಗದಗ
ಎಚ್.ಕೆ.ಪಾಟೀಲ 89,958
ಗೆಲುವಿನ ಅಂತರ 15,130
ಪ್ರತಿಸ್ಪರ್ಧಿ;ಅನಿಲ್ ಮೆಣಸಿನಕಾಯಿ(ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಕಾಂಗ್ರೆಸ್)**

ರೋಣ
ಜಿ.ಎಸ್.ಪಾಟೀಲ 94,865
ಗೆಲುವಿನ ಅಂತರ 24,688
ಪ್ರತಿಸ್ಪರ್ಧಿ;ಕಳಕಪ್ಪ ಬಂಡಿ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ನರಗುಂದ
ಸಿ.ಸಿ.ಪಾಟೀಲ 72,835
ಗೆಲುವಿನ ಅಂತರ 1,791
ಪ್ರತಿಸ್ಪರ್ಧಿ;ಬಿ.ಆರ್.ಯಾವಗಲ್ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಹಾವೇರಿ ಜಿಲ್ಲೆ – 6

ಹಾನಗಲ್
ಶ್ರೀನಿವಾಸ ಮಾನೆ 94,590
ಗೆಲುವಿನ ಅಂತರ 21,945
ಪ್ರತಿಸ್ಪರ್ಧಿ: ಶಿವರಾಜ ಸಜ್ಜನರ (ಬಿಜೆಪಿ)
2018ರಲ್ಲಿ ಗೆದ್ದ ಪಕ್ಷ: **(ಬಿಜೆಪಿ)** 2021ರಲ್ಲಿ **(ಕಾಂಗ್ರೆಸ್)**

ಶಿಗ್ಗಾವಿ
ಬಸವರಾಜ ಬೊಮ್ಮಾಯಿ 1,00,016
ಗೆಲುವಿನ ಅಂತರ 35,978
ಪ್ರತಿಸ್ಪರ್ಧಿ;ಯಾಸಿರ್ ಖಾನ್ ಪಠಾಣ್ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಹಾವೇರಿ (ಎಸ್‌ಸಿ)
ರುದ್ರಪ್ಪ ಲಮಾಣಿ 93,827
ಗೆಲುವಿನ ಅಂತರ 11,915
ಪ್ರತಿಸ್ಪರ್ಧಿ: ಗವಿಸಿದ್ದಪ್ಪ ದ್ಯಾಮಣ್ಣವರ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಬ್ಯಾಡಗಿ
ಬಸವರಾಜ ಶಿವಣ್ಣನವರ 97,740
ಗೆಲುವಿನ ಅಂತರ 23,841
ಪ್ರತಿಸ್ಪರ್ಧಿ;ವಿರೂಪಾಕ್ಷಪ್ಪ ಬಳ್ಳಾರಿ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಹಿರೇಕೆರೂರು
ಯು.ಬಿ.ಬಣಕಾರ 85,378
ಗೆಲುವಿನ ಅಂತರ 15,020
ಪ್ರತಿಸ್ಪರ್ಧಿ;ಬಿ.ಸಿ.ಪಾಟೀಲ (ಬಿಜೆಪಿ)
2018ರಲ್ಲಿ ಗೆದ್ದ ಪಕ್ಷ: **(ಕಾಂಗ್ರೆಸ್)** 2019ರಲ್ಲಿ **(ಬಿಜೆಪಿ)**

ರಾಣೆಬೆನ್ನೂರು
ಪ್ರಕಾಶ ಕೋಳಿವಾಡ 71,830
ಗೆಲುವಿನ ಅಂತರ 9,800
ಪ್ರತಿಸ್ಪರ್ಧಿ; ಅರುಣಕುಮಾರ ಗುತ್ತೂರು (ಬಿಜೆಪಿ)
2018ರಲ್ಲಿ ಗೆದ್ದ ಪಕ್ಷ: **(ಕೆಪಿಜೆಪಿ)** 2019ರಲ್ಲಿ **(ಬಿಜೆಪಿ)**

ಉತ್ತರ ಕನ್ನಡ ಜಿಲ್ಲೆ – 6

ಹಳಿಯಾಳ
ಆರ್.ವಿ.ದೇಶಪಾಂಡೆ 57,240
ಗೆಲುವಿನ ಅಂತರ 3,623
ಪ್ರತಿ ಸ್ಪರ್ಧಿ:ಸುನೀಲ ಹೆಗಡೆ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಕಾಂಗ್ರೆಸ್)**

ಕಾರವಾರ
ಸತೀಶ ಸೈಲ್ 77,445
ಗೆಲುವಿನ ಅಂತರ 2,138
ಪ್ರತಿ ಸ್ಪರ್ಧಿ:ರೂಪಾಲಿ ನಾಯ್ಕ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಕುಮಟಾ
ದಿನಕರ ಶೆಟ್ಟಿ 59,966
ಗೆಲುವಿನ ಅಂತರ 663
ಪ್ರತಿ ಸ್ಪರ್ಧಿ:ಸೂರಜ್ ನಾಯ್ಕ ಸೋನಿ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಭಟ್ಕಳ
ಮಂಕಾಳ ವೈದ್ಯ 1,00,442
ಗೆಲುವಿನ ಅಂತರ 32,671
ಪ್ರತಿ ಸ್ಪರ್ಧಿ:ಸುನೀಲ ನಾಯ್ಕ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಶಿರಸಿ
ಭೀಮಣ್ಣ ನಾಯ್ಕ 76,887
ಗೆಲುವಿನ ಅಂತರ 8,172
ಪ್ರತಿ ಸ್ಪರ್ಧಿ:ವಿಶ್ವೇಶ್ವರ ಹೆಗಡೆ ಕಾಗೇರಿ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ **(ಬಿಜೆಪಿ)**

ಯಲ್ಲಾಪುರ
ಶಿವರಾಮ ಹೆಬ್ಬಾರ 74,699
ಗೆಲುವಿನ ಅಂತರ 4,004
ಪ್ರತಿ ಸ್ಪರ್ಧಿ:ವಿ.ಎಸ್.ಪಾಟೀಲ (ಕಾಂಗ್ರೆಸ್)
2019ರ ಉಪಚುನಾವಣೆ(ಬಿಜೆಪಿ)

ಹಸ್ತದ ಬಿಗಿ ಹಿಡಿತ, ಮುದುಡಿದ ಕಮಲ...

• ರಶ್ಮಿ ಎಸ್

ವಿಶ್ಲೇಷಣೆ

ಹುಬ್ಬಳ್ಳಿ: ಕಿತ್ತೂರು ಕರ್ನಾಟಕದಲ್ಲಿ ಪಕ್ಷಾಂತರಿಗಳಿಗೂ, ಕೆಲಸ ಮಾಡದ ನಾಯಕರಿಗೂ ಆತ್ಮಾವಲೋಕನ ಮಾಡಿಕೊಳ್ಳುವಂತಹ ಜನಾದೇಶ ದೊರೆತಿದೆ. ವ್ಯಕ್ತಿ ಮತ್ತು ಪಕ್ಷಗಳ ನಡುವಿನ ಹಣಾಹಣಿಯಲ್ಲಿ ಉಪಚುನಾವಣೆಗಳೂ ಸೇರಿದಂತೆ 39 ಸ್ಥಾನ ಗಳಿಸಿದ್ದ ಬಿಜೆಪಿ 17 ಸ್ಥಾನಗಳಿಗೆ ಕುಸಿದಿದೆ.

ನೆರೆ ಬಂದಾಗ, ಪ್ರವಾಹ ಬಂದಾಗ, ಮನೆ, ಬದುಕು ಕೊಚ್ಚಿ ಹೋದಾಗ ಬಾರದ ರಾಷ್ಟ್ರ ಮಟ್ಟದ ನಾಯಕರು ಚುನಾವಣೆಯಿದ್ದಾಗ ಬಂದದ್ದು ಮತಗಳನ್ನು ತಂದುಕೊಡುವ ಬದಲು ಹೇವರಿಕೆ ಹುಟ್ಟಿಸುವಂತಾಯಿತು. ಇದು ಮತ ಸೆಳೆಯುವ ಬದಲು ಕಸಿಯುವಂತಾಯಿತು.

ಈ ಚುನಾವಣೆ, ಜಾತಿ, ವ್ಯಕ್ತಿ, ಪಕ್ಷ, ಮುಂತಾದ ಎಲ್ಲ ಲೆಕ್ಕಾಚಾರಗಳಿಗೂ ಮಿಗಿಲಾಗಿ, ಈ ನೆಲದ ಗುಣವಾದ ಸೌಹಾರ್ದ, ನೆರೆ, ಪ್ರವಾಹದಲ್ಲಿ ಸ್ಪಂದಿಸಿದ ನಾಯಕರನ್ನೇ ತಮ್ಮ ಪ್ರತಿನಿಧಿಗಳಾಗಿ ಆಯ್ಕೆ ಮಾಡಿದೆ. ಬಸವಣ್ಣನ ನೆಲದಲ್ಲಿ ಜಾತಿಗಿಂತಲೂ ಕಾಯಕ ತತ್ವವೇ ಇಲ್ಲಿಯ ಚಿತ್ರಣ ಬದಲಿಸಿದೆ.

ವ್ಯಕ್ತಿ ಅಥವಾ ಪಕ್ಷ ಎರಡರ ನಡುವಿನ ಆಯ್ಕೆಯಲ್ಲಿ ಹುಬ್ಬಳ್ಳಿ ಸೆಂಟ್ರಲ್ ಕ್ಷೇತ್ರದ ಮತದಾರರು ಪಕ್ಷವನ್ನೂ, ಅಥಣಿ ಕ್ಷೇತ್ರದವರು ವ್ಯಕ್ತಿಯನ್ನು ಆರಿಸಿದ್ದಾರೆ. ಅಧಿಕಾರಕ್ಕಾಗಿ ಪಕ್ಷಾಂತರ ಮಾಡಿದ್ದ ಮಹೇಶ ಕುಮಠಳ್ಳಿಯನ್ನೂ, ತಮ್ಮ ಸಿದ್ಧಾಂತ ಬಿಟ್ಟು ಅನುಕೂಲಕ್ಕಾಗಿ ಕಾಂಗ್ರೆಸ್ ಸೇರಿದ ಜಗದೀಶ ಶೆಟ್ಟರ್ ಅವರನ್ನೂ ಮತದಾರರು ತಿರಸ್ಕರಿಸಿದ್ದಾರೆ.

ಅತಿ ಹೆಚ್ಚು ಕ್ಷೇತ್ರಗಳಿರುವ ಬೆಳಗಾವಿ ಜಿಲ್ಲೆಯಲ್ಲಿ ಕಳೆದ ಸಲ 13 ಸ್ಥಾನಗಳನ್ನು ಗಳಿಸಿದ್ದ ಬಿಜೆಪಿ ಈ ಸಲ ಏಳು ಸ್ಥಾನಗಳಿಗೆ ಕುಸಿತ ಕಂಡಿದೆ. ಸಾಹುಕಾರ್ ಸಹೋದರರಾದ ಸತೀಶ್ ಜಾರಕಿಹೊಳಿ ಸುಮಾರು 50 ಸಾವಿರ ಮತಗಳಿಂದ ಗೆಲುವು ದಾಖಲಿಸಿದ್ದಾರೆ. ರಮೇಶ್ ಮತ್ತು ಬಾಲಚಂದ್ರ ಜಾರಕಿಹೊಳಿ ಗೆಲುವಿನ ಯಾತ್ರೆ ಮುಂದುವರಿದಿದೆ.

ಬೆಳಗಾವಿ ಗ್ರಾಮೀಣ ಕ್ಷೇತ್ರದ ಲಕ್ಷ್ಮಿ ಹೆಬ್ಬಾಳಕರ್ ತಮ್ಮ ಕ್ಷೇತ್ರದ ಪ್ರತಿಗ್ರಾಮಗಳಿಗೂ ಶುಕ್ರವಾರ ಭೇಟಿ ನೀಡಿ, ಅರಿಶಿಣ, ಕುಂಕುಮದ ಜೊತೆಗೆ ಬಾಗಿನ ನೀಡಿ ಮಹಿಳೆಯರ ಮತಗಳನ್ನು ಹಿಡಿದಿಟ್ಟಿದ್ದರು. ಶಿವಾಜಿ ಪ್ರತಿಮೆ ಪ್ರತಿಷ್ಠಾಪನೆ ಮರಾಠಿಗರ ಮತಗಳನ್ನೂ ತಂದು ನೀಡಿದವು.

ಗಮನ ಸೆಳೆದ ಇನ್ನೊಂದು ಕ್ಷೇತ್ರವೆಂದರೆ ಧಾರವಾಡ. ಅಭ್ಯರ್ಥಿ ಕ್ಷೇತ್ರಕ್ಕೆ ಕಾಲಿಡದೆಯೇ ವಿಜಯಮಾಲೆ ಧರಿಸಿದರು. ವಿನಯ ಕುಲಕರ್ಣಿ ಅವರ ಪತ್ನಿಯ ಸೌಜನ್ಯದಿಂದಲೂ, ಅವರ



ಕುರಿತ ಅನುಕಂಪದ ಅಲೆಯೂ ಗೆಲುವನ್ನು ದಾಖಲಿಸುವಂತೆ ಮಾಡಿತು. ಪ್ರಸಾದ್ ಅಬ್ಬಯ್ಯ, ಅರವಿಂದ್ ಬೆಲ್ಲದ್ ಹ್ಯಾಟ್ರಿಕ್ ಜಯ ಗಳಿಸಿದರು.

ಮಹದಾಯಿ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಕೋನರಡ್ಡಿ ನವಲಗುಂದದಲ್ಲಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಅವರನ್ನು ಸೋಲಿಸಿದರು. ಕುಂದಗೋಳದಲ್ಲಿ ಶಿವಳ್ಳಿಯವರ ನಿಧನದಿಂದ ಗೆದ್ದು ಬಂದಿದ್ದ ಕುಸುಮಾವತಿ ಅವರಿಗೆ ಆಡಳಿತದ ಒಳಪಟ್ಟುಗಳು ಗೊತ್ತಿಲ್ಲವೆಂಬುದೇ ದೊಡ್ಡದಾಗಿ, ಎಂ.ಆರ್.ಪಾಟೀಲರು ಗೆಲ್ಲುವುದನ್ನು ಕಾಂಗ್ರೆಸ್ ಪಕ್ಷದವರೇ ಸರಳಗೊಳಿಸಿದರು. ಕಳೆದ ವರ್ಷ ಐದು ಸ್ಥಾನ ಗಳಿಸಿದ್ದ ಬಿಜೆಪಿ ಬಾಗಲಕೋಟೆ ಜಿಲ್ಲೆಯಲ್ಲಿ ಈಗ ಎರಡು ಸ್ಥಾನಕ್ಕೆ ಸಮಾಧಾನ ಪಡುವಂತಾಗಿದೆ. ಸಚಿವರಾಗಿದ್ದರೂ ಜನಪ್ರಿಯತೆಯನ್ನು ಮತಗಳಾಗಿ ಬದಲಿಸುವಲ್ಲಿ ಗೋವಿಂದ ಕಾರಜೋಳ ಹಾಗೂ ಮುರುಗೇಶ್ ನಿರಾಣಿ ಸೋತರು.

ಬಸವರಾಜ ಬೊಮ್ಮಾಯಿ ಅವರ ಗೆಲುವು ಹಾವೇರಿ ಜಿಲ್ಲೆಯಲ್ಲಿ ಬಿಜೆಪಿ ಸ್ಥಾನ ಉಳಿಸಿದೆ. ಹಿರೇಕೆರೂರಿನಲ್ಲಿ ಕಳೆದ ಉಪಚುನಾವಣೆಯಲ್ಲಿ 555 ಮತಗಳಿಂದ ಗೆದ್ದಿದ್ದ ಬಿ.ಸಿ.ಪಾಟೀಲರಿಗೆ ಬಣಕಾರರು 15 ಸಾವಿರ ಮತಗಳ ಅಂತರದಿಂದ ಸೋಲಿಸಿದರು. ಹಾನಗಲ್‌ನಲ್ಲಿ ಕಾಂಗ್ರೆಸ್‌ನ ಶ್ರೀನಿವಾಸ್ ಮಾನೆ ಅವರಿಗೆ ಗೆಲುವು ಸರಳವಾಗಿತ್ತು.

ಉತ್ತರಕನ್ನಡ ಜಿಲ್ಲೆಯಲ್ಲಿ ಐದು ಸ್ಥಾನಗಳಿಂದ ಬಿಜೆಪಿ ಎರಡಕ್ಕೆ ಇಳಿದಿದೆ. ವಿಧಾನ ಪರಿಷತ್ತೂ ಸೇರಿದಂತೆ ನಾಲ್ಕು ಬಾರಿ ಸೋಲುಂಡ ಭೀಮಣ್ಣ ನಾಯ್ಕ ಆರು ಸಲ ಗೆದ್ದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಶಿರಸಿಯಲ್ಲಿ ಸೋಲಿಸಿ, ಅವರ ಗೆಲುವಿಗೆ ಬ್ರೇಕ್ ಹಾಕಿದರು. ಸತೀಶ್ ಸೈಲ್ ಕಾರವಾರದ ರೂಪಾಲಿ ನಾಯ್ಕ ಅವರನ್ನು ಮಣಿಸಿದ್ದು ಈ ಜಿಲ್ಲೆಯಲ್ಲಿ ಎರಡೇ ಕ್ಷೇತ್ರಗಳಲ್ಲಿ ಬಿಜೆಪಿ ಉಳಿಯುವಂತಾಗಿದೆ.


ಗದುಗಿನಲ್ಲಿ ನೀರು, ಸೂರು, ಶಿಕ್ಷಣಕ್ಕೆ ಶ್ರಮಿಸಿದ ಎಚ್.ಕೆ. ಪಾಟೀಲರು ಮತ್ತೆ ಜನಮತಗಳಿಸಿ, ಗೆಲುವನ್ನು ತಮ್ಮದಾಗಿ ಸಿಕೊಂಡರು. ಕಳೆದ ಸಾಲಿನಲ್ಲಿ ಮೂರು ಕ್ಷೇತ್ರದಲ್ಲಿ ಬಿಜೆಪಿ ಬೀಗಿದ್ದರೆ, ಈ ಸಲ ಒಂದು ಸ್ಥಾನ ಕಳೆದುಕೊಂಡಿದೆ.

ವಿಜಯಪುರದಲ್ಲಿ ಬಸನಗೌಡ ಪಾಟೀಲ ಯತ್ನಾಳರು ಮಾತ್ರ ಬಿಜೆಪಿಗೆ ಕ್ಷೇತ್ರ ಉಳಿಸಿಕೊಟ್ಟಿದ್ದಾರೆ. ಬಬಲೇಶ್ವರದಲ್ಲಿ ಮತ್ತೆ ಎಂ.ಬಿ. ಪಾಟೀಲರು ಜಯಭೇರಿ ಬಾರಿಸಿದ್ದಾರೆ.

ಕಿತ್ತೂರು ಕರ್ನಾಟಕ

7 ಜಿಲ್ಲೆಗಳು | **56** ಒಟ್ಟು ಕ್ಷೇತ್ರಗಳು

ಜಿಲ್ಲೆ	ಒಟ್ಟು	ಕಾಂಗ್ರೆಸ್	ಬಿಜೆಪಿ	ಜೆಡಿಎಸ್
ಬೆಳಗಾವಿ	18	11	7	0
ವಿಜಯಪುರ	8	6	1	1
ಧಾರವಾಡ	7	4	3	0
ಹಾವೇರಿ	6	5	1	0
ಗದಗ	4	2	2	0
ಉತ್ತರ ಕನ್ನಡ	6	4	2	0
ಬಾಗಲಕೋಟೆ	7	5	2	0




ಕಲ್ಯಾಣ ಕರ್ನಾಟಕ ಮತ್ತು ಕರಾವಳಿ ಕರ್ನಾಟಕ: ವಿಜೇತರ ವಿವರ

* ಉಪ ಚುನಾವಣೆಯಲ್ಲಿ ಗೆದ್ದ ಪಕ್ಷ

ಕಲಬುರಗಿ ಜಿಲ್ಲೆ – 9

ಅಫಜಲಪುರ
ಎಂ.ವೈ.ಪಾಟೀಲ 56,313
ಗೆಲುವಿನ ಅಂತರ 4,594
ಪ್ರತಿಸ್ಪರ್ಧಿ: ನಿತಿನ್ ಗುತ್ತೇದಾರ(ಸ್ವತಂತ್ರ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)




ಜೇವರ್ಗಿ
ಡಾ. ಅಜಯ ಸಿಂಗ್ 70,810
ಗೆಲುವಿನ ಅಂತರ 10,278
ಪ್ರತಿಸ್ಪರ್ಧಿ: ದೊಡ್ಡಪ್ಪಗೌಡ ನರಿಬೋಳ(ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)



ಚಿತ್ತಾಪುರ (ಎಸ್‌ಸಿ)
ಪ್ರಿಯಾಂಕ್ ಖರ್ಗೆ 81,323
ಗೆಲುವಿನ ಅಂತರ 13,640
ಪ್ರತಿಸ್ಪರ್ಧಿ: ಮಣಿಕಂಠ ರಾಠೋಡ(ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)




ಸೇಡಂ
ಡಾ. ಶರಣಪ್ರಕಾಶ ಪಾಟೀಲ 93,377
ಗೆಲುವಿನ ಅಂತರ 43,561
ಪ್ರತಿಸ್ಪರ್ಧಿ: ರಾಜಕುಮಾರ ಪಾಟೀಲ ತೇಲ್ಕೂರ(ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)




ಚಿಂಚೋಳಿ (ಎಸ್‌ಸಿ)
ಡಾ. ಅವಿನಾಶ ಜಾಧವ 69,963
ಗೆಲುವಿನ ಅಂತರ 858
ಪ್ರತಿಸ್ಪರ್ಧಿ: ಸುಭಾಷ್ ರಾಠೋಡ(ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ*)




ಕಲಬುರಗಿ ಗ್ರಾಮಾಂತರ (ಎಸ್‌ಸಿ)
ಬಸವರಾಜ ಮತ್ತಿಮಡು 84,466
ಗೆಲುವಿನ ಅಂತರ 12,627
ಪ್ರತಿಸ್ಪರ್ಧಿ: ರೇವುನಾಯಕ ಬೆಳಮಗಿ(ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)




ಕಲಬುರಗಿ ದಕ್ಷಿಣ
ಅಲ್ಲಮಪ್ರಭು ಪಾಟೀಲ 87,345
ಗೆಲುವಿನ ಅಂತರ 21,048
ಪ್ರತಿಸ್ಪರ್ಧಿ: ದತ್ತಾತ್ರೇಯ ಪಾಟೀಲ ರೇವೂರ(ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



ಕಲಬುರಗಿ ಉತ್ತರ
ಕನೀಜ್ ಫಾತಿಮಾ 80,973
ಗೆಲುವಿನ ಅಂತರ 2,712
ಪ್ರತಿಸ್ಪರ್ಧಿ: ಚಂದ್ರಕಾಂತ ಪಾಟೀಲ(ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)



ಆಳಂದ
ಬಿ.ಆರ್.ಪಾಟೀಲ 89,508
ಗೆಲುವಿನ ಅಂತರ 13,348
ಪ್ರತಿಸ್ಪರ್ಧಿ: ಸುಭಾಷ್ ಗುತ್ತೇದಾರ(ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)




ಯಾದಗಿರಿ ಜಿಲ್ಲೆ – 4


ಸುರಪುರ (ಎಸ್‌ಟಿ)
ರಾಜಾ ವೆಂಕಟಪ್ಪ ನಾಯಕ 1,13,559
ಗೆಲುವಿನ ಅಂತರ 25,223
ಪ್ರತಿಸ್ಪರ್ಧಿ: ನರಸಿಂಹ ನಾಯಕ (ರಾಜೂಗೌಡ) (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



ಶಹಾಪುರ
ಶರಣಬಸಪ್ಪಗೌಡ ದರ್ಶನಾಪುರ 78,353
ಗೆಲುವಿನ ಅಂತರ 26,027
ಪ್ರತಿಸ್ಪರ್ಧಿ: ಅಮೀನರೆಡ್ಡಿ ಪಾಟೀಲ ಯಾಳಗಿ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)



ಯಾದಗಿರಿ
ಚನ್ನಾರೆಡ್ಡಿ ಪಾಟೀಲ ತುನ್ನೂರು 53,802
ಗೆಲುವಿನ ಅಂತರ 3,676
ಪ್ರತಿಸ್ಪರ್ಧಿ: ವೆಂಕಟರೆಡ್ಡಿ ಮುದ್ನಾಳ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



ಗುರುಮಠಕಲ್
ಶರಣಗೌಡ ಕಂದಕೂರ 72,297
ಗೆಲುವಿನ ಅಂತರ 2,579
ಪ್ರತಿಸ್ಪರ್ಧಿ: ಬಾಬುರಾವ ಚಿಂಚನಸೂರ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)



ಬೀದರ್ ಜಿಲ್ಲೆ – 6

ಬಸವಕಲ್ಯಾಣ
ಶರಣು ಸಲಗರ 92,920
ಗೆಲುವಿನ ಅಂತರ 14,415
ಪ್ರತಿಸ್ಪರ್ಧಿ: ವಿಜಯಸಿಂಗ್ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ*)



ಹುಮನಾಬಾದ್
ಸಿದ್ದು ಪಾಟೀಲ 75,515
ಗೆಲುವಿನ ಅಂತರ 1,594
ಪ್ರತಿಸ್ಪರ್ಧಿ: ರಾಜಶೇಖರ ಪಾಟೀಲ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)



ಬೀದರ್ ದಕ್ಷಿಣ
ಶೈಲೇಂದ್ರ ಬೆಲ್ದಾಳೆ 49,872
ಗೆಲುವಿನ ಅಂತರ 1,263
ಪ್ರತಿಸ್ಪರ್ಧಿ: ಅಶೋಕ ಖೇಣಿ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)



ಬೀದರ್
ರಹೀಂ ಖಾನ್ 69,165
ಗೆಲುವಿನ ಅಂತರ 10,780
ಪ್ರತಿಸ್ಪರ್ಧಿ: ಸೂರ್ಯಕಾಂತ ನಾಗಮಾರಪಳ್ಳಿ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)



ಭಾಲ್ಕಿ
ಈಶ್ವರ ಖಂಡ್ರೆ 99,451
ಗೆಲುವಿನ ಅಂತರ 27,736
ಪ್ರತಿಸ್ಪರ್ಧಿ: ಪ್ರಕಾಶ ಖಂಡ್ರೆ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)




ಔರಾದ್ (ಎಸ್‌ಸಿ)
ಪ್ರಭು ಚವಾಣ್ 81,382
ಗೆಲುವಿನ ಅಂತರ 9,569
ಪ್ರತಿಸ್ಪರ್ಧಿ: ಭೀಮಸೇನರಾವ್ ಸಿಂಧೆ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



ರಾಯಚೂರು ಜಿಲ್ಲೆ – 7


ರಾಯಚೂರು ಗ್ರಾಮಾಂತರ (ಎಸ್‌ಟಿ)
ಬಸನಗೌಡ ದದ್ದಲ್ 89,140
ಗೆಲುವಿನ ಅಂತರ 13,801
ಪ್ರತಿಸ್ಪರ್ಧಿ: ತಿಪ್ಪರಾಜು ಹವಾಲ್ದಾರ್ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)



ರಾಯಚೂರು
ಡಾ.ಶಿವರಾಜ ಪಾಟೀಲ 69,655
ಗೆಲುವಿನ ಅಂತರ 3,732
ಪ್ರತಿಸ್ಪರ್ಧಿ: ಮೊಹಮ್ಮದ್ ಶಾಲಂ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)




ಮಾನ್ವಿ (ಎಸ್‌ಟಿ)
ಹಂಪಯ್ಯ ನಾಯಕ 66,922
ಗೆಲುವಿನ ಅಂತರ 7,719
ಪ್ರತಿಸ್ಪರ್ಧಿ: ಬಿ.ವಿ.ನಾಯಕ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)



ದೇವದುರ್ಗ (ಎಸ್‌ಟಿ)
ಜಿ.ಕರೆಮ್ಮ 99,544
ಗೆಲುವಿನ ಅಂತರ 34,256
ಪ್ರತಿಸ್ಪರ್ಧಿ: ಕೆ.ಶಿವನಗೌಡ ನಾಯಕ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



ಲಿಂಗಸುಗೂರು (ಎಸ್‌ಸಿ)
ಮಾನಪ್ಪ ವಜ್ಜಲ್ 58,769
ಗೆಲುವಿನ ಅಂತರ 2,809
ಪ್ರತಿಸ್ಪರ್ಧಿ: ಡಿ.ಎಸ್.ಹೂಲಗೇರಿ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)



ಸಿಂಧನೂರು
ಹಂಪನಗೌಡ ಬಾದರ್ಲಿ 73,645
ಗೆಲುವಿನ ಅಂತರ 21,942
ಪ್ರತಿಸ್ಪರ್ಧಿ: ಕೆ.ಕರಿಯಪ್ಪ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)




ಮಸ್ಕಿ (ಎಸ್‌ಟಿ)
ಬಸನಗೌಡ ತುರ್ವಿಹಾಳ 79,566
ಗೆಲುವಿನ ಅಂತರ 13,053
ಪ್ರತಿಸ್ಪರ್ಧಿ: ಪ್ರತಾಪಗೌಡ ಪಾಟೀಲ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)




ಕೊಪ್ಪಳ ಜಿಲ್ಲೆ – 5

ಕುಷ್ಟಗಿ
ದೊಡ್ಡನಗೌಡ ಪಾಟೀಲ 92,915
ಗೆಲುವಿನ ಅಂತರ 9,646
ಪ್ರತಿಸ್ಪರ್ಧಿ: ಅಮರೇಗೌಡ ಬಯ್ಯಾಪುರ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)



ಕನಕಗಿರಿ (ಎಸ್‌ಟಿ)
ಶಿವರಾಜ ತಂಗಡಗಿ 1,06,164
ಗೆಲುವಿನ ಅಂತರ 42,632
ಪ್ರತಿಸ್ಪರ್ಧಿ: ಬಸವರಾಜ ದಢೇಸೂಗೂರು (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



ಗಂಗಾವತಿ
ಗಾಲಿ ಜನಾರ್ದನ ರೆಡ್ಡಿ 66,213
ಗೆಲುವಿನ ಅಂತರ 8,266
ಪ್ರತಿಸ್ಪರ್ಧಿ: ಇಕ್ಬಾಲ್ ಅನ್ಸಾರಿ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



ಯಲಬುರ್ಗಾ
ಬಸವರಾಜ ರಾಯರಡ್ಡಿ 94,330
ಗೆಲುವಿನ ಅಂತರ 17,181
ಪ್ರತಿಸ್ಪರ್ಧಿ: ಹಾಲಪ್ಪ ಆಚಾರ್ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



ಕೊಪ್ಪಳ
ರಾಘವೇಂದ್ರ ಹಿಟ್ನಾಳ 90,430
ಗೆಲುವಿನ ಅಂತರ 36,260
ಪ್ರತಿಸ್ಪರ್ಧಿ: ಮಂಜುಳಾ ಕರಡಿ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)



ಬಳ್ಳಾರಿ ಜಿಲ್ಲೆ – 5

ಕಂಪ್ಲಿ (ಎಸ್‌ಟಿ)
ಜೆ.ಎನ್. ಗಣೇಶ್ 1,00,424
ಗೆಲುವಿನ ಅಂತರ 24,091
ಪ್ರತಿಸ್ಪರ್ಧಿ: ಸುರೇಶ್ ಬಾಬು (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)



ಸಿರಗುಪ್ಪ (ಎಸ್‌ಟಿ)
ಬಿ.ಎಂ.ನಾಗರಾಜ 90,862
ಗೆಲುವಿನ ಅಂತರ 37,032
ಪ್ರತಿಸ್ಪರ್ಧಿ: ಸೋಮಲಿಂಗಪ್ಪ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



ಬಳ್ಳಾರಿ ಗ್ರಾಮೀಣ (ಎಸ್‌ಟಿ)
ನಾಗೇಂದ್ರ 1,03,836
ಗೆಲುವಿನ ಅಂತರ 29,300
ಪ್ರತಿಸ್ಪರ್ಧಿ: ಶ್ರೀರಾಮುಲು -(ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)



ಬಳ್ಳಾರಿ ನಗರ
ಭರತ್ ರೆಡ್ಡಿ 86,440
ಗೆಲುವಿನ ಅಂತರ 37,863
ಪ್ರತಿಸ್ಪರ್ಧಿ: ಲಕ್ಷ್ಮಿ ಅರುಣಾ (ಕೆಆರ್‌ಪಿಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



ಸಂಡೂರು (ಎಸ್‌ಟಿ)
ತುಕಾರಾಂ 85,223
ಗೆಲುವಿನ ಅಂತರ 35,522
ಪ್ರತಿಸ್ಪರ್ಧಿ: ಶಿಲ್ಪಾ ರಾಘವೇಂದ್ರ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)




ದಕ್ಷಿಣ ಕನ್ನಡ ಜಿಲ್ಲೆ – 8

ಬೆಳ್ತಂಗಡಿ
ಹರೀಶ್ ಪೂಂಜ 1,01,004
ಗೆಲುವಿನ ಅಂತರ 18,216
ಪ್ರತಿಸ್ಪರ್ಧಿ: ರಕ್ಷಿತ್ ಶಿವರಾಂ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



ಮೂಡುಬಿದಿರೆ
ಉಮಾನಾಥ ಕೋಟ್ಯಾನ್ 86,925
ಗೆಲುವಿನ ಅಂತರ 22,468
ಪ್ರತಿಸ್ಪರ್ಧಿ: ಮಿಥುನ್ ಎಂ.ರೈ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



ಮಂಗಳೂರು ನಗರ ಉತ್ತರ
ಡಾ.ವೈ. ಭರತ್ ಶೆಟ್ಟಿ 1,03,531
ಗೆಲುವಿನ ಅಂತರ 32,922
ಪ್ರತಿಸ್ಪರ್ಧಿ: ಇನಾಯತ್ ಅಲಿ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



ಮಂಗಳೂರು ನಗರ ದಕ್ಷಿಣ
ಡಿ.ವೇದವ್ಯಾಸ ಕಾಮತ್ 91,437
ಗೆಲುವಿನ ಅಂತರ 23,962
ಪ್ರತಿಸ್ಪರ್ಧಿ: ಜೆ.ಆರ್.ಲೋಬೊ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



ಮಂಗಳೂರು
ಯು.ಟಿ. ಖಾದರ್ 83,219
ಗೆಲುವಿನ ಅಂತರ 22,790
ಪ್ರತಿಸ್ಪರ್ಧಿ: ಸತೀಶ್ ಕುಂಪಲ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಬಂಟ್ವಾಳ
ರಾಜೇಶ್ ನಾಯ್ಕ್ ಯು 93,324
ಗೆಲುವಿನ ಅಂತರ 8,282
ಪ್ರತಿಸ್ಪರ್ಧಿ: ಬಿ.ರಮಾನಾಥ ರೈ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಪುತ್ತೂರು
ಅಶೋಕ್ ಕುಮಾರ್ ರೈ 66,607
ಗೆಲುವಿನ ಅಂತರ 4,149
ಪ್ರತಿಸ್ಪರ್ಧಿ: ಅರುಣ್‌ಕುಮಾರ್ ಪುತ್ತಿಲ (ಪಕ್ಷೇತರ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಸುಳ್ಯ (ಎಸ್‌ಸಿ)
ಭಾಗೀರಥಿ ಮುರುಳ್ಯ 93,911
ಗೆಲುವಿನ ಅಂತರ 30,874
ಪ್ರತಿಸ್ಪರ್ಧಿ: ಕೃಷ್ಣಪ್ಪ ಜಿ. (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಉಡುಪಿ ಜಿಲ್ಲೆ – 5

ಬೈಂದೂರು
ಗುರುರಾಜ ಶೆಟ್ಟಿ ಗಂಟಿಹೊಳೆ 98,628
ಗೆಲುವಿನ ಅಂತರ 16,153
ಪ್ರತಿಸ್ಪರ್ಧಿ: ಕೆ.ಗೋಪಾಲ ಪೂಜಾರಿ(ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಕುಂದಾಪುರ
ಕಿರಣ್ ಕುಮಾರ್ ಕೊಡ್ಗಿ 1,02,424
ಗೆಲುವಿನ ಅಂತರ 41,556
ಪ್ರತಿಸ್ಪರ್ಧಿ: ದಿನೇಶ್ ಹೆಗ್ಡೆ ಮೊಳಹಳ್ಳಿ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಉಡುಪಿ
ಯಶ್‌ಪಾಲ್ ಸುವರ್ಣ 97,079
ಗೆಲುವಿನ ಅಂತರ 32,776
ಪ್ರತಿಸ್ಪರ್ಧಿ: ಪ್ರಸಾದ್‌ರಾಜ್ ಕಾಂಚನ್ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಕಾಪು
ಗುರ್ಮೆ ಸುರೇಶ್ ಶೆಟ್ಟಿ 80,559
ಗೆಲುವಿನ ಅಂತರ 13,004
ಪ್ರತಿಸ್ಪರ್ಧಿ: ವಿನಯ ಕುಮಾರ್ ಸೊರಕೆ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಕಾರ್ಕಳ
ವಿ.ಸುನಿಲ್ ಕುಮಾರ್ 77,028
ಗೆಲುವಿನ ಅಂತರ 4,602
ಪ್ರತಿಸ್ಪರ್ಧಿ: ಉದಯ ಶೆಟ್ಟಿ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಚಿಕ್ಕಮಗಳೂರು ಜಿಲ್ಲೆ – 5

ಶೃಂಗೇರಿ
ಟಿ.ಡಿ.ರಾಜೇಗೌಡ 59,171
ಗೆಲುವಿನ ಅಂತರ 201
ಪ್ರತಿಸ್ಪರ್ಧಿ: ಡಿ.ಎನ್.ಜೀವರಾಜ್ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಮೂಡಿಗೆರೆ (ಎಸ್‌ಸಿ)
ನಯನಾ ಮೋಟಮ್ಮ 50,843
ಗೆಲುವಿನ ಅಂತರ 722
ಪ್ರತಿಸ್ಪರ್ಧಿ: ದೀಪಕ್ ದೊಡ್ಡಯ್ಯ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಚಿಕ್ಕಮಗಳೂರು
ಎಚ್.ಡಿ.ತಮ್ಮಯ್ಯ 85,054
ಗೆಲುವಿನ ಅಂತರ 5,926
ಪ್ರತಿಸ್ಪರ್ಧಿ: ಸಿ.ಟಿ.ರವಿ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ತರೀಕೆರೆ
ಜಿ.ಎಚ್.ಶ್ರೀನಿವಾಸ್ 63,086
ಗೆಲುವಿನ ಅಂತರ 12,131
ಪ್ರತಿಸ್ಪರ್ಧಿ: ಡಿ.ಎಸ್.ಸುರೇಶ್ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಕಡೂರು
ಕೆ.ಎಸ್.ಆನಂದ್ 75,476
ಗೆಲುವಿನ ಅಂತರ 12,007
ಪ್ರತಿಸ್ಪರ್ಧಿ: ಬೆಳ್ಳಿ ಪ್ರಕಾಶ್ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

‘ಕೈ’ ಬಲಪಡಿಸಿದ ಖರ್ಗೆ ‘ಪ್ರತಿಷ್ಠೆ’

• ರಾಹುಲ ಬೆಳಗಲಿ

ಕಲ್ಯಾಣ ಕರ್ನಾಟಕ					
ಜಿಲ್ಲೆ	ಒಟ್ಟು	ಬಿಜೆಪಿ	ಕಾಂಗ್ರೆಸ್	ಜೆಡಿಎಸ್	ಇತರೆ
ಬಳ್ಳಾರಿ	5	0	5	0	0
ಯಾದಗಿರಿ	4	0	3	1	0
ಕೊಪ್ಪಳ	5	1	3	0	1
ಕಲಬುರಗಿ	9	2	7	0	0
ರಾಯಚೂರು	7	2	4	1	0
ಬೀದರ್	6	4	2	0	0
ಒಟ್ಟು	36	9	24	2	1

ಕಲಬುರಗಿ: ಮಲ್ಲಿಕಾರ್ಜುನ ಖರ್ಗೆ ಅವರು ಎಐಸಿಸಿ ಅಧ್ಯಕ್ಷರಾದ ಬಳಿಕ ತವರು ಜಿಲ್ಲೆ ಸೇರಿ ಇಡೀ ಕಲ್ಯಾಣ ಕರ್ನಾಟಕ ಪ್ರದೇಶದ 7 ಜಿಲ್ಲೆಗಳಲ್ಲಿ ಕಾಂಗ್ರೆಸ್ ಕೋಟೆ ಭದ್ರವಾಗಿದೆ ಎಂಬುದನ್ನು ಸಾಬೀತುಪಡಿಸಿದ್ದಾರೆ.

ಖರ್ಗೆ ಅವರು ಅಧ್ಯಕ್ಷರಾದ ನಂತರ ರಾಜ್ಯದಲ್ಲಿ ನಡೆದ ಮೊದಲ ವಿಧಾನಸಭೆ ಚುನಾವಣೆಯಲ್ಲಿ ತಮ್ಮ ‘ತಾಕತ್ತು’ ತೋರಿಸಿದ್ದಾರೆ. 2013ರ ವಿಧಾನಸಭಾ ಚುನಾವಣೆಯಲ್ಲಿ 24 ಮತ್ತು 2018ರ ವಿಧಾನಸಭಾ ಚುನಾವಣೆಯಲ್ಲಿ 21 ಕ್ಷೇತ್ರಗಳಲ್ಲಿ ಜಯ ಸಾಧಿಸಿದ್ದ ಕಾಂಗ್ರೆಸ್, ಪ್ರಸಕ್ತ ಚುನಾವಣೆಯಲ್ಲಿ 26 ಸ್ಥಾನಗಳನ್ನು ಗಳಿಸಿದೆ.

ಬಳ್ಳಾರಿ ಜಿಲ್ಲೆಯ ಎಲ್ಲಾ 5 ಕ್ಷೇತ್ರಗಳನ್ನೂ ತನ್ನದಾಗಿಸಿಕೊಂಡ ಕಾಂಗ್ರೆಸ್ ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಮತದಾರರ ಮನ ಗೆದ್ದಿದೆ. ಒಂದೆಡೆ ಖರ್ಗೆಯವರ ‘ಪ್ರತಿಷ್ಠೆ’ ಉಳಿಸುವ ಸವಾಲು, ಮತ್ತೊಂದೆಡೆ ಬಿಜೆಪಿ ಆಡಳಿತದ ವಿರುದ್ಧದ ‘ಅಲೆ’ ಇವೆರಡೂ ಈ ಭಾಗದಲ್ಲಿ ಪರಿಣಾಮಕಾರಿ ಪಾತ್ರ ವಹಿಸಿದವು. ಬಿಜೆಪಿಗೆ ಸ್ಥಾನಗಳನ್ನು ಹೆಚ್ಚಿಸಿಕೊಳ್ಳಲು, ಜೆಡಿಎಸ್‌ಗೆ ಚಿಗುರಲು ಅವಕಾಶ ಸಿಗಲಿಲ್ಲ. ಇತರೆ ಪಕ್ಷಗಳಿಗೆ ಪ್ರಭಾವ ಬೀರಲೂ ಸಾಧ್ಯವಾಗಲಿಲ್ಲ.

2019ರ ಲೋಕಸಭೆ ಚುನಾವಣೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸೋಲಿಸಿದಂತೆಯೇ ಚಿತ್ತಾಪುರದಲ್ಲಿ ಪ್ರಿಯಾಂಕ್ ಖರ್ಗೆ ಅವರನ್ನು ಮಣಿಸುವುದಾಗಿ ಹೇಳಿದ್ದ ಬಿಜೆಪಿಯ ಎಲ್ಲಾ ತಂತ್ರಗಳು ಬುಡಮೇಲಾದವು. ರೌಡಿಶೀಟರ್ ಮಣಿಕಂಠ ರಾಠೋಡಗೆ ಕಣಕ್ಕಿಳಿಸಿ, ಬಿಜೆಪಿ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಜಿಲ್ಲೆಯಲ್ಲೇ ‘ಠಿಕಾಣಿ’ ಹೂಡುವಂತೆ ಮಾಡಿದರೂ ಕಿಂಚಿತ್ತೂ ಪ್ರಯೋಜನವಾಗಲಿಲ್ಲ. ಮಣಿಕಂಠ ರಾಠೋಡಗೆ ಟಿಕೆಟ್ ಸಿಕ್ಕಿದ್ದು ಅಲ್ಲಿನ ಬಿಜೆಪಿಯ ನಾಯಕರಿಗೆ ಅಸಮಾಧಾನ ಮೂಡಿಸಿದರೆ, ಪ್ರಚಾರದ ಸಂದರ್ಭದಲ್ಲಿ ರಾಠೋಡ್ ಅವರ ಕುರಿತಾಗಿ ಹರಿದಾಡಿದ ವಿಡಿಯೊಗಳು ‘ಎಡವಟ್ಟಿ’ಗೆ ಕಾರಣವಾದವು. ‘ಇಂಥವರು ಶಾಸಕರು ಆಗಬೇಕೆ’ ಎಂದು ಪ್ರಶ್ನಿಸಿ ಕಾಂಗ್ರೆಸ್‌ನಿಂದ ನಡೆದ ಅಭಿಯಾನವು ‘ಕೈ’ ಹಿಡಿಯಿತು.

‘ಹೈದರಾಬಾದ್ ಕರ್ನಾಟಕ’ ಪ್ರದೇಶವನ್ನು ‘ಕಲ್ಯಾಣ ಕರ್ನಾಟಕ’ ಎಂದು ಮರುನಾಮಕರಣ ಮಾಡಿದ ಬಿಜೆಪಿಯು ವಿಜಯ ಸಂಕಲ್ಪ ಯಾತ್ರೆ ಮೂಲಕ ‘ಅಭಿವೃದ್ಧಿ’ಯ ಕುರಿತು ಭರವಸೆಗಳ ಮಹಾಪೂರವನ್ನೇ ಹರಿಸಿತು. ಆದರೆ, ಆಡಳಿತ ಅವಧಿಯಲ್ಲಿನ ಪಿಎಸ್‌ಐ ಹಗರಣ, ಶೇ 40ರಷ್ಟು ಕಮಿಷನ್ ಪ್ರಕರಣ, ಕೆಕೆಆರ್‌ಡಿಬಿಗೆ ಸಿಗದ ಅನುದಾನ ಸೇರಿ ಹಲವು ವಿಷಯಗಳು ಬಿಜೆಪಿಗೆ ಮುಳುವಾದವು. ಇವೆಲ್ಲ ಮರೆಮಾಚಿ, ಬಿಜೆಪಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ವಿಜಯ ಸಂಕಲ್ಪ ಯಾತ್ರೆ ಕೈಗೊಂಡು, ಪ್ರಧಾನಿ ನರೇಂದ್ರ ಮೋದಿ ಅವರಿಂದ ರೋಡ್ ಶೋ ನಡೆಸಿದರೂ ಫಲಕಾರಿಯಾಗಲಿಲ್ಲ. ತಾಂಡಾಗಳನ್ನು ಕಂದಾಯ ಗ್ರಾಮ ಮಾಡಿಸಿ, ಲಂಬಾಣಿಗರಿಗೆ ಹಕ್ಕುಪತ್ರ ವಿತರಿಸಿದರೂ ಫಲಪ್ರದವಾಗಲಿಲ್ಲ.

‘ಹಳೆಯ ಮೈಸೂರು ಭಾಗಕ್ಕೆ ಸೀಮಿತ ಪಕ್ಷ’ ಎಂಬ ಹಣೆಪಟ್ಟಿ ಕಳಚಿ ಹಾಕಿ, ಈ ಭಾಗದ ಜನರಿಗೆ ಹತ್ತಿರವಾಗಲು ಜೆಡಿಎಸ್ ನಡೆಸಿದ ಕಸರತ್ತು ಫಲಿಸಲಿಲ್ಲ. ಬಿಜೆಪಿಯಿಂದ ಟಿಕೆಟ್ ಸಿಗದೆ ಬಂಡಾಯವೆದ್ದು ಜೆಡಿಎಸ್‌ಗೆ ಸೇರ್ಪಡೆಯಾದವರಿಗೂ ಗೆಲುವು ದಕ್ಕಲಿಲ್ಲ. ಜೇವರ್ಗಿಯಲ್ಲಿ ದೊಡ್ಡಪ್ಪಗೌಡ ಪಾಟೀಲ ನರಿಬೋಳ, ಶಹಾಪುರದಲ್ಲಿ ಗುರು ಪಾಟೀಲ ಶಿರವಾಳ ಮತ್ತು ಬೀದರ್‌ನಲ್ಲಿ ಸೂರ್ಯಕಾಂತ ನಾಗಮಾರಪಳ್ಳಿ ಅವರಿಗೆ ಸ್ವತಃ ಬೆಂಬಲಿಗರ ಮತ್ತು ಜೆಡಿಎಸ್ ಕಾರ್ಯಕರ್ತರ ಮತಗಳು ಗೆಲ್ಲಿಸಲಿಲ್ಲ.

ಕಲ್ಯಾಣ ರಾಜ್ಯ ಪ್ರಗತಿ ಪಕ್ಷ (ಕೆಆರ್‌ಪಿಪಿ) ಸ್ಥಾಪಿಸಿ ಗಂಗಾವತಿಯಿಂದ ಕಣಕ್ಕಿಳಿದ ಜನಾರ್ದನ ರೆಡ್ಡಿ, ತಾವೊಬ್ಬರೇ ಗೆದ್ದರು. ಅವರ ಪತ್ನಿ, ಸೋದರ ಸೋತರು. ‘ಹನುಮನ ಜನ್ಮಸ್ಥಳ ಅಂಜನಾದ್ರಿ ಅಭಿವೃದ್ಧಿ’ ಜೊತೆಗೆ ಹಿಂದುತ್ವದ ಅಲೆಯೆಬ್ಬಿಸಿದ ಬಿಜೆಪಿಗೂ ಫಲ ಸಿಗಲಿಲ್ಲ. ‘ಹೊರಗಿನವರು’ ಎಂದು ಬಿಂಬಿಸಿದರೂ ರೆಡ್ಡಿ ಅವರಿಗೆ ಜನರು ನಿರಾಸೆಗೊಳಿಸಲಿಲ್ಲ. ‘ಬಿಜೆಪಿಯಿಂದ ಅನ್ಯಾಯವಾಯಿತು. ಜೈಲು ಸೇರುವಂತಾಯಿತು’ ಎಂದು ಹೇಳಿಕೊಂಡು ಜನರಿಂದ ‘ಅನುಕಂಪ’ ಗಳಿಸಿದ್ದು ಗೆಲುವು ತಂದಿತು.

ವಿಶ್ಲೇಷಣೆ

ಕರಾವಳಿಯಲ್ಲಿ ಬಿಜೆಪಿಗೆ ಹಿಂದುತ್ವದ ಬಲ

• ಗಣೇಶ ಚಂದನಶಿವ

ಕರಾವಳಿ ಕರ್ನಾಟಕ					
ಜಿಲ್ಲೆ	ಒಟ್ಟು	ಬಿಜೆಪಿ	ಕಾಂಗ್ರೆಸ್	ಜೆಡಿಎಸ್	ಇತರೆ
ಉಡುಪಿ	5	5	0	0	0
ದಕ್ಷಿಣ ಕನ್ನಡ	8	6	2	0	0
ಚಿಕ್ಕಮಗಳೂರು	5	0	5	0	0
ಒಟ್ಟು	18	11	7	0	0

ಮಂಗಳೂರು: ಹಿಂದುತ್ವದ ‘ಬಲೆ’, ಕಾರ್ಯಕರ್ತರ ಬಲದಿಂದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಬಿಜೆಪಿ ಸ್ಥಾನ ಉಳಿಸಿಕೊಂಡಿದೆ. ಸಮುದಾಯದಲ್ಲಿ ಹಿಂದುತ್ವ ಬಿತ್ತಿ, ಭರ್ಜರಿ ಫಸಲು ಪಡೆಯುವಲ್ಲಿ ಈ ಬಾರಿಯೂ ಯಶಸ್ವಿ ಆಗಿದೆ.

13 ಕ್ಷೇತ್ರಗಳಲ್ಲಿ 12 ಬಿಜೆಪಿ ವಶದಲ್ಲಿತ್ತು. ಆ ಪೈಕಿ ಆರು ಶಾಸಕರನ್ನು ಕೈಬಿಟ್ಟು ‘ಹೊಸಮುಖಗಳ ಪ್ರಯೋಗ’ ಮಾಡಿದ್ದು, ಆಡಳಿತ ವಿರೋಧಿ ಅಲೆಯಿಂದ ತಪ್ಪಿಸಿಕೊಳ್ಳಲು ನೆರವಾಯಿತು.

‘ಹಿಂದುತ್ವದ ಪ್ರಯೋಗಶಾಲೆ’ ಎಂದೇ ಕರೆಯುವ ಇಲ್ಲಿ, ಚುನಾವಣೆಗೆ ಸಾಕಷ್ಟು ಸಮಯ ಇರುವಾಗಲೇ ಬಿಜೆಪಿ ಹಾಗೂ ಸಂಘ ಪರಿವಾರ ಜಂಟಿಯಾಗಿ ಹಿಂದುತ್ವದ ಅಖಾಡ ಸಿದ್ಧಗೊಳಿಸುವ ಕೆಲಸ ಮಾಡಿದವು. ಅದರ ಭಾಗವಾಗಿಯೇ ಹಿಜಾಬ್, ಆಝಾನ್‌ನಂತಹ ವಿವಾದಗಳು ಮುನ್ನೆಲೆಗೆ ಬಂದವು.

ಸರಣಿ ಕೊಲೆ: ಬೆಳ್ಳಾರೆ ಕಳಂಜದ ಮಸೂದ್, ಪ್ರವೀಣ್ ನೆಟ್ಟಾರು, ಕಾಟಿಪಳ್ಳ ಮಂಗಳಪೇಟೆಯ ಮಹಮ್ಮದ್ ಫಾಝಿಲ್ ಹೀಗೆ ಮೂವರು ಯುವಕರ ಸರಣಿ ಕೊಲೆ ನಡೆದವು. ಪ್ರವೀಣ್ ಹತ್ಯೆ ಸಂದರ್ಭದಲ್ಲಿ ಹಿಂದುತ್ವವಾದಿ ಕಾರ್ಯಕರ್ತರು ರೊಚ್ಚಿಗೆದ್ದು ನಳಿನ್‌ಕುಮಾರ್ ಕಟೀಲ್ ಅವರ ಕಾರನ್ನೇ ಅಲ್ಲಾಡಿಸಿ ಬಿಸಿ ಮುಟ್ಟಿಸಿದ್ದರು. ಈ ಸಂದರ್ಭದಲ್ಲಿ ಪ್ರವೀಣ್ ನೆಟ್ಟಾರು ಮನೆಗೆ ಭೇಟಿ ನೀಡಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೆಲವೇ ಕಿ.ಮೀ ಅಂತರದಲ್ಲಿದ್ದ ಮಸೂದ್ ಮನೆಗೆ ಹೋಗಲಿಲ್ಲ. ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದಲ್ಲಿ ಪಿಎಫ್‌ಐ ಅನ್ನು ನಿಷೇಧಿಸಲಾಯಿತು. ಈ ಎಲ್ಲ ಅಂಶಗಳು ಹಿಂದುತ್ವದ ಅಲೆ ಸೃಷ್ಟಿಗೆ ಪೂರಕವಾದವು.

ಚುನಾವಣೆ ವೇಳೆ ಈ ಯಾವ ವಿಷಯಗಳೂ ಚರ್ಚೆ ಆಗಲಿಲ್ಲ. ಬೆಲೆ ಏರಿಕೆ, ಭ್ರಷ್ಟಾಚಾರ ಆರೋಪ, ಆಡಳಿತ ವಿರೋಧಿ ಅಲೆ ಗೌಣವಾಗಿಸುವಲ್ಲಿ ಈ ಭಾವನಾತ್ಮಕ ವಿಷಯಗಳು ಬಿಜೆಪಿಯ ನೆರವಿಗೆ ಬಂದವು. ಮತ ಚದುರದಂತೆ ಕಾರ್ಯಕರ್ತರೂ ನೋಡಿಕೊಂಡರು. ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಪ್ರಚಾರ ನಡೆಸಿದ ಬಿಜೆಪಿ ಪ್ರಮುಖರು ‘ಜೈ ಬಜರಂಗ ಬಲಿ’ ಎಂದು ಘೋಷಣೆ ಕೂಗಿ ಭಾವನೆಗಳನ್ನು ‘ಜಾಗೃತ’ಗೊಳಿಸುವ ಕೆಲಸ ಮಾಡಿದರು. ಉಡುಪಿ ಜಿಲ್ಲೆಯ ಐದೂ ಕ್ಷೇತ್ರಗಳನ್ನು ಈ ಬಾರಿಯೂ ಬಾಚಿಕೊಂಡಿತು. ದಕ್ಷಿಣ ಕನ್ನಡದ ಏಳರಪೈಕಿ (ಒಟ್ಟು 8 ಕ್ಷೇತ್ರ) ಆರು ಸ್ಥಾನ ಉಳಿಸಿಕೊಂಡಿತು. ಪುತ್ತೂರಲ್ಲಿ ಬಂಡಾಯಕ್ಕೆ ಬಿಜೆಪಿ ಬೆಲೆ ತೆತ್ತಿತು. ನಾರಾಯಣಗುರು ಪಾಠವೂ ಸೇರಿದಂತೆ ಪಠ್ಯಪುಸ್ತಕ ಪುನರ್ ರಚನೆಯಲ್ಲಿ ಆಗಿದ್ದ 'ಪ್ರಮಾದ'ದಿಂದ ಬಿಲ್ಲವ ಸೇರಿದಂತೆ ಹಲವು ಸಮುದಾಯಗಳು ಬಿಜೆಪಿ ಸರ್ಕಾರದ ವಿರುದ್ಧ ಸಿಡಿದೆದ್ದಿದ್ದವು. ಆದರೆ, ಅದನ್ನು ಮತವಾಗಿ ಪರಿವರ್ತಿಸಿಕೊಳ್ಳುವಲ್ಲಿ ಕಾಂಗ್ರೆಸ್ ಸಫಲವಾಗಲಿಲ್ಲ. 13ರಲ್ಲಿ 8 ಕ್ಷೇತ್ರಗಳಲ್ಲಿ ಹೊಸ ಮುಖಗಳನ್ನು ಕಣಕ್ಕಿಳಿಸಿತು. ಮುಸ್ಲಿಂ ಮತದಾರರು ಗಟ್ಟಿಯಾಗಿ ಬೆನ್ನಿಗೆ ಇದ್ದರೂ ಸಹ, ಕೆಲ ಕ್ಷೇತ್ರಗಳಲ್ಲಿ ತಳಮಟ್ಟದ ಕಾರ್ಯಕರ್ತರ ಕೊರತೆ ಆ ಪಕ್ಷಕ್ಕೆ ಮುಳುವಾಯಿತು. ಎಸ್‌ಡಿಪಿಐಯಿಂದಾಗಿಯೇ ಕಾಂಗ್ರೆಸ್ ಎಲ್ಲೂ ಸೋತಿಲ್ಲ. ಕಳೆದ ಬಾರಿ ಯು.ಟಿ. ಖಾದರ್ ಮಾತ್ರ ಗೆದ್ದಿದ್ದರು. ಈಗ ಅವರೊಟ್ಟಿಗೆ ಪುತ್ತೂರಿನಲ್ಲಿ ಅಶೋಕಕುಮಾರ್ ಗೆದ್ದಿದ್ದು, ಅಷ್ಟರ ಮಟ್ಟಿಗೆ ಕಾಂಗ್ರೆಸ್ ಚೇತರಿಕೆ ಕಂಡಿದೆ.

ಪ್ರಜಾ ಮತ

ಜನತಂತ್ರದ ಹಬ್ಬ 2023

ಮಧ್ಯ ಕರ್ನಾಟಕ: ವಿಜೇತರ ವಿವರ

ಚಿತ್ರದುರ್ಗ ಜಿಲ್ಲೆ – 6

ಮೊಳಕಾಲ್ಮುರು (ಎಸ್‌ಟಿ)
ಎನ್.ವೈ.ಗೋಪಾಲಕೃಷ್ಣ 1,09,459
ಗೆಲುವಿನ ಅಂತರ 22,149
ಪ್ರತಿಸ್ಪರ್ಧಿ: ಎನ್‌.ತಿಪ್ಪೇಸ್ವಾಮಿ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಚಳ್ಳಕೆರೆ (ಎಸ್‌ಟಿ)
ಟಿ.ರಘುಮೂರ್ತಿ 67,952
ಗೆಲುವಿನ ಅಂತರ 16,450
ಪ್ರತಿಸ್ಪರ್ಧಿ: ಎಂ.ರವೀಶ್‌ಕುಮಾರ್ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಚಿತ್ರದುರ್ಗ
ಕೆ.ಸಿ.ವೀರೇಂದ್ರ 1,22,021
ಗೆಲುವಿನ ಅಂತರ 53,300
ಪ್ರತಿಸ್ಪರ್ಧಿ: ಜಿ.ಎಚ್‌.ತಿಪ್ಪಾರೆಡ್ಡಿ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಹಿರಿಯೂರು
ಡಿ.ಸುಧಾಕರ್ 92,050
ಗೆಲುವಿನ ಅಂತರ 30,322
ಪ್ರತಿಸ್ಪರ್ಧಿ: ಕೆ.ಪೂರ್ಣಿಮಾ(ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಹೊಸದುರ್ಗ
ಬಿ.ಜಿ.ಗೋವಿಂದಪ್ಪ 81,050
ಗೆಲುವಿನ ಅಂತರ 32.816
ಪ್ರತಿಸ್ಪರ್ಧಿ: ಎಸ್‌.ಲಿಂಗಮೂರ್ತಿ(ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಹೊಳಲ್ಕೆರೆ (ಎಸ್‌ಸಿ)
ಎಂ.ಚಂದ್ರಪ್ಪ 88,732
ಗೆಲುವಿನ ಅಂತರ 5,682
ಪ್ರತಿಸ್ಪರ್ಧಿ: ಎಚ್‌.ಆಂಜನೇಯ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ದಾವಣಗೆರೆ ಜಿಲ್ಲೆ – 7

ದಾವಣಗೆರೆ ಉತ್ತರ
ಎಸ್.ಎಸ್. ಮಲ್ಲಿಕಾರ್ಜುನ 94,019
ಗೆಲುವಿನ ಅಂತರ 24,472
ಪ್ರತಿಸ್ಪರ್ಧಿ: ಲೋಕಿಕೆರೆ ನಾಗರಾಜ್ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ದಾವಣಗೆರೆ ದಕ್ಷಿಣ
ಶಾಮನೂರು ಶಿವಶಂಕರಪ್ಪ 84,298
ಗೆಲುವಿನ ಅಂತರ 27,888
ಪ್ರತಿಸ್ಪರ್ಧಿ: ಅಜಯ್ ಕುಮಾರ್ ಬಿ.ಜಿ. (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಹರಿಹರ
ಬಿ.ಪಿ. ಹರೀಶ್ 63,924
ಗೆಲುವಿನ ಅಂತರ 4,304
ಪ್ರತಿಸ್ಪರ್ಧಿ: ಶ್ರೀನಿವಾಸ್ ನಂದಿಗಾವಿ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಚನ್ನಗಿರಿ
ಬಸವರಾಜು ವಿ. ಶಿವಗಂಗಾ 78,263
ಗೆಲುವಿನ ಅಂತರ 16,435
ಪ್ರತಿಸ್ಪರ್ಧಿ: ಮಾಡಾಳ್ ಮಲ್ಲಿಕಾರ್ಜುನ್ (ಪಕ್ಷೇತರ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಹೊನ್ನಾಳಿ
ಡಿ.ಜಿ. ಶಾಂತನಗೌಡ 92,392
ಗೆಲುವಿನ ಅಂತರ 17,560
ಪ್ರತಿಸ್ಪರ್ಧಿ: ಎಂ.ಪಿ. ರೇಣುಕಾಚಾರ್ಯ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಜಗಳೂರು (ಎಸ್‌ಟಿ)
ಬಿ. ದೇವೇಂದ್ರಪ್ಪ 50,765
ಗೆಲುವಿನ ಅಂತರ 874
ಪ್ರತಿಸ್ಪರ್ಧಿ: ಎಸ್‌.ವಿ. ರಾಮಚಂದ್ರ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಮಾಯಕೊಂಡ (ಎಸ್‌ಸಿ)
ಕೆ.ಎಸ್. ಬಸವಂತಪ್ಪ 70,916
ಗೆಲುವಿನ ಅಂತರ 33,301
ಪ್ರತಿಸ್ಪರ್ಧಿ: ಬಿ.ಎಂ. ಪುಷ್ಪಾ (ಪಕ್ಷೇತರ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ವಿಜಯನಗರ ಜಿಲ್ಲೆ – 5

ಹೂವಿನಹಡಗಲಿ (ಎಸ್‌ಸಿ)
ಕೃಷ್ಣ ನಾಯ್ಕ 73,200
ಗೆಲುವಿನ ಅಂತರ 1,444
ಪ್ರತಿಸ್ಪರ್ಧಿ:ಪಿ.ಟಿ. ಪರಮೇಶ್ವರ ನಾಯ್ಕ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಹಗರಿಬೊಮ್ಮನಹಳ್ಳಿ (ಎಸ್‌ಸಿ)
ಕೆ. ನೇಮರಾಜ ನಾಯ್ಕ 84,023
ಗೆಲುವಿನ ಅಂತರ 11,344
ಪ್ರತಿಸ್ಪರ್ಧಿ: ಭೀಮ ನಾಯ್ಕ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ವಿಜಯನಗರ
ಎಚ್‌.ಆರ್. ಗವಿಯಪ್ಪ 1,04,863
ಗೆಲುವಿನ ಅಂತರ 33,723
ಪ್ರತಿಸ್ಪರ್ಧಿ: ಸಿದ್ಧಾರ್ಥ ಸಿಂಗ್ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಕೂಡ್ಲಿಗಿ (ಎಸ್‌ಟಿ)
ಡಾ.ಎನ್‌.ಟಿ. ಶ್ರೀನಿವಾಸ್ 1,04,753
ಗೆಲುವಿನ ಅಂತರ 54,350
ಪ್ರತಿಸ್ಪರ್ಧಿ: ಲೋಕೇಶ್ ವಿ. ನಾಯಕ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಹರಪನಹಳ್ಳಿ
ಎಂ.ಪಿ. ಲತಾ ಮಲ್ಲಿಕಾರ್ಜುನ(ಪಕ್ಷೇತರ) 70,194
ಗೆಲುವಿನ ಅಂತರ 13,845
ಪ್ರತಿಸ್ಪರ್ಧಿ:ಜಿ. ಕರುಣಾಕರ ರೆಡ್ಡಿ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಶಿವಮೊಗ್ಗ ಜಿಲ್ಲೆ – 7

ಸಾಗರ
ಬೇಳೂರು ಗೋಪಾಲಕೃಷ್ಣ 88,988
ಗೆಲುವಿನ ಅಂತರ 16,022
ಪ್ರತಿಸ್ಪರ್ಧಿ:ಹರತಾಳು ಹಾಲಪ್ಪ (ಬಿಜೆಪಿ
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಶಿಕಾರಿಪುರ
ಬಿ.ವೈ.ವಿಜಯೇಂದ್ರ 81,810
ಗೆಲುವಿನ ಅಂತರ 11,008
ಪ್ರತಿಸ್ಪರ್ಧಿ: ಎಸ್‌.ಪಿ. ನಾಗರಾಜ್ ಗೌಡ (ಪಕ್ಷೇತರ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಶಿವಮೊಗ್ಗ ನಗರ
ಎಸ್.ಎನ್ ಚನ್ನಬಸಪ್ಪ(ಚೆನ್ನಿ) 96,490
ಗೆಲುವಿನ ಅಂತರ 27,674
ಪ್ರತಿಸ್ಪರ್ಧಿ: ಎಚ್‌.ಸಿ.ಯೋಗೀಶ್ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಶಿವಮೊಗ್ಗ ಗ್ರಾಮಾಂತರ (ಎಸ್‌ಸಿ)
ಶಾರದಾ ಪೂರ್ಯನಾಯ್ಕ್ 86,340
ಗೆಲುವಿನ ಅಂತರ 15,142
ಪ್ರತಿಸ್ಪರ್ಧಿ:ಕೆ.ಬಿ.ಅಶೋಕ್ ನಾಯ್ಕ್ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಸೊರಬ
ಮಧು ಬಂಗಾರಪ್ಪ 98,912
ಗೆಲುವಿನ ಅಂತರ 44,262
ಪ್ರತಿಸ್ಪರ್ಧಿ: ಕುಮಾರ್ ಬಂಗಾರಪ್ಪ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ತೀರ್ಥಹಳ್ಳಿ
ಆರಗ ಜ್ಞಾನೇಂದ್ರ 84,563
ಗೆಲುವಿನ ಅಂತರ 12,241
ಪ್ರತಿಸ್ಪರ್ಧಿ: ಕಿಮ್ಮನೆ ರತ್ನಾಕರ್ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಭದ್ರಾವತಿ
ಬಿ.ಕೆ ಸಂಗಮೇಶ್ 66,208
ಗೆಲುವಿನ ಅಂತರ 2,705
ಪ್ರತಿಸ್ಪರ್ಧಿ:ಶಾರದಾ ಅಪ್ಪಾಜಿಗೌಡ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ತುಮಕೂರು ಜಿಲ್ಲೆ – 11

ಚಿಕ್ಕನಾಯಕನಹಳ್ಳಿ
ಸಿ.ಬಿ.ಸುರೇಶ್‌ಬಾಬು 71,036
ಗೆಲುವಿನ ಅಂತರ 10,042
ಪ್ರತಿಸ್ಪರ್ಧಿ: ಜೆ.ಸಿ.ಮಾಧುಸ್ವಾಮಿ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಗುಬ್ಬಿ
ಎಸ್‌.ಆರ್.ಶ್ರೀನಿವಾಸ್ 60,520
ಗೆಲುವಿನ ಅಂತರ 8,541
ಪ್ರತಿಸ್ಪರ್ಧಿ: ಎಸ್‌.ಡಿ.ದಿಲೀಪ್‌ಕುಮಾರ್ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ಕೊರಟಗೆರೆ (ಎಸ್‌ಸಿ)
ಡಾ.ಜಿ.ಪರಮೇಶ್ವರ 79,099
ಗೆಲುವಿನ ಅಂತರ 14,347
ಪ್ರತಿಸ್ಪರ್ಧಿ: ಪಿ.ಆರ್‌.ಸುಧಾಕರ್‌ಲಾಲ್ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಕುಣಿಗಲ್
ಎಚ್‌.ಡಿ.ರಂಗನಾಥ್ 74,724
ಗೆಲುವಿನ ಅಂತರ 26,573
ಪ್ರತಿಸ್ಪರ್ಧಿ: ಡಿ.ಕೃಷ್ಣಕುಮಾರ್ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಮಧುಗಿರಿ
ಕೆ.ಎನ್.ರಾಜಣ್ಣ 91,166
ಗೆಲುವಿನ ಅಂತರ 35,523
ಪ್ರತಿಸ್ಪರ್ಧಿ: ಎಂ.ವಿ.ವೀರಭದ್ರಯ್ಯ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ಪಾವಗಡ (ಎಸ್‌ಸಿ)
ಎಚ್‌.ವಿ.ವೆಂಕಟೇಶ್ 83,062
ಗೆಲುವಿನ ಅಂತರ 10,881
ಪ್ರತಿಸ್ಪರ್ಧಿ: ಕೆ.ಎಂ.ತಿಮ್ಮರಾಯಪ್ಪ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಶಿರಾ
ಟಿ.ಬಿ.ಜಯಚಂದ್ರ 86,084
ಗೆಲುವಿನ ಅಂತರ 29,250
ಪ್ರತಿಸ್ಪರ್ಧಿ: ಆರ್‌.ಉಗ್ರೇಶ್ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ) (ಉಪ ಚುನಾವಣೆ)

ತಿಪಟೂರು
ಕೆ.ಷಡಕ್ಷರಿ 71,999
ಗೆಲುವಿನ ಅಂತರ 17,652
ಪ್ರತಿಸ್ಪರ್ಧಿ: ಬಿ.ಸಿ.ನಾಗೇಶ್ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ತುಮಕೂರು ನಗರ
ಜಿ.ಬಿ.ಜ್ಯೋತಿಗಣೇಶ್ 59,165
ಗೆಲುವಿನ ಅಂತರ 3,198
ಪ್ರತಿಸ್ಪರ್ಧಿ: ಎನ್‌.ಗೋವಿಂದರಾಜು (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ತುಮಕೂರು ಗ್ರಾಮಾಂತರ
ಬಿ.ಸುರೇಶ್‌ಗೌಡ 89,191
ಗೆಲುವಿನ ಅಂತರ 4,594
ಪ್ರತಿಸ್ಪರ್ಧಿ: ಡಿ.ಸಿ.ಗೌರಿಶಂಕರ್ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ತುರುವೇಕೆರೆ
ಎಂ.ಟಿ.ಕೃಷ್ಣಪ್ಪ 68,163
ಗೆಲುವಿನ ಅಂತರ 9,923
ಪ್ರತಿಸ್ಪರ್ಧಿ: ಜಯರಾಂ ಎ.ಎಸ್ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಚಿಕ್ಕಬಳ್ಳಾಪುರ ಜಿಲ್ಲೆ – 5

ಚಿಕ್ಕಬಳ್ಳಾಪುರ
ಪ್ರದೀಪ್ ಈಶ್ವರ್ 86,224
ಗೆಲುವಿನ ಅಂತರ 10,642
ಪ್ರತಿಸ್ಪರ್ಧಿ: ಡಾ.ಕೆ.ಸುಧಾಕರ್(ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ(ಬಿಜೆಪಿ) (2019ರ ಉಪಚುನಾವಣೆ)

ಬಾಗೇಪಲ್ಲಿ
ಎಸ್‌.ಎನ್‌.ಸುಬ್ಬಾರೆಡ್ಡಿ 82,128
ಗೆಲುವಿನ ಅಂತರ 19,179
ಪ್ರತಿಸ್ಪರ್ಧಿ: ಸಿ.ಮುನಿರಾಜು(ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಚಿಂತಾಮಣಿ
ಡಾ.ಎಂ.ಸಿ.ಸುಧಾಕರ್ 97,324
ಗೆಲುವಿನ ಅಂತರ 29,052
ಪ್ರತಿಸ್ಪರ್ಧಿ: ಎಂ.ಕೃಷ್ಣಾರೆಡ್ಡಿ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ಗೌರಿಬಿದನೂರು
ಕೆ.ಎಚ್‌.ಪುಟ್ಟಸ್ವಾಮಿಗೌಡ (ಪಕ್ಷೇತರ) 83,837
ಗೆಲುವಿನ ಅಂತರ 37,286
ಪ್ರತಿಸ್ಪರ್ಧಿ: ಎನ್‌.ಎಚ್‌.ಶಿವಶಂಕರರೆಡ್ಡಿ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಶಿಡ್ಲಘಟ್ಟ
ಬಿ.ಎನ್‌.ರವಿಕುಮಾರ್ 68,932
ಗೆಲುವಿನ ಅಂತರ 16,772
ಪ್ರತಿಸ್ಪರ್ಧಿ: ಪುಟ್ಟು ಆಂಜನಪ್ಪ (ಪಕ್ಷೇತರ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಕೋಲಾರ ಜಿಲ್ಲೆ – 6

ಶ್ರೀನಿವಾಸಪುರ
ಜಿ.ಕೆ.ವೆಂಕಟಶಿವಾರೆಡ್ಡಿ 95,463
ಗೆಲುವಿನ ಅಂತರ 10,443
ಪ್ರತಿಸ್ಪರ್ಧಿ: ಕೆ.ಆರ್‌.ರಮೇಶ್ ಕುಮಾರ್ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಮುಳಬಾಗಿಲು (ಎಸ್‌ಸಿ)
ಸಮೃದ್ಧಿ ಮಂಜುನಾಥ್ 94,254
ಗೆಲುವಿನ ಅಂತರ 26,268
ಪ್ರತಿಸ್ಪರ್ಧಿ: ವಿ.ಆದಿನಾರಾಯಣ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಪಕ್ಷೇತರ)

ಕೆಜಿಎಫ್ (ಎಸ್‌ಸಿ)
ರೂಪಕಲಾ ಎಂ. 81,569
ಗೆಲುವಿನ ಅಂತರ 50,467
ಪ್ರತಿಸ್ಪರ್ಧಿ: ಅಶ್ವಿನಿ ಸಂಪಂಗಿ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಬಂಗಾರಪೇಟೆ (ಎಸ್‌ಸಿ)
ಎಸ್‌.ಎನ್. ನಾರಾಯಣಸ್ವಾಮಿ 77,292
ಗೆಲುವಿನ ಅಂತರ 4,711
ಪ್ರತಿಸ್ಪರ್ಧಿ: ಎಂ.ಮಲ್ಲೇಶಬಾಬು (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಕೋಲಾರ
ಕೊತ್ತೂರು ಮಂಜುನಾಥ್ 83,990
ಗೆಲುವಿನ ಅಂತರ 30,761
ಪ್ರತಿಸ್ಪರ್ಧಿ: ಸಿಎಂಆರ್ ಶ್ರೀನಾಥ್ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ:(ಜೆಡಿಎಸ್)

ಮಾಲೂರು
ಕೆ.ವೈ. ನಂಜೇಗೌಡ 50,955
ಗೆಲುವಿನ ಅಂತರ 248
ಪ್ರತಿಸ್ಪರ್ಧಿ: ಕೆ.ಎಸ್‌.ಮಂಜುನಾಥ್ ಗೌಡ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ರಾಮನಗರ ಜಿಲ್ಲೆ– 4

ಕನಕಪುರ
ಡಿ.ಕೆ. ಶಿವಕುಮಾರ್ 1,43,023
ಗೆಲುವಿನ ಅಂತರ 1,22,392
ಪ್ರತಿಸ್ಪರ್ಧಿ:ಬಿ. ನಾಗರಾಜು (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಮಾಗಡಿ
ಎಚ್‌.ಸಿ. ಬಾಲಕೃಷ್ಣ 94,650
ಗೆಲುವಿನ ಅಂತರ 11,839
ಪ್ರತಿಸ್ಪರ್ಧಿ: ಎ. ಮಂಜುನಾಥ್ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ರಾಮನಗರ
ಎಚ್‌.ಎ. ಇಕ್ಬಾಲ್ ಹುಸೇನ್ 87,690
ಗೆಲುವಿನ ಅಂತರ 10,715
ಪ್ರತಿಸ್ಪರ್ಧಿ: ನಿಖಿಲ್ ಕುಮಾರಸ್ವಾಮಿ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ಚನ್ನಪಟ್ಟಣ
ಎಚ್‌.ಡಿ. ಕುಮಾರಸ್ವಾಮಿ 96,592
ಗೆಲುವಿನ ಅಂತರ 15,915
ಪ್ರತಿಸ್ಪರ್ಧಿ: ಸಿ.ಪಿ. ಯೋಗೇಶ್ವರ್ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ಹಾಸನ ಜಿಲ್ಲೆ– 7

ಅರಸೀಕೆರೆ
ಕೆ.ಎಂ. ಶಿವಲಿಂಗೇಗೌಡ 98,375
ಗೆಲುವಿನ ಅಂತರ 20,177
ಪ್ರತಿಸ್ಪರ್ಧಿ: ಎನ್‌.ಆರ್. ಸಂತೋಷ್ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ಬೇಲೂರು
ಎಚ್‌.ಕೆ. ಸುರೇಶ್ 63,571
ಗೆಲುವಿನ ಅಂತರ 7,736
ಪ್ರತಿಸ್ಪರ್ಧಿ: ಬಿ. ಶಿವರಾಂ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ಹಾಸನ
ಸ್ವರೂಪ್ ಪ್ರಕಾಶ್ 85,176
ಗೆಲುವಿನ ಅಂತರ 7,854
ಪ್ರತಿಸ್ಪರ್ಧಿ:ಪ್ರೀತಂ ಗೌಡ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಹೊಳೆನರಸೀಪುರ
ಎಚ್‌.ಡಿ. ರೇವಣ್ಣ 88,103
ಗೆಲುವಿನ ಅಂತರ 3,152
ಪ್ರತಿಸ್ಪರ್ಧಿ: ಶ್ರೇಯಸ್ ಪಟೇಲ್ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ಸಕಲೇಶಪುರ (ಎಸ್‌ಸಿ)
ಸಿಮೆಂಟ್ ಮಂಜುನಾಥ 58,604
ಗೆಲುವಿನ ಅಂತರ 2,056
ಪ್ರತಿಸ್ಪರ್ಧಿ: ಎಚ್‌.ಕೆ. ಕುಮಾರಸ್ವಾಮಿ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ಶ್ರವಣಬೆಳಗೊಳ
ಸಿ.ಎನ್. ಬಾಲಕೃಷ್ಣ 85,668
ಗೆಲುವಿನ ಅಂತರ 6,645
ಪ್ರತಿಸ್ಪರ್ಧಿ:ಎಂ.ಎ. ಗೋಪಾಲಸ್ವಾಮಿ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)


ಅರಕಲಗೂಡು
ಎ.ಮಂಜು 74,643
ಗೆಲುವಿನ ಅಂತರ 19,605
ಪ್ರತಿಸ್ಪರ್ಧಿ: ಎಂ.ಟಿ. ಕೃಷ್ಣೇಗೌಡ (ಪಕ್ಷೇತರ)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ಮಧ್ಯ ಕರ್ನಾಟಕ, ಹಾಸನ, ರಾಮನಗರ

ಜಿಲ್ಲೆ	ಒಟ್ಟು	ಬಿಜೆಪಿ	ಕಾಂಗ್ರೆಸ್	ಜೆಡಿಎಸ್	ಇತರೆ
ಚಿತ್ರದುರ್ಗ	6	1	5	0	0
ದಾವಣಗೆರೆ	7	1	6	0	0
ವಿಜಯನಗರ	5	1	2	1	1
ಶಿವಮೊಗ್ಗ	7	3	3	1	0
ತುಮಕೂರು	11	2	7	2	0
ಚಿಕ್ಕಬಳ್ಳಾಪುರ	5	0	3	1	1
ಕೋಲಾರ	6	0	4	2	0
ರಾಮನಗರ	4	0	3	1	0
ಹಾಸನ	7	2	1	4	0

ಮಧ್ಯ ಕರ್ನಾಟಕ

9 ಜಿಲ್ಲೆಗಳು | 58 ಒಟ್ಟು ಕ್ಷೇತ್ರಗಳು



ನಿರೀಕ್ಷಿತ ಫಲ ನೀಡದ ‘ಮೋದಿ ನಾಮಬಲ’

• ಸಿದ್ದಯ್ಯ ಹಿರೇಮಠ

ವಿಶ್ಲೇಷಣೆ

ದಾವಣಗೆರೆ: ರಾಜಕೀಯವಾಗಿ ಅತ್ಯಂತ ಪ್ರಮುಖವಾಗಿರುವ ಮಧ್ಯ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ ಐದು ವರ್ಷಗಳ ಹಿಂದೆ ನಡೆದಿದ್ದ ಚುನಾವಣೆಯ ಫಲಿತಾಂಶ ಈ ಬಾರಿ ತದ್ವಿರುದ್ಧವಾಗಿದೆ.

ಬಯಲುಸೀಮೆಯ ದಾವಣಗೆರೆ, ಚಿತ್ರದುರ್ಗ ಜಿಲ್ಲೆ ಮತ್ತು ಅರೆ ಮಲೆನಾಡು, ಮಲೆನಾಡು ಪ್ರದೇಶ ಒಳಗೊಂಡಿರುವ ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳ 25 ಕ್ಷೇತ್ರಗಳಲ್ಲಿ ಕಳೆದ ಬಾರಿ 20ರಲ್ಲಿ ಗೆದ್ದು ಬೀಗಿದ್ದ ಬಿಜೆಪಿ ಈ ಬಾರಿ 5ಕ್ಕೆ ತೃಪ್ತಿಪಟ್ಟುಕೊಳ್ಳುವಂತಾಗಿದೆ. ಕಳೆದ ಬಾರಿ ಐದು ಕ್ಷೇತ್ರಗಳಲ್ಲಿ ಮಾತ್ರ ಗೆಲುವು ದಾಖಲಿಸಿದ್ದ ಕಾಂಗ್ರೆಸ್ ಈ ಸಲ 19 ಕ್ಷೇತ್ರಗಳಲ್ಲಿ ವಿಜಯದ ನಗೆ ಬೀರಿದ್ದರೆ, ಶಿವಮೊಗ್ಗ ಗ್ರಾಮೀಣ ಕ್ಷೇತ್ರದಲ್ಲಿ ಗೆಲ್ಲುವ ಮೂಲಕ ಜೆಡಿಎಸ್ ತನ್ನ ಅಸ್ತಿತ್ವ ದಾಖಲಿಸಿದೆ.

ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಹಿಂದುತ್ವದ ಪ್ರಖರ ಪ್ರತಿಪಾದನೆ ನಡುವೆಯೂ ಆಗಿರುವ ಹಿನ್ನಡೆ ಬಿಜೆಪಿಗೆ ಭಾರೀ ಪೆಟ್ಟುಕೊಟ್ಟಿದೆ. ಚಿತ್ರದುರ್ಗ, ದಾವಣಗೆರೆಗಳಲ್ಲಿ ಈ ಬಾರಿ ಎದುರಾದ ‘ಆಡಳಿತ ವಿರೋಧಿ’ ಅಲೆಯಿಂದಾಗಿ ಗೆಲುವು ಕೈಗೆಟುಕದೇ ಹೋಗಿದೆ.

9 ತಿಂಗಳ ಹಿಂದೆ ದಾವಣಗೆರೆಯಲ್ಲಿ ನಡೆದಿದ್ದ ಸಿದ್ದರಾಮಯ್ಯ ಅವರ 75ನೇ ಜನ್ಮದಿನದ ‘ಅಮೃತೋತ್ಸವ’ದಲ್ಲಿ ಕಂಡುಬಂದ ಕಾಂಗ್ರೆಸ್ ಪರವಾದ ‘ಕರತಾಡನ’, ಮತದಾರನ ಮನದಾಳದ ಮುನ್ಸೂಚನೆಯಂತಿತ್ತು. ಆಗಲೇ ಜನರ ‘ನಾಡಿಮಿಡಿತ’ ಅರಿತಂತಿದ್ದ ಪಕ್ಷದ ವರಿಷ್ಠರು ಅಳೆದುತೂಗಿ ಟಿಕೆಟ್ ಹಂಚಿರುವುದೂ ಫಲ ನೀಡಿದೆ.

ನಂತರ ‘ಭಾರತ್ ಜೋಡೊ’ ಯಾತ್ರೆಯ ಭಾಗವಾಗಿ ರಾಹುಲ್ ಗಾಂಧಿ ನಡೆಸಿದ ಸಂಚಾರ ಪಕ್ಷಕ್ಕೆ ಪುಷ್ಟಿ ನೀಡಿದೆ. ಅವರು ಓಡಾಡಿದ ಚಿತ್ರದುರ್ಗದ ಮೂರೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿರುವುದು ಪಾದಯಾತ್ರೆಯ ಯಶಸ್ಸಿಗೆ ಕನ್ನಡಿ ಹಿಡಿದಿದೆ.

ಆದರೆ, ಈ ಭಾಗದಲ್ಲಿ ಪ್ರಧಾನಿ ನರೇಂದ್ರ ಮೋದಿ ನಡೆಸಿದ ಪ್ರಚಾರ ಪ್ರಯೋಜನಕ್ಕೆ ಬಾರದಾಗಿದೆ. ಅದಕ್ಕೆ ಸ್ವಜನಪಕ್ಷಪಾತ, ವಿರೋಧಿ ಪಾಳಯದ ಮುಖಂಡರನ್ನು ಹೀಯಾಳಿಸುವಿಕೆ, ಕಾರ್ಯಕರ್ತರು ಮತ್ತು ಅಲ್ಪಸಂಖ್ಯಾತರ ಕಡೆಗಣನೆ, ಜನಸಾಮಾನ್ಯರೊಂದಿಗೆ ಅಂತರ ಕಾಯ್ದುಕೊಳ್ಳುವಿಕೆ, ಭ್ರಷ್ಟಾಚಾರ, ಬೆಲೆ ಏರಿಕೆ, ಮೀಸಲಾತಿ ವಿಚಾರಗಳು ಕಾರಣವಾಗಿವೆ.

‘ಮೋದಿ ನಾಮಬಲದಿಂದಲೇ ಗೆಲುವು ಸಾಧ್ಯ’ ಎಂಬ ವಿಶ್ವಾಸವನ್ನೂ ಈ ಫಲಿತಾಂಶ ಸುಳ್ಳಾಗಿಸಿದೆ. ಬಿ.ಎಸ್.ಯಡಿಯೂರಪ್ಪ ಅವರ ‘ನಿವೃತ್ತಿ’ಯಿಂದ ತೆರವಾಗಿದ್ದ ಶಿಕಾರಿಪುರ ಕ್ಷೇತ್ರದಲ್ಲಿ ಪುತ್ರ ಬಿ.ವೈ.ವಿಜಯೇಂದ್ರ ಕೇವಲ 11,008 ಮತಗಳ ಅಂತರದ ಗೆದ್ದಿರುವುದು ಹಾಗೂ ಜಿಲ್ಲೆಯಲ್ಲಿ ಮೂರು ಕ್ಷೇತ್ರಗಳನ್ನು ಕಳೆದುಕೊಂಡಿರುವುದು ಮತದಾರ ಬಿಜೆಪಿಯ ಮೇಲೆ ಮುನಿಸಿಕೊಂಡಿದ್ದನ್ನು ಸ್ಪಷ್ಟಪಡಿಸಿದೆ.

ಚಿಕ್ಕಮಗಳೂರಿನಲ್ಲಿ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ಹೊನ್ನಾಳಿಯಲ್ಲಿ ಎಂ.ಪಿ. ರೇಣುಕಾಚಾರ್ಯ, ಚಿತ್ರದುರ್ಗದಲ್ಲಿ ಜಿ.ಎಚ್. ತಿಪ್ಪಾರೆಡ್ಡಿ, ಸೊರಬದಲ್ಲಿ ಕುಮಾರ್ ಬಂಗಾರಪ್ಪ, ಸಾಗರದಲ್ಲಿ ಹರತಾಳು ಹಾಲಪ್ಪ ಸೋತಿರುವ ಬಿಜೆಪಿಯ ಪ್ರಮುಖರಾಗಿದ್ದಾರೆ. ಕಾಂಗ್ರೆಸ್‌ನಿಂದ ಸೋತವರಲ್ಲಿ ಹೊಳಲ್ಕೆರೆಯ ಎಚ್.ಆಂಜನೇಯ, ತೀರ್ಥಹಳ್ಳಿಯ ಕಿಮ್ಮನೆ ರತ್ನಾಕರ ಪ್ರಮುಖರು.

‘ಹಿಂದುತ್ವದ ಉಗ್ರ ಪ್ರತಿಪಾದನೆ ಎಲ್ಲ ಬಾರಿಯೂ ಗೆಲುವು ತಂದುಕೊಡಬಲ್ಲದು’ ಎಂಬ ಸಿ.ಟಿ.ರವಿ ನಂಬಿಕೆಯನ್ನು ಈ ಜನಾದೇಶ ಹುಸಿಗೊಳಿಸಿದೆ. ‘ಅತಿಥಿ’ಯಂತೆ ಬಂದು ಹೋಗುತ್ತ, ಕ್ಷೇತ್ರ ಕಡೆಗಣಿಸಿದ್ದ ಧೋರಣೆಯೇ ಅವರಿಗೆ ಮುಳುವಾಗಿದೆ.

ಕಾಣದ ಅಭಿವೃದ್ಧಿ, ಈಡೇರದ ಭರವಸೆ, ಪ್ರಮುಖ ಯೋಜನೆಗಳ ಜಾರಿಯಲ್ಲಿನ ವಿಳಂಬ, ಶರಾವತಿ ಸಂತ್ರಸ್ತರ ಅಳಲು, ವಿಐಎಸ್‌ಎಲ್‌ನ ದುಃಸ್ಥಿತಿಗೆ ಕಾರಣವಾದ ಅಂಶಗಳು ಆಡಳಿತ ವಿರೋಧಿ ಅಲೆಯಾಗಿ ಹೊರಹೊಮ್ಮಿ ಮಧ್ಯ ಕರ್ನಾಟಕದ ಮತದಾರನ ಅವಕೃಪೆಗೆ ಪಾತ್ರವಾಗುವಂತೆ ಮಾಡಿದೆ. ಬಿಜೆಪಿಯ ನಿಲುವಿಗೆ ಬೇಸತ್ತ ಮತದಾರ ಕಾಂಗ್ರೆಸ್‌ನತ್ತ ಆಸೆಗಣ್ಣಿನಿಂದ ನೋಡುವಂತೆ ಮಾಡಿದೆ.

ಹಳೇ ಮೈಸೂರು ಭಾಗ- ಬೆಂಗಳೂರು ನಗರ: ವಿಜೇತರ ವಿವರ

ಬೆಂಗಳೂರು – 28 ಕ್ಷೇತ್ರಗಳು

ಯಲಹಂಕ
ಎಸ್.ಆರ್.ವಿಶ್ವನಾಥ್ 1,41,538
ಗೆಲುವಿನ ಅಂತರ 64,110
ಪ್ರತಿಸ್ಪರ್ಧಿ: ಕೇಶವ ಬಿ.ರಾಜಣ್ಣ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಕೆ.ಆರ್. ಪುರ
ಭೈರತಿ ಬಸವರಾಜು 1,39,925
ಗೆಲುವಿನ ಅಂತರ 24,301
ಪ್ರತಿಸ್ಪರ್ಧಿ: ಡಿ.ಕೆ.ಮೋಹನ್(ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಬ್ಯಾಟರಾಯನಪುರ
ಕೃಷ್ಣ ಬೈರೇಗೌಡ 1,60,182
ಗೆಲುವಿನ ಅಂತರ 38,204
ಪ್ರತಿಸ್ಪರ್ಧಿ: ತಮ್ಮೇಶಗೌಡ(ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಯಶವಂತಪುರ
ಎಸ್.ಟಿ.ಸೋಮಶೇಖರ್ 1,69,149
ಗೆಲುವಿನ ಅಂತರ 15,118
ಪ್ರತಿಸ್ಪರ್ಧಿ: ಟಿ.ಎನ್.ಜವರಾಯಿಗೌಡ(ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ರಾಜರಾಜೇಶ್ವರಿ ನಗರ
ಮುನಿರತ್ನ 1,27,980
ಗೆಲುವಿನ ಅಂತರ 11,842
ಪ್ರತಿಸ್ಪರ್ಧಿ: ಪ್ರತಿಸ್ಪರ್ಧಿ: ಕುಸುಮಾ ಎಚ್.(ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ದಾಸರಹಳ್ಳಿ
ಎಸ್.ಮುನಿರಾಜು 91,289
ಗೆಲುವಿನ ಅಂತರ 9,235
ಪ್ರತಿಸ್ಪರ್ಧಿ: ಆರ್.ಮಂಜುನಾಥ್(ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ಮಹಾಲಕ್ಷ್ಮಿ ಬಡಾವಣೆ
ಕೆ.ಗೋಪಾಲಯ್ಯ 96,424
ಗೆಲುವಿನ ಅಂತರ 51,165
ಪ್ರತಿಸ್ಪರ್ಧಿ: ಕೇಶವಮೂರ್ತಿ ಎಸ್.(ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಮಲ್ಲೇಶ್ವರ
ಸಿ.ಎನ್.ಅಶ್ವತ್ಥನಾರಾಯಣ 80,606
ಗೆಲುವಿನ ಅಂತರ 41,302
ಪ್ರತಿಸ್ಪರ್ಧಿ: ಅನೂಪ್ ಅಯ್ಯಂಗಾರ್(ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಹೆಬ್ಬಾಳ
ಭೈರತಿ ಸುರೇಶ್ 91,838
ಗೆಲುವಿನ ಅಂತರ 30,754
ಪ್ರತಿಸ್ಪರ್ಧಿ: ಕಟ್ಟಾ ಜಗದೀಶ್(ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಪುಲಿಕೇಶಿನಗರ (ಎಸ್‌ಸಿ)
ಎ.ಸಿ. ಶ್ರೀನಿವಾಸ್ 87,316
ಗೆಲುವಿನ ಅಂತರ 62,210
ಪ್ರತಿಸ್ಪರ್ಧಿ: ಅಖಂಡ ಶ್ರೀನಿವಾಸಮೂರ್ತಿ(ಬಿಎಸ್‌ಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಸರ್ವಜ್ಞ ನಗರ
ಕೆ.ಜೆ. ಜಾರ್ಜ್ 1,18,783
ಗೆಲುವಿನ ಅಂತರ 55,768
ಪ್ರತಿಸ್ಪರ್ಧಿ: ಪದ್ಮನಾಭರೆಡ್ಡಿ(ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಸಿ.ವಿ.ರಾಮನ್ ನಗರ(ಎಸ್‌ಸಿ)
ಎಸ್.ರಘು 69,228
ಗೆಲುವಿನ ಅಂತರ 16,395
ಪ್ರತಿಸ್ಪರ್ಧಿ: ಆನಂದ್‌ಕುಮಾರ್ ಎಸ್.(ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಶಿವಾಜಿನಗರ
ರಿಜ್ವಾನ್ ಅರ್ಷದ್ 64,913
ಗೆಲುವಿನ ಅಂತರ 23,194
ಪ್ರತಿಸ್ಪರ್ಧಿ: ಚಂದ್ರ ಎನ್.(ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಶಾಂತಿನಗರ
ಎನ್.ಎ. ಹ್ಯಾರಿಸ್ 61,030
ಗೆಲುವಿನ ಅಂತರ 7,125
ಪ್ರತಿಸ್ಪರ್ಧಿ: ಕೆ.ಶಿವಕುಮಾರ್(ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಗಾಂಧಿನಗರ
ದಿನೇಶ್ ಗುಂಡೂರಾವ್ 54,118
ಗೆಲುವಿನ ಅಂತರ 105
ಪ್ರತಿಸ್ಪರ್ಧಿ: ಸಪ್ತಗಿರಿಗೌಡ(ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ರಾಜಾಜಿನಗರ
ಎಸ್.ಸುರೇಶ್ ಕುಮಾರ್ 58,624
ಗೆಲುವಿನ ಅಂತರ 8,060
ಪ್ರತಿಸ್ಪರ್ಧಿ: ಪುಟ್ಟಣ್ಣ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಗೋವಿಂದರಾಜನಗರ
ಪ್ರಿಯಕೃಷ್ಣ 82,134
ಗೆಲುವಿನ ಅಂತರ 12,516
ಪ್ರತಿಸ್ಪರ್ಧಿ: : ಕೆ. ಉಮೇಶ್ ಶೆಟ್ಟಿ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ವಿಜಯನಗರ
ಎಂ.ಕೃಷ್ಣಪ್ಪ 80,157
ಗೆಲುವಿನ ಅಂತರ 7,324
ಪ್ರತಿಸ್ಪರ್ಧಿ: ಎಚ್. ರವೀಂದ್ರ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಚಾಮರಾಜಪೇಟೆ
ಜಮೀರ್ ಅಹಮದ್ ಖಾನ್ 77,631
ಗೆಲುವಿನ ಅಂತರ 53,953
ಪ್ರತಿಸ್ಪರ್ಧಿ: ಭಾಸ್ಕರ್ ರಾವ್ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಚಿಕ್ಕಪೇಟೆ
ಉದಯ್ ಗರುಡಾಚಾರ್ 57,299
ಗೆಲುವಿನ ಅಂತರ 12,113
ಪ್ರತಿಸ್ಪರ್ಧಿ: ಆರ್.ವಿ. ದೇವರಾಜ್ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಬಸವನಗುಡಿ
ರವಿ ಸುಬ್ರಹ್ಮಣ್ಯ 78,854
ಗೆಲುವಿನ ಅಂತರ 54,978
ಪ್ರತಿಸ್ಪರ್ಧಿ: ಯು.ಬಿ.ವೆಂಕಟೇಶ್ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಪದ್ಮನಾಭನಗರ
ಆರ್. ಅಶೋಕ 98,750
ಗೆಲುವಿನ ಅಂತರ 55,175
ಪ್ರತಿಸ್ಪರ್ಧಿ: ವಿ. ರಘುನಾಥ್ ನಾಯ್ಡು (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಬಿಟಿಎಂ ಲೇಔಟ್
ರಾಮಲಿಂಗಾರೆಡ್ಡಿ 68,557
ಗೆಲುವಿನ ಅಂತರ 9,222
ಪ್ರತಿಸ್ಪರ್ಧಿ: ಕೆ.ಆರ್. ಶ್ರೀಧರ್ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಜಯನಗರ
ಸಿ.ಕೆ. ರಾಮಮೂರ್ತಿ 57,797
ಗೆಲುವಿನ ಅಂತರ 16
ಪ್ರತಿಸ್ಪರ್ಧಿ: ಸೌಮ್ಯ ರೆಡ್ಡಿ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಮಹದೇವಪುರ(ಎಸ್‌ಸಿ)
ಮಂಜುಳಾ ಲಿಂಬಾವಳಿ 1,81,731
ಗೆಲುವಿನ ಅಂತರ 44,501
ಪ್ರತಿಸ್ಪರ್ಧಿ:ಎಚ್. ನಾಗೇಶ್ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಬೊಮ್ಮನಹಳ್ಳಿ
ಸತೀಶ್ ರೆಡ್ಡಿ 1,13,574
ಗೆಲುವಿನ ಅಂತರ 24,215
ಪ್ರತಿಸ್ಪರ್ಧಿ: ಉಮಾಪತಿ ಶ್ರೀನಿವಾಸ್ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಬೆಂಗಳೂರು ದಕ್ಷಿಣ
ಎಂ.ಕೃಷ್ಣಪ್ಪ 1,96,220
ಗೆಲುವಿನ ಅಂತರ 49,699
ಪ್ರತಿಸ್ಪರ್ಧಿ:ಆರ್.ಕೆ. ರಮೇಶ್ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಆನೇಕಲ್
ಬಿ.ಶಿವಣ್ಣ 1,34,797
ಗೆಲುವಿನ ಅಂತರ 31,325
ಪ್ರತಿಸ್ಪರ್ಧಿ: ಶ್ರೀನಿವಾಸ ಸಿ. ಹುಲ್ಲಳ್ಳಿ(ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಬೆಂಗಳೂರು ಗ್ರಾಮಾಂತರ – 4

ಹೊಸಕೋಟೆ
ಶರತ್ ಬಚ್ಚೇಗೌಡ 1,06,769
ಗೆಲುವಿನ ಅಂತರ 5,075
ಪ್ರತಿಸ್ಪರ್ಧಿ: ಎಂಟಿಬಿ ನಾಗರಾಜ್ (ಬಿಜೆಪಿ)
2018ರಲ್ಲಿ ಗೆದ್ದ ಪಕ್ಷ (ಕಾಂಗ್ರೆಸ್) 2019ರಲ್ಲಿ (ಪಕ್ಷೇತರ)

ದೇವನಹಳ್ಳಿ
ಕೆ.ಎಚ್.ಮುನಿಯಪ್ಪ 73,058
ಗೆಲುವಿನ ಅಂತರ 4,631
ಪ್ರತಿಸ್ಪರ್ಧಿ: ನಿಸರ್ಗ ನಾರಾಯಣಸ್ವಾಮಿ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ದೊಡ್ಡಬಳ್ಳಾಪುರ
ಧೀರಜ್ ಮುನಿರಾಜು 85,144
ಗೆಲುವಿನ ಅಂತರ 31,753
ಪ್ರತಿಸ್ಪರ್ಧಿ: ವೆಂಕಟರಮಣಯ್ಯ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ನೆಲಮಂಗಲ
ಎನ್. ಶ್ರೀನಿವಾಸಯ್ಯ 84,229
ಗೆಲುವಿನ ಅಂತರ 31,978
ಪ್ರತಿಸ್ಪರ್ಧಿ: ಡಾ.ಕೆ.ಶ್ರೀನಿವಾಸಮೂರ್ತಿ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ಮಂಡ್ಯ ಜಿಲ್ಲೆ – 7

ಮಳವಳ್ಳಿ
ಪಿ.ಎಂ.ನರೇಂದ್ರಸ್ವಾಮಿ 1,06,498
ಗೆಲುವಿನ ಅಂತರ 46,846
ಪ್ರತಿಸ್ಪರ್ಧಿ: ಡಾ.ಕೆ.ಅನ್ನದಾನಿ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ಮದ್ದೂರು
ಕದಲೂರು ಉದಯ್ 87,019
ಗೆಲುವಿನ ಅಂತರ 24,113
ಪ್ರತಿಸ್ಪರ್ಧಿ: ಡಿ.ಸಿ.ತಮ್ಮಣ್ಣ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ಮೇಲುಕೋಟೆ
ದರ್ಶನ್ ಪುಟ್ಟಣ್ಣಯ್ಯ 91,151
ಗೆಲುವಿನ ಅಂತರ 10,862
ಪ್ರತಿಸ್ಪರ್ಧಿ: ಸಿ.ಎಸ್.ಪುಟ್ಟರಾಜು (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ಮಂಡ್ಯ
ಗಣಿಗ ಪಿ. ರವಿಕುಮಾರ್ 61,411
ಗೆಲುವಿನ ಅಂತರ 2,019
ಪ್ರತಿಸ್ಪರ್ಧಿ: ಬಿ.ಆರ್.ರಾಮಚಂದ್ರ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ಶ್ರೀರಂಗಪಟ್ಟಣ
ಎ.ಬಿ.ರಮೇಶ್ ಬಂಡಿಸಿದ್ದೇಗೌಡ 72,817
ಗೆಲುವಿನ ಅಂತರ 11,137
ಪ್ರತಿಸ್ಪರ್ಧಿ: ರವೀಂದ್ರ ಶ್ರೀಕಂಠಯ್ಯ(ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ನಾಗಮಂಗಲ
ಎನ್.ಚಲುವರಾಯಸ್ವಾಮಿ 90,634
ಗೆಲುವಿನ ಅಂತರ 4,414
ಪ್ರತಿಸ್ಪರ್ಧಿ: ಸುರೇಶ್‌ಗೌಡ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ಕೆ.ಆರ್.ಪೇಟೆ
ಎಚ್.ಟಿ.ಮಂಜು 80,646
ಗೆಲುವಿನ ಅಂತರ 22,344
ಪ್ರತಿಸ್ಪರ್ಧಿ: ಬಿ.ಎಲ್.ದೇವರಾಜು (ಕಾಂಗ್ರೆಸ್))
2018ರಲ್ಲಿ ಗೆದ್ದ ಪಕ್ಷ (ಜೆಡಿಎಸ್) 2019ರಲ್ಲಿ (ಬಿಜೆಪಿ)

ಕೊಡಗು ಜಿಲ್ಲೆ – 2

ಮಡಿಕೇರಿ
ಡಾ.ಮಂತರ್‌ಗೌಡ 84,879
ಗೆಲುವಿನ ಅಂತರ 4,402
ಪ್ರತಿಸ್ಪರ್ಧಿ: ಎಂ.ಪಿ.ಅಪ್ಪಚ್ಚುರಂಜನ್ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ವಿರಾಜಪೇಟೆ
ಎ.ಎಸ್.ಪೊನ್ನಣ್ಣ 83,791
ಗೆಲುವಿನ ಅಂತರ 4,291
ಪ್ರತಿಸ್ಪರ್ಧಿ: ಕೆ.ಜಿ.ಬೋಪಯ್ಯ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಮೈಸೂರು ಜಿಲ್ಲೆ – 11

ಪಿರಿಯಾಪಟ್ಟಣ
ಕೆ.ವೆಂಕಟೇಶ್ 85,944
ಗೆಲುವಿನ ಅಂತರ 19,675
ಪ್ರತಿಸ್ಪರ್ಧಿ: ಕೆ.ಮಹದೇವ್ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ಕೃಷ್ಣರಾಜನಗರ
ಡಿ.ರವಿಶಂಕರ್ 1,04,502
ಗೆಲುವಿನ ಅಂತರ 25,639
ಪ್ರತಿಸ್ಪರ್ಧಿ: ಸಾ.ರಾ.ಮಹೇಶ್(ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ಹುಣಸೂರು
ಜಿ.ಡಿ.ಹರೀಶ್‌ಗೌಡ 94,666
ಗೆಲುವಿನ ಅಂತರ 2,412
ಪ್ರತಿಸ್ಪರ್ಧಿ: ಎಚ್.ಪಿ.ಮಂಜುನಾಥ್ (ಕಾಂಗ್ರೆಸ್)
2018ರಲ್ಲಿ ಗೆದ್ದ ಪಕ್ಷ (ಜೆಡಿಎಸ್) 2019ರಲ್ಲಿ (ಕಾಂಗ್ರೆಸ್)

ಎಚ್.ಡಿ.ಕೋಟೆ
ಅನಿಲ್ ಚಿಕ್ಕಮಾದು 84,359
ಗೆಲುವಿನ ಅಂತರ 34,939
ಪ್ರತಿಸ್ಪರ್ಧಿ: ಕೆ.ಎಂ.ಕೃಷ್ಣನಾಯಕ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ನಂಜನಗೂಡು
ದರ್ಶನ್ ಧ್ರುವನಾರಾಯಣ 1,09,125
ಗೆಲುವಿನ ಅಂತರ 47,607
ಪ್ರತಿಸ್ಪರ್ಧಿ: ಬಿ.ಹರ್ಷವರ್ಧನ್ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಚಾಮುಂಡೇಶ್ವರಿ
ಜಿ.ಟಿ.ದೇವೇಗೌಡ 1,04,873
ಗೆಲುವಿನ ಅಂತರ 25,500
ಪ್ರತಿಸ್ಪರ್ಧಿ: ಮಾವಿನಹಳ್ಳಿ ಸಿದ್ದೇಗೌಡ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ಕೃಷ್ಣರಾಜ
ಟಿ.ಎಸ್.ಶ್ರೀವತ್ಸ 73,670
ಗೆಲುವಿನ ಅಂತರ 7,213
ಪ್ರತಿಸ್ಪರ್ಧಿ: ಎಂ.ಕೆ.ಸೋಮಶೇಖರ್ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಚಾಮರಾಜ
ಕೆ.ಹರೀಶ್‌ಗೌಡ 72,931
ಗೆಲುವಿನ ಅಂತರ 4,094
ಪ್ರತಿಸ್ಪರ್ಧಿ: ಎಲ್.ನಾಗೇಂದ್ರ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ನರಸಿಂಹರಾಜ
ತನ್ವೀರ್ ಸೇಠ್ 83,480
ಗೆಲುವಿನ ಅಂತರ 31,120
ಪ್ರತಿಸ್ಪರ್ಧಿ: ಎಸ್.ಸಂದೇಶ್ ಸ್ವಾಮಿ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ವರುಣ
ಸಿದ್ದರಾಮಯ್ಯ 1,19,816
ಗೆಲುವಿನ ಅಂತರ 46,163
ಪ್ರತಿಸ್ಪರ್ಧಿ: ವಿ.ಸೋಮಣ್ಣ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ತಿ.ನರಸೀಪುರ
ಡಾ.ಎಚ್.ಸಿ.ಮಹದೇವಪ್ಪ 77,884
ಗೆಲುವಿನ ಅಂತರ 18,619
ಪ್ರತಿಸ್ಪರ್ಧಿ: ಎಂ.ಅಶ್ವಿನ್‌ಕುಮಾರ್ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)


ಚಾಮರಾಜನಗರ ಜಿಲ್ಲೆ – 4

ಹನೂರು
ಎಂ.ಆರ್.ಮಂಜುನಾಥ್ 75,632
ಗೆಲುವಿನ ಅಂತರ 17,654
ಪ್ರತಿಸ್ಪರ್ಧಿ: ಆರ್.ನರೇಂದ್ರ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಕೊಳ್ಳೇಗಾಲ (ಎಸ್‌ಸಿ)
ಎ.ಆರ್.ಕೃಷ್ಣಮೂರ್ತಿ 1,08,363
ಗೆಲುವಿನ ಅಂತರ 59,519
ಪ್ರತಿಸ್ಪರ್ಧಿ: ಎನ್.ಮಹೇಶ್ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಎಸ್‌ಪಿ)

ಚಾಮರಾಜನಗರ
ಸಿ.ಪುಟ್ಟರಂಗಶೆಟ್ಟಿ 83,858
ಗೆಲುವಿನ ಅಂತರ 7,533
ಪ್ರತಿಸ್ಪರ್ಧಿ: ವಿ.ಸೋಮಣ್ಣ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಗುಂಡ್ಲುಪೇಟೆ
ಎಚ್.ಎಂ.ಗಣೇಶ್ ಪ್ರಸಾದ್ 1,07,794
ಗೆಲುವಿನ ಅಂತರ 36,675
ಪ್ರತಿಸ್ಪರ್ಧಿ: ಸಿ.ಎಸ್.ನಿರಂಜನಕುಮಾರ್ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)



ಹಳೇ ಮೈಸೂರು- ಬೆಂಗಳೂರು ನಗರ ವ್ಯಾಪ್ತಿ

ಜಿಲ್ಲೆ	ಒಟ್ಟು	ಕಾಂಗ್ರೆಸ್	ಬಿಜೆಪಿ	ಜೆಡಿಎಸ್	ಇತರೆ
*ಬೆಂಗಳೂರು ನಗರ	28	12*	15	0	0
ಬೆಂಗಳೂರು ಗ್ರಾ	4	3	1	0	0
ಮಂಡ್ಯ	7	5	0	1	1
ಕೊಡಗು	2	2	0	0	0
ಮೈಸೂರು	11	8	1	2	0
ಚಾಮರಾಜನಗರ	4	3	0	1	0
ಒಟ್ಟು	56	33	17	4	1

ಸಿದ್ದರಾಮಯ್ಯ ಕಟ್ಟಿ ಹಾಕುವ ತಂತ್ರ ವಿಫಲ

• ಕೆ.ನರಸಿಂಹಮೂರ್ತಿ

ಮೈಸೂರು: ಜಿಲ್ಲೆಯ ವರುಣದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ಅವರನ್ನು ಕಟ್ಟಿಹಾಕುವ ಬಿಜೆಪಿ ತಂತ್ರ ವಿಫಲವಾಗಿದೆ. ಬಿಜೆಪಿಯ ವಿ.ಸೋಮಣ್ಣ, ವರುಣ ಜೊತೆಗೆ ಚಾಮರಾಜನಗರ ಕ್ಷೇತ್ರದಲ್ಲೂ ಸೋಲುಂಡಿದ್ದಾರೆ.

2008ರಲ್ಲಿ ಕ್ಷೇತ್ರ ಅಸ್ತಿತ್ವಕ್ಕೆ ಬಂದ ನಂತರದ ಮೂರು ಚುನಾವಣೆಗಳಲ್ಲೂ ಕಾಂಗ್ರೆಸ್ ಗೆದ್ದಿದ್ದು ಈಗಲೂ ಗೆಲುವಿನ ಓಟವನ್ನು ಮುಂದುವರಿಸಿದೆ. ಇದು 'ಸಿದ್ದರಾಮಯ್ಯನವರ ಭದ್ರಕೋಟೆ' ಎಂಬುದು ಮತ್ತೆ ಸಾಬೀತಾಗಿದೆ.

ತವರು ಕ್ಷೇತ್ರದಲ್ಲಿ 'ಕೊನೆಯ ಚುನಾವಣೆ' ಎದುರಿಸಿದ ಸಿದ್ದರಾಮಯ್ಯನ ವಿರುದ್ಧ ವೀರಶೈವ-ಲಿಂಗಾಯತ ಮತಗಳನ್ನು ಸೆಳೆಯುವ ಮೂಲಕ ಗೆಲ್ಲಬಹುದೆಂದು ಬಿಜೆಪಿಯು ಸೋಮಣ್ಣ ಅವರನ್ನು ಬೆಂಗಳೂರಿನ ಗೋವಿಂದರಾಜನಗರದಿಂದ ಕರೆತಂದು ಕಣಕ್ಕಿಳಿಸಿತ್ತು.

ವರುಣ ಚಾಮುಂಡೇಶ್ವರಿ ಕ್ಷೇತ್ರದಲ್ಲಿದ್ದಾಗ 'ಸಿದ್ದರಾಮಯ್ಯ ನಿರ್ಮಿಸಿದ್ದ ವರುಣ ನಾಲೆ'ಯಿಂದಾದ ಅನುಕೂಲಗಳೇ ಜನರಿಗೆ ಆಪ್ತವಾಗಿತ್ತು ಎಂಬುದನ್ನು ಫಲಿತಾಂಶ ಸಾಬೀತುಪಡಿಸಿದೆ. ಕಾಂಗ್ರೆಸ್ ಪರವಾದ ಸಾಂಪ್ರದಾಯಿಕ ಮತಗಳು, ಅಹಿಂದ ಮತಗಳು, ಕ್ಷೇತ್ರದಲ್ಲಿ ತಂದೆ-ಮಗ ಮಾಡಿರುವ ಅಭಿವೃದ್ಧಿ ಕಾರ್ಯಗಳು ಹಾಗೂ ಜಾತಿ ಅಸ್ತ್ರವನ್ನು ಮೀರಿದ ಬೆಂಬಲ ಅವರ ಕೈಹಿಡಿದಿವೆ.

'ನಾಮಪತ್ರ ಸಲ್ಲಿಸಲಷ್ಟೆ ಕ್ಷೇತ್ರಕ್ಕೆ ಬರುವೆ' ಎಂದಿದ್ದರು ಸಿದ್ದರಾಮಯ್ಯ. ಆದರೆ, ಸೋಮಣ್ಣ ಕಣಕ್ಕಿಳಿದಾಗ, 2006ರಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಎದುರಿಸಿದ್ದ ಉಪ ಚುನಾವಣೆಯಂಥದ್ದೇ ಕಠಿಣ ಸವಾಲು ಎದುರಾಗಿದ್ದರಿಂದ, ಬಿರುಸಿನ ಪ್ರಚಾರ ನಡೆಸಿದ್ದರು. ಹಲವು ಸಂಘಟನೆಗಳು, ಲೇಖಕರು, ಕಲಾವಿದರು, ಹೋರಾಟಗಾರರು ಕ್ಷೇತ್ರದಲ್ಲಿ ಸಂಚರಿಸಿ ಮತವನ್ನು ಕ್ರೋಢೀಕರಿಸಿದ್ದರು.

ಜೆಡಿಎಸ್‌ನ ಡಾ.ಭಾರತಿ ಶಂಕರ್ ಹಾಗೂ ಬಿಎಸ್‌ಪಿಯ ಎಂ.ಕೃಷ್ಣಮೂರ್ತಿ ಪ್ರಬಲ ಪೈಪೋಟಿ ನೀಡಲು ಸಾಧ್ಯವಾಗಿಲ್ಲ.

11 ಜಿಲ್ಲೆಗಳಲ್ಲಿ 'ಕೈ' ಅಬ್ಬರಕ್ಕೆ ಕುಸಿದ ಜೆಡಿಎಸ್



ವಿಶ್ಲೇಷಣೆ

ವಿ.ಎಸ್.ಸುಬ್ರಹ್ಮಣ್ಯ

ಬೆಂಗಳೂರು: ಹಳೇ ಮೈಸೂರು ಮತ್ತು ಬೆಂಗಳೂರು ಭಾಗದ 11 ಜಿಲ್ಲೆಗಳ ವ್ಯಾಪ್ತಿಯಲ್ಲಿ ಕಾಂಗ್ರೆಸ್‌ನ ಅಬ್ಬರಕ್ಕೆ ಜೆಡಿಎಸ್ ಬಲ ಸಂಪೂರ್ಣವಾಗಿ ಕುಸಿದುಹೋಗಿದೆ. ಈ ಜಿಲ್ಲೆಗಳಲ್ಲಿ 2018 ರ ಚುನಾವಣೆಗೆ ಹೋಲಿಸಿದರೆ ಈ ಬಾರಿ 14 ಸ್ಥಾನಗಳನ್ನು ಹೆಚ್ಚುವರಿಯಾಗಿ ಗಳಿಸಿದ್ದು, ಅವುಗಳಲ್ಲಿ 17 ಜೆಡಿಎಸ್ ಕೈಜಾರಿ ಬಂದಿವೆ.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ಹಾಸನ, ಮಂಡ್ಯ, ರಾಮನಗರ ಮೈಸೂರು, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳಲ್ಲಿ ಕಾಂಗ್ರೆಸ್ ಈ ಚುನಾವಣೆಯಲ್ಲಿ ಭಾರಿ ಜಯಭೇರಿ ಬಾರಿಸಿದೆ. ಬೆಂಗಳೂರು ನಗರದಲ್ಲಿ ಮಾತ್ರ ಹಿಂದಿನ ಚುನಾವಣೆಗೆ ಹೋಲಿಸಿದರೆ ಕಾಂಗ್ರೆಸ್ ಈ ಬಾರಿ ಎರಡು ಸ್ಥಾನ ಕಳೆದುಕೊಂಡಿದೆ.

2018ರ ಚುನಾವಣೆಯಲ್ಲಿ 11 ಜಿಲ್ಲೆಗಳ ಒಟ್ಟು 89 ಕ್ಷೇತ್ರಗಳ ಪೈಕಿ ಬಿಜೆಪಿ 22, ಕಾಂಗ್ರೆಸ್ 34 ಮತ್ತು ಜೆಡಿಎಸ್ 31 ಸ್ಥಾನ ಗಳಿಸಿದ್ದವು. ಒಂದು ಕಡೆ ಬಿಎಸ್‌ಪಿ ಮತ್ತು ಒಂದು ಕಡೆ ಪಕ್ಷೇತರರು ಗೆದ್ದಿದ್ದರು. ಈ ಬಾರಿ ಕಾಂಗ್ರೆಸ್ 52 ಕ್ಷೇತ್ರಗಳಲ್ಲಿ ಜಯಭೇರಿ ಬಾರಿಸಿದೆ. ಜೆಡಿಎಸ್ ಬಲ 14ಕ್ಕೆ ಕುಗ್ಗಿದ್ದರೆ, ಬಿಜೆಪಿ ಕಳೆದ ಬಾರಿಗಿಂತ ಒಂದು ಸ್ಥಾನವನ್ನಷ್ಟೇ ಕಡಿಮೆ ಪಡೆದಿದೆ. ಈ ಬಾರಿಯೂ ಎರಡು ಕ್ಷೇತ್ರಗಳಲ್ಲಿ ಇತರರು ಗೆದ್ದಿದ್ದಾರೆ. ಮೇಲುಕೋಟೆಯಲ್ಲಿ ಸರ್ವೋದಯ ಕರ್ನಾಟಕ ಪಕ್ಷ ಹಾಗೂ ಗೌರಿಬಿದನೂರಿನಲ್ಲಿ ಪಕ್ಷೇತರ ಅಭ್ಯರ್ಥಿ ಗೆಲುವು ಸಾಧಿಸಿದ್ದಾರೆ.

ಜೆಡಿಎಸ್‌ನ ಭದ್ರ ಕೋಟೆಗಳಂತಿದ್ದ ಜಿಲ್ಲೆಗಳಲ್ಲೇ ಕಾಂಗ್ರೆಸ್ ಪ್ರಾಬಲ್ಯ ಮೆರೆದಿದೆ. ಮಂಡ್ಯ ಜಿಲ್ಲೆಯಲ್ಲಿ ಕಾಂಗ್ರೆಸ್ ಸ್ವತಃ ಐದು ಸ್ಥಾನಗಳನ್ನು ಗೆದ್ದಿದ್ದರೆ, ಮೇಲುಕೋಟೆಯಲ್ಲೂ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಗೆಲುವು ಸಾಧಿಸಿದ್ದಾರೆ. ಹಿಂದಿನ ಚುನಾವಣೆಗಳಲ್ಲಿ ಪೂರ್ತಿ ಏಳು ಕ್ಷೇತ್ರಗಳನ್ನು ಗೆದ್ದು ಬೀಗಿದ್ದ ಜೆಡಿಎಸ್ ಈ ಬಾರಿ ಒಂದಕ್ಕೆ ಕುಸಿದಿದೆ. 2019ರಲ್ಲಿ ಆಪರೇಷನ್ ಕಮಲದಿಂದ ಬಿಜೆಪಿಗೆ ತೆಕ್ಕೆಗೆ ಹೋಗಿದ್ದ ಕೆ.ಆರ್.ಪೇಟೆ ಕ್ಷೇತ್ರವೂ ಕಾಂಗ್ರೆಸ್ ವಶಕ್ಕೆ ಬಂದಿದೆ.

ಮೈಸೂರಿನಲ್ಲೂ ಐದು ಕ್ಷೇತ್ರಗಳನ್ನು ಹೆಚ್ಚುವರಿಯಾಗಿ ಕಾಂಗ್ರೆಸ್ ಗೆದ್ದುಕೊಂಡಿದೆ. ಅಲ್ಲಿ ಬಿಜೆಪಿ ಎರಡು ಸ್ಥಾನ ಕಳೆದುಕೊಂಡಿದ್ದರೆ, ಜೆಡಿಎಸ್ ಮೂರನ್ನು ಕಳೆದುಕೊಂಡಿದೆ. ಬಿಜೆಪಿಯ ಭದ್ರ ನೆಲೆ, 'ಕೇಸರಿ ರಾಜಕಾರಣ'ದ ನೆಲದಂತೆ ಬಿಂಬಿತವಾಗಿದ್ದ ಕೊಡಗು ಜಿಲ್ಲೆಯ ಎರಡೂ ಕ್ಷೇತ್ರಗಳನ್ನು ಕಾಂಗ್ರೆಸ್ ಗೆದ್ದುಕೊಂಡಿದೆ. ತುಮಕೂರಿನಲ್ಲಿ ನಾಲ್ಕು, ಬೆಂಗಳೂರು ಗ್ರಾಮಾಂತರ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ತಲಾ ಒಂದು ಕ್ಷೇತ್ರಗಳು ಕಾಂಗ್ರೆಸ್‌ಗೆ ಹೆಚ್ಚುವರಿಯಾಗಿ ಲಭಿಸಿವೆ.

ಬೆಂಗಳೂರು ನಗರದಲ್ಲಿ ಜೆಡಿಎಸ್ ಬಲ ಶೂನ್ಯಕ್ಕೆ ಇಳಿದಿದೆ. ಉಳಿದಂತೆ ಹೆಚ್ಚೇನೂ ಬದಲಾವಣೆಗಳಾಗಿಲ್ಲ. ಬಹುತೇಕ ಹಾಲಿ ಶಾಸಕರು ಗೆದ್ದು ಬಂದಿದ್ದಾರೆ. ರಾಮನಗರದಲ್ಲಿ ಜೆಡಿಎಸ್‌ನ ಕೋಟೆ ಕುಸಿದಿದ್ದು, ಕಾಂಗ್ರೆಸ್ ಸಂಪೂರ್ಣ ಮೇಲುಗೈ ಪಡೆದಿದೆ.

ಸಂಖ್ಯೆಯ ದೃಷ್ಟಿಯಿಂದ ಒಕ್ಕಲಿಗ ಮತದಾರರ ಪ್ರಾಬಲ್ಯವಿರುವ ಜಿಲ್ಲೆಗಳಲ್ಲಿ ಕಾಂಗ್ರೆಸ್‌ನ ಸಾಧನೆ ಬಹುತೇಕ ದ್ವಿಗುಣಗೊಂಡಿದೆ. ಜೆಡಿಎಸ್ ವರಿಷ್ಠರಾದ ಎಚ್.ಡಿ. ದೇವೇಗೌಡ ಮತ್ತು ಎಚ್.ಡಿ. ಕುಮಾರಸ್ವಾಮಿ ರಾಜಕೀಯವಾಗಿ ಬಿಗಿ ಹಿಡಿತ ಹೊಂದಿದ್ದ ಜಿಲ್ಲೆಗಳಲ್ಲಿ ಈ ಚುನಾವಣೆಯಲ್ಲಿ ಕಾಂಗ್ರೆಸ್ ಮೇಲುಗೈ ಸಾಧಿಸಿದೆ. ಒಕ್ಕಲಿಗ ನಾಯಕತ್ವವನ್ನು ಬೆಂಬಲಿಸುವಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾಡಿದ ಮನವಿ ಇಲ್ಲಿ ಹೆಚ್ಚು ಕೆಲಸ ಮಾಡಿರುವಂತೆ ಗೋಚರಿಸುತ್ತಿದೆ.

ಉರಿಗೌಡ- ನಂಜೇಗೌಡರ ಕಲ್ಪಿತ ಕತೆಯನ್ನು ಹರಿಯಬಿಟ್ಟು ಈ ಭಾಗದಲ್ಲಿ ರಾಜಕೀಯ ಲಾಭ ಪಡೆಯುವ ಪ್ರಯತ್ನ ಬಿಜೆಪಿಗೆ ಲಾಭ ತಂದುಕೊಟ್ಟಿಲ್ಲ. ಈ ಕತೆಯನ್ನು ಹರಿಯಬಿಟ್ಟ ರಂಗಕರ್ಮಿ ಅಡ್ಡಂಡ ಕಾರ್ಯಪ್ಪ ಅವರ ತವರು ಜಿಲ್ಲೆ ಕೊಡಗಿನಲ್ಲೇ ಬಿಜೆಪಿ ಎರಡೂ ಕ್ಷೇತ್ರಗಳನ್ನು ಕಳೆದುಕೊಂಡಿದೆ.

ಒಕ್ಕಲಿಗರನ್ನು ಕೇಂದ್ರೀಕರಿಸಿಯೇ ರಾಜಕಾರಣ ಮಾಡುವ ಜೆಡಿಎಸ್ ಈ ಬಾರಿಯೂ ಸಮುದಾಯ ಪಕ್ಷದ ಕೈ ಹಿಡಿಯಬಹುದು ಎಂಬ ನಂಬಿಕೆಯಲ್ಲಿತ್ತು. ಅದೂ ಹಳೇ ಮೈಸೂರು ಮತ್ತು ಬೆಂಗಳೂರು ಹಾಗೂ ಸುತ್ತಮುತ್ತಲ ಜಿಲ್ಲೆಗಳಲ್ಲಿ ಪ್ರಾಬಲ್ಯ ಮುಂದುವರಿಯುತ್ತದೆ ಎಂಬ ವಿಶ್ವಾಸದಲ್ಲಿತ್ತು. ಆದರೆ, ಜೆಡಿಎಸ್‌ನ ಮತ ಬ್ಯಾಂಕ್ ಈ ಬಾರಿ ಕಾಂಗ್ರೆಸ್‌ನತ್ತ ಹರಿದುಹೋಗಿರುವುದು ನಿಚ್ಚಳವಾಗಿದೆ.

ಪ್ರಜಾ ಮತ

ಜನತಂತ್ರದ ಹಬ್ಬ 2023

ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಕೆಲವು ಕ್ಷೇತ್ರಗಳು ಇಡೀ ರಾಜ್ಯದ ಗಮನವನ್ನು ತನ್ನತ್ತ ಸೆಳೆದುಕೊಂಡಿದ್ದವು. ಅವುಗಳಲ್ಲಿ ಆಯ್ದ ಕ್ಷೇತ್ರಗಳ ಚುಟುಕು ವಿಶ್ಲೇಷಣೆ ಇಲ್ಲಿದೆ. ಈ ಕ್ಷೇತ್ರಗಳಲ್ಲಿ ಇಬ್ಬರು ಮಾಜಿ ಮುಖ್ಯಮಂತ್ರಿಗಳು, ವರ್ಚಸ್ವಿಗಳು, ಪಕ್ಷಾಂತರಿ, ಯುವ ರೈತ ನೇತಾರ, ಸವಾಲು ಮೂಲಕವೇ ಎದುರಾಳಿಗಳನ್ನು ಕೆರಳಿಸಿ ಸೋಲುಂಡ ಯುವ ಮುಖಂಡ ಗಮನ ಸೆಳೆದ ಕ್ಷೇತ್ರಗಳಲ್ಲಿ ಇದ್ದಾರೆ.

ಲಘು ಮಾತಿಗೆ ಬೆಲೆತೆತ್ತ ಪ್ರೀತಂಗೌಡ

• ಚಿದಂಬರ ಪ್ರಸಾದ

ಹಾಸನ



ಹಾಸನದ ಮತ ಎಣಿಕೆ ಕೇಂದ್ರದಲ್ಲಿ ವಿಜೇತ ಅಭ್ಯರ್ಥಿ ಸ್ವರೂಪ್ ಪ್ರಕಾಶ್ ಅವರನ್ನು ಪರಾಜಿತ ಅಭ್ಯರ್ಥಿ ಪ್ರೀತಂ ಗೌಡ ಅಭಿನಂದಿಸಿದರು

ಹಾಸನ: ಜೆಡಿಎಸ್ ಟಿಕೆಟ್ ವಿವಾದದಿಂದ ಗಮನ ಸೆಳೆದಿದ್ದ ಹಾಸನ ಕ್ಷೇತ್ರದಲ್ಲಿ ಸ್ವರೂಪ್ ಪ್ರಕಾಶ್ 7,854 ಮತಗಳ ಅಂತರದಿಂದ ಗೆದ್ದಿದ್ದಾರೆ. 'ಸಾಮಾನ್ಯ ಕಾರ್ಯಕರ್ತನನ್ನು ನಿಲ್ಲಿಸಿ, ಗೆಲ್ಲಿಸುವೆ' ಎಂದಿದ್ದ ಎಚ್.ಡಿ.ಕುಮಾರಸ್ವಾಮಿಯವರ ಮಾತು ನಿಜವಾಗಿದೆ.

'ರೇವಣ್ಣ ಕುಟುಂಬದ ಯಾರೇ ಸ್ಪರ್ಧಿಸಿದರೂ 50 ಸಾವಿರ ಮತಗಳ ಅಂತರ ದಿಂದ ಗೆಲ್ಲುವೆ' ಎಂದು ವಿವಾದಕ್ಕೆ ನಾಂದಿ ಹಾಡಿದ್ದ, ಬಿಜೆಪಿ ಅಭ್ಯರ್ಥಿ ಪ್ರೀತಂ ಜೆ.ಗೌಡ, ಅತಿಯಾದ ಆತ್ಮವಿಶ್ವಾಸದ ಮಾತಿನಿಂದಲೇ ಸೋಲುಂಡಿದ್ದಾರೆ.

ನಾಲ್ಕು ಬಾರಿ ಶಾಸಕರಾಗಿದ್ದ ದಿವಂಗತ ಎಚ್.ಎಸ್.ಪ್ರಕಾಶ ಅವರ ಪುತ್ರ ಸ್ವರೂಪ್ ಗೆಲುವಿನ ಮೂಲಕ, ಪ್ರೀತಂ ಗೌಡರ ಸವಾಲಿಗೆ ಎಚ್.ಡಿ.ರೇವಣ್ಣ ಕುಟುಂಬ ತಕ್ಕ ಉತ್ತರ ನೀಡಿದೆ. ಅವರಿಗೆ ಟಿಕೆಟ್ ಕೊಡಲು ಆರಂಭದಲ್ಲಿ ಅಪಸ್ವರ ಎತ್ತಿದ್ದ ಟಿಕೆಟ್ ಆಕಾಂಕ್ಷಿ ಭವಾನಿ ಸೇರಿದಂತೆ ಅವರ ಇಡೀ ಕುಟುಂಬ ಬೆಂಬಲವಾಗಿ ನಿಂತಿತ್ತು. ವರಿಷ್ಠ ಎಚ್.ಡಿ. ದೇವೇಗೌಡರ ಭಾವನಾತ್ಮಕ ಪ್ರಚಾರ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದೆ. ಅನುಕಂಪ, ಆಡಳಿತ ವಿರೋಧಿ ಅಲೆಯೂ ಕೆಲಸ ಮಾಡಿದೆ.

'ಜೆಡಿಎಸ್‌ಗೆ ಮತ ಹಾಕ ಬೇಡಿ. ಮೋದಿ–ದೇವೇಗೌಡರು ಮಾತನಾಡಿಕೊಂಡಿದ್ದಾರೆ. ಮೈಸೂರಿನ ಮೇಲೆ ಬೆಂಗಳೂರಿಗೆ ಹೋಗಬೇಡಿ. ಹಾಸನದಿಂದ ಬೆಳ್ಳೂರು ಕ್ರಾಸ್ ಮೇಲೆ ಬೆಂಗಳೂರಿಗೆ ಹೋಗಿ. ಎಲ್ಲ ನದಿಗಳು ಸಮುದ್ರಕ್ಕೆ ಬರುವಂತೆ, ಮತ್ತೆ ನಮ್ಮ ಕಡೆಗೇ ಬರಬೇಕು' ಎಂದು ಅಲ್ಪಸಂಖ್ಯಾತರಿಗೆ ಹೇಳಿದ್ದೇ ಪ್ರೀತಂ ಗೌಡರಿಗೆ ಮುಳುವಾಗಿದೆ. ಮುಸ್ಲಿಮರ ಬಹುತೇಕ ಮತಗಳು ಜೆಡಿಎಸ್‌ಗೆ ದೊರಕಿವೆ.

ದಾಸ ಒಕ್ಕಲಿಗರ ಮತಗಳು ಬಿಜೆಪಿ, ಜೆಡಿಎಸ್‌ಗೆ ಹಂಚಿ ಹೋಗಿದ್ದರೂ, ಅಲ್ಪಸಂಖ್ಯಾತರ ಬಹುತೇಕ ಮತಗಳು ಜೆಡಿಎಸ್ ಪರವಾಗಿದ್ದರಿಂದ ಸ್ವರೂಪ್ ಗೆದ್ದರು. ಕಾಂಗ್ರೆಸ್ ಅಭ್ಯರ್ಥಿ ಬನವಾಸೆ ರಂಗಸ್ವಾಮಿ 4,200 ಮತಗಳನ್ನು ಪಡೆದಿದ್ದೂ ಪಕ್ಷಕ್ಕೆ ವರವಾಗಿದೆ.

ಶ್ರೀರಾಮುಲು ಕನಸು ಛಿದ್ರ



ಶ್ರೀರಾಮುಲು



ಬಿ.ನಾಗೇಂದ್ರ

ಬಳ್ಳಾರಿ

ಬಳ್ಳಾರಿ: ಅತ್ಯಂತ ಕುತೂಹಲ ಕೆರಳಿಸಿದ್ದ ಬಳ್ಳಾರಿ ಗ್ರಾಮೀಣ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಬಿ. ನಾಗೇಂದ್ರ ಪುನರಾಯ್ಕೆಯಾಗಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಬಿಜೆಪಿಯ ಬಿ. ಶ್ರೀರಾಮುಲು ಹೀನಾಯ ಸೋಲು ಅನುಭವಿಸಿದ್ದಾರೆ.

ಬಳ್ಳಾರಿ ಗ್ರಾಮೀಣ ಕ್ಷೇತ್ರದ ಭಾಗವಾದ ಜೋಳದರಾಶಿ ಶ್ರೀರಾಮುಲು ಅವರ ಸ್ವಂತ ಊರು. ಜಿಲ್ಲೆಯ ಪ್ರಬಲ ವಾಲ್ಮೀಕಿ ಸಮುದಾಯದ ಪ್ರಭಾವಿ ನಾಯಕ. 2004ರಲ್ಲಿ ಮೊದಲ ಸಲ ಬಳ್ಳಾರಿ ನಗರದಿಂದ ವಿಧಾನಸಭೆ ಸದಸ್ಯರಾಗಿದ್ದ ಶ್ರೀರಾಮುಲು, 2008ರ ಕ್ಷೇತ್ರಗಳ ಪುನರ್‌ವಿಂಗಡಣೆಯ ಬಳಿಕ ಗ್ರಾಮೀಣದತ್ತ ಹೊರಳಿದರು.


ಅಕ್ರಮ ಗಣಿಗಾರಿಕೆ ಆರೋಪದ ಮೇಲೆ ಸಚಿವರ ಆಪ್ತ, ಮಾಜಿ ಸಚಿವ ಜನಾರ್ದನ ರೆಡ್ಡಿ 2011ರಲ್ಲಿ ಜೈಲು ಸೇರಿದಾಗ ಶ್ರೀರಾಮುಲು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಇದೇ ಕ್ಷೇತ್ರದಲ್ಲಿ ಪಕ್ಷೇತರವಾಗಿ ಗೆದ್ದಿದ್ದರು. 2013ರಲ್ಲಿ ಬಿಎಸ್‌ಆರ್ ಪಕ್ಷದಿಂದ ಇಲ್ಲಿಂದಲೇ ಪುನರಾಯ್ಕೆಯಾಗಿದ್ದರು. 2014ರಲ್ಲಿ ಬಿಎಸ್‌ಆರ್ ಪಕ್ಷ ಬಿಜೆಪಿಯಲ್ಲಿ ವಿಲೀನವಾದ ಬಳಿಕ ಬಳ್ಳಾರಿ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದರು. 2018ರಲ್ಲಿ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ಕ್ಷೇತ್ರಕ್ಕೆ ವಲಸೆ ಹೋದರು. ಬಳಿಕ ಗ್ರಾಮೀಣ ಕ್ಷೇತ್ರಕ್ಕೆ ಬಂದರು.

ನಾಗೇಂದ್ರ ಬಳ್ಳಾರಿಯವರೇ ಆದರೂ 2008ರಲ್ಲಿ ಮೊದಲ ಸಲ ಕೂಡ್ಲಿಗಿ ಕ್ಷೇತ್ರದಿಂದ ಬಿಜೆಪಿ ಮತ್ತು 2013ರಲ್ಲಿ ಪಕ್ಷೇತರರಾಗಿ ಗೆದ್ದಿದ್ದರು. 2018ರಲ್ಲಿ ಬಳ್ಳಾರಿ ಗ್ರಾಮೀಣಕ್ಕೆ ಬಂದು ಕಾಂಗ್ರೆಸ್‌ನಿಂದ ಆಯ್ಕೆಯಾಗಿದ್ದರು. ಬಳ್ಳಾರಿ ಗ್ರಾಮೀಣ ಜನ ಶ್ರೀರಾಮುಲು ಅವರ ಬೆಂಬಲಕ್ಕೆ ನಿಲ್ಲಲಿಲ್ಲ.

ಚುನಾವಣೆ ಪ್ರಚಾರ ನಾಗೇಂದ್ರ ಅವರ ಜನಪ್ರಿಯತೆಗೆ ಸಾಕ್ಷಿಯಾಯಿತು. ಅವರು ಹೋದ ಕಡೆಗಳಲ್ಲಿ ಜನ ಮುಗಿ ಬೀಳುತ್ತಿದ್ದರು. ಬಳ್ಳಾರಿ ಗ್ರಾಮೀಣದಲ್ಲಿ ಶ್ರೀರಾಮುಲು ಕಟ್ಟಿದ್ದ ಕೋಟೆಯನ್ನು ನಾಗೇಂದ್ರ ಕೆಡವಿದ್ದಾರೆ.

ಕೈಹಿಡಿಯದ 'ಲಿಂಗಾಯತರ ಸ್ವಾಭಿಮಾನ'

• ಶ್ರೀಕಾಂತ ಕಲ್ಲಮ್ಮನವರ



ಜಗದೀಶ ಶೆಟ್ಟರ್



ಮಹೇಶ್ ಟೆಂಗಿನಕಾಯಿ

ಹು–ಧಾ ಸೆಂಟ್ರಲ್

ಹುಬ್ಬಳ್ಳಿ: ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ಕ್ಷೇತ್ರ ಬಿಜೆಪಿಯ ಗಟ್ಟಿ ನೆಲೆ ಎನ್ನುವುದು ಮತ್ತೊಮ್ಮೆ ಸಾಬೀತಾಯಿತು. ಕ್ಷೇತ್ರವನ್ನು 30 ವರ್ಷಗಳಿಂದ ಗಟ್ಟಿಗೊಳಿಸಿದ್ದ ಜಗದೀಶ ಶೆಟ್ಟರ್ ಅವರೇ ಛಿದ್ರಗೊಳಿಸಲು ಪ್ರಯತ್ನಿಸಿದರಾದರೂ ಕೈಗೂಡಲಿಲ್ಲ. ಅವರು ಹೊತ್ತಿಸಿದ 'ಲಿಂಗಾಯತರ ಸ್ವಾಭಿಮಾನಕ್ಕೆ ಧಕ್ಕೆ' ಕಿಡಿಯೂ ನಂದಿ ಹೋಯಿತು. 'ವ್ಯಕ್ತಿ ಮುಖ್ಯವೋ; ಪಕ್ಷ ಮುಖ್ಯವೋ' ಎನ್ನುವ ಸಂಘರ್ಷದಲ್ಲಿ ಪಕ್ಷ ಮುಖ್ಯ ಎನ್ನುವ ಬಿಜೆಪಿಯ ಬಣ ಮೇಲುಗೈ ಸಾಧಿಸಿತು.

ಬಿಜೆಪಿ ಟಿಕೆಟ್ ವಂಚಿತ ಶೆಟ್ಟರ್ ಅವರು, ಕಾಂಗ್ರೆಸ್ ಸೇರಿ ಕಣಕ್ಕಿಳಿದರು. 'ಲಿಂಗಾಯತ ನಾಯಕತ್ವವನ್ನು ಮೂಲೆಗುಂಪು ಮಾಡಲಾಗುತ್ತಿದೆ' ಎಂದು ಲಿಂಗಾಯತರ ಮತಗಳನ್ನು ಕ್ರೋಡೀಕರಿಸಲು ಪ್ರಯತ್ನಿಸಿದ್ದು ಫಲ ನೀಡಲಿಲ್ಲ. ಕಾಂಗ್ರೆಸ್ ಪ್ರಾಬಲ್ಯವಿರುವ ಪ್ರದೇಶಗಳಲ್ಲಿಯೂ ಶೆಟ್ಟರ್ ಪರ ಹೆಚ್ಚಿನ ಮತಗಳು ಬರಲಿಲ್ಲ.

ಶೆಟ್ಟರ್ ಬಹುವಾಗಿ ನೆಚ್ಚಿಕೊಂಡಿದ್ದ ಮಹಾ ನಗರ ಪಾಲಿಕೆಯ ಸದಸ್ಯರು ಮುಕ್ತವಾಗಿ ಕಾಣಿಸಿಕೊಳ್ಳಲಿಲ್ಲ. ಬಿಜೆಪಿಗೆ ಒಳಹೊಡೆತ ನೀಡಬಹುದು ಎನ್ನುವ ಲೆಕ್ಕಾಚಾರ ತಪ್ಪಿಹೋಯಿತು. ಕಾಂಗ್ರೆಸ್‌ನ ಕೆಲನಾಯಕರು ಸಾಥ್ ನೀಡದಿರುವುದೂ ಸೋಲಿಗೆ ಕಾರಣವೆಂದು ವಿಶ್ಲೇಷಿಸಲಾಗುತ್ತಿದೆ.

ಬಿಜೆಪಿಗೆ ಸಂಘಟನೆ ಬಲ: 'ವ್ಯಕ್ತಿ ಮುಖ್ಯವಲ್ಲ; ಪಕ್ಷ ಮುಖ್ಯ. ಪಕ್ಷಕ್ಕಿಂತ ಯಾರೂ ದೊಡ್ಡವರಲ್ಲ' ಎನ್ನುವ ಸಿದ್ಧಾಂತವನ್ನು ಬಿಜೆಪಿ ಈ ಚುನಾವಣೆಯಲ್ಲಿ ಮತ್ತಷ್ಟು ಗಟ್ಟಿಗೊಳಿಸಿತು. ಪಕ್ಷದ ಪ್ರಧಾನ ಕಾರ್ಯದರ್ಶಿ ಮಹೇಶ ಟೆಂಗಿನಕಾಯಿ ಅವರನ್ನು ಕಣಕ್ಕಿಳಿಸಿ, ಗೆಲ್ಲಿಸುವ ಮೂಲಕ ಈ ಮಾತನ್ನು ಸಾಬೀತುಪಡಿಸಿತು.

ಎಲ್ಲ ಸ್ಥಾನಮಾನ ನೀಡಿದ್ದರೂ ಶೆಟ್ಟರ್ ಪಕ್ಷಕ್ಕೆ ದ್ರೋಹ ಮಾಡಿದರು ಎಂದು ಪ್ರಚಾರ ಮಾಡಿತು. ಸಮು ದಾಯದ ಮತಗಳು ಹೊರಹೋಗದಂತೆ ತಡೆಯಲು ಬಿ.ಎಸ್.ಯಡಿಯೂರಪ್ಪ ಅವರಿಂದ ಸಭೆ ನಡೆಸಿದ್ದು ಫಲ ನೀಡಿತು. ಅಮಿತ್ ಶಾ, ಬಿ.ಎಸ್. ಯಡಿಯೂರಪ್ಪ, ಪ್ರಲ್ಹಾದ ಜೋಶಿ ಸೇರಿದಂತೆ ರಾಜ್ಯ, ರಾಷ್ಟ್ರ ನಾಯಕರು ಪ್ರಚಾರ ಮಾಡಿದ್ದು ಹಾಗೂ ಪ್ರಧಾನಿ ಮೋದಿ ಅವರ ಪ್ರಭಾವಳಿ ಕೂಡ ನೆರವಾಯಿತು.

> ನಾನು ಸೋತಿದ್ದಕ್ಕೆ ದುಃಖ ಇಲ್ಲ. ಜನರ ತೀರ್ಮಾನ ಗೌರವಿಸುತ್ತೇನೆ. ನನ್ನನ್ನು ಸೋಲಿಸಲು ಷಡ್ಯಂತ್ರ ಮಾಡಿದ ಬಿಜೆಪಿಯವರು, ದಕ್ಷಿಣ ಭಾರತದಲ್ಲಿ ಅಸ್ತಿತ್ವ ಕಳೆದುಕೊಂಡರು
>
> **ಜಗದೀಶ ಶೆಟ್ಟರ್,** ಪರಾಜಿತ ಅಭ್ಯರ್ಥಿ

ಸಿ.ಟಿ.ರವಿ ಭದ್ರಕೋಟೆಗೆ ಕಾಂಗ್ರೆಸ್ ಲಗ್ಗೆ

• ಬಿ.ಜೆ. ಧನ್ಯಪ್ರಸಾದ್



ಸಿ.ಟಿ.ರವಿ



ಎಚ್.ಡಿ.ತಮ್ಮಯ್ಯ

ಚಿಕ್ಕಮಗಳೂರು

ಚಿಕ್ಕಮಗಳೂರು: ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರ ಕೋಟೆಯನ್ನು ಕಾಂಗ್ರೆಸ್ ಅಭ್ಯರ್ಥಿ, ನಗರಸಭೆ ಮಾಜಿ ಅಧ್ಯಕ್ಷ ಎಚ್.ಡಿ. ತಮ್ಮಯ್ಯ ಛಿದ್ರಗೊಳಿಸಿದ್ದಾರೆ.

ಸುಮಾರು 14 ವರ್ಷಗಳಿಂದ ಸಿ.ಟಿ. ರವಿ ಅವರ ಗರಡಿಯಲ್ಲೇ ಇದ್ದ, ಅವರ ಆಪ್ತರೂ ಆಗಿದ್ದ ತಮ್ಮಯ್ಯ ಅವರು ಬಿಜೆಪಿ ಟಿಕೆಟ್‌ಗಾಗಿ ಬೇಡಿಕೆ ಇಟ್ಟು, ಪಕ್ಷದಿಂದ ಸ್ಪಂದನೆ ಸಿಗದೆ ಕಾಂಗ್ರೆಸ್ ಸೇರಿ ರವಿ ವಿರುದ್ಧವೇ ಕಣಕ್ಕಿಳಿದಿದ್ದರು. ರವಿ ಅವರು ಚಿಕ್ಕಮಗಳೂರು ಕ್ಷೇತ್ರದಿಂದ ಸತತ ನಾಲ್ಕು ಬಾರಿ ಗೆಲುವು ಕಂಡಿದ್ದರು.

ರವಿ ಮಾತುಗಳು, ಅವರ ಅತಿಯಾದ ವಿಶ್ವಾಸ, ಕ್ಷೇತ್ರಕ್ಕೆ ವಾರಕ್ಕೊಮ್ಮೆ ಮಾತ್ರ ಭೇಟಿ ನೀಡುವ ಪರಿಪಾಟ ಮೊದಲಾದವು ಅವರಿಗೆ ಮುಳುವಾದವು. ಬಿಜೆಪಿ ವಿರೋಧಿಗಳು ಕಾಂಗ್ರೆಸ್ ಜೊತೆ ಕೈಜೋಡಿಸಿದ್ದು ತಮ್ಮಯ್ಯ ಗೆಲುವಿಗೆ ಸಹಕಾರಿಯಾಯಿತು.

ರವಿ ಅವರು ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಅವರನ್ನು ಮತ್ತೆ ಮತ್ತೆ 'ಸಿದ್ರಾಮುಲ್ಲಾ ಖಾನ್' ಎಂದು ಲೇವಡಿ ಮಾಡಿದ್ದು, ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರಿಗೆ 'ಸಾಬರಾಗಿ ಹುಟ್ಟಲು ತಡ ಏಕೆ ಈಗಲೇ ಹೋಗಿ' ಎಂದು ಕಿಚಾಯಿಸಿದ್ದು, ಹಿಜಾಬ್, ಹಲಾಲ್ ಕಟ್ ವಿವಾದ ಸಂದರ್ಭದ ಹೇಳಿಕೆಗಳು, ಮುಂತಾದ ಬೆಳವಣಿಗೆಗಳು ಕುರುಬ, ಮುಸ್ಲಿಂ ಸಮುದಾಯದ ಮತಗಳು ಒಟ್ಟಾಗಿ ಕಾಂಗ್ರೆಸ್ ಕಡೆಗೆ ವಾಲುವಂತೆ ಮಾಡಿದವು. ತಮ್ಮಯ್ಯ ಅವರು ಕ್ಷೇತ್ರದಲ್ಲಿ ಬಹುಸಂಖ್ಯೆಯಲ್ಲಿರುವ ವೀರಶೈವ ಲಿಂಗಾಯತ ಸಮುದಾಯದವರು.

ಕ್ಷೇತ್ರದಲ್ಲಿ ಸಿಪಿಐ ಕಾಂಗ್ರೆಸ್‌ಗೆ ಬೆಂಬಲ ನೀಡಿತ್ತು. ಜೆಡಿಎಸ್ ಮುಖಂಡರು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಕಾಂಗ್ರೆಸ್ ಜತೆ ಕೈಜೋಡಿಸಿದರು. ಎಸ್‌ಡಿಪಿಐ ಅಭ್ಯರ್ಥಿಯನ್ನು ಕಣಕ್ಕಿಳಿಸಲಿಲ್ಲ. ರೈತ ಸಂಘ, ಕೆಲವು ದಲಿತ ಸಂಘಟನೆಗಳು ಕಾಂಗ್ರೆಸ್‌ಗೆ ಬೆಂಬಲ ಘೋಷಿಸಿದ್ದವು. ಈ ಒಗ್ಗಟ್ಟು ಕಾಂಗ್ರೆಸ್‌ಅನ್ನು ದಡ ಸೇರಿಸಿದೆ.

ಲಿಂಗಾಯತ ಸಮುದಾಯದ ವಿರುದ್ಧದ 'ಕಿಡಿ' ಮಾತುಗಳ ತುಣುಕು ಗಳನ್ನು ಚುನಾವಣೆಯ ಹೊತ್ತಿನಲ್ಲಿ ಕೆಲವರು ಸಾಮಾಜಿಕ ಮಾಧ್ಯಮದಲ್ಲಿ ಹರಿಯಬಿಟ್ಟದ್ದು ರವಿ ಅವರ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿತು.

'ದತ್ತಪೀಠ' ಹೋರಾಟ ವಿಚಾರ, ಹಿಂದುತ್ವ, ಸಿದ್ಧಾಂತ ಮೊದಲಾದ ಪ್ರಯೋಗಗಳು, ಕ್ಷೇತ್ರದ ಅಭಿವೃದ್ಧಿ 'ರಿಪೋರ್ಟ್ ಕಾರ್ಡ್' ಈ ಬಾರಿ ರವಿ ಅವರ ಕೈಹಿಡಿದಿಲ್ಲ.

'ಸ್ವಾಭಿಮಾನ'ಕ್ಕೆ ಕಟ್ಟುಬಿದ್ದ ಮತದಾರ

• ಸಂತೋಷ ಈ. ಚಿನಗುಡಿ



ಲಕ್ಷ್ಮಣ ಸವದಿ

ಅಥಣಿ

ಅಥಣಿ (ಬೆಳಗಾವಿ ಜಿಲ್ಲೆ): ಅಥಣಿಯ ಮತದಾರರು ಕೊನೆಗೂ 'ಸ್ವಾಭಿಮಾನ'ಕ್ಕೇ ಕಟ್ಟುಬಿದ್ದರು. ಲಕ್ಷ್ಮಣ ಸವದಿ ಅವರನ್ನು 76,122 ಮತಗಳ ಭಾರೀ ಅಂತರದಿಂದ ಗೆಲ್ಲಿಸಿದರು. ಪಕ್ಷ ಬದಲಾಯಿಸಿದರೂ ಸವದಿ ಅವರ ವರ್ಚಸ್ಸಿಗೆ ಧಕ್ಕೆ ಬರದಂತೆ ತೀರ್ಪು ನೀಡಿದರು.

ಮಹೇಶ ಕುಮಠಳ್ಳಿ ಅವರಿಗೆ ಟಿಕೆಟ್ ಕೊಡಿಸಿ, ಗೆಲ್ಲಿಸಲು ಪಣ ತೊಟ್ಟಿದ್ದರು ರಮೇಶ ಜಾರಕಿಹೊಳಿ. ದೊಡ್ಡ ಹುದ್ದೆ ಕೊಟ್ಟರೂ ಪಕ್ಷ ಬಿಟ್ಟವರನ್ನು ಸೋಲಿಸಬೇಕೆಂಬ ಹಟ ತೊಟ್ಟಿದ್ದರು ಬಿಜೆಪಿ ರಾಷ್ಟ್ರಮಟ್ಟದ ನಾಯಕರು. ಸರ್ಕಾರದ ಸಾಧನೆ ಮುಂದಿಟ್ಟು ಮತ ಕೇಳಿದ್ದರು ಮಹೇಶ ಕುಮಠಳ್ಳಿ. ಈ ಮೂರು ಶಕ್ತಿಗಳು ಒಂದಾದರೂ 'ಲಕ್ಷ್ಮಣ ರೇಖೆ' ದಾಟುವುದಿರಲಿ; ಹತ್ತಿರ ಸುಳಿಯಲು ಕೂಡ ಆಗಲಿಲ್ಲ.

ಈ ಬಾರಿಯೂ ಮಹೇಶ ಕುಮಠಳ್ಳಿಗೆ ಕ್ಷೇತ್ರ ಬಿಟ್ಟುಕೊಟ್ಟರೆ ಅಲ್ಲಿ ತಮ್ಮ ಕುಟುಂಬದ ಅಸ್ತಿತ್ವವೇ ಉಳಿಯುವುದಿಲ್ಲ ಎಂಬ ಆತಂಕ ಸವದಿ ಅವರಿಗಿತ್ತು. ಟಿಕೆಟ್ ಕೈತಪ್ಪಿದರೆ ಅಲೆಮಾರಿ ಆಗುತ್ತೇನೆ ಎಂಬ ಕಳವಳ ಕುಮಠಳ್ಳಿ ಅವರಿಗೆ ಇತ್ತು. ಹೀಗಾಗಿ, ಇಬ್ಬರೂ ತಮ್ಮತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಜಿದ್ದಾಜಿದ್ದಿಗೆ ಬಿದ್ದಿದ್ದರು.

ಕೋವಿಡ್ ಸಂದರ್ಭದಲ್ಲಿ ಸುಮಾರು ₹ 7 ಕೋಟಿಗೂ ಅಧಿಕ ಮೊತ್ತದ ಆಹಾರ ಕಿಟ್, ಔಷಧಿಗಳನ್ನು ಲಕ್ಷ್ಮಣ ಹಂಚಿಕೆ ಮಾಡಿದ್ದರು. ಸವದಿ ಕುಟುಂ ಬಕ್ಕೇ ನಿಷ್ಠರಾದ ಸುಮಾರು 40 ಸಾವಿರ ಮತ ಹಾಗೂ ಕಾಂಗ್ರೆಸ್‌ನ ಸಾಂಪ್ರದಾಯಿಕ ಮತಗಳೂ ಸೇರಿಕೊಂಡವು. 40 ಹಳ್ಳಿಗಳಿಗೆ ಶಾಶ್ವತ ಕುಡಿಯುವ ನೀರು ಸರಬರಾಜು, ಕರಿಮಸೂರಿ ಏತನೀ ರಾವರಿ ಯೋಜನೆಯಂಥ ಹಲವು ಕಾಮಗಾರಿಗಳು ಅವರಿಗೆ ಬಲ ತಂದವು.

ಕುಮಠಳ್ಳಿ ನೆಪಮಾತ್ರ: ರಮೇಶ ಜಾರಕಿಹೊಳಿಯೇ ಅಭ್ಯರ್ಥಿ ಎಂಬ ಸಂದೇಶ ಕ್ಷೇತ್ರದಲ್ಲಿ ರವಾನೆ ಯಾಯಿತು. ಅಧಿಕಾರವನ್ನು ಮತ್ತೊಬ್ಬರ ಕೈಯಲ್ಲಿ ಕೊಡುವ ಬದಲು ಸವದಿ ಅವರನ್ನೇ ಬೆಂಬಲಿ ಸೋಣ ಎಂಬ ನಿರ್ಧಾರಕ್ಕೆ ಯುವ ಮತದಾರರು ಬಂದರು.



> ಸೇವೆ ಮಾಡಲು ಬಿಜೆಪಿಗೆ ಅವಕಾಶ ನೀಡಿದ್ದಕ್ಕಾಗಿ ಕರ್ನಾಟಕ ಜನತೆಗೆ ಕೃತಜ್ಞರಾಗಿದ್ದೇವೆ. ಪಕ್ಷವು ಪ್ರಧಾನಿ ಮೋದಿ ಅವರ ನಾಯಕತ್ವದಲ್ಲಿ ತನ್ನ ಕಾರ್ಯವನ್ನು ಮುಂದುವರಿಸುವುದು
>
> **ಅಮಿತ್ ಶಾ** ಕೇಂದ್ರ ಗೃಹ ಸಚಿವ



> ದೇಶದ ಏಕತೆ ಸಾಧಿಸುವ ರಾಜಕಾರಣದ ಗೆಲುವು. ರಾಜ್ಯದ ಕಾಂಗ್ರೆಸ್‌ನ ನಾಯಕರು, ಕಾರ್ಯಕರ್ತರ ಪರಿಶ್ರಮಕ್ಕೆ ಫಲ ಸಿಕ್ಕಿದೆ. 'ಗ್ಯಾರಂಟಿ'ಗಳ ಅನುಷ್ಠಾನಕ್ಕೆ ಪಕ್ಷವು ಕಾರ್ಯಪ್ರವೃತ್ತವಾಗಲಿದೆ
>
> **ಪ್ರಿಯಾಂಕಾ ಗಾಂಧಿ ವಾದ್ರಾ,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ವಿಧಾನಸೌಧಕ್ಕೆ ಯುವ ರೈತ ನೇತಾರ ದರ್ಶನ್

• ಎಂ.ಎನ್.ಯೋಗೇಶ್



ದರ್ಶನ್ ಪುಟ್ಟಣ್ಣಯ್ಯ

ಮೇಲುಕೋಟೆ

ಮಂಡ್ಯ: ರೈತಸಂಘ, ಕಾಂಗ್ರೆಸ್ ಬೆಂಬಲಿತ ಕರ್ನಾಟಕ ಸರ್ವೋದಯ ಪಕ್ಷದ ಅಭ್ಯರ್ಥಿ ದರ್ಶನ್ ಪುಟ್ಟಣ್ಣಯ್ಯ ಮೇಲುಕೋಟೆ ಕ್ಷೇತ್ರದಿಂದ ಗೆಲುವು ಕಂಡಿದ್ದು ರಾಜ್ಯದ ಏಕೈಕ ಯುವ ರೈತಪ್ರತಿನಿಧಿಯಾಗಿ ವಿಧಾನಸೌಧಕ್ಕೆ ಪ್ರವೇಶ ಪಡೆದಿದ್ದಾರೆ.

2005ರ ಬಸವ ಜಯಂತಿಯ ದಿನ ಲೇಖಕ ದೇವನೂರ ಮಹದೇವ ಅವರ ಅಧ್ಯಕ್ಷತೆಯಲ್ಲಿ ಹುಟ್ಟಿದ ಸರ್ವೋದಯ ಕರ್ನಾಟಕ ಪಕ್ಷ ಕೇವಲ ಇಬ್ಬರು ಶಾಸಕರನ್ನು ಕಂಡಿದೆ. ಅವರಿಬ್ಬರೂ ತಂದೆ– ಮಗ ಎಂಬುದು ವಿಶೇಷ. 2013ರಲ್ಲಿ ರೈತನಾಯಕ ಕೆ.ಎಸ್.ಪುಟ್ಟಣ್ಣಯ್ಯ ಮೇಲುಕೋಟೆ ಕ್ಷೇತ್ರದಿಂದ ಗೆದ್ದಿದ್ದರು. ಅವರ ಪುತ್ರ ದರ್ಶನ್ ಅಲ್ಲಿಂದಲೇ ಆಯ್ಕೆಯಾಗಿದ್ದಾರೆ. ಜೆಡಿಎಸ್ ಅಭ್ಯರ್ಥಿ ಸಿ.ಎಸ್.ಪುಟ್ಟರಾಜು 10,862 ಮತಗಳ ಅಂತದಲ್ಲಿ ಸೋತಿದ್ದಾರೆ.

ಮಂಡ್ಯ ಸೇರಿದಂತೆ 8 ಕ್ಷೇತ್ರಗಳಲ್ಲಿ ಸರ್ವೋದಯ ಕರ್ನಾಟಕ ಪಕ್ಷ ಸ್ಪರ್ಧಿಸಿತ್ತು. ಮೇಲುಕೋಟೆ ಹೊರತುಪಡಿಸಿ ಎಲ್ಲೆಡೆ ಠೇವಣಿ ನಷ್ಟವಾಗಿದೆ.

2018ರ ಚುನಾವಣೆಯಲ್ಲಿ ದರ್ಶನ್ ಅವರು ಸ್ವರಾಜ್ ಇಂಡಿಯಾ ಪಕ್ಷದಿಂದ ಸ್ಪರ್ಧಿಸಿ ಸೋತಿದ್ದರು. ತಂದೆಯ ಸಾವಿನ ಅನುಕಂಪವೂ ಕೈಹಿಡಿದಿರಲಿಲ್ಲ. ಈಗಿನ ಗೆಲುವು ಹಲವು ಬಣಗಳಾಗಿ ಒಡೆದು ಹೋಗಿರುವ ರೈತಸಂಘಕ್ಕೆ ಶಕ್ತಿ ತುಂಬಿದಂತಾಗಿದೆ.

ಕೆ.ಎಸ್.ಪುಟ್ಟಣ್ಣಯ್ಯ 1994ರಲ್ಲಿ ರೈತಸಂಘದಿಂದ ಸ್ಪರ್ಧಿಸಿ ಗೆದ್ದಿದ್ದರು. 1989ರಲ್ಲಿ ಬಾಬಾಗೌಡ ಪಾಟೀಲ ಬೆಳಗಾವಿ ಜಿಲ್ಲೆಯ ಕಿತ್ತೂರು, ಧಾರವಾಡ ಗ್ರಾಮೀಣ ಎರಡೂ ಕ್ಷೇತ್ರದಲ್ಲಿ ಸ್ಪರ್ಧಿಸಿ ಗೆದ್ದಿದ್ದರು. ಅವರು ಧಾರವಾಡ ಗ್ರಾಮೀಣ ಕ್ಷೇತ್ರಕ್ಕೆ ರಾಜೀನಾಮೆ ನೀಡಿದ್ದರಿಂದ 1990ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಪ್ರೊ.ಎಂ.ಡಿ. ನಂಜುಂಡಸ್ವಾಮಿ ಅಲ್ಲಿಯೇ ರೈತಸಂಘದಿಂದ ಗೆದ್ದಿದ್ದರು.

'ರೈತ, ದಲಿತ, ಪ್ರಗತಿಪರ ಮನಸ್ಸುಗಳ ಒತ್ತಾಸೆಯಿಂದ ಪಕ್ಷ ಹುಟ್ಟಿಕೊಂಡಿತು. ನಾನು ನಿಮಿತ್ತ ಮಾತ್ರ. ಪುಟ್ಟಣ್ಣಯ್ಯ ಅವರ ರಚನಾತ್ಮಕ ರಾಜಕಾರಣದಿಂದ ಪಕ್ಷಕ್ಕೆ ಶಕ್ತಿ ಬಂದಿತ್ತು. ನನ್ನನ್ನು ಹಾಗೂ ಪುಟ್ಟಣ್ಣಯ್ಯ ಅವರನ್ನೂ ಮೀರಿಸುವ ಇಚ್ಛಾಶಕ್ತಿ ಹೊಂದಿರುವ ದರ್ಶನ್ ಇಡೀ ದೇಶದಲ್ಲಿ ಸಂಚಲನ ಸೃಷ್ಟಿಸುತ್ತಾರೆ. ಅವರ ಗೆಲುವು ನನ್ನೊಳಗೆ ಭರವಸೆ ಮೂಡಿಸಿದೆ' ಎಂದು ಪಕ್ಷದ ಸಂಸ್ಥಾಪಕರಾದ ಲೇಖಕ ದೇವನೂರ ಮಹಾದೇವ 'ಪ್ರಜಾವಾಣಿ'ಗೆ ತಿಳಿಸಿದರು.

'ಕೈ' ಏಟಿಗೆ ತೆನೆ, ಕಮಲ ಕೆಸರಿಗೆ

ಒಂದನೇ ಪುಟದಿಂದ...

ಸ್ವಾತಂತ್ರ್ಯ ಹೋರಾಟಗಾರ ಟಿಪ್ಪು ಅವಹೇಳನ, ಉರಿಗೌಡ–ನಂಜೇಗೌಡರೆಂಬ ಕೃತಕ ಪಾತ್ರಗಳ ಸೃಷ್ಟಿ ಕೈಹಿಡಿಯುತ್ತದೆ ಎಂಬ ನಂಬಿಕೆ ಹುಸಿಯಾಯಿತು. ಈ ಉರಿಯೇ ನಂಜಾಗಿ ಬಿಜೆಪಿಯನ್ನು ಚುನಾವಣೆಯಲ್ಲಿ ಬಿಡದೇ ಕಾಡಿತು. ಸರ್ವ ಜನಾಂಗದ ಶಾಂತಿಯ ತೋಟವನ್ನು ಉಳಿಸುವುದಾಗಿ ಘೋಷಿಸಿದ ಕಾಂಗ್ರೆಸ್‌ನ ಪಣಕ್ಕೆ ಇವೇ ನೀರು, ಗೊಬ್ಬರವಾಗಿ, ಫಲವನ್ನೂ ನೀಡಿತು. ಧರ್ಮಕೇಂದ್ರಿತ ರಾಜಕಾರಣವನ್ನು ನೆಚ್ಚಿದ ಕರಾವಳಿಯ ಎರಡು ಜಿಲ್ಲೆಗಳಲ್ಲಷ್ಟೇ ಬಿಜೆಪಿಗೆ ನೆರವಾಯಿತು. ಪಕ್ಕದ ಚಿಕ್ಕಮಗಳೂರಿನಲ್ಲಿ ಬಿಜೆಪಿ ಧೂಳೀಪಟವಾಯಿತು.

ಮುಸ್ಲಿಮರಿಗೆ ಇದ್ದ ಶೇ 4ರ ಮೀಸಲಾತಿಯನ್ನು ಕಿತ್ತು ಲಿಂಗಾಯತ–ಒಕ್ಕಲಿಗರಿಗೆ ಹಂಚಿದ್ದು ಮರ್ಮಾಘಾತವನ್ನೇ ನೀಡಿತು. ಏಕೆಂದರೆ, ತನ್ನ ತೀರ್ಮಾನವನ್ನು ಸುಪ್ರೀಂಕೋರ್ಟ್‌ನಲ್ಲಿ ಸಮರ್ಥಿಸಲು ಸರ್ಕಾರಕ್ಕೆ ಸಾಧ್ಯವೇ ಆಗಲಿಲ್ಲ. ಇದು ಹುಸಿ ಘೋಷಣೆಯಾಗಿಯೇ ಉಳಿಯುತ್ತದೆ ಎಂಬ ಕಾರಣಕ್ಕೆ ನಂಬಿದವರೂ ಕೈ ಕೊಟ್ಟರು. ಒಳಮೀಸಲಾತಿ ಹಂಚಿಕೆ ಬಿಜೆಪಿಯನ್ನು ಬಿಡದೇ ಕಾಡಿತು. ಪರಿಶಿಷ್ಟ ಜಾತಿಯವರಿಗೆ ಮೀಸಲಾದ 36 ಕ್ಷೇತ್ರಗಳಲ್ಲಿ 21 ಕಾಂಗ್ರೆಸ್ ಪಾಲಾಗಿದ್ದರೆ, 12ರಲ್ಲಿ ಮಾತ್ರ ಬಿಜೆಪಿ ಗೆದ್ದಿತು. ಮೀಸಲಾತಿ ಅಸ್ತ್ರ ತಿರುಗು ಬಾಣವಾಗಿದ್ದಕ್ಕೆ ಉದಾಹರಣೆ.

ಬಿ.ಎಸ್. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಕುರ್ಚಿಯಿಂದ ಇಳಿಸಿದ್ದು, ಲಿಂಗಾಯತರಲ್ಲಿ ಆಕ್ರೋಶವನ್ನು ಹುಟ್ಟು ಹಾಕಿತ್ತು. ಟಿಕೆಟ್ ಹಂಚಿಕೆಯಲ್ಲಿ ಜಗದೀಶ ಶೆಟ್ಟರ್, ಲಕ್ಷ್ಮಣ ಸವದಿ, ಆಯನೂರು ಮಂಜುನಾಥ ಅಂತಹವರನ್ನು ಕಡೆಗಣಿಸಿದ್ದು, ಒಡಲುರಿಯಾಗಿ ಕಾಡಿತು. ಚುನಾವಣೆ ಹೊತ್ತಿಗೆ ಇದನ್ನು ಕಾಂಗ್ರೆಸ್ ಸಮರ್ಥವಾಗಿ ಬಳಸಿಕೊಂಡು, ಬಿಜೆಪಿಯನ್ನು ಹಣಿಯಿತು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ವಂತ ಜಿಲ್ಲೆ ಹಾವೇರಿಯಲ್ಲಿ ತಮ್ಮನ್ನು ಬಿಟ್ಟರೆ ಮತ್ತೊಬ್ಬರನ್ನು ಗೆಲ್ಲಿಸಿಕೊಳ್ಳಲೂ ಸಾಧ್ಯವಾಗಲಿಲ್ಲ. 14 ಸಚಿವರು ಸೋತಿರುವುದು ಆಡಳಿತ ವಿರೋಧಿ ಎಷ್ಟರಮಟ್ಟಿಗೆ ಇತ್ತೆಂಬುದಕ್ಕೆ ನಿದರ್ಶನ.

ಕಾಂಗ್ರೆಸ್ ಒಗ್ಗಟ್ಟು: ಆಡಳಿತ ವಿರೋಧಿ ಅಲೆಯನ್ನು ಸರಿಯಾಗಿ ಗ್ರಹಿಸಿದ್ದ ಕಾಂಗ್ರೆಸ್ ನಾಯಕರು, ವರ್ಷದ ಮೊದಲೇ ನಡೆಸಿದ ತಯಾರಿ, ತೋರಿಸಿದ ಒಗ್ಗಟ್ಟು , ಘೋಷಿಸಿದ ಜನಕಲ್ಯಾಣ ಕಾರ್ಯಕ್ರಮಗಳು 136ರ ಗಡಿ ದಾಟಿಸಿವೆ. ಜನತಾ ಪರಿವಾರದ ಆಡಳಿತ ಯುಗ ಆರಂಭವಾದ ಮೇಲೆ, 1989ರಲ್ಲಿ ನಡೆದ ಚುನಾವಣೆಯಲ್ಲಿ 178 ಸ್ಥಾನಗಳನ್ನು ಕಾಂಗ್ರೆಸ್ ಗಳಿಸಿತ್ತು. ಅದಾದ ಬಳಿಕ ಯಾವುದೇ ಪಕ್ಷವೂ ಈ ಪರಿಯ ಗೆಲುವನ್ನು ಸಾಧಿಸಿರಲಿಲ್ಲ.

ಪೇಸಿಎಂ, ಬಜೆಟ್ ದಿನ ಕಿವಿಗೆ ಹೂವು ಇಂತಹವು ಜನರನ್ನು ಸೆಳೆಯಲು ಕಾರಣವಾದವು. ಅಭ್ಯರ್ಥಿ ಆಯ್ಕೆಯನ್ನು ವಿವೇಚನಾ ರೀತಿಯಲ್ಲಿ ನಿರ್ವಹಿಸುವ ಜತೆಗೆ, ಕೊನೆ ಗಳಿಗೆಯಲ್ಲಿ ಹಲವರನ್ನು ಕರೆತಂದಿದ್ದು ಅನುಕೂಲಕರವಾಯಿತು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವಿರತ ಶ್ರಮ, ಸಿದ್ದರಾಮಯ್ಯನವರ ಜನಪ್ರಿಯತೆ, ರಣದೀಪ್ ಸಿಂಗ್ ಸುರ್ಜೇವಾಲಾ ಅವರ ಸೂತ್ರಗಳು ಗೆಲುವಿಗೆ ಕಾರಣವಾದವು.

ಮುಖ್ಯವಾಗಿ ಮಹಿಳೆಯರು, ಯುವಕರನ್ನು ಸೆಳೆಯುವ ಗ್ಯಾರಂಟಿ ಯೋಜನೆಗಳು, ಮತದಾನದಿಂದ ಮಹಿಳೆಯರನ್ನು ಮತಗಟ್ಟೆಯವರೆಗೆ ಕರೆತಂದು ಹಸ್ತಕ್ಕೆ ಮುದ್ರೆ ಒತ್ತುವ ಹಾಗೆ ಮಾಡಿದವು. ಪ್ರಣಾಳಿಕೆಯಲ್ಲಿ ಪ್ರಜ್ಞಾಪೂರ್ವಕವಾಗಿ ಘೋಷಿಸಿದ ಬಜರಂಗ ದಳ ಹಾಗೂ ಪಿಎಫ್‌ಐ ನಿಷೇಧದ ಪ್ರಸ್ತಾವ ಕಾಂಗ್ರೆಸ್‌ಗೆ ವರದಾನವಾಯಿತು. ಎಸ್‌ಡಿಪಿಐ ಹಾಗೂ ಜೆಡಿಎಸ್‌ಗೆ ಹೋಗುತ್ತಿದ್ದ ಮತವನ್ನು ಸಂಪೂರ್ಣವಾಗಿ ಸೆಳೆಯಲು ಇದು ದಾರಿ ಮಾಡಿಕೊಟ್ಟಿತು. ಬಜರಂಗದಳದ ಕಾಟದಿಂದ ಬೇಸತ್ತಿದ್ದ ಗೋಪಾಲಕರು, ಗೋಮಾಂಸವನ್ನು ಬಳಸುವವರು ಕಾಂಗ್ರೆಸ್ ಕಡೆ ತಿರುಗುವಂತೆ ಮಾಡಿತು.

2018ರ ಚುನಾವಣೆಯಲ್ಲಿ ಕಾಂಗ್ರೆಸ್ ಶೇ 38ರಷ್ಟು ಮತ ಪಡೆದಿದ್ದರೆ, ಈ ಬಾರಿ ಅದು ಶೇ 43ಕ್ಕೆ ಏರಿತು. ಬಿಜೆಪಿ ಶೇ 36ರಲ್ಲೇ ಎರಡೂ ಚುನಾವಣೆಯಲ್ಲಿ ತನ್ನ ಶಕ್ತಿ ಕಾಯ್ದುಕೊಂಡಿತು. ಶೇ 18.36ರಷ್ಟು ಮತ ಪಡೆದಿದ್ದ ಜೆಡಿಎಸ್ ಈ ಬಾರಿ ಶೇ 13.3ಕ್ಕೆ ಕುಸಿಯಿತು. ಈ ಲೆಕ್ಕಾಚಾರ ಗಮನಿಸಿದರೆ ಜೆಡಿಎಸ್‌ನ ಶೇ 5 ಮತಗಳು ಕಾಂಗ್ರೆಸ್ ಪಾಲಾಗುವ ಜತೆಗೆ, ಲಿಂಗಾಯತ ಸಮುದಾಯದ ದೊಡ್ಡ ಪ್ರಮಾಣದ ಮತವೂ ಕಾಂಗ್ರೆಸ್‌ಗೆ ದಕ್ಕಿರುವುದು ಗೊತ್ತಾಗುತ್ತದೆ.

ಜೆಡಿಎಸ್ ವಿಶ್ವಾಸದ್ರೋಹದ ಆರೋಪ ಹೊತ್ತು ಚುನಾವಣೆ ಎದುರಿಸಿದ್ದ 2008ರಲ್ಲಿ 28 ಸ್ಥಾನಗಳನ್ನು ಗಳಿಸಿತ್ತು. ಈ ಬಾರಿ ಅದು ಸಾಧ್ಯವಾಗದೇ ಇರಲು, ಮೈತ್ರಿ ಸರ್ಕಾರಗಳು ತಂದಿತ್ತ ಅಪಾಯಗಳು ಬೇಡವೆಂಬ ನಿಶ್ಚಯಕ್ಕೆ ಜನ ಬಂದಿದ್ದೇ ಕಾರಣವೆನ್ನದೆ ವಿಧಿಯಿಲ್ಲ. ಎಚ್.ಡಿ. ಕುಮಾರಸ್ವಾಮಿ, ಹಲವು ಯಾತ್ರೆ ನಡೆಸಿದ್ದರು. ಕಾಂಗ್ರೆಸ್‌ಗಿಂತ ಉತ್ತಮವಾದ ಭರವಸೆಗಳನ್ನೂ ಘೋಷಿಸಿದ್ದರು. ಚುನಾವಣೆ ಹತ್ತಿರವಿರುವಾಗ 'ಎರಡೂ ರಾಷ್ಟ್ರೀಯ ಪಕ್ಷಗಳ ದೂತರು ಸಂಪರ್ಕಿಸಿದ್ದಾರೆ' ಎಂಬ ಅವರ ಮಾತು ಮುಳುವಾಯಿತು. ಜೆಡಿಎಸ್‌ಗೆ ಮತ ಹಾಕಿದರೆ, ಕಾಂಗ್ರೆಸ್‌ಗೆ ಹಾಕಿದಂತೆ ಎಂದು ಬಿಜೆಪಿ ನಾಯಕರು ಪ್ರಸ್ತಾಪಿಸಿದ್ದು, ಕಾಂಗ್ರೆಸ್ ವರವಾದರೆ, ದಳಪತಿಗಳಿಗೆ ನಷ್ಟವಾಯಿತು. ಒಕ್ಕಲಿಗರ ಪ್ರಾಬಲ್ಯವಿರುವ ಪ್ರದೇಶ ದಲ್ಲಿ, 'ಒಕ್ಕಲಿಗರು ಮುಖ್ಯಮಂತ್ರಿಯಾಗುವ ಅವಕಾಶ ಇದೆ; ಸಹಕಾರ ನೀಡಿ' ಎಂದು ಡಿ.ಕೆ. ಶಿವಕುಮಾರ್ ಬಳಸಿದ ಅಸ್ತ್ರವೂ ಜೆಡಿಎಸ್ ಅನ್ನು ಹೈರಾಣಾಗಿಸಿತು.

ಸಿದ್ಧರಾಮನ ಹುಂಡಿಯಲ್ಲಿ ನೀರವ ಮೌನ

ಮೈಸೂರು: ಅಲ್ಲಿ ಪಟಾಕಿ, ಹಾರ ತುರಾ ಯಿಯ ಸಂಭ್ರಮ- ವಿರಲಿಲ್ಲ. ಯಾರ ಮುಖದಲ್ಲಿ ಗೆಲುವಿನ ಕಳೆಯಿರಲಿಲ್ಲ. ವಾಹನ ಸಂಚಾರವಂತೂ ವಿರಳವಾಗಿತ್ತು..

–ವರುಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸಿದ್ದರಾಮಯ್ಯ ಗೆದ್ದಿದ್ದರೂ ಅವರ ಹುಟ್ಟೂರಾದ ಸಿದ್ದರಾಮನಹುಂಡಿಯಲ್ಲಿ ಶನಿವಾರ ಸೂತಕದ ವಾತಾವರಣ ನಿರ್ಮಾಣವಾಗಿತ್ತು. ಅವರ ಸಂಬಂಧಿ ರಾಮೇಗೌಡರು ನಿಧನರಾಗಿದ್ದರಿಂದ ಇಡೀ ಊರಿನಲ್ಲಿ ಮೌನ ಆವರಿಸಿತ್ತು. ಕೆಲವರು ಸ್ವಯಂಪ್ರೇರಿತರಾಗಿ ಅಂಗಡಿಗಳನ್ನು ಮುಚ್ಚಿ ಸಂತಾಪ ಸಲ್ಲಿಸಿದರು.

ಸಿದ್ದರಾಮಯ್ಯ ಅವರ ಮನೆ ಸಮೀ ಪದ ಸಿದ್ದರಾಮೇಶ್ವರ ದೇವಾಲಯವನ್ನು ಬೆಳಗಿನ ಪೂಜೆ ಬಳಿಕ ಮುಚ್ಚಲಾಗಿತ್ತು. ಪಕ್ಕದ ಒಕ್ಕಲಿಗರ ಬೀದಿಯಲ್ಲಿದ್ದ ಶ್ರೀರಾಮ ಮಂದಿರವನ್ನೂ ಮುಚ್ಚಲಾಗಿತ್ತು.

ಫಲಿತಾಂಶ ವೀಕ್ಷಿಸಿದ ಪತ್ನಿ, ಸೊಸೆ: ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ, ಸೊಸೆ ಸ್ಮಿತಾ ರಾಕೇಶ್ ಅವರು ಮನೆಯಲ್ಲಿ ಕುಳಿತು ಟಿ.ವಿಯಲ್ಲಿ ಚುನಾವಣೆ ಫಲಿತಾಂಶವನ್ನು ವೀಕ್ಷಿಸಿದರು. ಪತಿಯ ಗೆಲುವು ಖಾತ್ರಿಯಾಗುತ್ತಿದ್ದಂತೆಯೇ ಸಂಬಂಧಿಕರೊಡನೆ ಚಪ್ಪಾಳೆ ಹೊಡೆದು ಸಂಭ್ರಮಿಸಿದರು. ಮನೆ ಒಳಗೆ ಪ್ರವೇಶಿಸದಂತೆ ಪೊಲೀಸ್ ಭದ್ರತೆ ಕಲ್ಪಿಸಲಾಗಿತ್ತು. ಹೊರ ಆವರಣದಲ್ಲಿಯೂ ಫೋಟೊ, ವಿಡಿಯೊ ತೆಗೆಯದಂತೆ ಪೊಲೀಸರು ತಡೆಯೊಡ್ಡಿದರು.

ಪ್ರೇರಕ್ ಮಂಕಡ್ ಅರ್ಧಶತಕ, ಸ್ಟೊಯಿನಿಸ್ ಅಬ್ಬರ: ಸನ್‌ರೈಸರ್ಸ್ ಹೈದರಾಬಾದ್‌ಗೆ ಸೋಲು

ಪೂರನ್ ಪ್ರಹಾರ; ಲಖನೌಗೆ ಜಯ

ಹೈದರಾಬಾದ್(ಪಿಟಿಐ): ನಿಕೊಲಸ್ ಪೂರನ್ ಸಿಡಿಸಿದ 'ಸಿಕ್ಸರ್‌ಗಳ ಹ್ಯಾಟ್ರಿಕ್'ನಿಂದಾಗಿ ಲಖನೌ ಸೂಪರ್ ಜೈಂಟ್ಸ್ ತಂಡದ ಪ್ಲೇ ಆಫ್ ಕನಸು ಜೀವಂತವಾಗುಳಿಯಿತು.

ರಾಜೀವಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಐಪಿಎಲ್ ಪಂದ್ಯದಲ್ಲಿ ಲಖನೌ ತಂಡವು 7 ವಿಕೆಟ್‌ಗಳಿಂದ ಸನ್‌ರೈಸರ್ಸ್ ಹೈದರಾಬಾದ್ ಎದುರು ಜಯಿಸಲು ಪೂರನ್ ಆಟ ನೆರವಾಯಿತು. ಸನ್‌ರೈಸರ್ಸ್ ತಂಡವು ನೀಡಿದ್ದ 183 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಲಖನೌ ತಂಡವು 15 ಓವರ್‌ಗಳು ಮುಗಿದಾಗಲೂ ಗೆಲುವಿನ ಸನಿಹ ಇರಲಿಲ್ಲ. ಆದರೆ, ಅಭಿಷೇಕ್ ಶರ್ಮಾ ಹಾಕಿದ 16ನೇ ಓವರ್‌ನಲ್ಲಿ ಬ್ಯಾಟರ್‌ಗಳು 31 ರನ್‌ಗಳನ್ನು ಸೂರೆ ಮಾಡಿದರು. ಇದು ಇನಿಂಗ್ಸ್‌ಗೆ ತಿರುವು ನೀಡಲು ಕಾರಣವಾಯಿತು. ಅದರಲ್ಲಿ ಪೂರನ್ ಸಿಡಿಸಿದ ಮೂರು ಸಿಕ್ಸರ್‌ಗಳು ಸೇರಿದ್ದವು. ಈ ಓವರ್‌ನ ಆರಂಭದಲ್ಲಿ ಎರಡು ಸಿಕ್ಸರ್ ಹೊಡೆದ ಮಾರ್ಕಸ್ ಸ್ಟೊಯಿನಿಸ್ ಔಟಾದರು.

26 ಎಸೆತಗಳಲ್ಲಿ 68 ರನ್‌ಗಳು ಹರಿದುಬರಲು ಪೂರನ್ ಕಾರಣರಾದರು. 13 ಎಸೆತಗಳಲ್ಲಿ ಅವರು ಅಜೇಯ 44 ರನ್ ಗಳಿಸಿದರು. 338.46ರ ಸ್ಟ್ರೈಕ್‌ರೇಟ್‌ನಲ್ಲಿ ಅವರು ಮೂರು ಬೌಂಡರಿ ಹಾಗೂ ಒಟ್ಟು ನಾಲ್ಕು ಸಿಕ್ಸರ್ ದಾಖಲಿಸಿದರು.ಅವರ ಆಟದಿಂದಾಗಿ ಪ್ರೇರಕ್ ಮಂಕಡ್ (ಅಜೇಯ 64; 45ಎ) ಮತ್ತು ಸ್ಟೊಯಿನಿಸ್ (40; 25ಎ) ಆಟವು ವ್ಯರ್ಥವಾಗಲಿಲ್ಲ. ಲಖನೌ ತಂಡದ ಆರಂಭಿಕ ಬ್ಯಾಟರ್ ಕೈಲ್ ಮೇಯರ್ಸ್ 14 ಎಸೆತಗಳಲ್ಲಿ ಕೇವಲ ಎರಡು ರನ್ ಗಳಿಸಿ ಔಟಾದರು.

ಕ್ವಿಂಟನ್ ಡಿಕಾಕ್ ಜೊತೆ ಸೇರಿದ ಪ್ರೇರಕ್ ಎರಡನೇ ವಿಕೆಟ್‌ಗೆ 42 ರನ್ ಸೇರಿಸಿ ಇನಿಂಗ್ಸ್‌ಗೆ ಬಲ ತುಂಬಿದರು. ಮಯಂಕ್ ಮಾರ್ಕಂಡೆ ಬೌಲಿಂಗ್‌ನಲ್ಲಿ ಡಿಕಾಕ್ ಔಟಾದರು. ಪ್ರೇರಕ್ ಜೊತೆಗೂಡಿದ ಸ್ಟೋಯಿನಿಸ್ ಅವರು ಮೂರನೇ ವಿಕೆಟ್ ಜೊತೆಯಾಟದಲ್ಲಿ 73 ರನ್ ಸೇರಿಸಿದರು. ಈ ಅಡಿಪಾಯದ ಮೇಲೆ ಪೂರನ್ ಗೆಲುವಿನ ಸೌಧ ಕಟ್ಟಿದರು.

ಟಾಸ್ ಗೆದ್ದ ಹೈದರಾಬಾದ್ ತಂಡ ಆರಂಭ ಉತ್ತಮವಾಗಿರಲಿಲ್ಲ. ಮೂರನೇ ಓವರ್‌ನಲ್ಲಿಯೇ ಅಭಿಷೇಕ್ ಶರ್ಮಾ ಔಟಾದರು. ಅನ್ಮೋಲ್ ಪ್ರೀತ್ (36; 27ಎ) ಉತ್ತಮ ಕಾಣಿಕೆ ನೀಡಿದರು. ಮಧ್ಯಮ ಕ್ರಮಾಂಕದಲ್ಲಿ ಎನ್ರಿಚ್ ಕ್ಲಾಸೆನ್ (47; 29ಎ) ಮತ್ತು ಅಬ್ದುಲ್ ಸಮದ್ (ಔಟಾಗದೆ 37) ಅವರ ಬ್ಯಾಟಿಂಗ್‌ನಿಂದಾಗಿ ತಂಡವು ಹೋರಾಟದ ಮೊತ್ತ ಗಳಿಸಿತು. ಈ ಸೋಲಿನಿಂದಾಗಿ ಸನ್‌ರೈಸರ್ಸ್ ತಂಡದ ಪ್ಲೇಆಫ್ ಹಾದಿ ಬಹುತೇಕ ಮುಚ್ಚಿದಂತಾಯಿತು.


ನಿಕೊಲಸ್ ಪೂರನ್ ಹಾಗೂ ಪ್ರೇರಕ್ ಮಂಕಡ್ ವಿಜಯೋತ್ಸವ –ಎಎಫ್‌ಪಿ ಚಿತ್ರ

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ರಶೀದ್	ಗುಜರಾತ್	23

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	576

ಸ್ಕೋರ್ ಕಾರ್ಡ್

ಸನ್‌ರೈಸರ್ಸ್ ಹೈದರಾಬಾದ್ 6ಕ್ಕೆ182 (20 ಓವರ್‌ಗಳಲ್ಲಿ)
ಅನ್ಮೋಲ್‌ಪ್ರೀತ್ ಸಿ ಮತ್ತು ಬಿ ಅಮಿತ್ 36 (27ಎ, 4X7)
ಅಭಿಷೇಕ್ ಸಿ ಡಿಕಾಕ್ ಬಿ ಯುದ್ಧವೀರ್ 7 (5ಎ, 4X1)
ತ್ರಿಪಾಠಿ ಸಿ ಡಿಕಾಕ್ ಬಿ ಯಶ್ ಠಾಕೂರ್ 20 (13ಎ, 4X4)
ಮರ್ಕರಂ ಸ್ಟಂಪ್ಡ್ ಡಿಕಾಕ್ ಬಿ ಕೃಣಾಲ್ 28 (20ಎ, 4X2, 6X1)
ಕ್ಲಾಸನ್ ಸಿ ಪ್ರೇರಕ್ ಬಿ ಆವೇಶ್ 47 (29ಎ, 4X3, 6X3)
ಫಿಲಿಪ್ಸ್ ಬಿ ಕೃಣಾಲ್ 0 (1ಎ)
ಸಮದ್ ಔಟಾಗದೆ 37 (25ಎ, 4X1, 6X4).ಭುವನೇಶ್ವರ್ ಔಟಾಗದೆ 2 (1ಎ)
ಇತರೆ: 5 (ಲೆಗ್‌ಬೈ 2, ವೈಡ್ 2, ನೋಬಾಲ್ 1)
ವಿಕೆಟ್ ಪತನ: 1–19 (ಅಭಿಷೇಕ್ ಶರ್ಮಾ; 2.1), 2–56 (ರಾಹುಲ್ ತ್ರಿಪಾಠಿ; 5.4), 3–82 (ಅನ್ಮೋಲ್‌ಪ್ರೀತ್ ಸಿಂಗ್; 8.5), 4–115 (ಏಡನ್ ಮರ್ಕರಂ;12.1), 5–115 (ಗ್ಲೆನ್ ಫಿಲಿಪ್ಸ್; 12.2), 6–173 (ಕ್ಲಾಸನ್; 18.6)
ಬೌಲಿಂಗ್: ಮೊಯುದ್ಧವೀರ್ ಸಿಂಗ್ 3–0–24–1, ಕೈಲ್ ಮೇಯರ್ಸ್ 1–0–11–0, ಕೃಣಾಲ್ ಪಾಂಡ್ಯ 4–0–24–2, ಆವೇಶ್ ಖಾನ್ 2–0–30–1, ಯಶ್ ಠಾಕೂರ್ 4–0–28–1, ಅಮಿತ್ ಮಿಶ್ರಾ 4–0–40–1, ರವಿ ಬಿಷ್ಣೋಯಿ 2–0–23–0

ಲಖನೌ ಸೂಪರ್ ಜೈಂಟ್ಸ್ 3ಕ್ಕೆ185 (19.2 ಓವರ್‌ಗಳಲ್ಲಿ)
ಮೇಯರ್ಸ್ ಸಿ ಮರ್ಕರಂ ಬಿ ಫಿಲಿಪ್ಸ್ 2 (14ಎ)
ಡಿಕಾಕ್ ಸಿ ಅಭಿಷೇಕ್ ಬಿ ಮಾರ್ಕಂಡೆ 29 (19ಎ, 4X3, 6X1)
ಪ್ರೇರಕ್ ಔಟಾಗದೆ 64 (45ಎ, 4X7, 6X2), ಮಾರ್ಕಸ್ ಸಿ ಸಮದ್ ಬಿ ಅಭಿಷೇಕ್ 40 (25ಎ, 4X2, 6X3)
ಪೂರನ್ ಔಟಾಗದೆ 44 (13ಎ, 4X3, 6X4)
ಇತರೆ: 6 (ಲೆಗ್‌ಬೈ 1, ವೈಡ್ 5)
ವಿಕೆಟ್ ಪತನ: 1–12 (ಕೈಲ್ ಮೇಯರ್ಸ್; 3.2), 2–54 (ಕ್ವಿಂಟನ್ ಡಿಕಾಕ್; 8.2), 3–127 (ಮಾರ್ಕಸ್ ಸ್ಟೊಯಿನಿಸ್; 15.3)
ಬೌಲಿಂಗ್: ಭುವನೇಶ್ವರ್‌ಕುಮಾರ್ 4–0–30–0, ಫಜಲ್‌ಹಕ್ ಫಾರೂಕಿ 3.2–0–32–0, ಗ್ಲೆನ್ ಫಿಲಿಪ್ಸ್ 2–0–10–1, ಟಿ. ನಟರಾಜನ್ 4–0–31–0, ಮಯಂಕ್ ಮಾರ್ಕಂಡೆ 3–0–39–1, ಅಭಿಷೇಕ್ ಶರ್ಮಾ 3–0–42–1
ಫಲಿತಾಂಶ: ಲಖನೌ ಸೂಪರ್‌ಜೈಂಟ್ಸ್ ತಂಡಕ್ಕೆ 7 ವಿಕೆಟ್‌ಗಳ ಜಯ

ಡುಪ್ಲೆಸಿ–ಜೈಸ್ವಾಲ್ ಹಣಾಹಣಿ

ರಾಜಸ್ಥಾನ ರಾಯಲ್ಸ್– ಆರ್‌ಸಿಬಿ ಪೈಪೋಟಿ ಇಂದು

ಜೈಪುರ(ಪಿಟಿಐ): ಯುವ ಆಟಗಾರ ಯಶಸ್ವಿ ಜೈಸ್ವಾಲ್ ಮತ್ತು ಅನುಭವಿ ಬ್ಯಾಟರ್ ಫಫ್ ಡುಪ್ಲೆಸಿ ಅವರ ಪೈಪೋಟಿಗೆ ಸವಾಯಿ ಮಾನಸಿಂಗ್ ಕ್ರೀಡಾಂಗಣ ಸಜ್ಜಾಗಿದೆ.

ಇದರಿಂದಾಗಿ ಫಫ್ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಜೈಸ್ವಾಲ್ ಆರಂಭಿಕ ಬ್ಯಾಟರ್ ಆಗಿ ಮಿಂಚುತ್ತಿರುವ ರಾಜಸ್ಥಾನ ರಾಯಲ್ಸ್ ಭಾನುವಾರ ಮುಖಾಮುಖಿಯಾಗಲಿವೆ. ಈ ಸಲದ ಟೂರ್ನಿಯಲ್ಲಿ ಇಬ್ಬರೂ ರನ್‌ಗಳನ್ನು ಹರಿಸುತ್ತಿದ್ದಾರೆ. ಇದರಿಂದಾಗಿ ಈ ಪಂದ್ಯವು ಕುತೂಹಲ ಕೆರಳಿಸಿದೆ.

ಪ್ಲೇ ಆಫ್ ಹಂತ ಪ್ರವೇಶಿಸುವ ಹಾದಿಯಲ್ಲಿ ಈ ಪಂದ್ಯದಲ್ಲಿ ಜಯಿಸುವುದು ಉಭಯ ತಂಡಗಳಿಗೂ ಮಹತ್ವದ್ದಾಗಿದೆ. ಆದ್ದರಿಂದ ಇವರಿಬ್ಬರ ಪಾತ್ರವೂ ಮುಖ್ಯವಾಗಿದೆ.

ಅದರಲ್ಲೂ ಡುಪ್ಲೆಸಿ, ವಿರಾಟ್ ಕೊಹ್ಲಿ ಹಾಗೂ ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಮೇಲೆಯೇ ಆರ್‌ಸಿಬಿಯ ಬ್ಯಾಟಿಂಗ್ ಅವಲಂಬಿತವಾಗಿದೆ. ಉಳಿದ ಬ್ಯಾಟರ್‌ಗಳು ಈ ಟೂರ್ನಿಯಲ್ಲಿ ತಮ್ಮ ಆಯ್ಕೆಯನ್ನು ಸಮರ್ಥಿಸಿಕೊಳ್ಳುವಂತೆ ಆಡಿಲ್ಲ. ರಾಜಸ್ಥಾನ ತಂಡದಲ್ಲಿರುವ ಅನುಭವಿ ಸ್ಪಿನ್ನರ್‌ಗಳಾದ ಯಜುವೇಂದ್ರ ಚಾಹಲ್, ಆರ್. ಅಶ್ವಿನ್ ಹಾಗೂ ಕುಲದೀಪ್ ಯಾದವ್ ಅವರ ಸವಾಲನ್ನು ಆರ್‌ಸಿಬಿ ಬ್ಯಾಟರ್‌ಗಳು ಮೀರಿ ನಿಲ್ಲಬೇಕಿದೆ.

ಪಂದ್ಯ ಅರಂಭ: ಮಧ್ಯಾಹ್ನ 3.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನಿಮಾ ಆ್ಯಪ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	12	8	4	0	16	0.761
ಚೆನ್ನೈ	12	7	4	1	15	0.493
ಮುಂಬೈ	12	7	5	0	14	-0.117
ಲಖನೌ	12	6	5	1	13	0.309
ರಾಜಸ್ಥಾನ	12	6	6	0	12	0.633
ಪಂಜಾಬ್	12	6	6	0	12	-0.268
ಬೆಂಗಳೂರು	11	5	6	0	10	-0.345
ಕೋಲ್ಕತ್ತ	12	5	7	0	10	-0.357
ಹೈದರಾಬಾದ್	11	4	7	0	8	-0.471
ಡೆಲ್ಲಿ	12	4	8	0	8	-0.686

ಶನಿವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಪ್ರಭ್‌ಸಿಮ್ರನ್ ಶತಕ: ಪಂಜಾಬ್‌ಗೆ ಗೆಲುವು

ದೆಹಲಿ (ಪಿಟಿಐ): ಪ್ರಭ್‌ಸಿಮ್ರನ್ ಸಿಂಗ್ ಅವರ ಶತಕದ ನೆರವಿನಿಂದ ಪಂಜಾಬ್ ಕಿಂಗ್ಸ್ ತಂಡದವರು ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಸೋಲುಣಿಸಿ, ಪ್ಲೇ ಆಫ್ ಪ್ರವೇಶದ ಸಾಧ್ಯತೆಯನ್ನು ಜೀವಂತವಾಗಿರಿಸಿಕೊಂಡರು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಐಪಿಎಲ್ ಪಂದ್ಯದಲ್ಲಿ ಪಂಜಾಬ್ 31 ರನ್‌ಗಳಿಂದ ಗೆದ್ದಿತು. ಈ ಸೋಲಿನೊಂದಿಗೆ ಡೆಲ್ಲಿ ಟೂರ್ನಿಯಿಂದ ಹೊರಬಿದ್ದಿತು.

ಮೊದಲು ಬ್ಯಾಟ್ ಮಾಡಿದ ಪಂಜಾಬ್ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 167 ರನ್ ಗಳಿಸಿತು. ಹರ್‌ಪ್ರೀತ್ ಬ್ರಾರ್ (30ಕ್ಕೆ 4) ಅವರ ಬೌಲಿಂಗ್‌ಗೆ ನಲುಗಿದ ಡೆಲ್ಲಿ ನಿಗದಿತ ಓವರ್‌ಗಳಲ್ಲಿ 8 ವಿಕೆಟ್‌ಗೆ ಕೇವಲ 136 ರನ್ ಗಳಿಸಿತು.

ಟಾಸ್ ಗೆದ್ದ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕ ಡೇವಿಡ್ ವಾರ್ನರ್ ಅವರು ಫೀಲ್ಡಿಂಗ್ ಮಾಡಲು ನಿರ್ಧರಿಸಿದರು. ಇತರ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದರೂ ಪ್ರಭ್‌ಸಿಮ್ರನ್ (103 ರನ್, 65 ಎ., 4X10, 6X6) ಶತಕದ ಮೂಲಕ ಪಂಜಾಬ್ ತಂಡಕ್ಕೆ ಆಸರೆಯಾದರು.

ನಾಯಕ ಶಿಖರ್ ಧವನ್ (7), ಲಿಯಾಮ್ ಲಿವಿಂಗ್‌ಸ್ಟೋನ್ (4) ಮತ್ತು ಜಿತೇಶ್ ಶರ್ಮಾ (5) ಅವರು ಬೇಗನೇ ಔಟಾದರು. 45 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡಿದ್ದ ತಂಡಕ್ಕೆ ಪ್ರಭ್‌ಸಿಮ್ರನ್ ಮತ್ತು ಸ್ಯಾಮ್ ಕರನ್ (20) ಆಸರೆಯಾದರು. ನಾಲ್ಕನೇ ವಿಕೆಟ್‌ಗೆ 54 ಎಸೆತಗಳಲ್ಲಿ 72 ರನ್ ಸೇರಿಸಿದರು. ಪ್ರಭ್‌ಸಿಮ್ರನ್ ಅವರಿಗೆ ಇದು ಐಪಿಎಲ್‌ನಲ್ಲಿ ಚೊಚ್ಚಲ ಶತಕವಾಗಿದೆ.


ಪ್ರಭ್‌ಸಿಮ್ರನ್ ಸಿಂಗ್ –ಪಿಟಿಐ ಚಿತ್ರ

ಡೆಲ್ಲಿ ಬ್ಯಾಟಿಂಗ್ ವೈಫಲ್ಯ: ಡೆಲ್ಲಿ ತಂಡದ ಪರ ವಾರ್ನರ್ (54) ಹಾಗೂ ಫಿಲ್ ಸಾಲ್ಟ್ (21) ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 6.2 ಓವರ್‌ಗಳಲ್ಲಿ 69 ರನ್ ಸೇರಿಸಿ ಜಯದ ಆಸೆ ಮೂಡಿಸಿದ್ದರು. ಆದರೆ ನಂತರ ಬಂದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದರು.

ಸಂಕ್ಷಿಪ್ತ ಸ್ಕೋರ್: ಪಂಜಾಬ್ ಕಿಂಗ್ಸ್ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 167 (ಪ್ರಭ್‌ಸಿಮ್ರನ್ ಸಿಂಗ್ 103, ಸ್ಯಾಮ್ ಕರನ್ 20, ಸಿಕಂದರ್ ರಝಾ ಔಟಾಗದೆ 11, ಇಶಾಂತ್ ಶರ್ಮಾ 27ಕ್ಕೆ 2, ಅಕ್ಷರ್ ಪಟೇಲ್ 27ಕ್ಕೆ 1, ಪ್ರವೀಣ್ ದುಬೆ 19ಕ್ಕೆ 1, ಕುಲದೀಪ್ ಯಾದವ್ 32ಕ್ಕೆ 1, ಮುಕೇಶ್ ಕುಮಾರ್ 3ಕ್ಕೆ 1). ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 136 (ಡೇವಿಡ್ ವಾರ್ನರ್ 54, ಫಿಲ್ ಸಾಲ್ಟ್ 21, ಅಮನ್ ಹಕೀಂ 16, ಕುಲದೀಪ್ ಯಾದವ್ 16; ಹರ್‌ಪ್ರೀತ್ ಬ್ರಾರ್ 30ಕ್ಕೆ 4, ನೇಥನ್ ಎಲಿಸ್ 26ಕ್ಕೆ 2, ರಾಹುಲ್ ಚಾಹರ್ 16ಕ್ಕೆ 2). ಫಲಿತಾಂಶ: ಪಂಜಾಬ್ ಕಿಂಗ್ಸ್‌ಗೆ 31 ರನ್‌ಗಳ ಜಯ

ಕೋಲ್ಕತ್ತ ತಂಡಕ್ಕೆ 'ಮಾಡು– ಮಡಿ' ಪಂದ್ಯ

ಚೆನ್ನೈ (ಪಿಟಿಐ): ಕೋಲ್ಕತ್ತ ನೈಟ್ ರೈಡರ್ಸ್ ತಂಡದವರು ಭಾನುವಾರ ನಡೆಯಲಿರುವ ಪಂದ್ಯದಲ್ಲಿ ನಾಲ್ಕು ಬಾರಿಯ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಎದುರಿಸಲಿದ್ದು, ಗೆಲ್ಲಲೇಬೇಕಾದ ಒತ್ತಡದಲ್ಲಿದ್ದಾರೆ.

15 ಪಾಯಿಂಟ್ಸ್ ಹೊಂದಿರುವ ಮಹೇಂದ್ರ ಸಿಂಗ್ ಧೋನಿ ಬಳಗ ಈ ಪಂದ್ಯದಲ್ಲಿ ಗೆದ್ದರೆ 'ಪ್ಲೇ ಆಫ್'ನಲ್ಲಿ ಸ್ಥಾನ ಖಚಿತವಾಗಲಿದೆ. 'ಪ್ಲೇ ಆಫ್' ಪ್ರವೇಶಿಸಬೇಕಾದರೆ ಇನ್ನುಳಿದ 2ಪಂದ್ಯಗಳನ್ನು ಗೆಲ್ಲುವ ಜತೆ ಇತರ ಪಂದ್ಯಗಳ ಫಲಿತಾಂಶವನ್ನೂ ಅವಲಂಬಿಸಬೇಕಿದೆ.

ಪಂದ್ಯ ಆರಂಭ: ರಾತ್ರಿ 7.30

ಪ್ರಜಾಪ್ರಭುತ್ವದಲ್ಲಿ ನಂಬಿಕೆ: ಐಎಸ್‌ಪಿಆರ್ ಪ್ರಧಾನ ನಿರ್ದೇಶಕ ಮಾಹಿತಿ

'ಪಾಕ್: ಸೇನಾಡಳಿತ ಹೇರುವುದಿಲ್ಲ'

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರನ್ನು ಬಂಧಿಸಿದ್ದರಿಂದ ಉಂಟಾಗಿರುವ ಪ್ರಕ್ಷುಬ್ಧ ಪರಿಸ್ಥಿತಿಯ ಹಿನ್ನೆಲೆಯಲ್ಲಿ ದೇಶದಲ್ಲಿ ಸೇನೆಯ ಆಡಳಿತ ಹೇರುವ ಸಾಧ್ಯತೆಯನ್ನು ಸೇನೆಯು ತಳ್ಳಿಹಾಕಿದೆ.

ಈ ಕುರಿತು ಆಂತರಿಕ ಸೇವೆಗಳ ಸಾರ್ವಜನಿಕ ಸಂಪರ್ಕ (ಐಎಸ್‌ಪಿಆರ್) ಪ್ರಧಾನ ನಿರ್ದೇಶಕ ಮೇಜರ್ ಜನರಲ್ ಅಹ್ಮದ್ ಷರೀಫ್ ಚೌಧರಿ ಅವರು ಮಾಧ್ಯಮಯೊಂದಕ್ಕೆ ತಿಳಿಸಿದ್ದಾರೆ. 'ದೇಶದಲ್ಲಿ ಸೇನೆಯ ಆಡಳಿತ ಹೇರುವ ಪ್ರಶ್ನೆಯೇ ಇಲ್ಲ. ಸೇನಾ ಮುಖ್ಯಸ್ಥ ಅಸಿಮ್ ಮುನೀರ್ ಸೇರಿ ಸಂಪೂರ್ಣ ಸೇನಾ ನಾಯಕತ್ವವು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರಿಸಿದೆ' ಎಂದು ಹೇಳಿದ್ದಾರೆ.

ಸೇನೆಯ ಒಗ್ಗಟ್ಟು ಅಚಲವಾಗಿದೆ. ದೇಶದ ಸ್ಥಿರತೆ ಮತ್ತು ದೃಢತೆ ವಿಚಾರದಲ್ಲಿ ಸೇನೆಯು ಸ್ತಂಭದ ರೀತಿ ದೃಢವಾಗಿ ನಿಲ್ಲಲಿದೆ ಎಂದು ಚೌಧರಿ ಹೇಳಿದ್ದಾರೆ. ಪ್ರಮುಖ ಸೇನಾ ಅಧಿಕಾರಿಗಳು ಮತ್ತು ಸೇನೆಯ ಶಿಸ್ತಿಗೆ ಬದ್ಧರಾಗಿಲ್ಲದವರ ರಾಜೀನಾಮೆ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವದಂತಿಗಳ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, 'ಸೇನೆಯಲ್ಲಿ ಯಾರೂ ರಾಜೀನಾಮೆ ನೀಡಿಲ್ಲ. ಸೇನಾ ಆದೇಶಗಳಿಗೆ ಯಾರೂ ಅವಿಧೇಯತೆಯನ್ನೂ ತೋರಿಲ್ಲ' ಎಂದಿದ್ದಾರೆ.

ಇಮ್ರಾನ್ ಖಾನ್ ಬಂಧಿಸಿದ್ದನ್ನು ವಿರೋಧಿಸಿ ಪ್ರತಿಭಟನೆ ನಡೆಸಿದ ವೇಳೆ ಸೇನೆಗೆ ಸೇರಿದ ಸ್ಥಳಗಳಲ್ಲಿ ದಾಳಿ ನಡೆಸುತ್ತಿರುವ ಹಿನ್ನೆಲೆಯಲ್ಲಿ ಸೇನೆ ಎರಡು ಭಾಗವಾಗಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಸೇನೆಯನ್ನು ಇಬ್ಭಾಗ ಮಾಡುವುದು ಕನಸಾಗಿಯೇ ಉಳಿಯಲಿದೆ. ಆಸಿಮ್ ಮುನೀರ್ ಅವರ ನಾಯಕತ್ವದಲ್ಲಿ ಸೇನೆ ಸಂಘಟಿತವಾಗಿಯೇ ಇದೆ ಎಂದಿದ್ದಾರೆ.

ಬಂಧನಕ್ಕೆ ಸೇನಾ ಮುಖ್ಯಸ್ಥ ಕಾರಣ : ಇಮ್ರಾನ್

ಇಸ್ಲಾಮಾಬಾದ್ (ಪಿಟಿಐ): 'ಸೇನಾ ಮುಖ್ಯಸ್ಥ ಜನರಲ್ ಅಸೀಮ್ ಮುನೀರ್ ಅವರೇ ನನ್ನ ಬಂಧನಕ್ಕೆ ಕಾರಣ' ಎಂದು ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಆರೋಪಿಸಿದ್ದಾರೆ ಎಂದು ಡಾನ್ ಪತ್ರಿಕೆ ಶನಿವಾರ ವರದಿ ಮಾಡಿದೆ.

'ಇಸ್ಲಾಮಾಬಾದ್ ಹೈಕೋರ್ಟ್ (ಐಎಚ್‌ಸಿ) ಆವರಣದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಶುಕ್ರವಾರ ಅನೌಪಚಾರಿಕವಾಗಿ ಮಾತನಾಡುವ ವೇಳೆ ಈ ವಿಷಯ ಪ್ರಸ್ತಾಪಿಸಿದ ಇಮ್ರಾನ್ ಖಾನ್ ಅವರು, ಹೈಕೋರ್ಟ್ ಆವರಣದಲ್ಲಿ ತಮ್ಮನ್ನು ನಾಟಕೀಯವಾಗಿ ಬಂಧಿಸಿದ ನಂತರ ನಡೆದ ಹಿಂಸಾಚಾರದಿಂದ ದೂರವಿದ್ದುದಾಗಿ ಹೇಳಿದರು' ಎಂದು ಪತ್ರಿಕೆ ತಿಳಿಸಿದೆ.

ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಇಮ್ರಾನ್ ಅವರಿಗೆ ಐಎಚ್‌ಸಿ ಈಗಾಗಲೇ ಎರಡು ವಾರಗಳ ಜಾಮೀನು ನೀಡಿದೆ. ಅಲ್ಲದೇ, ದೇಶದ ಯಾವುದೇ ಭಾಗದಲ್ಲಿ ಇಮ್ರಾನ್ ವಿರುದ್ಧ ಪ್ರಕರಣ ದಾಖಲಾದರೂ ಅವರನ್ನು ಸೋಮವಾರದವರೆಗೆ ಬಂಧಿಸಬಾರದು ಎಂದೂ ಅಧಿಕಾರಿಗಳಿಗೆ ಸೂಚಿಸಿದೆ.

ಭದ್ರತಾ ಸಂಸ್ಥೆಗಳು ನಿಮ್ಮ ವಿರುದ್ಧವಾಗಿವೆಯೋ, ನ್ಯಾಯಾಂಗ ನಿಮ್ಮ ಪರವಾಗಿದೆಯೋ ಎಂದು ಬಿಬಿಸಿ ಪ್ರತಿನಿಧಿಯೊಬ್ಬರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಇಮ್ರಾನ್, 'ಭದ್ರತಾ ಸಂಸ್ಥೆಗಳು ನನ್ನ ವಿರುದ್ಧವಾಗಿಲ್ಲ. ಒಬ್ಬ ವ್ಯಕ್ತಿ ವಿರುದ್ಧವಾಗಿದ್ದಾನೆ. ಆ ವ್ಯಕ್ತಿ ಸೇನಾ ಮುಖ್ಯಸ್ಥ' ಎಂದರು.


ಇಮ್ರಾನ್ ಖಾನ್

ಸಂಕ್ಷಿಪ್ತ ಸುದ್ದಿ

₹12,000 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಕೊಚ್ಚಿ (ಕೇರಳ) (ಪಿಟಿಐ): ನೌಕಾಪಡೆ ಹಾಗೂ ಮಾದಕ ವಸ್ತು ನಿಗ್ರಹ ಘಟಕ (ಎನ್‌ಸಿಬಿ) ಶನಿವಾರ ಕೇರಳದ ಕರಾವಳಿಯಲ್ಲಿ ಜಂಟಿ ಕಾರ್ಯಾಚರಣೆ ನಡೆಸಿ ಸುಮಾರು ₹12,000 ಕೋಟಿ ಮೌಲ್ಯದ 2,500 ಕೆ.ಜಿ ಮೆಟಾಂಪೆಟಮೈನ್ ಮಾದಕ ವಸ್ತು ಜಪ್ತಿ ಮಾಡಿವೆ.

ಐಸಿಎಸ್‌ಇ ಫಲಿತಾಂಶ

ನವದೆಹಲಿ(ಪಿಟಿಐ): ಸಿಐಎಸ್‌ಸಿಇ) 10ನೇ ತರಗತಿ (ಐಸಿಎಸ್‌ಇ) ಮತ್ತು 12ನೇ ತರಗತಿ (ಐಎಸ್‌ಸಿ) ಫಲಿತಾಂಶ ಭಾನುವಾರ ಸಂಜೆ 3 ಗಂಟೆಗೆ ಪ್ರಕಟಗೊಳ್ಳಲಿದೆ ಎಂದು ಮಂಡಳಿ ತಿಳಿಸಿದೆ.

ಪ್ರವೀಣ್ ಸೂದ್ ಸಿಬಿಐ ನಿರ್ದೇಶಕ?

ನವದೆಹಲಿ: ಕರ್ನಾಟಕ ಡಿಜಿಪಿ ಪ್ರವೀಣ್ ಸೂದ್ ಸೇರಿದಂತೆ ಮೂವರು ಹಿರಿಯ ಐಪಿಎಸ್ ಅಧಿಕಾರಿಗಳ ಹೆಸರುಗಳು ಸಿಬಿಐ ನಿರ್ದೇಶಕರ ಹುದ್ದೆಯ ಸಂಭಾವ್ಯರಪಟ್ಟಿಯಲ್ಲಿ ಶನಿವಾರ ಸ್ಥಾನ ಪಡೆದಿವೆ.

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹155.50
ಆರ್‌ಎಸ್‌ಎಸ್-5	₹149.50
ಗುಡ್ ಲಾಟ್	₹133

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

	100 ಮೊಟ್ಟೆಗೆ	₹515
	12 ಮೊಟ್ಟೆಗೆ	₹70
ಮೈಸೂರು	100 ಮೊಟ್ಟೆಗೆ	₹520

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹63,060
ಒಡವೆ ಚಿನ್ನ 1ಗ್ರಾಂ	₹5,802
ಬೆಳ್ಳಿ ಕೆ.ಜಿಗೆ	₹74,500

ಜಲಂಧರ ಲೋಕಸಭಾ ಕ್ಷೇತ್ರದ ಉಪಚುನಾವಣೆ

ಎಎಪಿ ಅಭ್ಯರ್ಥಿ ಸುಶೀಲ್‌ಗೆ ಜಯ

ಚಂಡೀಗಢ (ಪಿಟಿಐ): ಪಂಜಾಬ್‌ನ ಜಲಂಧರ ಲೋಕಸಭಾ ಕ್ಷೇತ್ರಕ್ಕೆ ನಡೆದ ಉಪ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷದ (ಎಎಪಿ) ಅಭ್ಯರ್ಥಿ ಸುಶೀಲ್ ಕುಮಾರ್ ರಿಂಕು ಅವರು 58 ಸಾವಿರಕ್ಕೂ ಅಧಿಕ ಮತಗಳ ಭಾರಿ ಅಂತರದಿಂದ ಜಯ ಸಾಧಿಸಿದ್ದಾರೆ.

ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ, ಕಾಂಗ್ರೆಸ್‌ನ ಕರಂಜಿತ್ ಕೌರ್ ಚೌಧರಿ ಅವರನ್ನು ಸೋಲಿಸಿದ್ದಾರೆ. ಕಳೆದ ಐದು ದಶಕಗಳಿಂದಲೂ ಜಲಂಧರ ಲೋಕಸಭಾ ಕ್ಷೇತ್ರ ಕಾಂಗ್ರೆಸ್‌ನ ಭದ್ರಕೋಟೆಯಾಗಿತ್ತು. ಸುಶೀಲ್ ಕುಮಾರ್ ರಿಂಕು ಅವರಿಗೆ 3,02,097 ಮತಗಳು ಚಲಾವಣೆಯಾಗಿದ್ದರೆ, ಕಾಂಗ್ರೆಸ್ ಅಭ್ಯರ್ಥಿ ಕೌರ್‌ಗೆ 2,43,450 ಮತಗಳು ಲಭಿಸಿದವು.

ಛಾನ್ಬೆ– ಅಪ್ನಾದಳಕ್ಕೆ ಗೆಲುವು: ಉತ್ತರ ಪ್ರದೇಶದ ಛಾನ್ಬೆ (ಎಸ್‌ಸಿ ಮೀಸಲು) ವಿಧಾನಸಭಾ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಆಡಳಿತಾರೂಢ ಬಿಜೆಪಿ ಮಿತ್ರ ಪಕ್ಷ ಅಪ್ನಾ ದಳ (ಸೋನೇಲಾಲ್) ಅಭ್ಯರ್ಥಿ ರಿಂಕಿ ಕೋಲ್ ಅವರು 9,587 ಮತಗಳ ಅಂತರದಿಂದ ಜಯ ಗಳಿಸಿದ್ದಾರೆ. ಅವರು ತಮ್ಮ ಪ್ರತಿಸ್ಪರ್ಧಿ, ಸಮಾಜವಾದಿ ಪಕ್ಷದ ಕೀರ್ತಿ ಕೋಲ್ ಅವರನ್ನು ಸೋಲಿಸಿದ್ದಾರೆ. ರಿಂಕಿ ಅವರಿಗೆ 76,203 ಮತಗಳು ಬಿದ್ದಿದ್ದರೆ, ಕೀರ್ತಿ ಕೋಲ್ 66,616 ಮತಗಳನ್ನು ಪಡೆದಿದ್ದಾರೆ.

ಸ್ವಾರ್ ಕ್ಷೇತ್ರದಲ್ಲೂ ಗೆಲುವು: ಸ್ವಾರ್ ವಿಧಾನಸಭಾ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಅಪ್ನಾ ದಳ (ಸೋನೇಲಾಲ್) ಪಕ್ಷದ ಅಭ್ಯರ್ಥಿ ಶಫೀಕ್ ಅಹ್ಮದ್ ಅನ್ಸಾರಿ ಗೆಲುವು ಸಾಧಿಸಿದ್ದಾರೆ.

ಶಫೀಕ್ ಅವರು ತಮ್ಮ ಪ್ರತಿಸ್ಪರ್ಧಿ, ಎಸ್‌ಪಿಯ ಅನುರಾಧಾ ಚೌಹಾಣ್ ಅವರನ್ನು ಸೋಲಿಸಿದ್ದಾರೆ. ಶಫೀಕ್ 68,630 ಮತ ಪಡೆದರೆ, ಅನುರಾಧಾ 59,906 ಮತ ಪಡೆದಿದ್ದಾರೆ.

ಭುವನೇಶ್ವರ ವರದಿ: ಝರ್ಸುಗುಡಾ ವಿಧಾನಸಭಾ ಕ್ಷೇತ್ರ ಉಪಚುನಾವಣೆಯಲ್ಲಿ ಆಡಳಿತಾರೂಢ ಬಿಜೆಡಿ ಪಕ್ಷದ ಅಭ್ಯರ್ಥಿ ದೀಪಾಲಿ ದಾಸ್ ಜಯಶಾಲಿಯಾಗಿದ್ದಾರೆ. ಅವರು ಬಿಜೆಪಿಯ ತಂಕಾಧರ ತ್ರಿಪಾಠಿ ಅವರನ್ನು 48,721 ಮತಗಳ ಅಂತರದಿಂದ ಸೋಲಿಸಿದ್ದಾರೆ.

ಲಖನೌ ವರದಿ: ಉತ್ತರ ಪ್ರದೇಶದಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಗಳಲ್ಲಿ ಬಿಜೆಪಿ ಭರ್ಜರಿ ಗೆಲುವು ಸಾಧಿಸಿದೆ. ಬಿಜೆಪಿ, ರಾಜ್ಯದ ಎಲ್ಲಾ 17 ಮಹಾನಗರ ಪಾಲಿಕೆಗಳ ಮೇಯರ್ ಸ್ಥಾನ, 90 ಪುರಸಭೆಗಳಲ್ಲಿ ಅಧ್ಯಕ್ಷ ಸ್ಥಾನ ಪಡೆದು ಅಧಿಕಾರದ ಚುಕ್ಕಾಣಿ ಹಿಡಿದಿದೆ.

ಯುಡಿಪಿ ಅಭ್ಯರ್ಥಿಗೆ ಗೆಲುವು

ಶಿಲ್ಲಾಂಗ್ (ಪಿಟಿಐ) : ಮೇಘಾಲಯದ ಪೂರ್ವ ಖಾಸಿ ಹಿಲ್ಸ್ ಜಿಲ್ಲೆಯ ಸೋಹಿಯೊಂಗ್ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಯುಡಿಪಿ ಅಭ್ಯರ್ಥಿ ಸಿನ್ಶಾರ್ ಕುಪಾರ್ ರಾಯ್ಲಿಂಗ್‌ಡ್ಡೋ ಥಾಬಾ ಅವರು ಎನ್‌ಪಿಪಿಯ ಸಮ್ಲಿನ್ ಮ್ಯಾಲ್ನ್‌ಗಿಯಾಂಗ್ ಅವರನ್ನು ಸೋಲಿಸಿದ್ದಾರೆ.

ಅದಾನಿ ಕಂಪನಿಗಳ ಬಂಡವಾಳ ಸಂಗ್ರಹ ಯೋಜನೆಗೆ ಒಪ್ಪಿಗೆ

ನವದೆಹಲಿ (ರಾಯಿಟರ್ಸ್): ಷೇರುಪೇಟೆಯಿಂದ ಬಂಡವಾಳ ಸಂಗ್ರಹಿಸಲು ಅದಾನಿ ಎಂಟರ್‌ಪ್ರೈಸಸ್ ಮತ್ತು ಅದಾನಿ ಟ್ರಾನ್ಸ್‌ಮಿಷನ್ ಕಂಪನಿಗಳ ಆಡಳಿತ ಮಂಡಳಿಗಳು ಶನಿವಾರ ಒಪ್ಪಿಗೆ ನೀಡಿವೆ. ಈ ಎರಡು ಕಂಪನಿಗಳು ಒಟ್ಟು ₹21 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ಉದ್ದೇಶಿಸಿವೆ.

ಅರ್ಹ ಸಾಂಸ್ಥಿಕ ಹೂಡಿಕೆ ಅಥವಾ ಇತರೆ ಮಾರ್ಗಗಳ ಮೂಲಕ ಈಕ್ವಿಟಿ ಷೇರುಗಳನ್ನು ಮಾರಾಟ ಮಾಡಿ ₹8,500 ಕೋಟಿಯವರೆಗೆ ಬಂಡವಾಳ ಸಂಗ್ರಹಿಸಲಾಗುವುದು ಎಂದು ಅದಾನಿ ಟ್ರಾನ್ಸ್‌ಮಿಷನ್ ಶನಿವಾರ ಪ್ರಕಟಣೆಯಲ್ಲಿ ತಿಳಿಸಿದೆ.

ಅದಾನಿ ಎಂಟರ್‌ಪ್ರೈಸಸ್ ಕಂಪನಿಯು ₹12,500 ಕೋಟಿ ಬಂಡವಾಳ ಸಂಗ್ರಹಿಸುವ ಯೋಜನೆ ಹೊಂದಿದೆ. ಅರ್ಹ ಸಾಂಸ್ಥಿಕ ಹೂಡಿಕೆ ಅಥವಾ ಇತರ ಮಾರ್ಗಗಳ ಮೂಲಕ ಬಂಡವಾಳ ಸಂಗ್ರಹಿಸಲಾಗುವುದು ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಮೂಲಗಳ ಪ್ರಕಾರ, ಯುರೋಪ್ ಮತ್ತು ಮಧ್ಯ ಪ್ರಾಚ್ಯ ಭಾಗದ ಹೂಡಿಕೆದಾರರು ಷೇರುಗಳನ್ನು ಖರೀದಿಸಲು ಹೆಚ್ಚಿನ ಆಸಕ್ತಿ ವ್ಯಕ್ತಪಡಿಸಿದ್ದಾರೆ.

ಬಂಡವಾಳ ಸಂಗ್ರಹಿಸುವ ಯೋಜನೆಗೆ ಒಪ್ಪಿಗೆ ಪಡೆಯುವ ಸಂಬಂಧ ಶನಿವಾರ ನಡೆಯಬೇಕಿದ್ದ ಅದಾನಿ ಗ್ರೀನ್ ಕಂಪನಿಯ ಆಡಳಿತ ಮಂಡಳಿ ಸಭೆಯನ್ನು ಮೇ 24ಕ್ಕೆ ಮುಂದೂಡಲಾಗಿದೆ.

ಅಮೆರಿಕದ ಸಂಶೋಧನಾ ಸಂಸ್ಥೆ ಹಿಂಡನ್‌ಬರ್ಗ್ ವರದಿ ಪ್ರಕಟವಾದ ಬಳಿಕ ಹೂಡಿಕೆದಾರರ ವಿಶ್ವಾಸ ಕಡಿಮೆ ಆಗಿದ್ದು, ಸಮೂಹದ ಕಂಪನಿಗಳ ಷೇರು ಮೌಲ್ಯವೂ ಕುಸಿದಿತ್ತು. ಅದಾದ ಕೆಲವೇ ತಿಂಗಳುಗಳ ಬಳಿಕ ಅದಾನಿ ಸಮೂಹದ ಕಂಪನಿಗಳು ಬಂಡವಾಳ ಸಂಗ್ರಹಿಸಲು ಮುಂದಾಗಿವೆ.

ವಿಶ್ವಕಪ್ ಶೂಟಿಂಗ್: 25 ಮೀ. ಪಿಸ್ತೂಲ್ ಸ್ಪರ್ಧೆಯಲ್ಲಿ ಸಾಧನೆ

ರಿದಮ್ ಸಾಂಗ್ವಾನ್ ವಿಶ್ವದಾಖಲೆ

ಬಾಕು (ಅಜರ್‌ಬೈಜಾನ್) (ಪಿಟಿಐ): ಭಾರತದ ಶೂಟರ್ ರಿದಮ್ ಸಾಂಗ್ವಾನ್ ಅವರು ಮಹಿಳೆಯರ 25 ಮೀ. ಪಿಸ್ತೂಲ್ ಸ್ಪರ್ಧೆಯಲ್ಲಿ 29 ವರ್ಷಗಳ ಹಳೆಯ ವಿಶ್ವದಾಖಲೆಯನ್ನು ಮುರಿದರು.

ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್‌ನಲ್ಲಿ ಶನಿವಾರ ನಡೆದ ಸ್ಪರ್ಧೆಯ ಅರ್ಹತಾ ಸುತ್ತಿನಲ್ಲಿ ರಿದಮ್ 595 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನ ಪಡೆದರು. ಆದರೆ ಫೈನಲ್ಸ್‌ನಲ್ಲಿ ಎಡವಿದ ಅವರು ಎಂಟನೇ ಸ್ಥಾನ ಪಡೆದರು.



ರಿದಮ್ ಸಾಂಗ್ವಾನ್

ಬಲ್ಗೇರಿಯದ ಡಯಾನಾ ಅಯೊರ್ಗೊವಾ ಅವರು 1994 ರಲ್ಲಿ ಇಟಲಿಯ ಮಿಲಾನ್‌ನಲ್ಲಿ ನಡೆದಿದ್ದ ಕೂಟದಲ್ಲಿ 594 ಪಾಯಿಂಟ್ಸ್ ಗಳಿಸಿದ್ದು ಇದುವರೆಗಿನ ವಿಶ್ವದಾಖಲೆ ಆಗಿತ್ತು. ಇದೇ ವರ್ಷ ಮಾರ್ಚ್‌ನಲ್ಲಿ ಭೋಪಾಲ್‌ನಲ್ಲಿ ನಡೆದಿದ್ದ ವಿಶ್ವಕಪ್‌ನಲ್ಲಿ ಜರ್ಮನಿಯ ಡೊರೀನ್ ವೆನ್‌ಕಾಂಪ್ ಅವರು ಈ ದಾಖಲೆ ಸರಿಗಟ್ಟಿದ್ದರು. ಅರ್ಹತಾ ಹಂತದಲ್ಲಿ ಮಿಂಚಿದ ರಿದಮ್ ಅವರಿಗೆ ಪದಕ ಗೆಲ್ಲುವ ಅದೃಷ್ಟ ಇರಲಿಲ್ಲ. ಎಂಟು ಸ್ಪರ್ಧಿಗಳಿದ್ದ ಫೈನಲ್ಸ್‌ನಲ್ಲಿ ಅವರು ಕೊನೆಯ ಸ್ಥಾನ ಪಡೆದರು. ಚೀನಾದ ಫೆಂಗ್ ಸಿಕ್ಸುವಾನ್ ಚಿನ್ನ ಗೆದ್ದರೆ, ಇರಾನ್‌ನ ಹನಿಯಾ ರೊಸ್ತಾಮಿಯಾನ್ ಮತ್ತು ಡೊರೀನ್ ವೆನ್‌ಕಾಂಪ್ ಅವರು ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಪಡೆದುಕೊಂಡರು. ಬುಧವಾರ ನಡೆದಿದ್ದ ಮಹಿಳೆಯರ 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ರಿದಮ್ ಕಂಚಿನ ಪದಕ ಗೆದ್ದುಕೊಂಡಿದ್ದರು.

ಭಾರತದ ಶೂಟರ್, 25 ಮೀ. ಪಿಸ್ತೂಲ್ ವಿಭಾಗದಲ್ಲಿ ಜೂನಿಯರ್ ಮಹಿಳೆಯರ ವಿಶ್ವದಾಖಲೆಯನ್ನೂ ಮುರಿದರು. ಜೂನಿಯರ್ ವಿಭಾಗದಲ್ಲಿ ರಷ್ಯಾದ ನಿನೊ ಸಲುಕ್‌ವಾಡ್ಜೆ ಅವರು 34 ವರ್ಷಗಳ ಹಿಂದೆ ಅರ್ಹತಾ ಸುತ್ತಿನಲ್ಲಿ 593 ಪಾಯಿಂಟ್ಸ್ ಗಳಿಸಿದ್ದು ಇದುವರೆಗಿನ ದಾಖಲೆಯಾಗಿತ್ತು. ಭಾರತದ ಮನು ಭಾಕರ್ ಅವರು 2018ರ ಏಷ್ಯನ್ ಗೇಮ್ಸ್‌ನಲ್ಲಿ ಈ ದಾಖಲೆ ಸರಿಗಟ್ಟಿದ್ದರು.

ಭಾರತದ ಶೂಟರ್‌ಗಳು ಶನಿವಾರ ಯಾವುದೇ ಪದಕ ಗೆಲ್ಲಲಿಲ್ಲ. ಮಹಿಳೆಯರ 25 ಮೀ. ಪಿಸ್ತೂಲ್ ಸ್ಪರ್ಧೆಯಲ್ಲಿ ಕಣದಲ್ಲಿದ್ದ ಇತರ ಶೂಟರ್‌ಗಳಾದ ಇಶಾ ಸಿಂಗ್ ಮತ್ತು ಮನು ಅವರು ಕ್ರಮವಾಗಿ 13 ಹಾಗೂ 27ನೇ ಸ್ಥಾನ ಪಡೆದರು.

ಪುರುಷರ 50 ಮೀ. ರೈಫಲ್ ತ್ರಿ ಪೊಸಿಷನ್‌ನಲ್ಲಿ ಐಶ್ವರ್ಯ ಪ್ರತಾಪ್ ಸಿಂಗ್ 10ನೇ ಸ್ಥಾನ ಪಡೆದರು.

ಟೈಗರ್ ಕಪ್: ಸಿಕ್ಸ್ ಅಕಾಡೆಮಿಗೆ ಜಯ

ಬೆಂಗಳೂರು: ಅನಿಕೇತ್ ರೆಡ್ಡಿ ಅವರ ಅರ್ಧಶತಕದ (76) ನೆರವಿನಿಂದ ಸಿಕ್ಸ್ ಅಕಾಡೆಮಿ ತಂಡವು ಟೈಗರ್ ಕಪ್ 16 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಯ ಗಳಿಸಿತು.ಹೈಪರ್ ಟರ್ಫ್ ಕ್ರಿಕೆಟ್ ಮೈದಾನದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಸಿಕ್ಸ್ ಅಕಾಡೆಮಿ ಆರು ವಿಕೆಟ್‌ಗಳಿಂದ ಜಸ್ಟ್ ಕ್ರಿಕೆಟ್ ಅಕಾಡೆಮಿ ವಿರುದ್ಧ ಗೆದ್ದಿತು.

ಸಂಕ್ಷಿಪ್ತ ಸ್ಕೋರುಗಳು: ಜಸ್ಟ್ ಕ್ರಿಕೆಟ್ ಅಕಾಡೆಮಿ: 30 ಓವರ್‌ಗಳಲ್ಲಿ 9 ವಿಕೆಟ್‌ಗೆ 150 (ದೇವರಾಜನ್ 66; ಆರ್ಯನ್ ಸೂರ್ಯ 15ಕ್ಕೆ 2,). ಸಿಕ್ಸ್ ಅಕಾಡೆಮಿ: 25 ಓವರ್‌ಗಳಲ್ಲಿ 4 ವಿಕೆಟ್‌ಗೆ 156 (ಅನಿಕೇತ್ ರೆಡ್ಡಿ 76; ಭರತ್ ಸಿ. 15ಕ್ಕೆ 2).

ಆರ್‌ಕೆಸಿಎ: 28.5 ಓವರ್‌ಗಳಲ್ಲಿ 105 (ನಿಶ್ಚಯ್ ಸಾವಂತ್ 28; ಸುಹಾನ್ 28ಕ್ಕೆ 3, ಮೋಕಿತ್ ಕೆ.ಎಸ್. 22ಕ್ಕೆ 3). ಗೋಪಾಲನ್: 12.4 ಓವರ್‌ಗಳಲ್ಲಿ 2 ವಿಕೆಟ್‌ಗೆ 107 (ಭುವನ್ 48)

ಗಾಲ್ಫ್: ಜಂಟಿ 3ನೇ ಸ್ಥಾನಕ್ಕೆ ಅದಿತಿ


ಕ್ಲಿಫ್ಟನ್, ನ್ಯೂಜೆರ್ಸಿ (ಎಎಫ್‌ಪಿ): ಉತ್ತಮ ಪ್ರದರ್ಶನ ಮುಂದುವರಿಸಿದ ಬೆಂಗಳೂರಿನ ಅದಿತಿ ಅಶೋಕ್ ಅವರು ಎಲ್‌ಪಿಜಿಎ ಟೂರ್ ಫೌಂಡರ್ಸ್ ಕಪ್ ಗಾಲ್ಫ್ ಟೂರ್ನಿಯ ಎರಡನೇ ಸುತ್ತಿನ ಬಳಿಕ ಜಂಟಿ ಮೂರನೇ ಸ್ಥಾನದಲ್ಲಿದ್ದಾರೆ.

ಇಲ್ಲಿನ ಅಪ್ಪರ್ ಮಾಂಟ್‌ಕ್ಲೇರ್ ಕಂಟ್ರಿ ಕ್ಲಬ್ ಕೋರ್ಸ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಶುಕ್ರವಾರ ಎರಡನೇ ಸುತ್ತಿನ ಸ್ಪರ್ಧೆ ಕೊನೆಗೊಳಿಸಲು ಅವರು 68 ಸ್ಟ್ರೋಕ್‌ಗಳನ್ನು ತೆಗೆದುಕೊಂಡರು. ಮೊದಲ ಸುತ್ತಿನಲ್ಲಿ 69 ಸ್ಟ್ರೋಕ್‌ಗಳನ್ನು ತೆಗೆದುಕೊಂಡಿದ್ದ ಅವರು ಒಟ್ಟು 137 ಸ್ಕೋರ್ ಹೊಂದಿದ್ದಾರೆ.

ಆಸ್ಟ್ರೇಲಿಯಾದ ಸಾರಾ ಕೆಂಪ್ (71, 65) ಮತ್ತು ಕೊರಿಯಾದ ಕೊ ಜಿನ್ ಯಾಂಗ್ (68, 68) ಅವರು ತಲಾ 136 ಸ್ಕೋರ್‌ಗಳೊಂದಿಗೆ ಜಂಟಿ ಅಗ್ರಸ್ಥಾನದಲ್ಲಿದ್ದಾರೆ.

ಆಸ್ಟ್ರೇಲಿಯಾದ ಮಿನ್‌ಜೀ ಲೀ (68, 69) ಮತ್ತು ಕೊರಿಯಾದ ರ್‍ಯು ಹಾಯೆ ರಾನ್ (67, 70) ಅವರು ಅದಿತಿ ಜತೆ ಮೂರನೇ ಸ್ಥಾನ ಹಂಚಿಕೊಂಡಿದ್ದಾರೆ.

ಕಳೆದ ಏಳು ವರ್ಷಗಳಿಂದ ಎಲ್‌ಪಿಜಿಎ ಟೂರ್‌ನಲ್ಲಿ ಸ್ಪರ್ಧಿಸುತ್ತಿರುವ ಅದಿತಿ ಒಮ್ಮೆಯೂ ಪ್ರಶಸ್ತಿ ಗೆದ್ದಿಲ್ಲ. ಇಲ್ಲಿ ಕೊನೆಯ ಎರಡು ಸುತ್ತುಗಳಲ್ಲಿ ನಿಖರ ಪ್ರದರ್ಶನ ನೀಡಿದರೆ ಚೊಚ್ಚಲ ಪ್ರಶಸ್ತಿ ಜಯಿಸುವ ಅವಕಾಶವಿದೆ.



ಅದಿತಿ ಅಶೋಕ್ –ಎಎಫ್‌ಪಿ ಚಿತ್ರ

ಕಣದಲ್ಲಿ ಸಿಂಧು, ಪ್ರಣಯ್: ತೈಪೆ ಎದುರಾಳಿ

ಸುದೀರ್‌ಮನ್ ಕಪ್ ಇಂದಿನಿಂದ: ಪದಕದ ಮೇಲೆ ಭಾರತ ಕಣ್ಣು

ಸುಜೌ, ಚೀನಾ (ಪಿಟಿಐ): ಪಿ.ವಿ. ಸಿಂಧು ಹಾಗೂ ಎಚ್.ಎಸ್. ಪ್ರಣಯ್ ಅವರನ್ನೊಳಗೊಂಡ ಭಾರತ ತಂಡವು ಭಾನುವಾರ ಇಲ್ಲಿ ಆರಂಭವಾಗಲಿರುವ ಸುದೀರ್‌ಮನ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪದಕ ಜಯದತ್ತ ಚಿತ್ತ ನೆಟ್ಟಿದೆ.

ಭಾರತವು ಚೀನಾ ತೈಪೆ ವಿರುದ್ಧದ ಪಂದ್ಯದೊಂದಿಗೆ ಅಭಿಯಾನ ಆರಂಭಿಸಲಿದೆ. ತೈಪೆ ತಂಡವನ್ನು ಒಲಿಂಪಿಕ್ ಪದಕವಿಜೇತ ಆಟಗಾರ್ತಿ ತೈಜು ಯಿಂಗ್ ಮುನ್ನಡೆಸಲಿದ್ದಾರೆ.

ಭಾರತ ತಂಡವು ಪ್ರತಿಬಾರಿಯೂ ತನ್ನ ಸಿಂಗಲ್ಸ್ ಆಟಗಾರರ ಮೇಲೆಯೇ ಹೆಚ್ಚು ಅವಲಂಬಿತವಾಗಿದೆ. ಆದರೆ ಈ ಸಲ ವಿಶ್ವ ಮಿಶ್ರ ತಂಡ ಚಾಂಪಿಯನ್‌ಷಿಪ್ ಗೆಲ್ಲುವ ವಿಶ್ವಾಸದಲ್ಲಿದೆ. ಪುರುಷರ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಹಾಗೂ ಚಿರಾಗ್ ಶೆಟ್ಟಿ, ಮಹಿಳೆಯರ ಜೋಡಿ ಟ್ರಿಸಾ ಜೋಲಿ ಹಾಗೂ ಗಾಯತ್ರಿ ಗೋಪಿಚಂದ್ ಅವರು ಭರವಸೆ ಮೂಡಿಸಿದ್ದಾರೆ.

ಹೋದ ತಿಂಗಳು ದುಬೈನಲ್ಲಿ ಏಷ್ಯನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆದ್ದ ಭಾರತ ತಂಡವು ಈ ಟೂರ್ನಿಗೆ ಅರ್ಹತೆ ಗಿಟ್ಟಿಸಿತ್ತು.



ಪಿ.ವಿ. ಸಿಂಧು

ಸಿಂಧು ಮೊದಲ ಸುತ್ತಿನಲ್ಲಿಯೇ ತಮ್ಮ ಬದ್ಧ ಎದುರಾಳಿ ತೈ ಜು ಯಿಂಗ್ ಅವರನ್ನು ಎದುರಿಸಲಿದ್ದಾರೆ. ಬಹುಶಃ ಈ ಪಂದ್ಯವು ಭಾರತಕ್ಕೆ ದಿಕ್ಸೂಚಿಯಾಗಬಹುದು. ಏಕೆಂದರೆ 2019ರಲ್ಲಿ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ತೈಜು ಅವರನ್ನು ಸಿಂಧು ಸೋಲಿಸಿದ್ದರು. ಅದರ ನಂತರದ ಮುಖಾಮುಖಿಗಳಲ್ಲಿ ಸಿಂಧು ನಿರಾಶೆ ಅನುಭವಿಸಿದ್ದೇ ಹೆಚ್ಚು.

ಪುರುಷರ ವಿಭಾಗದಲ್ಲಿ ವಿಶ್ವದ ಒಂಬತ್ತನೇ ಶ್ರೇಯಾಂಕದ ಆಟಗಾರ ಪ್ರಣಯ್ ಅವರು ಐದನೇ ಶ್ರೇಯಾಂಕದ ಚೌ ಟೀನ್ ಚೆನ್ ಅವರನ್ನು ಎದುರಿಸುವರು. ಇವರಿಬ್ಬರೂ ಈ ಹಿಂದೆ ಎಂಟು ಬಾರಿ ಮುಖಾಮುಖಿಯಾಗಿದ್ದಾರೆ. ಅದರಲ್ಲಿ ಐದು ಬಾರಿ ಚೆನ್ ಜಯಿಸಿದ್ದರು. ಆದರೆ ಕಳೆದ ಮೂರು ಹಣಾಹಣಿಗಳಲ್ಲಿ ಪ್ರಣಯ್ ಮೇಲುಗೈ ಸಾಧಿಸಿದ್ದರು.

ಡಬಲ್ಸ್‌ನಲ್ಲಿ ಸಾತ್ವಿಕ್ –ಚಿರಾಗ್ ಜೋಡಿಯು ಒಲಿಂಪಿಕ್ ಚಾಂಪಿಯನ್ ಲೀ ಯಾಂಗ್ ಮತ್ತು ವಾಂಗ್ ಚಿ ಲಿನ್ ಜೋಡಿಯನ್ನು ಎದುರಿಸಲಿದೆ. ಮಹಿಳೆಯರ ಡಬಲ್ಸ್‌ನಲ್ಲಿ ಟ್ರಿಸಾ–ಗಾಯತ್ರಿ ಅವರು ಲೀ ಚಿಯಾ ಸಿನ್ ಮತ್ತು ಟೆಂಗ್ ಚುನ್ ಸುನ್ ಅವರನ್ನು ಎದುರಿಸಲಿದೆ.

ಮಿಶ್ರ ಡಬಲ್ಸ್‌ನಲ್ಲಿ ಕನ್ನಡತಿ ಅಶ್ವಿನಿ ಪೊನ್ನಪ್ಪ ಮತ್ತು ಕೆ ಸಾಯಿ ಪ್ರತೀಕ್ ಜೋಡಿಯು ಕಣಕ್ಕಿಳಿಯಲಿದೆ. ಯೀ ಹಾಂಗ್ ವೀ ಹಾಗೂ ಲೀ ಚಿಯಾ ಸಿನ್ ಜೋಡಿಯ ವಿರುದ್ಧ ಸೆಣಸಲಿದೆ.

ಸೋಮವಾರ ಭಾರತ ತಂಡವು ಮಲೇಷ್ಯಾ ವಿರುದ್ಧ ಆಡಲಿದೆ.

ಎಫ್‌ಬಿಕೆ ಗೇಮ್ಸ್: ನೀರಜ್ ಕಣಕ್ಕೆ

ನವದೆಹಲಿ (ಪಿಟಿಐ): ಒಲಿಂಪಿಕ್ ಚಾಂಪಿಯನ್, ಜಾವೆಲಿನ್ ಥ್ರೊ ಅಥ್ಲೀಟ್ ನೀರಜ್ ಚೋಪ್ರಾ ಅವರು ನೆದರ್ಲೆಂಡ್ಸ್‌ನಲ್ಲಿ ಮುಂದಿನ ತಿಂಗಳು ನಡೆಯಲಿರುವ ಫ್ಯಾನಿ ಬ್ಲ್ಯಾಂಕರ್ಸ್ ಕೊಯನ್ (ಎಫ್‌ಬಿಕೆ) ಗೇಮ್ಸ್‌ನಲ್ಲಿ ಕಣಕ್ಕಿಳಿಯಲಿದ್ದಾರೆ.

ಜೂನ್ 4ರಂದು ನೆದರ್ಲೆಂಡ್ಸ್‌ನ ಹೆಂಗೆಲೊದಲ್ಲಿ ವಿಶ್ವ ಅಥ್ಲೆಟಿಕ್ಸ್ ಕಾಂಟಿನೆಂಟಲ್ ಟೂರ್ ಗೋಲ್ಡ್ ಮಟ್ಟದ ಕೂಟ ನಡೆಯಲಿದೆ.

‘89.94 ಮೀಟರ್ಸ್ ವೈಯಕ್ತಿಕ ಶ್ರೇಷ್ಠ ಸಾಧನೆ ಹೊಂದಿರುವ ಜಾವೆಲಿನ್ ಥ್ರೊ ಅಥ್ಲೀಟ್, ಒಲಿಂಪಿಕ್ ಚಾಂಪಿಯನ್ ನೀರಜ್ ಚೋಪ್ರಾ ಹೆಂಗೆಲೊಗೆ ಬರುತ್ತಿದ್ದಾರೆ’ ಎಂದು ಎಫ್‌ಬಿಕೆ ಗೇಮ್ಸ್ ಸಂಘಟಕರು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ನೀಡಿದ್ದಾರೆ.

ನೀರಜ್ ಅವರು ದೋಹಾದಲ್ಲಿ ಇದೇ 5ರಂದು ನಡೆದ ದೋಹಾ ಡೈಮಂಡ್ ಲೀಗ್‌ನಲ್ಲಿ 88.67 ಮೀ. ಜಾವೆಲಿನ್ ಎಸೆದು ಚಿನ್ನದ ಪದಕ ಜಯಿಸಿದ್ದರು.



ನೀರಜ್ ಚೋಪ್ರಾ

ಕುಸ್ತಿ ಫೆಡರೇಷನ್‌ಗೆ ಭಾರತ ಒಲಿಂಪಿಕ್ ಸಂಸ್ಥೆಯಿಂದ ಸೂಚನೆ

‘ಅಡ್‌ಹಾಕ್ ಸಮಿತಿಗೆ ಅಧಿಕಾರ ಹಸ್ತಾಂತರಿಸಿ’

ನವದೆಹಲಿ (ಪಿಟಿಐ): ಹಣಕಾಸಿಗೆ ಸಂಬಂಧಿಸಿದ ಲೆಕ್ಕಪತ್ರ ಮತ್ತು ಇತರ ಅಧಿಕೃತ ಕಡತಗಳನ್ನು ಭಾರತ ಕುಸ್ತಿ ಫೆಡರೇಷ್ ತಾನು ನೇಮಿಸಿರುವ ಅಡ್‌ಹಾಕ್ ಸಮಿತಿಗೆ ಹಸ್ತಾಂತರಿಸಬೇಕು ಎಂದು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಫೆಡರೇಷನ್‌ನ ಮಹಾ ಪ್ರಧಾನ ಕಾರ್ಯದರ್ಶಿ ವಿ.ಎನ್.ಪ್ರಸೂದ್ ಅವರಿಗೆ ತಿಳಿಸಿದೆ.

ಫೆಡರೇಷನ್‌ನ ದೈನಂದಿನ ಆಗುಹೋಗುಗಳಲ್ಲಿ ಇನ್ನು ಮುಂದೆ ನಿರ್ಗಮಿತ ಪದಾಧಿಕಾರಿಗಳಿಗೆ ಯಾವುದೇ ಪಾತ್ರ ಇರುವುದಿಲ್ಲ ಎಂದೂ ಐಒಎ ಸ್ಪಷ್ಟಪಡಿಸಿದೆ. ಎಲ್ಲ ಆಡಳಿತಾತ್ಮಕ, ಹಣಕಾಸು ಮತ್ತು ಕಾನೂನಿಗೆ ಸಂಬಂಧಿಸಿದ ಪಾತ್ರಗಳನ್ನು ಅಡ್‌ಹಾಕ್ ಸಮಿತಿ ನಿರ್ವಹಿಸಲಿದೆ ಎಂದು ಐಒಎ ಶುಕ್ರವಾರ ಹೊರಡಿಸಿದ ಪ್ರಕಟಣೆಯಲ್ಲಿ ತಿಳಿಸಿದೆ.

ಈಗಾಗಲೇ ಅಧಿಕಾರಿಗಳಿಗೆ ಸಹಕಾರ ನೀಡುತ್ತಿದ್ದು, ಐಒಎ ಆದೇಶ ಪಾಲನೆಯಲ್ಲಿ ತಮಗೆ ಯಾವುದೇ ಸಮಸ್ಯೆಯಿಲ್ಲ ಎಂದು ಫೆಡರೇಷನ್ ಸಹ ಹೇಳಿದೆ. ಕೆಲದಿನಗಳ ಹಿಂದೆ ಐಒಎ ಅಡ್‌ಹಾಕ್ ಸಮಿತಿ ರಚಿಸಿದ್ದು, ಕುಸ್ತಿ ಫೆಡರೇಷನ್‌ನ ಆಡಳಿತದ ಜವಾಬ್ದಾರಿಯನ್ನು ವಹಿಸಿತ್ತು. ಫೆಡರೇಷನ್‌ಗೆ ಚುನಾವಣೆ ನಡೆಸುವ ಹೊಣೆಯನ್ನೂ ಈ ಸಮಿತಿಗೆ ವಹಿಸಲಾಗಿದೆ.

ಫೆಡರೇಷನ್ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಮಾಡಿ ದೇಶದ ಪ್ರಮುಖ ಕುಸ್ತಿಪಟುಗಳು ಜಂತರ್‌ಮಂತರ್‌ನಲ್ಲಿ ಕಳೆದ ತಿಂಗಳು ಧರಣಿ ಆರಂಭಿಸಿದ್ದರು. ಇದರ ಬಳಿಕ ಕ್ರೀಡಾ ಸಚಿವಾಲಯದ ಆಣತಿಯಂತೆ ಐಒಎ ಅಡ್‌ಹಾಕ್ ಸಮಿತಿ ರಚಿಸಿತ್ತು.

17, 23 ವರ್ಷದೊಳಗಿನವರ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ಗೆ ಭಾರತ ತಂಡಗಳನ್ನು ಆಯ್ಕೆ ಮಾಡುವ ಸಂಬಂಧ ಅಡ್‌ಹಾಕ್ ಸಮಿತಿ ಈಗಾಗಲೇ ನಿಯಮಗಳನ್ನು ಅಂತಿಮಗೊಳಿಸಿದೆ. ಟ್ರಯಲ್ಸ್ ಮೇ 17ರಿಂದ ಪಾಟಿಯಾಲಾದಲ್ಲಿ ನಡೆಯಲಿದೆ.

ಉದಕಮಂಡಲ ರೇಸ್

ಕ್ಲಾಕ್‌ವೈಸ್ ಗೆಲ್ಲುವ ನಿರೀಕ್ಷೆ

ಫೀಲ್ಡ್ ಮಾರ್ಷಲ್ ಮಾಣಿಕ್ ಶಾ ಟ್ರೋಫಿಯ ಮೊದಲನೇ ಡಿವಿಷನ್ ಭಾನುವಾರದ ಉದಕಮಂಡಲ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕ್ಲಾಕ್‌ವೈಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಬೆಳಿಗ್ಗೆ 10.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಬ್ಲಾಕ್ ಲೇಬಲ್ 3, ಥ್ರೀ ಆಫ್ ಎ ಕೈಂಡ್ 2, ಕಿಕಾಟ 8
2ನೇ ರೇಸ್: ಮೆಜೆಸ್ಟಿಕ್ ಚಾರ್ಮರ್ 7, ಡ್ಯಾನ್ಸಿಂಗ್ ಕ್ವೀನ್ 4, ಎಕ್ಸಲೆಂಟ್ ಸ್ಟಾರ್ 2
3ನೇ ರೇಸ್: ಸಾಫ್ಟ್ ವಿಸ್ಪರ್ಸ್ 1, ಚಾಯ್ಸ್ 2, ಹೆಲೆನ್ ಆಫ್ ಟ್ರಾಯ್ 3
4ನೇ ರೇಸ್: ಸ್ಟಾರ್ ಸಿಂಬಲ್ 7, ಗಾಡ್ಸ್ ಪ್ಲಾನ್ 1, ಡೈಮಂಡ್ ಅಂಡ್ ಪರ್ಲ್ಸ್ 9
5ನೇ ರೇಸ್: ರಾಯಲ್ ಐಕಾನ್ 3, ಎಂಪರರ್ ಅಶೋಕ 7, ಸ್ಟ್ರೀಕ್ 5
6ನೇ ರೇಸ್: ಕ್ಲಾಕ್‌ವೈಸ್ 5, ಗಟ್ಸಿ 7, ಫ್ಲರ್ರಿ ಹಾರ್ಟ್ 6
7ನೇ ರೇಸ್: ವೊಯಾಗರ್ 4, ಫ್ಯಾಶನಿಸ್ಟ 5, ವೇಲು ನಾಚಿಯಾರ್ 6
8ನೇ ರೇಸ್: ಡಾರ್ಕ್‌ಸನ್ 6, ಗೋಲ್ಡನ್ ಮೆರಿನಾ 1, ಕಾನ್‌ಸ್ಟ್ಯಾಂಟ್ ವೇರಿಯಬಲ್ 3

ಉತ್ತಮ ಬೆಟ್: ರಾಯಲ್ ಐಕಾನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	4,5,6	6.7.8

ರಾಜ್ಯ ಚೆಸ್ ಟೂರ್ನಿ: ಸಮಕ್ಷ್ ಅಶೋಕ್ ಮುನ್ನಡೆ


ಬೆಂಗಳೂರು: ಸಮಕ್ಷ್ ಅಶೋಕ್ ಅವರು 9 ವರ್ಷದೊಳಗಿನವರ ರಾಜ್ಯ ಚೆಸ್ ಟೂರ್ನಿಯಲ್ಲಿ ಬಾಲಕರ ವಿಭಾಗದಲ್ಲಿ ಐದು ಪಂದ್ಯಗಳ ಬಳಿಕ ಮುನ್ನಡೆ ಸಾಧಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ ಚೆಸ್ ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ಚೆಸ್ ಸಂಸ್ಥೆಯ ಆಶ್ರಯದಲ್ಲಿ ಹೊಸಕೋಟೆ ತಾಲ್ಲೂಕಿನ ದೊಡ್ಡ ದುನ್ನಸಂದ್ರದ ಶೃಂಗ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಬೆಂಗಳೂರಿನ ಸಮಕ್ಷ್ ಐದು ಪಾಯಿಂಟ್ಸ್ ಕಲೆಹಾಕಿದ್ದಾರೆ.

ತಲಾ 4.5 ಪಾಯಿಂಟ್ಸ್ ಗಳಿಸಿರುವ ಅಭಿನವ್ ಆನಂದ್, ವೆಂಕಟ ನಾಗ ಮತ್ತು ವಿಯಾನ್ ಬನ್ಸೋರ್ ಅವರು ಜಂಟಿ 2ನೇ ಸ್ಥಾನದಲ್ಲಿದ್ದಾರೆ. ಅಭಿನವ್ ಮತ್ತು ವೆಂಕಟ ನಾಗ ನಡುವಣ ಶನಿವಾರ ನಡೆದ ಐದನೇ ಸುತ್ತಿನ ಪಂದ್ಯ ಡ್ರಾ ಆಯಿತು. ಬಾಲಕಿಯರ ವಿಭಾಗದಲ್ಲಿ ನಾಲ್ಕು ಪಂದ್ಯಗಳ ಬಳಿಕ ಬೆಂಗಳೂರಿನ ಲಿಯಾ ಆರ್. ಜೋಸೆಫ್, ಶಿವಮೊಗ್ಗದ ಸನ್ವಿತಾ ಎ. ಶೆಟ್ಟಿ ಮತ್ತು ಕೋಲಾರದ ಕೆ.ಆರ್.ಸೌಖ್ಯ ಅವರು ತಲಾ 4 ಪಾಯಿಂಟ್ಸ್ ಗಳಿಸಿ ಜಂಟಿ ಅಗ್ರಸ್ಥಾನದಲ್ಲಿದ್ದಾರೆ.

ಪ್ರಜಾವಾಣಿ ಭಾನುವಾರದ ಪುರವಣಿ


ಭಾನುವಾರ, 14 ಮೇ 2023







ತಾಯ ಕಟ್ಟುಗಳು, ಅವಳಿತ್ತ ನುಡಿಗಟ್ಟುಗಳು, ತಾಯ್ತನ ಪಡೆಯಲು ಹಂಬಲಿಸುವ ಗಂಡು ಮನಸುಗಳು ಎಲ್ಲವನ್ನೂ ಭಾವದ ಮೂಸೆಯಲ್ಲಿ ಅದ್ದಿ ತೆಗೆದಿಡಬೇಕಾದ ಹೊತ್ತಿದು. 'ಅಮ್ಮಂದಿರ ದಿನ'ದ ನೆಪದಲ್ಲಿ ತಾಯಿ ತತ್ವಕ್ಕೆ ಕನ್ನಡಿ ಹಿಡಿಯುವ ಬರಹ ಇದು.



ಕಲೆ: ಸುರೇಶ್ ಅರ್ಕಸಾಲಿ

ಸಪ್ಪೆ ಅನ್ಬೇಡ ಒಂದ್ಕಲ್ ಉಪ್ಪಾಕು ಅನ್ನು

ಎಂ.ಎಸ್. ಆಶಾದೇವಿ

ಅದೆಷ್ಟೋ ಮನೆಗಳಲ್ಲಾಗುವಂತೆ ಅಪ್ಪ ಮಗನಿಗೆ ಸಂಘರ್ಷವೊಂದು ಆರಂಭವಾಯಿತು. ಯಥಾಪ್ರಕಾರ ಮಗ ಮನೆ ಬಿಟ್ಟುಹೋದ. ಅಕಾರಣ ಅಹಂಕಾರ ಪುರುಷರಂತೇ ಆ ಅಪ್ಪನೂ ಹೆಂಡತಿಯನ್ನು ಅಂದರೆ ಮಗನ ಅಮ್ಮನನ್ನು ಇನ್ನಿಲ್ಲದಂತೆ ಹಳಿದು, ಅದಕ್ಕೆಲ್ಲ ಆಕೆಯೇ ಕಾರಣ ಎಂದು, ತಾನು ಹೊಣೆಗಾರಿಕೆಯಿಂದ ಪಾರಾಗಲು ಯತ್ನಿಸಿ ಸುಮ್ಮನಾದ. ಆ ತಾಯಿಯೋ ಮಾತು , ಜಗಳ ಈ ಯಾವುದಕ್ಕೂ ಈತ ಯೋಗ್ಯನಲ್ಲ ಎನ್ನುವ ಪರಿಯಲ್ಲಿ ಮೌನಯೋಗಕ್ಕೆ ಸಂದಳು. ಪ್ರತಿದಿನ ರಾತ್ರಿ ಊಟದ ತಾಟೊಂದನ್ನು ಸಿದ್ಧ ಮಾಡಿ ಅದರ ಮೇಲೊಂದು ತಟ್ಟೆ ಮುಚ್ಚಿಟ್ಟು ಮಲಗುವಳು. ಕೆಲವು ದಿನಗಳ ಮೇಲೆ ಗಂಡನ ಗಮನಕ್ಕೆ ಅದು ಬಂತು. ಕಷ್ಟಪಟ್ಟು ದುಡಿದ ನನ್ನ ದುಡಿಮೆಯನ್ನು ಹೀಗೆ ವ್ಯರ್ಥ ಮಾಡುವುದನ್ನು ಹಂಗಿಸಿದ. ತಾಯಿ ತನ್ನ ರಾತ್ರಿಯ ಊಟವನ್ನು ಬಿಟ್ಟಳೇ ಹೊರತು ತಾಟು ಸಿದ್ಧ ಮಾಡುವುದನ್ನಲ್ಲ. ಮಗರಾಯನಿಗೆ ಜ್ಞಾನೋದಯವಾಯಿತೋ, ಅಸಹಾಯಕತೆಯೋ ಅಂತೂ ಒಂದು ರಾತ್ರಿ ಹಿಂದಿರುಗಿದ. ಬಾಗಿಲು ತೆರೆದ ಅಮ್ಮ ಊಟದ ತಾಟು ತಂದಿಟ್ಟು ಊಟ ಮಾಡಿ ಮಲಗು ಎಂದು ರೂಮಿಗೆ ಹೋದಳು. ಬೆಪ್ಪನಂತಾದರೂ ಮಗ ಉಂಡು ಮಲಗಿದ. ಬೆಳಿಗ್ಗೆ ಮನೆಯ ಸಭೆ ಆರಂಭವಾಯಿತು. ಮಗನಿಗೆ ದುಃಖ, ಕೋಪ, ಸ್ವಮರುಕವೆಲ್ಲ ಉಕ್ಕಿ 'ನಾನು ಬಂದದ್ದು ಯಾರಿಗೂ ಬೇಕಾಗಿರಲಿಲ್ಲವೇನೋ. ಕೊನೆಗೆ ಅಮ್ಮನಿಗಾದರೂ ಸಂತೋಷವಾಗುತ್ತದೆ ಎಂದುಕೊಂಡಿದ್ದೆ' ಎಂದು ಉಮ್ಮಳಿಸಿದ. ಆಗಲೂ ಅಮ್ಮನದು ಮಾತಿಲ್ಲ. ಇಷ್ಟು ದಿನಗಳಲ್ಲಿ ಹೆಂಡತಿಯ 'ತಾಯ್ತನ'ದ ಶಕ್ತಿಯನ್ನು ಅರ್ಥ ಮಾಡಿಕೊಂಡಿದ್ದ ಅಪ್ಪ ಈಗ ಮಾತನಾಡಿದ. 'ನೀನು ಬರಬೇಕು ಅನ್ನುವುದು ನಮ್ಮೆಲ್ಲರ ಆಸೆಯೂ ಆಗಿತ್ತು ಮಗನೇ, ನೀನು ಬಂದೇ ಬರುತ್ತಿ ಎಂದು ನಂಬಿ ಕಾದವಳು, ಕಾದು ಬೆಂದವಳು ನಿಮ್ಮಮ್ಮ ಕಣೋ.'

ಮಾಸ್ತಿಯವರ ಕೊನೆಯ ಮಗಳು ಅಂತರ್‌ಧರ್ಮೀಯ ಮದುವೆಯೊಂದನ್ನು ಮಾಡಿಕೊಂಡಿದ್ದರು. ಸಹಜವಾಗಿಯೇ ಮನೆಯಲ್ಲಿ ಅದಕ್ಕೆ ವಿರೋಧವಿತ್ತು. ಕೆಲವು ಕಾಲದ ನಂತರ ಆಕೆ ರಜೆಗಾಗಿ ಗಂಡನ ಜೊತೆ ಮನೆಗೆ ಬರುತ್ತೇನೆ ಎಂದು ಕಾಗದ ಬರೆದರು. ಮಾಸ್ತಿ ಮತ್ತು ಪಂಕಜಮ್ಮನವರ ನಡುವೆ ಮಾತುಕತೆ ನಡೆಯಿತು. ಮಾಸ್ತಿ ಹೇಳಿದರು, 'ನಾನು ಮನಸ್ಸನ್ನು ಸಿದ್ಧ ಮಾಡಿಕೊಂಡಿದ್ದೇನೆ, ಮನೆಗೆ ಅತಿಥಿಗಳು ಬಂದರೆ, ಹೇಗೆ ಅವರಿಗೆ ಯಾವ ತೊಂದರೆಯೂ ಆಗದಂತೆ ನೋಡಿಕೊಳ್ಳುತ್ತೇನೋ ಹಾಗೆಯೇ ಇವರ ಬಗೆಗೂ ನಡೆದುಕೊಳ್ಳುತ್ತೇನೆ.' ಪಂಕಜಮ್ಮ ಹೇಳಿದರು, 'ನಾನಂತೂ ಮನೆಗೆ ಮಗಳು ಅಳಿಯ ಬಂದರೆ ಹೇಗೆ ನೋಡ್ಕೋಬೇಕೋ ಹಾಗೆ ನೋಡ್ಕೋತೀನಿ'. ಈ ಪ್ರಸಂಗವನ್ನು ಮಾಸ್ತಿ ಮೂರ್ತಿರಾಯರ ಹತ್ತಿರ ಹೇಳಿದಾಗ ಅವರು, 'ನಿಮ್ಮ ಹೆಂಡತಿ ಎಷ್ಟು ದೊಡ್ಡವರು ನೋಡಿ, ಬದಲಾವಣೆ, ಜೀವನದಲ್ಲಿ ಎದುರಾಗೋ ಸವಾಲುಗಳನ್ನ ಅದೆಷ್ಟು ಸಹಜವಾಗಿ, ಪ್ರಬುದ್ಧತೆಯಿಂದ ಎದುರಿಸ್ತಾ ಇದ್ದಾರೆ' ಎನ್ನುತ್ತಾರೆ.

ಈ ಪ್ರಸಂಗಗಳಿಂದ ಓದುಗರನ್ನು ಭಾವುಕಗೊಳಿಸುವ ಇರಾದೆ ನನಗಿಲ್ಲ. ತಾಯ್ತನಕ್ಕೆ ಮಾತ್ರ ಸಾಧ್ಯವಿರುವ ಶಕ್ತಿ ವಿಶೇಷಗಳನ್ನು ಇದು ಚಂದವಾಗಿ ಹೇಳುತ್ತದೆ ಎನ್ನುವ ಕಾರಣಕ್ಕೆ ಇದನ್ನು ಹೇಳಿದ್ದೇನೆ.

ಆ ಕಾಲ ಮತ್ತು ಈ ಕಾಲದ ಅಮ್ಮಂದಿರು ಎನ್ನುವುದಿದೆಯೆ? ತಾಯಿಯನ್ನು ಕುರಿತಂತೆ ನಾವು ಕಟ್ಟಿಕೊಂಡ ವ್ಯಾಖ್ಯಾನಗಳೆಲ್ಲ ತಾಯಿಯನ್ನು ಕಾಲಾತೀತ ನೆಲೆಯಲ್ಲಿ ನಿಲ್ಲಿಸುತ್ತಲೇ ಆ ತಾಯಿಯ ವ್ಯಕ್ತಿತ್ವದ ಗುಣ ಧಾತುಗಳೆಲ್ಲ ಸಾರ್ವಕಾಲಿಕ ಎನ್ನುವುದನ್ನೇ ಎತ್ತಿಹಿಡಿಯುತ್ತವೆ. 'ತಾಯಿ'ಯ ಬಗ್ಗೆ ಇನ್ನು ಮುಂದೆ ಶಬ್ದವಿಲ್ಲ ಎನ್ನುವಷ್ಟು ಮಾತುಗಳನ್ನು ಆಡಿಯಾಗಿದೆ. ಆಡಿದ್ದು ಮುಗಿದಿಲ್ಲ, ಮುಗಿಯುವುದೂ ಇಲ್ಲ. ಆಡಿ ದಣಿಯದು ಮನವು ಕೇಳಿ ದಣಿಯದು ಮನವು.

ಮಾನವ ಜೀವ ಪಡೆಯಬಹುದಾದ ಅತ್ಯುನ್ನತ ಸ್ಥಿತಿಯನ್ನು ತಾಯ್ತನ ಎಂದು ಕರೆಯಬಹುದು. ಸಂತನಾಗುವುದು ಮತ್ತು ತಾಯಿಯಾಗುವುದು ಎರಡೂ ಒಂದೇ, ಆದರೆ ಅದಕ್ಕೆ ಸಿದ್ಧತೆ ಎನ್ನುವಂತೆ ಮಾನವರು ಹೆಣ್ಣಾಗಬೇಕು, ಹೆಣ್ಣಿನ ಗುಣಗಳನ್ನು ಒಳಗೊಳ್ಳಬೇಕು ಎಂದು ತತ್ವಜ್ಞಾನಿಯೊಬ್ಬ ಹೇಳುತ್ತಾನೆ. ತಾಯ್ತನ ಎನ್ನುವುದು ಜೈವಿಕವಾದುದೆಷ್ಟೋ ಅಷ್ಟೇ ಮನೋವಿನ್ಯಾಸದ್ದೂ ಹೌದು. ಅಮ್ಮಂದಿರ ದಿನವನ್ನು ಸಂಭ್ರಮಿಸುವ ಈ ಹೊತ್ತು ಅಮ್ಮಂದಿರಾದ, ಆಗಬಲ್ಲ ಅಪ್ಪಂದಿರಿಗೂ ಸೇರಬೇಕು ನಿಜ, ಆದರೆ ಅದು ಸುಲಭಕ್ಕೆ ಸಿದ್ಧಿಸುವಂಥದ್ದಲ್ಲ ಎನ್ನುವುದೂ ಅಷ್ಟೇ ನಿಜ.

ದೇವರನ್ನು ಬಿಟ್ಟರೆ ತಾಯಿಯನ್ನು ಆರಾಧಿಸಿರುವಷ್ಟು ಮಾನವ ಮನಸ್ಸು ಮತ್ತಾವ ವ್ಯಕ್ತಿಯನ್ನೂ, ವ್ಯಕ್ತಿತ್ವದ ಮಾದರಿಯನ್ನೂ ಆರಾಧಿಸಿಲ್ಲ. ಕಣ್ಣಿಗೆ ಕಾಣುವ ದೇವರು ಎನ್ನುವುದೇ ಈ ಎಲ್ಲ ದೃಷ್ಟಿಕೋನ ಮತ್ತು ವಿಚಾರಗಳ ಮೂಲಭಾವ. ತಾಯ್ತನಕ್ಕೆ ಮಾತ್ರ ಸಾಧ್ಯವಿರುವ ಹಲವು ಅಸಾಧಾರಣ ಶಕ್ತಿಸಾಧ್ಯತೆಗಳನ್ನು ಮಾನವರಿಗೆ ಅಸಾಧ್ಯವಾದುದನ್ನೆಲ್ಲ ಪಡೆದುಕೊಂಡಿದೆ ಎಂದು ನಂಬಲಾಗುವ ದೈವಕ್ಕೆ ಹೋಲಿಸುವುದು ತಾಯ್ತನದ ಅನನ್ಯತೆಯನ್ನು ಎತ್ತಿ ಹಿಡಿಯುವಲ್ಲಿ ಯಶಸ್ವಿಯಾಗಿರುವುದಂತೂ ಹೌದು.

ತಾಯ್ತನದ ಆರಾಧನೆಯ ನೆಲೆಯು ತಾಯ್ತನವನ್ನು ದುರ್ಬಲಗೊಳಿಸಿದೆ ಮತ್ತು ಅದನ್ನು ಕರಾರಿನ ರೂಪಕ್ಕೆ ತಂದು ಬಿಟ್ಟಿದೆ. ತಾಯ್ತನದಲ್ಲಿ ಅಷ್ಟೇ ಹೊಣೆಗಾರಿಕೆಯನ್ನು ಹೊರಬೇಕಾದ ಗಂಡು ಮತ್ತು ಅಪ್ಪಂದಿರನ್ನು ಅದು ಅದರಿಂದ ಬಹುತೇಕ ಹೊರಗೇ ಇಟ್ಟುಬಿಡುತ್ತದೆ. ಇದರಿಂದ ಪಾರಾಗಲು ಹವಣಿಸುತ್ತಿರುವವರಿಗೆ ಇದು ರಹದಾರಿಯನ್ನು ಕೊಟ್ಟು ಬಿಡುತ್ತದೆ. (ಇಂದಿಗೂ ಅದೆಷ್ಟೋ ಕುಟುಂಬಗಳಲ್ಲಿ ಅಪ್ಪಂದಿರಿಗೆ ಮಕ್ಕಳು ಯಾವ ತರಗತಿಯಲ್ಲಿ ಓದುತ್ತಿದ್ದಾರೆ ಎನ್ನುವುದೂ ಗೊತ್ತಿರುವುದಿಲ್ಲ!) 'ಏನೋ ಸಾರ್ ಎಲ್ಲಾ ಅವರಮ್ಮನೇ ನೋಡ್ಕೊಳ್ಳೋದು' ಎಂದು ಹೆಮ್ಮೆಯಿಂದ ಹೇಳಿಕೊಳ್ಳುವವರು ನಮ್ಮ ಸುತ್ತಮುತ್ತಲೂ ಅದೆಷ್ಟು ಜನ ಇದ್ದಾರಲ್ಲ.

ಮೂರನೇ ಪುಟಕ್ಕೆ...

'ತಾಯಿ' ಪಾತ್ರದೊಳಗಿಂದ...

'ತಾಯಿ' ಎನ್ನುವ ಶಬ್ದ ಹಾಗೂ ಅದು ಹೊರಹಾಕುವ ಭಾವನೆಗಳಿಗಿರುವ ಶಕ್ತಿ ಅಗಾಧ. ಹೀಗಾಗಿಯೇ 'ಇಂಧನ ತೀರಲು, ಬಂದೇ ಬರುವೆನು ಮತ್ತೆ ನಿನ್ನ ತೊಡೆಗೆ, ಮೂರ್ತ ಪ್ರೇಮದೆಡೆಗೆ' ಎಂಬ ಬಿ.ಆರ್. ಎಲ್ ಅವರ ಕಾವ್ಯದ ಸಾಲುಗಳು ಆಪ್ತವೆನಿಸುತ್ತವೆ. ಕಲಾಕ್ಷೇತ್ರದಲ್ಲಿ 'ತಾಯಿ' ಎನ್ನುವ ಪಾತ್ರ ಮನಸ್ಸನ್ನು ಆವರಿಸಿಕೊಂಡುಬಿಡುವಷ್ಟು ಶಕ್ತ. ಆ ಪಾತ್ರದ ಪರಿಕಲ್ಪನೆ ಕಾಲಕಾಲಕ್ಕೆ ಬದಲಾಗುತ್ತಾ ಬಂದಿದೆ. 'ತಾಯಿ' ಎಂಬ ಪಾತ್ರ, ಪ್ರಸ್ತುತ ಸಾಂಪ್ರದಾಯಿಕ ಚೌಕಟ್ಟುಗಳನ್ನು ಮೀರಿ ಸೃಷ್ಟಿಯಾಗುತ್ತಿದೆ. ತಾವು ನಟಿಸಿದ 'ತಾಯಿ' ಪಾತ್ರಗಳನ್ನು ಉಲ್ಲೇಖಿಸುತ್ತಾ; ನೆನಪಿಸಿಕೊಳ್ಳುತ್ತಾ ಈ ಬದಲಾವಣೆಗಳು, 'ತಾಯಿ' ಪಾತ್ರಗಳಲ್ಲಾದ ಹೊಸ ಪರಿಕಲ್ಪನೆಗಳನ್ನು ತೆರೆದಿಟ್ಟಿದ್ದಾರೆ ನಟಿಯರಾದ **ಅರುಂಧತಿ ನಾಗ್** ಹಾಗೂ **ಸುಧಾ ಬೆಳವಾಡಿ**.

ಸಿನಿಮಾದಲ್ಲಿ ದುರ್ಬಲ ಒಟಿಟಿಯಲ್ಲಿ ಗಟ್ಟಿ

'ಜೋಗಿ' ಸಿನಿಮಾ ಹಿಟ್ ಆದ ಬಳಿಕ ಬಹುತೇಕ ಬರಹಗಾರರು ಅದೇ ಮಾದರಿಯ ತಾಯಿಯ ಪಾತ್ರಗಳನ್ನು ಸೃಷ್ಟಿಸಿ ತಂದರು. ಇವುಗಳನ್ನು ನಾನು ತಿರಸ್ಕರಿಸಿದ್ದೆ. ಹೀಗಾಗಿ ಸುಮಾರು ಒಂದು ದಶಕದಿಂದ ಯಾವುದೇ ಕನ್ನಡ ಸಿನಿಮಾ ಮಾಡಿಲ್ಲ. 'ಜೋಗಿ'ಯ ಆ 'ತಾಯಿ' ಪಾತ್ರ ಅದ್ಭುತವಾಗಿತ್ತು. ಆ ಪಾತ್ರದೊಳಗಿನ ನಟನೆಯನ್ನು ನಾನು ಆನಂದಿಸಿದ್ದೆ. ಆದರೆ ನನ್ನ ಮಗಳಿಗೆ ಆ ಸಿನಿಮಾ ಇಷ್ಟವಾಗಲಿಲ್ಲ. 'ನೀನು ಅದ್ಭುತವಾಗಿ ನಟಿಸಿದ್ದೆ. ಆದರೆ ಅಷ್ಟೊಂದು ಹಿಂಸಾಚಾರ ಇರುವ ಸಿನಿಮಾದಲ್ಲಿ ನೀನೇನು ಮಾಡುತ್ತಿದ್ದೆ' ಎಂಬ ಪ್ರಶ್ನೆ ಆಕೆಯದ್ದಾಗಿತ್ತು.

ಹಿಂದಿಯ 'ಪಾ' ಸಿನಿಮಾದಲ್ಲಿ ನಾನು ಬಣ್ಣಹಚ್ಚಿದ್ದ 'ತಾಯಿ' ಪಾತ್ರವನ್ನು ಗಮನಿಸಿ. ಎಲ್ಲಿಯೂ ಆಕೆಯ ಗಂಡನ ಬಗ್ಗೆ ಉಲ್ಲೇಖವಿಲ್ಲ. ಆಕೆ, ಸಿಂಗಲ್ ಪೇರೆಂಟ್ ಅಥವಾ ವಿಚ್ಛೇದಿತೆ ಆಗಿರಬಹುದು. ತನ್ನ ಮಗಳು ಹಾಗೂ ಮೊಮ್ಮಗನ ಜೊತೆ ಆಕೆ ಕೊನೆಯವರೆಗೂ ನಿಲ್ಲುತ್ತಾಳೆ. ಆಕೆಯ ಮಗಳ ಮದುವೆ ಅಥವಾ ಗರ್ಭ ಧರಿಸಿರುವುದರ ಕಾನೂನು ಔಚಿತ್ಯದ ಬಗ್ಗೆ ಆ 'ತಾಯಿ' ತಲೆಕೆಡಿಸಿಕೊಂಡವಳಲ್ಲ. ಇಂತಹ ಪಾತ್ರಗಳನ್ನು ನನ್ನಂಥ ಕಲಾವಿದರು ಅಪೇಕ್ಷಿಸುತ್ತಾರೆ. ನನ್ನಂತಹ ಮಧ್ಯವಯಸ್ಕರು ಈ ರೀತಿ ಪಾತ್ರಗಳನ್ನು ಮಾಡಲು ಇಚ್ಛಿಸುತ್ತಾರೆ.

ಇತ್ತೀಚೆಗೆ 'ವಿಮ್ ಬಾರ್'ನ ಒಂದು ಜಾಹೀರಾತಿನಲ್ಲಿ ಅಭಿನಯಿಸಿದ್ದೆ. ಈ ಮಾದರಿಯಲ್ಲೂ 'ತಾಯಿ' ಎನ್ನುವ ಪಾತ್ರ ಬಹಳ ಮುಖ್ಯವಾಗುತ್ತದೆ. ಕೋಟ್ಯಂತರ ಜನರಿಗೆ ಒಂದು ಸಂದೇಶ ಹೋಗುವ ಮಾಧ್ಯಮವದು. 'ಪಾತ್ರೆ ತೊಳೆಯುವುದು ಕೇವಲ ಅಮ್ಮನ ಕೆಲಸವಲ್ಲ, ನೀನೂ ಪಾತ್ರೆ ತೊಳೆಯಬಹುದು' ಎಂದು ಮಗನಿಗೆ ಅಮ್ಮ ಹೇಳುವ ಸಂದೇಶ ನಾನು ನಟಿಸಿದ ಆ ಜಾಹೀರಾತಿನಲ್ಲಿ ಇತ್ತು. ಇದು ವಿಭಿನ್ನವಾಗಿತ್ತು. ತಾಯಿ ಎಂದರೆ ಮಗುವನ್ನು ಹುಟ್ಟಿಸುವ ತ್ಯಾಗದ ಯಂತ್ರ ಎಂದು ನಾವು ಭಾವಿಸಿದ್ದೇವೆ. ಅಥವಾ ಸಿನಿಮಾದಲ್ಲಿ ಹೀರೊ ಅಥವಾ ಹೀರೊಯಿನ್‌ಗೆ ಕಾನೂನಾತ್ಮಕ ಔಚಿತ್ಯ ನೀಡಲಷ್ಟೇ ತಾಯಿ ಎಂಬ ಪಾತ್ರವಿದೆ. ಆದರೆ ನಾನು ಕೇಳುವುದು ಈ 'ತಾಯಿ' ಬೇರೇನು ಮಾಡುತ್ತಾಳೆ? ಸಮಾಜದಲ್ಲಿ ಆಕೆಯ ಪಾತ್ರವೇನು? ಆಕೆ ನಾಯಕಿಯೇ ಆಗಬೇಕೆಂದಿಲ್ಲ. ಆಕೆ ರೈತಳಾಗಿರಬಹುದು ಅಥವಾ ರಂಗೋಲಿ ಬಿಡಿಸಲು ಆಸಕ್ತಿಯುಳ್ಳವಳಾಗಿರಬಹುದು. ಸಿನಿಮಾಗಳಲ್ಲಿ 'ತಾಯಿ' ಎಂಬ ಪಾತ್ರವನ್ನು ಸಂಪೂರ್ಣ ಶಿಥಿಲಗೊಳಿಸಿದ್ದಾರೆ. ಆಕೆ ಕೇವಲ 'ಮಗ ಮದುವೆ ಮಾಡ್ಕೋ, ನಾನು ಸೊಸೆ, ಮೊಮ್ಮಗು ಮುಖ ನೋಡಬೇಕು' ಎನ್ನುವಷ್ಟರ ಮಟ್ಟಿಗಷ್ಟೇ ಸೀಮಿತಗೊಂಡಿದ್ದಾಳೆ. ಆದರೆ ಅತ್ತ ಒಟಿಟಿಯಲ್ಲಿ ಮಹಿಳಾ ಪಾತ್ರಗಳನ್ನು ಬಹಳ ಗಟ್ಟಿಯಾಗಿ ಬರೆಯುತ್ತಿದ್ದಾರೆ.

ಇನ್ನು ರಂಗಭೂಮಿಯತ್ತ ಹೊರಳಿದರೆ, ಕಾರ್ತಿಕ್ ಹೆಬ್ಬಾರ್ ಅವರ 'ಸತಿ ಸಾವಿತ್ರಿ ನಿವಾಸ'ದ ಉಲ್ಲೇಖ ಮಾಡುತ್ತೇನೆ. ತುಂಬಾ ಚೆನ್ನಾಗಿ ಇದನ್ನು ಬರೆದಿದ್ದಾರೆ. ಮಡಿತನಕ್ಕೇ ಸವಾಲು ಹಾಕಿದ್ದಾರೆ. ದಲಿತ ಕಾವ್ಯಗಳನ್ನು ಆಧರಿಸಿ ಲಕ್ಷ್ಮಣ ಕೆ.ಪಿ. ಅವರ 'ದಕ್ಲಕಥಾ ದೇವಿಕಾವ್ಯ' ನಾಟಕದಲ್ಲಿನ ಸ್ತ್ರೀಪಾತ್ರವೂ ಇಲ್ಲಿ ಉಲ್ಲೇಖಾರ್ಹ. ದಲಿತ ಕವನವನ್ನು ತೆಗೆದುಕೊಂಡು ಅದನ್ನು ಲಕ್ಷ್ಮಣ ಅವರು ವಿಚಾರಿಸುತ್ತಾ ಸಾಗುತ್ತಾರೆ. ಪ್ರಸನ್ನ ನಿರ್ದೇಶನದ 'ತಾಯಿ' ನಾಟಕದಲ್ಲಿ ಬಿ.ಜಯಶ್ರೀ ಅವರ ಪಾತ್ರ ಹಾಗೂ ನನ್ನದೇ 'ಹುಲಗೂರ ಹುಲಿಯವ್ವ' ನಾಟಕವನ್ನೂ ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತೇನೆ. 'ತಾಯಿ' ನಾಟಕದಲ್ಲಿ ಆ ತಾಯಿ, ತನ್ನ ಮಗನನ್ನು ಕಳೆದುಕೊಂಡರೂ ಒಂದು ವಿಪ್ಲವವನ್ನು ಮುನ್ನಡೆಸುವಾಕೆ. '..ಹುಲಿಯವ್ವ' ತಾಯಿಯ ಕೆಚ್ಚು ತೋರಿಸುವ ನಾಟಕ. ಆ ತಾಯಿ ನಡೆಸುವ 'ಯುದ್ಧ'; ಅದು ವೇದಿಕೆ ಮೇಲೆ ಕಾಣಿಸುವುದಿಲ್ಲ. ವೇದಿಕೆ ಮೇಲೆ ಕಾಣಿಸಿಕೊಳ್ಳುವುದು ಆಕೆ ಮತ್ತು ಆಕೆಯ ಮೂರು ಮಕ್ಕಳು. ಅದೂ ಬೇರೆ ಬೇರೆ ಗಂಡಸರಿಂದ ಹುಟ್ಟಿರುವ ಮಕ್ಕಳು. ಇಲ್ಲಿ ಆಕೆ ಪಿತೃಪ್ರಧಾನ ವ್ಯವಸ್ಥೆಗೇ ಸವಾಲು ಹಾಕಿದಾಕೆ. ಆಕೆ 'hyena of the battlefield'.

ನಾಲ್ಕನೇ ಪುಟಕ್ಕೆ...



ಈಗಿನ ಅಮ್ಮಂದಿರದ್ದೇ ಪ್ರತಿಬಿಂಬ

ಹಿಂದೆ ಸಿನಿಮಾಗಳಲ್ಲಿ ಬಹಳ ಸಂಪ್ರದಾಯಸ್ಥ ತಾಯಂದಿರನ್ನು ಕಾಣುತ್ತಿದ್ದೆವು. ಮನೆ, ಮಕ್ಕಳ ಬಗ್ಗೆಯಷ್ಟೇ ಚಿಂತೆ ಮಾಡುವ ಪಾತ್ರಗಳ ಸೃಷ್ಟಿ ಅಲ್ಲಿತ್ತು. ಈಗ ಮಕ್ಕಳನ್ನು ಸ್ನೇಹಿತರ ರೀತಿ ಕಾಣುವ, ಅದೇ ರೀತಿಯಲ್ಲಿ ಮಾತನಾಡಿಸುವಂಥ ತಾಯಂದಿರ ಕಲ್ಪನೆ ಸೃಷ್ಟಿಯಾಗಿದೆ. ಹೀಗಾಗಿ ತಾಯಂದಿರೂ ತೀರಾ ಸಂಪ್ರದಾಯಸ್ಥ ಎನ್ನುವ ಚೌಕಟ್ಟಿನಲ್ಲಿ ಇಲ್ಲ. ಅದರಿಂದ ಅವರು ಹೊರಬಂದಿದ್ದಾರೆ. ಈವಾಗಿನ ಅಮ್ಮಂದಿರು ಹೇಗಿರುತ್ತಾರೋ ಅದೇ ಪ್ರತಿಬಿಂಬವನ್ನು ನಾವು ಸಿನಿಮಾಗಳಲ್ಲಿ ಅಥವಾ ಧಾರಾವಾಹಿಗಳಲ್ಲಿ ಕಾಣುತ್ತಿದ್ದೇವೆ.

ಧಾರಾವಾಹಿಗಳನ್ನು ತೆಗೆದುಕೊಂಡರೆ ಇವುಗಳು ಒಂದು ಹೆಜ್ಜೆ ಮುಂದೆ ಇವೆ ಎಂದೇ ಹೇಳಬಹುದು. ಸ್ತ್ರೀ ಪ್ರಧಾನ ಪಾತ್ರಗಳ ಸೃಷ್ಟಿ ಹೆಚ್ಚಳವಾಗಿದೆ. ಒಂದು ಉದ್ಯಮ ನಡೆಸುವ, ರಾಜಕಾರಣಿಯಾಗಿರುವ, ಸ್ವಉದ್ಯೋಗಿಯಾಗಿರುವ ಪಾತ್ರಗಳು ಹೆಚ್ಚುತ್ತಿವೆ. ಉದಾಹರಣೆಗೆ ನಾನೇ ನಟಿಸುತ್ತಿರುವ 'ಲಕ್ಷಣ' ಎನ್ನುವ ಧಾರಾವಾಹಿಯಲ್ಲಿ ನನ್ನ ಪಾತ್ರ ಒಂದು ಚೈನ್ ಆಫ್ ಹೋಟೆಲ್ ಮುಖ್ಯಸ್ಥೆಯದ್ದಾಗಿದೆ. ಬರಹಗಾರರು ಈ ರೀತಿಯಲ್ಲಿ ಯೋಚನೆ ಮಾಡುತ್ತಿದ್ದಾರೆ, ಒಂದು ತಾಯಿಯ ಪಾತ್ರವನ್ನು ಈ ದೃಷ್ಟಿಯಲ್ಲಿ ಹೆಣೆಯುತ್ತಿದ್ದಾರೆ.

ಟಿ.ಎನ್.ಸೀತಾರಾಂ ಅವರ ಧಾರಾವಾಹಿಗಳನ್ನು ಗಮನಿಸಿ. 'ಮನ್ವಂತರ', 'ಮಹಾಪರ್ವ' ಮುಂತಾದ ಧಾರಾವಾಹಿಗಳಲ್ಲಿ ಹೆಣ್ಮಕ್ಕಳು ರಾಜಕಾರಣದಲ್ಲಿ ಸಕ್ರಿಯರಾಗಿರುವಂತೆ ಚಿತ್ರಿಸಿದ್ದಾರೆ. ಸಂಪ್ರದಾಯಸ್ಥ ರೀತಿಯಲ್ಲಿ ಬೆಳೆದು, ದಿಟ್ಟ ಹೆಣ್ಣು ಮಗಳೊಬ್ಬಳು ರಾಜಕೀಯ ಆಸಕ್ತಿ ತಳೆದು ಮುಖ್ಯಮಂತ್ರಿಯಾಗುವವರೆಗೂ ಸೀತಾರಾಂ ಅವರು ಒಂದು ಪಾತ್ರವನ್ನು ಬರೆದಿದ್ದಾರೆ. ಹಿಂದಿಯಲ್ಲಿ ಹಿಂದೆ ಬರುತ್ತಿದ್ದ ಪ್ರಿಯಾ ತೆಂಡೂಲ್ಕರ್ ನಟನೆಯ 'ರಜನಿ' ಧಾರಾವಾಹಿಯೂ ಈ ಮಾತಿಗೆ ಪೂರಕವಾಗಿದೆ. ಸಾಮಾಜಿಕ ನ್ಯಾಯ ಕೊಡಿಸುವ ಪಾತ್ರ ಪೋಷಣೆ ಅಲ್ಲಿತ್ತು. 'ಮಹಾಪರ್ವ'ದಲ್ಲಿ ಆ ಹೆಣ್ಣು ಸಿ.ಎಂ ಕೂಡ ಹೌದು ಹಾಗೆಯೇ ಅಮ್ಮನೂ. ಹೀಗೆ ಹೆಣ್ಣಿನ ಪಾತ್ರವೊಂದು ಸಾಂಪ್ರದಾಯಿಕ ಚೌಕಟ್ಟಿನಿಂದ ಹೊರಬರುತ್ತಾ ಹೋಯಿತು. ತಾಯಿಯ ಪಾತ್ರವನ್ನು ನೋಡುವ ಆಯಾಮವೂ ಬದಲಾಗುತ್ತಾ ಹೋಯಿತು. ಧಾರಾವಾಹಿಗಳಲ್ಲಿ ಇದನ್ನು ಹೆಚ್ಚಾಗಿ ಕಾಣಬಹುದು. ಏಕೆಂದರೆ ಇವುಗಳನ್ನು ನೋಡುವ ಪ್ರೇಕ್ಷಕ ವರ್ಗದಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಿದೆ. ಹೊಸ ಯುವ ಬರಹಗಾರರು ಈ ಕ್ಷೇತ್ರಕ್ಕೆ ಬರುತ್ತಿರುವುದೂ ಈ ಬದಲಾವಣೆಗೆ ಕಾರಣವಾಗಿದೆ.

'ಮುಂಗಾರು ಮಳೆ' ಸಿನಿಮಾದ ಬಳಿಕ ತಾಯಿ ಒಬ್ಬ ಮಗನಿಗೆ ಸ್ನೇಹಿತೆಯಂತೆ ಇರುವ ಪಾತ್ರಗಳ ಸೃಷ್ಟಿ ಆರಂಭವಾಯಿತು. ಮನಸ್ಸು ಬಿಚ್ಚಿ ಮಾತನಾಡಿದರೆ ಅದನ್ನು ಸ್ವೀಕರಿಸುವ ಮನಸ್ಥಿತಿಯುಳ್ಳ ಅಮ್ಮಂದಿರ ಪಾತ್ರಗಳು ಅಲ್ಲಿಂದ ಜೀವತಳೆದವು. ಈ ಮಾದರಿಯ ಸೃಷ್ಟಿ ಇನ್ನೂ ಮುಂದುವರಿಯಬೇಕು ಎನ್ನುವುದು ನನ್ನ ಆಶಯ. ಏಕೆಂದರೆ ಸಮಾಜದಲ್ಲಿ ಬಹಳಷ್ಟು ಬದಲಾವಣೆ ಆಗಿದೆ. ಪ್ರಸ್ತುತ ಬಹಳಷ್ಟು ತಾಯಂದಿರು ಒಂದು ಐಟಿ ಕಂಪನಿಯಲ್ಲಿ ದುಡಿಯುತ್ತಿರುತ್ತಾರೆ, ಹಾಗೆಯೇ ಉತ್ತಮ ತಾಯಿಯಾಗಿಯೂ ಕುಟುಂಬವನ್ನು ಮುನ್ನಡೆಸುತ್ತಿದ್ದಾಳೆ. ಸ್ಟೀರಿಯೋಟೈಪ್‌ನಿಂದ (ಸಿದ್ಧಮಾದರಿ) ಜನರು ಇನ್ನೂ ಹೊರಬರಬೇಕಿದೆ.

ಸುಧಾ ಬೆಳವಾಡಿ





ಅಂಬಾರಿ ಹೊತ್ತಿದ್ದಾಗ ಬಲರಾಮ

ತಿಮ್ಮನ ಭಾವಕೋಶದಲ್ಲಿ 'ಬಲರಾಮ'

ಜಂಬೂಸವಾರಿಯಿಂದ ಗುರುತಾಗಿದ್ದ ಆನೆ ಬಲರಾಮ ಈಗ ನೆನಪು. ಅದರೊಟ್ಟಿಗೆ ಕಕ್ಕುಲತೆಯನ್ನೇ ಬೆಳೆಸಿಕೊಂಡಿದ್ದ ಮಾವುತ ತಿಮ್ಮಣ್ಣ ಪದೇಪದೇ ಕಣ್ಣೀರಾಗುತ್ತಲೇ ನೆನಪಿನ ಪುಟಗಳನ್ನು ತೆರೆಯುತ್ತಾ ಹೋದರು. ಬಲರಾಮ ಹಾಗೂ ತಿಮ್ಮನ ಬಾಂಧವ್ಯದ ಅನುಭವ ಆಸಕ್ತಿಕರ.

ಕೆ.ನರಸಿಂಹಮೂರ್ತಿ



ತಿಮ್ಮಣ್ಣ

'ಒಂದ್ಸಾರಿ, ನಮ್ಮ ನೆಂಟರೊಬ್ಬರು ತೀರಿಹೋಗಿದ್ದರಿಂದ ಊರಿಗೆ ಹೋಗಿದ್ದೆ. ಅದೇ ದಿನ, ಮೇಯಲು ಹೋಗಿದ್ದ ಬಲರಾಮ ಎಲ್ಲರನ್ನೂ ಬೆದರಿಸಿಬಿಟ್ಟ. ಯಾರನ್ನೂ ಹತ್ತಿರಕ್ಕೆ ಬಿಟ್ಟುಕೊಳ್ಳಲಿಲ್ಲ. ರಾತ್ರಿ ಕಟ್ಟುವ ಜಾಗದಲ್ಲೇ ಅದನ್ನು ಕಟ್ಟಿಬಿಡಿ. ಸೊಪ್ಪು ಹಾಕಿ ಎಂದೆ. ಸರಪಳಿ ಬಿಚ್ಚುವವರೆಗೂ ಸುಮ್ಮನಿದ್ದವನು ಮತ್ತೆ ಬೆದರಿಸಿದ. ನೀನು ಬರಲೇಬೇಕು ಎಂದು ಎಲ್ಲರೂ ಒತ್ತಾಯಿಸಿದರು. ಬಸ್ಸಲ್ಲಿ ಹೋದರೂ ಆರು ಗಂಟೆ ಬೇಕು. ಬೇರೆ ವೆಹಿಕಲ್‌ನಲ್ಲಿ ಕರೆದೊಯ್ಯಲು ಯಾರೂ ಇಲ್ಲ. ಏನು ಮಾಡೋದೆಂದು ಯೋಚಿಸಿದೆ.

ನನ್ನ ತಂಗಿ ಮಗನಿಗೆ ಫೋನ್ ಮಾಡಿದೆ. ಫೋನ್ ತಗೊಂಡು, ಸೌಂಡ್ ಮಡಗ್ಬಿಟ್ಟು ಆನೆ ಕಡೆ ಹಿಡ್ಕೊ ಎಂದೆ. ಹಂಗೇ ಮಾಡಿದ. ನಾನು ಅಲ್ಲಿ ಕೂತ್ಕೊಂಡು ಮಾತಾಡೋದು, ನನ್ನ ವಾಯ್ಸು ಅದರ ಕಿವಿ ತಟ್ಟೋದು. ಅದೇ ರೀತಿ ಕ್ಯಾಂಪ್‌ಗೆ ಹೋಗಿ ಸೇರ್ತು.

ಮುದ್ದೆ ತಗೊಂಡು, ಅದು ಮಲಗುವ ಜಾಗದಲ್ಲಿಟ್ಟು ಬನ್ನಿ. ತಿಂದಮೇಲೆ ಮರದ ಬುಡಕ್ಕೆ ಕಟ್ಟಿ ಹಾಕಿ, ನಾನು ಬೆಳಿಗ್ಗೆ ಬರ್ತೀನಿ ಎಂದು ಫೋನಿಟ್ಟೆ. ನನ್ನ ಭಾಷೆ ಅದಕ್ಕೆ ಅರ್ಥವಾಯ್ತು. ಸಲೀಸಾಗಿ ಅದು ತನ್ನ ಮಲಗುವ ಜಾಗಕ್ಕೆ ಹೋಯಿತು...'

–ಹುಣಸೂರಿನ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಭೀಮನಕಟ್ಟೆ ಸಾಕಾನೆ ಶಿಬಿರದ ಆವರಣದ ಜಗುಲಿಯಲ್ಲಿ ಕುಳಿತು ಮಾವುತ ತಿಮ್ಮಣ್ಣ ತಮ್ಮ ಭಾವಕೋಶದಲ್ಲಿ ಶಾಶ್ವತವಾಗಿ ಉಳಿದ ದಸರಾ ಅಂಬಾರಿ ಆನೆ 'ಬಲರಾಮ'ನ ಕುರಿತ ಇಂಥ ರೋಚಕ, ಭಾವುಕ ನೆನಪುಗಳನ್ನು ಬಿಡಿಸಿಡುವ ಪ್ರತಿ ಕ್ಷಣದಲ್ಲೂ ಅವರ ಕಣ್ಣಾಲಿಗಳು ತುಂಬಿಕೊಳ್ಳುತ್ತಿದ್ದವು.


ಮೂರನೇ ಪುಟಕ್ಕೆ...



ಸ್ನಾನ ಮಾಡಿಸಿದ ನೆನಪಿಗೆ ಈ ಚಿತ್ರವೇ ಸಾಕ್ಷ್ಯ

ನೆನಪಿನ ಹಳ್ಳಿಯ ಗುಂಗಿನಲ್ಲಿ

ಒಂದು ಹಳ್ಳಿಯಲ್ಲಿ ನಿರಂತರ 18 ವರ್ಷಗಳವರೆಗೆ ಅಲೆದಾಡಿ ಪರಿಶ್ರಮದಿಂದ ಸಂಗ್ರಹಿಸಿದ ಕ್ಷೇತ್ರ ವರದಿ, ಅಂಕಿಸಂಖ್ಯೆಗಳ ಸಂಗ್ರಹ, ಸಂದರ್ಶನಗಳ ದಾಖಲಾತಿ ಮುಂತಾದವು ಒಮ್ಮೆಲೆ ಬೆಂಕಿಯಲ್ಲಿ ಸುಟ್ಟು ಸಂಪೂರ್ಣ ನಾಶವಾದಾಗ, ಕೇವಲ ನೆನಪುಗಳ ಆಧಾರದ ಮೇಲೆ ಆ ಹಳ್ಳಿ ಕುರಿತು ಅಪೂರ್ವ ಕೃತಿಯೊಂದನ್ನು ರಚಿಸಬಹುದೆ? ಈ ಪ್ರಶ್ನೆಗೆ ಬರಹದಲ್ಲೇ ಉತ್ತರವಿದೆ.



ಈಗಿನ ರಾಮಪುರದ ಅಕ್ಕಸಾಲಿಗರು

ಜಿ.ಎಂ. ಶಿರಹಟ್ಟಿ

ಹಳತು ಹೊನ್ನು

ಸುಮಾರು 30 ವರ್ಷಗಳ ಹಿಂದೆ ಬೆಂಗಳೂರಿನ 'ನಿಯಾಸ' ಸಂಸ್ಥೆ ಕುರಿತು ಸಾಕ್ಷ್ಯಚಿತ್ರವನ್ನು ತಯಾರಿಸುತ್ತಿದ್ದೆ. ಆಗ ಸಮಾಜಶಾಸ್ತ್ರದ ಪ್ರಾಧ್ಯಾಪಕಿ ವನಜಾಕುಮಾರ ಅವರು 'ನಿಯಾಸ' ಸಂಸ್ಥೆಯ ತಮ್ಮ ಹಳೆಯ ಫೋಟೊ ಅಲ್ಬಮ್‌ನಲ್ಲಿ ಅನೇಕ ಖ್ಯಾತರ ಫೋಟೋಗಳನ್ನು ಬಹಳ ಆಸಕ್ತಿಯಿಂದ ತೋರಿಸತೊಡಗಿದರು. 'ಇದು ಡಾ. ರಾಜಾರಾಮಣ್ಣ ಅವರದು... ಇವರು ಮೃಣಾಲ ಸೇನ್... ಇವರು ಮನಮೋಹನ ಸಿಂಗ್' ಎನ್ನುತ್ತ ಮುಂದಿನ ಫೋಟೋವೊಂದಕ್ಕೆ ಅವರ ಕೈ ಗಕ್ಕನೆ ನಿಂತಿತು. ಬಿಳಿಕೂದಲಿನ ತೆಳ್ಳನೆಯ ಸೂಟ್‌ಧಾರಿ ವ್ಯಕ್ತಿಯ ಜೊತೆಗೆ ತಾವು ನಿಂತ ಫೋಟೊ ಅದು. ಖ್ಯಾತ ಸಮಾಜಶಾಸ್ತ್ರಜ್ಞ ಪ್ರೊ. ಎಂ.ಎನ್. ಶ್ರೀನಿವಾಸ ಅವರ ಫೋಟೊ. ಅವರು ಬೆಂಗಳೂರಿನಲ್ಲಿ ನಿಧನರಾದಾಗ ಬಹಳಷ್ಟು ಖ್ಯಾತರು ಜಗತ್ತಿನ ತುಂಬೆಲ್ಲ ಕಂಬನಿ ಮಿಡಿದಿದ್ದರು. ಬೆಂಗಳೂರಿನ ಬೆನ್‌ಸನ್ ಟೌನ್‌ನಲ್ಲಿ ಅವರ ಮನೆ ಇದೆ. ಅವರದೊಂದು ಪುಸ್ತಕ 'ದಿ ರಿಮೆಂಬರ್ಡ್ ವಿಲೇಜ್' ಬಹಳ ಪ್ರಸಿದ್ಧವಾದುದು. ಅದನ್ನು ಓದಬೇಕು ಎಂದು ವನಜಾಕುಮಾರ ವಿವರಿಸಿದ್ದಾಗ, ಕುತೂಹಲ, ಗೌರವದ ಭಾವನೆ ಹುಟ್ಟಿಸಿತು.

ಮರುದಿನ ವನಜಾ ಅವರು 'ದಿ ರಿಮೆಂಬರ್ಡ್ ವಿಲೇಜ್' ಪುಸ್ತಕ ತಂದುಕೊಟ್ಟರು. ಅದೊಂದು ಹಳದಿ ಪುಸ್ತಕ; ಸಾಧಾರಣ ಹೊದಿಕೆಯ ಪುಸ್ತಕ. ಮುಖಪುಟವೇನೂ ಅಷ್ಟೊಂದು ಆಕರ್ಷಕವಾಗಿರಲಿಲ್ಲ. ಆದರೆ, ಅವರು ಆ ಪುಸ್ತಕ ಕುರಿತು ಹೇಳಿದ ಕಥೆ ಆಸಕ್ತಿಕರವಾಗಿದೆ:

'ಶ್ರೀನಿವಾಸ ಅವರು 1947ರಲ್ಲಿ ಆಕ್ಸ್‌ಫರ್ಡ್‌ನಲ್ಲಿ ಓದುತ್ತಿರುವಾಗ ಮೈಸೂರಿನಿಂದ ಸುಮಾರು 25 ಕಿ.ಮೀ. ದೂರದಲ್ಲಿರುವ ಕೊಡಗಹಳ್ಳಿ ಗ್ರಾಮದಲ್ಲಿ 18 ವರ್ಷ ಇದ್ದರು. ಹಳ್ಳಿಯಲ್ಲಿನ ಜನಜೀವನ, ವಿವಿಧ ಜಾತಿ–ಮತ–ಪಂಥಗಳ ಸಾಮಾಜಿಕ ಸಂಬಂಧ, ರಾಜಕೀಯ, ಧಾರ್ಮಿಕ ಪ್ರಭಾವ ಮುಂತಾದವುಗಳ ಅಧ್ಯಯನ ಮಾಡಿ, ಅನೇಕ ನೋಟ್ಸ್, ಡೈರಿಗಳಲ್ಲಿ ಫೈಲು ತುಂಬಿಕೊಂಡು 1970ರ ಹೊತ್ತಿಗೆ ಸ್ಟಾನ್‌ಫೋರ್ಡ್ ವಿಶ್ವವಿದ್ಯಾಲಯಕ್ಕೆ ತೆರಳಿದರು. ಇನ್ನೇನು ತಾವು ಸಿದ್ಧಪಡಿಸಿದ ಎಲ್ಲ ಸಾಮಗ್ರಿಗಳ ಸಮಗ್ರ ವರದಿಯನ್ನು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಕ್ಕೆ ತಲುಪಿಸಬೇಕು ಎನ್ನುವಷ್ಟರಲ್ಲಿ ಅವರು ಬಾಕ್ಸ್‌ಗಳನ್ನು ಇಟ್ಟಿದ್ದ ಲೈಬ್ರರಿ ಬೆಂಕಿಗೆ ಆಹುತಿ ಆಯಿತು. ಅದರ ಜೊತೆಗೆ 18 ವರ್ಷಗಳ ವರ್ಷಗಳ ಅಧ್ಯಯನ ಸಾಮಗ್ರಿಯೂ ನಾಶವಾಗಿತ್ತು.

ಶ್ರೀನಿವಾಸ ಅವರು ಬಹು ದುಃಖಿತರಾದರು. ಅವರ ಪರಿಶ್ರಮವೆಲ್ಲ ಹಾಳಾಗಿತ್ತು. ನಂತರ ಅವರು ಪ್ರೊ.ಸೋಲಟ್ಯಾಕ್ಸ್ ಅವರ ಸಲಹೆಯಂತೆ 18 ವರ್ಷಗಳ ನೆನಪುಗಳನ್ನು ತೆರೆದು ತೆರೆದು ವಿವರವಾದ ಮಹತ್ವಪೂರ್ಣವಾದ ವರದಿ ಸಿದ್ಧಪಡಿಸಿದರು. ಆ ವರದಿಯೇ ಈ ಪುಸ್ತಕ. ಅವರ ಈ ಖ್ಯಾತ ಪುಸ್ತಕದಿಂದ ಕೊಡಗಹಳ್ಳಿ ರಾಮಪುರ ಎಂದು ಖ್ಯಾತಿ ಪಡೆಯಿತು.



ರಾಮೋಹಳ್ಳಿಯ ಬಸವನ ಗುಡಿ

ವನಜಾ ಅವರ ವಿವರಣೆ ಕೇಳಿದ ಮೇಲೆ ಮನೆಗೆ ಬಂದು ಶ್ರೀನಿವಾಸರ ನೆನಪಿನ ಹಳ್ಳಿಯ ಚಿತ್ರಣವನ್ನು ಓದತೊಡಗಿದೆ. ಆಳವಾದ ಆಸಕ್ತಿ, ದೀಕ್ಷಾಬದ್ಧ ಸಂಶೋಧನೆ, ಅಧ್ಯಯನ, ಸಂಗ್ರಹಿಸಿದ ಅಪೂರ್ವ ಮಾಹಿತಿಯನ್ನು ಹೇಳುವ ತೀವ್ರತೆ ಮತ್ತು ಹೊಣೆಗಾರಿಕೆಯ ಅರಿವು ಕಾಡಿತು. ಶ್ರೀನಿವಾಸ ಅವರ ನೆನಪಿನ ಹಳ್ಳಿ ಈಗ ಹೇಗಿರಬೇಕು ಎಂಬುದನ್ನು ನೋಡುವ ಹಂಬಲ ಹೆಚ್ಚಾಯಿತು. ವನಜಾ ಅವರೊಂದಿಗೆ ರಾಮಪುರಕ್ಕೆ ಮೂವಿ ಕ್ಯಾಮೆರಾದೊಂದಿಗೆ ಹೋಗುವ ಯೋಜನೆ ಹಾಕಿಕೊಂಡು, ಮೈಸೂರು ಆಕಾಶವಾಣಿಯ ಕೇಶವ ಮೂರ್ತಿ ಅವರೊಂದಿಗೆ ಹೊರಟೆವು.

ನಮ್ಮನ್ನು ಸ್ವಾಗತಿಸಿದ್ದು ರಾಮಪುರದ ಸುಂದರವಾದ ಗದ್ದೆಸಾಲುಗಳು (ಶ್ರೀನಿವಾಸ ಅವರು ಮೊದಲಿಗೆ ಇಲ್ಲಿ ಬಸ್ಸಿನಿಂದ ಇಳಿದಾಗ ಅವರ ಲಗೇಜು ಇನ್ನುಳಿದ ಸಾಮಾನುಗಳನ್ನು ಅವರು ಇಳಿದುಕೊಳ್ಳುವ ಮನೆಗೆ ತೆಗೆದುಕೊಂಡು ಹೋಗಲು ಯಾರೂ ಇರಲಿಲ್ಲ. ಅವರ ಜೊತೆಗೆ ಬಂದ ಅಡಿಗೆಯವ ವ್ಯವಸ್ಥೆ ಮಾಡಿದ್ದ). ಅಲ್ಲಲ್ಲಿ ಹಸಿರು, ಬೀದಿ, ಹಂಚಿನ ಮನೆಗಳನ್ನು ದಾಟಿ ಕೇಶವ ಮೂರ್ತಿ ಅವರ ಸಂಬಂಧಿಕರ ಮನೆಗೆ ಹೋದೆವು.



ಎಂ.ಎನ್. ಶ್ರೀನಿವಾಸ ಅವರು ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರಾಗಿದ್ದಾಗಿನ ಚಿತ್ರ

ಮಧ್ಯಾಹ್ನದ ಹೊತ್ತಿಗೆ ರಾಮಪುರ ನೋಡಲು ಕೇಶವಮೂರ್ತಿಯ ಸಂಬಂಧಿಕ ಶಿಕ್ಷಕರು ಒಬ್ಬರು ನಮ್ಮನ್ನು ಕರೆದುಕೊಂಡು ನಡೆದರು. ರಾಮಪುರ ಹಳ್ಳಿಯ ಹಾಗೆ ಕಾಣಲೇ ಇಲ್ಲ. ಅದೊಂದು ಬದಲಾಗುತ್ತಿರುವ ಗ್ರಾಮವಾಗಿತ್ತು. 50 ವರ್ಷಗಳ ಹಿಂದೆ ಶ್ರೀನಿವಾಸ ಅವರಿದ್ದಾಗ ಇದ್ದ ರೈಸ್‌ಮಿಲ್ ಹಾಗೇ ಇತ್ತು. ಊರಲ್ಲಿ ಹಲವಾರು ಹಳೆಯ ಮನೆಗಳು ಇದ್ದರೂ ಆಧುನಿಕ ಅನುಕೂಲಗಳನ್ನು ಪಡೆದುಕೊಂಡು ಸ್ವರೂಪವನ್ನೇ ಬದಲಾಯಿಸಿಕೊಂಡಿದ್ದವು. ರಾಮಪುರ ಒಂದು ಮಾದರಿ ಗ್ರಾಮವಾಗಿ ಮಾರ್ಪಾಡಾಗಿತ್ತು. ದನದ ಕೊಟ್ಟಿಗೆ ಕಲ್ಲೇಗೌಡ, ನಾಡುಗೌಡ ಮುಂತಾದವರು ಕಾಣಲೇ ಇಲ್ಲ. ನೆನಪಿನ ಹಳ್ಳಿಯಲ್ಲಿದ್ದ ಆ ಪರಿಸರವನ್ನು ನಾವು ನೋಡಲೇ ಇಲ್ಲ. ಶ್ರೀನಿವಾಸ ಅವರು ಅಧ್ಯಯನ ಮುಗಿಸಿ ಹೊರಡುವಾಗಲೇ ರಾಮಪುರ ಬದಲಾವಣೆಯತ್ತ ಮೈ ಚಾಚಿತ್ತು.

ಸರ್ಕಾರಿ ಪ್ರಾಥಮಿಕ ಪ್ರೌಢಶಾಲೆ, ಆಯುರ್ವೇದ ಆಸ್ಪತ್ರೆ, ಪಶು ಚಿಕಿತ್ಸಾಲಯ, ಕಾವೇರಿ ಗ್ರಾಮೀಣ ಬ್ಯಾಂಕ್, ಸಹಕಾರಿ ಬ್ಯಾಂಕ್ ಇತ್ಯಾದಿ ಸೇರಿ ಶ್ರೀನಿವಾಸರ ಹಳ್ಳಿ ಹಾಗೆಯೇ ಇತ್ತು. ದೇವಸ್ಥಾನಗಳು ಯಾವುವೂ ಬದಲಾಗಿರಲಿಲ್ಲ. ಬಸವೇಶ್ವರ ದೇವಾಲಯ, ಹಟ್ಟಿ ಮಾರೆಮ್ಮ, ರಾಮದೇವರು, ಮುನೇಶ್ವರ ಮುಂತಾದ ಹಲವಾರು ದೇವಾಲಯಗಳೂ ಆಧುನಿಕ ಸೌಕರ್ಯಗಳಾದ ವಿದ್ಯುತ್ ಶಕ್ತಿ, ನೀರಿನ ನಳ ಮುಂತಾದವುಗಳಿಂದ ಕೂಡಿದ್ದವು.

ಶ್ರೀನಿವಾಸ ಅವರ ಒಡನಾಡಿಯಾಗಿ ಅವರ ಜೊತೆಗೇನೆ ಇದ್ದ ರಾಮೇಗೌಡರ ತಮ್ಮ ಜವರೇಗೌಡ, ಶ್ರೀನಿವಾಸ ಅವರು ಇದ್ದ ಮನೆ ತೋರಿಸಿದರು. ತಾವು ಚಿಕ್ಕವರಿದ್ದಾಗ ಅವರ ಅಣ್ಣ ಮತ್ತು ಶ್ರೀನಿವಾಸ ಅವರು ಚಿಮಣಿ ಎಣ್ಣೆ ದೀಪ ಬೆಳಕಿನಲ್ಲಿ ಕುಳಿತು ಬರವಣಿಗೆಯಲ್ಲಿ ಚರ್ಚೆಯಲ್ಲಿ ತೊಡಗಿರುತ್ತಿರುವುದನ್ನು ವಿವರಿಸಿದರು. ಈಗಲೂ ಇಲ್ಲಿ ಎಲ್ಲ ಜಾತಿಯ ಜನರು ಒಗ್ಗಟ್ಟಿನಿಂದ ಬಾಳುತ್ತಿದ್ದಾರೆಂಬುದನ್ನು ಜವರೇಗೌಡರು ಹೇಳಿದರು. ಈಗ ರಾಮಪುರದ ಅನೇಕ ವಿದ್ಯಾವಂತರು ಬೇರೆ ಬೇರೆ ಕಡೆಗಳಲ್ಲಿ ಕೆಲಸಕ್ಕಾಗಿ ಹೋಗತೊಡಗಿದ್ದಾರೆ ಎಂಬ ಎಲ್ಲ ವಿವರವನ್ನು ಹೇಳಿ ಮನೆಗೆ ಊಟಕ್ಕೆ ಕರೆದುಕೊಂಡು ಹೋದರು.

ಕೇಶವಮೂರ್ತಿ ಅನೇಕ ಫೋಟೋಗಳನ್ನು ಕ್ಲಿಕಿಸಿದರು. ಸಂಜೆ ಮರಳುವಾಗ ಬಸವೇಶ್ವರವ ದೇವಸ್ಥಾನದ ಆರತಿಯಲ್ಲಿ ಭಾಗವಹಿಸಿ ಪ್ರಸಾದ ಸ್ವೀಕರಿಸಿ ಮೈಸೂರಿನತ್ತ ಹೊರಟೆವು. 18 ವರ್ಷ ಈ ಹಳ್ಳಿಯಲ್ಲಿ ಇದ್ದು, ರಾಮಪುರದ ಪ್ರತಿಯೊಂದು ವಿಷಯವನ್ನು ತಿಳಿದು ನೆನಪಿನಲ್ಲಿಟ್ಟುಕೊಂಡದ್ದನ್ನು ನಾವು ಒಂದೇ ದಿನದಲ್ಲಿ ಮರುಭೇಟಿ ಮೂಲಕ ವೀಕ್ಷಿಸಿ ಬಂದೆವು. ಹಳ್ಳಿಯು ಹಳ್ಳಿಯಾಗಿದ್ದಾಗ ಅದರ ಅಧ್ಯಯನವೇ ಬೇರೆ. ಪಟ್ಟಣ, ನಗರಗಳ ಅಧ್ಯಯನವೇ ಬೇರೆ.

ರಾಮಪುರ ಗ್ರಾಮದಿಂದ ಹೊರಬಂದಾಗ ಶ್ರೀನಿವಾಸ ಅವರೇ ಎಲ್ಲಿದೆ ನಿಮ್ಮ ನೆನಪಿನ ಹಳ್ಳಿ ಎಂದು ಕೇಳುವಂತಾಯಿತು. ಅವರ ನೆನಪಿನ ಹಳ್ಳಿಯಲ್ಲಿ ಮತ್ತೆ ನಾನೂ ಮರೆಯಾದಂತಾಯಿತು. ನೋಡಿದ ಗ್ರಾಮಕ್ಕಿಂತ ನೆನಪಿನಲ್ಲಿ ಉಳಿದ ಹಳ್ಳಿಯೇ ಲೇಸು ಎಂದೆನಿಸಿತು. ❖

ಅಮೆರಿಕೆ ಅಧ್ಯಕ್ಷರಿಂದ ಸಾಂತ್ವನ ಪತ್ರ

ಸ್ಟಾನ್‌ಫೋರ್ಡ್ ವಿಶ್ವವಿದ್ಯಾಲಯದ ಲೈಬ್ರರಿ ಬೆಂಕಿ ದುರಂತದಲ್ಲಿ ಪ್ರೊ.ಎಂ.ಎನ್. ಶ್ರೀನಿವಾಸ ಅವರ ಅಧ್ಯಯನದ ಸಾಮಗ್ರಿ ಸಂಪೂರ್ಣ ಸುಟ್ಟು ನಾಶವಾದಾಗ ಆಗಿನ ಅಮೆರಿಕೆಯ ಅಧ್ಯಕ್ಷರಾಗಿದ್ದ ರಿಚರ್ಡ್ ನಿಕ್ಸನ್ ಅವರು ಶ್ರೀನಿವಾಸ ಅವರಿಗೆ ಸಾಂತ್ವನ ಪತ್ರ ಬರೆದದ್ದು ಗಮನಾರ್ಹವಾಗಿದೆ. ಈ ಪತ್ರದಲ್ಲಿ ಅಧ್ಯಕ್ಷರು, 'ಕೆಲವು ಕಿಡಗೇಡಿಗಳಿಂದ ಆದ ಈ ಬೆಂಕಿ ದುರಂತದಲ್ಲಿ ತಮ್ಮ ಅಧ್ಯಯನ ಸಾಮಗ್ರಿ ಸುಟ್ಟು ಭಸ್ಮವಾದ ಸಂಗತಿ ನಮಗೆಲ್ಲ ಕಳವಳವನ್ನುಂಟು ಮಾಡಿದೆ. ಭಾರತದ ಖ್ಯಾತ ಸಮಾಜ ಶಾಸ್ತ್ರಜ್ಞರಾದ ತಾವು ನಮ್ಮ ದೇಶದ ಗೌರವ ಅತಿಥಿಗಳಾಗಿದ್ದೀರಿ. ಈ ನಿಮ್ಮ ದುಃಖದಲ್ಲಿ ಅಮೆರಿಕೆಯ ಪ್ರಜೆಗಳು ಹಾಗೂ ಸರ್ಕಾರ ಭಾಗಿಯಾಗಿದ್ದೇವೆ. ನಮ್ಮ ಸಾಂತ್ವನವನ್ನು ಸ್ವೀಕರಿಸಿರಿ' ಎಂದು ಬರೆದಿದ್ದರು.

ಶ್ರೀನಿವಾಸ ಅವರಿಗೆ ವಿಶೇಷ ವಸತಿ ಹಾಗೂ ಇತರ ಸೌಲಭ್ಯಗಳನ್ನು ಒದಗಿಸಲಾಗಿತ್ತು. ಈ ದುರಂತದಲ್ಲಿ ಶ್ರೀನಿವಾಸ ಅವರ ಸಾಮಗ್ರಿ ಸುಟ್ಟು ಕರಕಲಾದ ವಾರ್ತೆಯನ್ನು ಅಮೆರಿಕೆಯ ಅನೇಕ ಪತ್ರಿಕೆಗಳು ಪ್ರಕಟಿಸಿದವು. ವಿಶೇಷವಾಗಿ 'ಸ್ಟಾನ್‌ಫೋರ್ಡ್ ಡೈಲಿ' ಪತ್ರಿಕೆಯು ವಿಶೇಷ ಪುಟವನ್ನೇ ತಂದಿತ್ತು.

ಕನ್ನಡಿಗರಿಗೆ ನೆನಪಿಸಿದ ಹಳ್ಳಿ

'ದಿ ರಿಮೆಂಬರ್ಡ್ ವಿಲೇಜ್' ಜಾಗತಿಕ ಮಟ್ಟದ ಸಮಾಜಶಾಸ್ತ್ರ ಪ್ರಾಧ್ಯಾಪಕರಿಗೆ, ವಿದ್ಯಾರ್ಥಿಗಳಿಗೆ ಭಾರತೀಯ ಗ್ರಾಮೀಣ ಜೀವನದ ವ್ಯವಸ್ಥೆಯ ಪರಿಚಯ ಮಾಡಿಕೊಡುವ ಉದ್ದೇಶದಿಂದ ರಚಿತವಾಗಿತ್ತು. ಆಚಾರ್ಯ ಪಾಠಶಾಲೆಯಲ್ಲಿ ಸಮಾಜಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಟಿ. ಆರ್. ಶಾಮಭಟ್ಟರು ಅದರ ಕನ್ನಡ ಅನುವಾದವನ್ನು ಪ್ರಾರಂಭ ಮಾಡಿದಾಗ, ಈ ಕೃತಿಯ ಇಂಗ್ಲಿಷ್ ಕರಡು ಪ್ರತಿ ಸಿದ್ಧವಾಗುತ್ತಿತ್ತು. ಕನ್ನಡ ಭಾಷೆಯ ಮೇಲೆ ಬಹಳಷ್ಟು ಪ್ರೀತಿ ಇದ್ದ ಶ್ರೀನಿವಾಸರು, ನವರತ್ನರಾಮರ 'ಕೆಲವು ನೆನಪುಗಳು' ಪುಸ್ತಕದಿಂದ ಪ್ರಭಾವಿತರಾಗಿದ್ದರು. ಐಜಾಕ್‌ನಲ್ಲಿ ಶ್ರೀನಿವಾಸ ಅವರು ಇದ್ದಾಗ ಶಾಮಭಟ್ಟರು ಅವರ ಜೊತೆಗೆ ಕೆಲಸ ಮಾಡುತ್ತಿದ್ದರು. ಅಲ್ಲದೆ ಮಾಸ್ತಿ ಅವರ 'ಜೀವನ' ಪತ್ರಿಕೆಯಲ್ಲಿ ಬರುತ್ತಿದ್ದ ಅನೇಕ ಬರಹಗಳನ್ನು ಆಸಕ್ತಿಯಿಂದ ಓದುತ್ತಿದ್ದರು. ಅಲ್ಲದೆ ಶ್ರೀನಿವಾಸ ಅವರು ಕನ್ನಡ, ತೆಲುಗು, ತಮಿಳು ಜಾನಪದ ಗೀತೆಗಳನ್ನು ಸಂಗ್ರಹಿಸಿದ್ದರು. ಶಾಮಭಟ್ಟರ ಕನ್ನಡ ಅನುವಾದ ಕರಡು ಪ್ರತಿಯನ್ನು ಶ್ರೀನಿವಾಸ ಅವರು ಬಹಳ ಆಸಕ್ತಿಯಿಂದ ಓದಿದ್ದರು. 'ನೆನಪಿನ ಹಳ್ಳಿ' ಪ್ರಕಟಗೊಳ್ಳುವ ಮೊದಲೇ ಅವರು ವಿಧಿವಶರಾದರೆಂದು ಶಾಮಭಟ್ಟ ಅವರು ಈಗಲೂ ವಿಷಾದಿಸುತ್ತಾರೆ.

ಬೆನ್‌ಸನ್ ಟೌನಲ್ಲಿ 'ಅರಕೇರಾ'

ಎಂ.ಎನ್. ಶ್ರೀನಿವಾಸ ಅವರ ಪತ್ನಿ ರುಕ್ಮಿಣಿ ಅವರು ಅಮೆರಿಕೆಯಿಂದ ಬೆಂಗಳೂರಿಗೆ ಬರುತ್ತಿದ್ದಾರೆಂಬ ಮಾಹಿತಿಯನ್ನು ನನಗೆ 'ನಿಯಾಸ' ಪ್ರಾಧ್ಯಾಪಕರು ನೀಡಿದಾಗ, ನಾನು ಮತ್ತು ವನಜಾ ಅವರು ಅವರ ಭೆಟ್ಟಿಗಾಗಿ ಬೆನ್‌ಸನ್‌ಟೌನ್‌ನಲ್ಲಿ ಇದ್ದ ಅವರ ಮನೆಗೆ ಹೋದೆವು.

ಅವರ ಮನೆಯ ಹೆಸರು 'ಅರಕೇರಾ' ಎಂದಿತ್ತು. ರಾಮಪುರದ ಹತ್ತಿರದ ಒಂದು ಹಳ್ಳಿ ಅರಕೇರಾ. ಶ್ರೀನಿವಾಸ ಅವರು ತಮ್ಮ ಹೊಸ ಮನೆಗೆ ಅದನ್ನೇ ಹೆಸರಾಗಿ ಇಟ್ಟಿದ್ದರು ಅಷ್ಟೇ ಅಲ್ಲದೆ ಮನೆಯ ಬಾಗಿಲನ್ನು ರಾಮಪುರದ ರಾಮೇಗೌಡರ ಮನೆಯ ಬಾಗಿಲಿನಂತೆಯೇ ಮಾಡಿಸಿದ್ದನ್ನು ಶಾಮಭಟ್ಟರು ನೆನಪಿಸಿಕೊಡುತ್ತಾರೆ.



Behavioral Sciences Fire

75 Years' Work Destroyed

Today

'ಸ್ಟಾನ್‌ಫೋರ್ಡ್ ಡೈಲಿ' ಪತ್ರಿಕೆಯಲ್ಲಿ ಪ್ರಕಟವಾಗಿದ್ದ ವರದಿ


ಕಾಡಿದ 'ಜಯಾಪಜ'ದ ಪ್ರಶ್ನೆಗಳ ಜಾಡು

ಎಸ್.ಆರ್. ವಿಜಯಶಂಕರ

ವಿಮರ್ಶೆ

ಭಾರತೀಯ ಮೂಲದ ಬ್ರಿಟಿಷ್-ಅಮೆರಿಕ ಬರಹಗಾರ, ಆಧುನಿಕೋತ್ತರ ಲೇಖಕ ಸಲ್ಮಾನ್ ರಶ್ದಿ ಅವರ ಹದಿನಾಲ್ಕನೇ ಕಾದಂಬರಿ 'ವಿಕ್ಟರಿ ಸಿಟಿ'. ತಮ್ಮ ಮ್ಯಾಜಿಕ್ ರಿಯಲಿಸಂ ಹಾಗೂ ಚಾರಿತ್ರಿಕ ಕಥನಗಳಿಂದ ಪ್ರಸಿದ್ಧವಾಗಿರುವವರು ಸಲ್ಮಾನ್ ರಶ್ದಿ. ಅವರ ಈ ಕಾದಂಬರಿಯೂ ಆ ಎರಡೂ ಅಂಶಗಳಿಂದಲೇ ಬೆಳೆಯುತ್ತದೆ. ಕಾದಂಬರಿಯ ಮೂಲ ಹಂದರ ವಿಜಯನಗರ ಸಾಮ್ರಾಜ್ಯದ ಕತೆ. ಆದರೆ ಅದನ್ನು ಹೇಳುವಾಕೆ 247 ವರ್ಷಗಳ ಕಾಲ ಬದುಕಿ ತೀರಿಕೊಂಡ ನಗರ ಮಾತೆ ಪಂಪ-ಕಂಪನ. ಅವಳು ಅದನ್ನು ಬರೆದು ಒಂದು ಮಣ್ಣಿನ ಮಡಕೆಯೊಳಗೆ ಭದ್ರವಾಗಿರಿಸಿ, ಮುಂದಿನ ಜನಾಂಗಕ್ಕೆ ತನ್ನ ಸಂದೇಶವಾಗಿ ಹುಗಿದಿಟ್ಟ ಕೃತಿ 'ಜಯಾಪಜಯ' ದೊರೆತ ನಿರೂಪಕ, ಆ ಕತೆಯಲ್ಲಿರುವ ವಿಜಯನಗರದ ಹೊಸ ಕಥನವನ್ನು ಓದುಗರಿಗೆ ನಿರೂಪಿಸುತ್ತಾನೆ. ಕಾದಂಬರಿಯೊಳಗೆ ಹುಟ್ಟು-ದೇಶಭ್ರಷ್ಟತೆ-ವೈಭವ-ಪತನಗಳೆಂಬ ನಾಲ್ಕು ಹಂತಗಳಲ್ಲಿ ರಶ್ದಿ ಕತೆ ಹೇಳುತ್ತಾರೆ. ಅವರು ತಮ್ಮ ವಿಚಾರಗಳನ್ನು ಹೇಳಲು ವಿಜಯನಗರದ ಕಥಾ ಹಂದರವನ್ನು ಕನಿಷ್ಠವೆಂಬಷ್ಟು ಮಾತ್ರ ಬಳಸಿ, ಪಂಪ ಕಂಪನ ಅವರ ರಾಜ್ಯ ನಿರ್ಮಾಣದ ಹಿಂದಿರುವ ಸ್ತ್ರೀ ಸಮಾನತೆ, ಪರಧರ್ಮ ಸಹಿಷ್ಣುತೆ, ಸಕಲ ಜನ ಹಿತಾಸಕ್ತಿ ಮುಂತಾದ ಆದರ್ಶಗಳ ವಿವರಗಳನ್ನು ನೀಡುತ್ತಾರೆ. ಆ ಮೂಲಕ ತಮ್ಮದೇ ಆದ ಆಧುನಿಕೋತ್ತರ ಸಾಮಾಜಿಕ-ರಾಜಕೀಯ ತತ್ವವೊಂದನ್ನು ಪ್ರತಿಪಾದಿಸುತ್ತಾರೆ. ಚಾರಿತ್ರಿಕ ವಿವರಗಳನ್ನು ಪ್ರಸಿದ್ಧ ಇತಿಹಾಸಜ್ಞರಿಂದ ಪಡೆದಂತೆ, ವಿಜಯನಗರ ಸಾಮ್ರಾಜ್ಯದ ಹುಟ್ಟು ಬೆಳವಣಿಗೆ, ವೈಭವ ಹಾಗೂ ಪತನಗಳ ಬಗೆಗೆ ಇರುವ ಹಲವು ದಂತಕತೆಗಳನ್ನೂ ತಮ್ಮದೇ ಆದ ರೀತಿಯ ನಿರೂಪಣೆಯಲ್ಲಿ ಬಳಸಿಕೊಳ್ಳುತ್ತಾರೆ. ಒಂದು ರಾಜ್ಯ ಸ್ಥಾಪನೆಯ ಹಿಂದಿರುವ ಆದರ್ಶಕ್ಕೆ ಅನುಗುಣವಾಗಿ ರಾಜ್ಯದ ಬೆಳವಣಿಗೆ ಯಾಕೆ ಸಂಭವಿಸುವುದಿಲ್ಲ ಎಂಬುದರ ಜಿಜ್ಞಾಸೆಯೇ ಈ ಕಾದಂಬರಿಯ ನಿಜವಾದ ಮೂಲವಸ್ತು.

ಪಂಪ ಕಂಪನ ಬಿತ್ತುವ ಮಾಯಾಬೀಜಗಳಿಂದ ನಗರ, ಕೋಟೆ ಕೊತ್ತಳ, ಜನ ಜೀವನ, ಸೈನ್ಯ ಎಲ್ಲವೂ ಬೆಳೆಯುತ್ತದೆ. ಸಣ್ಣ ಮಟ್ಟದಲ್ಲಿದ್ದ ಹುಕ್ಕ-ಬುಕ್ಕರು ಅವಳ ಕೃಪೆಯಿಂದ ರಾಜರಾಗಿ ಬೆಳೆಯುತ್ತಾರೆ. ಹುಕ್ಕರಾಯ ಅವಳನ್ನು ಮದುವೆಯಾಗಲು ವರ್ಷಗಟ್ಟಲೆ ಕಾಯಬೇಕಾಗುತ್ತದೆ. ಒಂಬತ್ತು ವರ್ಷದ ಮಗಳು ಪಂಪ ಕಂಪನಗಳನ್ನು ಬಿಟ್ಟು ಅವಳ ತಾಯಿ ರಾಧಾ ಕಂಪನ, ಪಂಪಾ ನದಿ ದಂಡೆಯಲ್ಲಿ ಬೆಂಕಿಗೆ ಬಿದ್ದು ತೀರಿಕೊಳ್ಳುತ್ತಾಳೆ. ಕಂಪಿಲಿಯೆಂಬ ಪುಟ್ಟ ರಾಜ್ಯ. ಪಂಪಳ ತಂದೆ ಅರ್ಜುನ ಕಂಪನ ಯಾವುದೋ ಹೆಸರೇ ಇಲ್ಲದ ಯುದ್ಧವೊಂದರಲ್ಲಿ ಮೊದಲೆ ತೀರಿಹೋಗಿದ್ದ. ಆ ಬಳಿಕ ಉತ್ತರದ ಸುಲ್ತಾನರ ಸೈನ್ಯಕ್ಕೆ ಹೆದರಿ ಅನೇಕ ಹೆಂಗಸರು ಬೆಂಕಿಗೆ ಬಿದ್ದು ಸಾಯುತ್ತಾರೆ. ಪಂಪಳ ತಾಯಿ ಸತ್ತ ಚಿತೆ ಗಂಧದ ಸೌದೆಯಿಂದ ಮಾಡಿದುದಾಗಿದ್ದರೂ, ಸುಡುತ್ತಿದ್ದ ತಾಯಿಯ ಹಸಿ ಮೈಯ ಮಾಂಸದ ವಾಸನೆ ಅವಳ ಜೀವಮಾನವಿಡೀ ಕಾಡುತ್ತದೆ. ಜೀವಂತ ಬೆಂದ ಆ ನೆನಪಿನಿಂದ ಎಂದೂ ಮುಕ್ತಳಾಗದ ಅವಳು ಮಾಂಸಾಹಾರವನ್ನು ಸಂಪೂರ್ಣ ತ್ಯಜಿಸುತ್ತಾಳೆ. ಧ್ಯಾನದಲ್ಲಿದ್ದು ತನ್ನ ವಿಶೇಷ ಶಕ್ತಿಯ ಬೀಜಗಳಿಂದ ನಗರ, ಕೋಟೆಗಳನ್ನು ಪಂಪ ಕಂಪನ ಸೃಜಿಸುತ್ತಾಳೆ. ಪೋರ್ಚುಗೀಸಿನ ಕುದುರೆ ವ್ಯಾಪಾರಿಯೊಬ್ಬನ ಮೋಹದಲ್ಲಿ ಬೀಳುತ್ತಾಳೆ. ಹುಕ್ಕರಾಯನನ್ನು ಮದುವೆಯಾಗುತ್ತಾಳೆ. ಅವನ ನಿಧನದ ಬಳಿಕ ಬುಕ್ಕರಾಯನಿಗೂ ರಾಣಿಯಾಗುತ್ತಾಳೆ. ಬಳಿಕ ಕೃಷ್ಣದೇವರಾಯನ ಕಾಲದಲ್ಲಿ ವೈಭವವನ್ನೂ ಕಾಣುತ್ತಾಳೆ. ತಾನು ಮಾಡದ ತಪ್ಪಿಗಾಗಿ ಕೃಷ್ಣದೇವರಾಯನಿಂದ ಕಣ್ಣು ಕೀಳಿಸುವ ಶಿಕ್ಷೆಗೊಳಗಾಗಿ, ಕುರುಡಿಯಾಗುತ್ತಾಳೆ. ಅಚ್ಯುತರಾಯನನ್ನು ಸಿಂಹಾಸನದಿಂದ ಇಳಿಸಿದ ಅಳಿಯ ರಾಮರಾಯನ ಕಾಲದ ಪತನವನ್ನು ದಾಖಲಿಸಿ ಮುಂದಿನ ಜನಾಂಗಕ್ಕೆ ತನ್ನ ಸಂದೇಶವಾಗಿ ಜಯಾಪಜಯ ಕೃತಿಯನ್ನು ಕಾಯ್ದಿರಿಸುತ್ತಾಳೆ. ಅದರ ಕಥನವೇ 'ವಿಕ್ಟರಿ ಸಿಟಿ' ಅಂದರೆ ವಿಜಯನಗರ.



ಪು: 352 ₹309

ವಿಕ್ಟರಿ ಸಿಟಿ (ಇಂಗ್ಲಿಷ್)

ಲೇ: ಸಲ್ಮಾನ್ ರಶ್ದಿ

ಪ್ರ: ಪೆಂಗ್ವಿನ್ ರ‍್ಯಾಂಡಮ್ ಹೌಸ್ ಇಂಡಿಯಾ ಲಿಮಿಟೆಡ್

ಪಂಪ ಕಂಪನ ರಾಜ್ಯಾಡಳಿತದಲ್ಲೂ, ಸಮಾಜದಲ್ಲೂ ಸ್ತ್ರೀಯರಿಗೆ ಪುರುಷರ ಸಮಾನ ಹಕ್ಕು ಇರಬೇಕೆಂದು ಪ್ರತಿಪಾದಿಸುತ್ತಾಳೆ. ಪ್ರಜಾ ಸಖ್ಯವೆ ರಾಜ್ಯದ ಗುರಿ ಎನ್ನುತ್ತಾಳೆ. ತನಗೆ ಇದ್ದ ಮಗಳಂದಿರು ಮತ್ತು ಮಗಂದಿರಲ್ಲಿ ತನ್ನ ಹೆಣ್ಣುಮಕ್ಕಳಿಗೂ ರಾಣಿಯಾಗಿ ರಾಜ್ಯ ನಡೆಸುವ ಹಕ್ಕು ಇರಬೇಕು ಎಂಬುದನ್ನು ಪ್ರತಿಪಾದಿಸುತ್ತಾಳೆ. ಇದರಿಂದ ಸಂಕಷ್ಟಕ್ಕೆ ಒಳಗಾಗಿ ದೇಶಭ್ರಷ್ಟಳಾಗಬೇಕಾಗುತ್ತದೆ. ಕಾಡಿನ ಅಜ್ಞಾತವಾಸದಲ್ಲಿ ಶಕ್ತಿ ಸಂಚಯನ ಮಾಡಿಕೊಳ್ಳುವ ಅವಳು ವಿಜಯನಗರಕ್ಕೆ ಹಿಂತಿರುಗಿದ ಬಳಿಕ ತನ್ನ ಮಾಯದಿಂದ ಹೊಸದಾಗಿ ನಿರ್ಮಿಸುವ ಕೋಟೆಗಳಿಂದ ಪುನಃ ಮುನ್ನಿನ ಗೌರವಕ್ಕೆ ಪಾತ್ರಳಾಗುತ್ತಾಳೆ. ಕೃಷ್ಣದೇವರಾಯ ತನ್ನ ಪಟ್ಟದ ರಾಣಿಯ ಚಾಡಿ ಮಾತುಗಳನ್ನು ನಂಬಿ ಪಂಪ ಕಂಪನಳ ಕಣ್ಣುಗಳನ್ನು ಕೀಳಿಸಿದ ಬಳಿಕ ಅವಳು ಬರವಣಿಗೆಯಲ್ಲಿ ತೊಡಗಿ ಒಂದು ಸಾಮ್ರಾಜ್ಯದ ಉನ್ನತಿ-ಅವನತಿಗಳ ಕಥನವನ್ನು 'ಜಯಾಪಜಯ'ವೆಂಬ ಕೃತಿಯಲ್ಲಿ ದಾಖಲಿಸುತ್ತಾಳೆ. ರಾಜ್ಯಾಡಳಿತವು ಧಾರ್ಮಿಕ ವ್ಯವಸ್ಥೆ ಅಥವಾ ಧಾರ್ಮಿಕ ಮುಖಂಡರ ಪ್ರಭಾವದಲ್ಲಿ ಇರಬಾರದು ಎಂಬುದನ್ನು ಪ್ರತಿಪಾದಿಸುತ್ತಿದ್ದ, ರಾಜ್ಯಲಕ್ಷ್ಮಿಯ ಸಾಂಕೇತಿಕ ರೂಪದಂತಿರುವ ಪಂಪ ಕಂಪನಳ ಕಣ್ಣು ಕೀಳಿಸಿದ ಬಳಿಕ ಅವಳನ್ನು ರಕ್ಷಿಸುವುದು ಅದೇ ಧಾರ್ಮಿಕ ವ್ಯವಸ್ಥೆ ಎಂಬುದು ಅವಳು ಕಟ್ಟಿದ ರಾಜ್ಯದ ವೈರುಧ್ಯವಾಗಿಯೂ ಗೋಚರಿಸುತ್ತದೆ.

ಧರ್ಮ-ರಾಜಕೀಯ, ಸಮಾಜ-ಅಧಿಕಾರ, ಸೈನ್ಯಶಕ್ತಿ-ಜನಜೀವನ ಹೀಗೆ ಹಲವು ಅಂಶಗಳನ್ನು ರಶ್ದಿ ಚರ್ಚಿಸುತ್ತಾರೆ. ಔನ್ನತ್ಯದಲ್ಲಿರುವ ರಾಜ್ಯದ ಅವನತಿಗೆ ಕಾರಣಗಳೇನು ಎಂಬುದನ್ನು ಧ್ಯಾನಿಸುವುದು ಕಾದಂಬರಿಯ ಮುಖ್ಯ ಉದ್ದೇಶ. ಅದು ಕೇವಲ ರಾಜನೊಬ್ಬನ ದೌರ್ಬಲ್ಯವೆ? ಕಾಲದ ಸಂದರ್ಭವೆ? ಸೈನ್ಯದ ಸೋಲೆ? ಆಡಳಿತಾತ್ಮಕ ಅಥವಾ ಯೋಜನಾತ್ಮಕ ಅಸಾಮರ್ಥ್ಯವೇ? ರಾಜ್ಯದ ಅವನತಿಗೆ ಕೇವಲ ರಾಜನು ಕಾರಣವೇ? ಧರ್ಮ ಮತ್ತು ರಾಜತ್ವದ ಸಂಬಂಧಗಳೇನು ಮತ್ತು ಅದು ಹೇಗಿರಬೇಕು? ಇಂತಹ ಹಲವು ಪ್ರಶ್ನೆಗಳಿಂದ ರಾಜಕೀಯ ತಾತ್ವಿಕತೆಯೊಂದನ್ನು ಕಾದಂಬರಿ ಮುನ್ನೆಲೆಗೆ ತರುತ್ತದೆ. ಅದರ ಜೊತೆಗೆ 'ಜಯಾಪಜಯ' ವೆಂಬ ಹೆಸರಿನ ಮೂಲಕವೇ ಇವನ್ನೆಲ್ಲಾ ಪೌರಾಣಿಕವಾಗಿಯೂ ನೆನಪಿಸಿ ರಾಜ-ಪ್ರಜಾ ಧರ್ಮಗಳ ತಾತ್ವಿಕ ಜಿಜ್ಞಾಸೆ ಪುರಾಣಗಳಷ್ಟೇ ಪ್ರಾಚೀನವಾದದು ಮತ್ತು ಆಧುನಿಕೋತ್ತರ ಕಾಲದಲ್ಲೂ ಮತ್ತೆ ಚರ್ಚಿಸ ಬೇಕಾದುದು ಎಂಬುದನ್ನು ಜ್ಞಾಪಿಸುತ್ತದೆ. ಮಹಾಭಾರತವು, ಜಯ, ವಿಜಯ, ಭಾರತ, ಮಹಾಭಾರತಗಳಾಗಿ ಬೆಳೆದ ಪುರಾಣ ಎಂಬ ವಿದ್ವಾಂಸರ ಮಾತನ್ನು ಈ ಸಂದರ್ಭದಲ್ಲಿ ನಾವು ನೆನಪಿಸಿಕೊಳ್ಳಬಹುದು.

ಜನರ ಹಿತ, ಪ್ರಗತಿ, ಶಾಂತಿ, ಸಮಾನತೆಗಳಿಗಾಗಿ ಹುಟ್ಟಿದ ರಾಜ್ಯವೊಂದು ವೈಭವವನ್ನು ಗಳಿಸುವುದರ ಜೊತೆಗೆ ಯಾಕೆ ಎಲ್ಲಾ ಹಂತಗಳಲ್ಲೂ ಹಿಂಸೆಯನ್ನೂ ಕ್ರೌರ್ಯವನ್ನೂ ಮೈಗೂಡಿಸಿಕೊಳ್ಳುತ್ತದೆ ಎಂಬ ಪ್ರಶ್ನೆ ಕಾದಂಬರಿಕಾರರಾಗಿ ರಶ್ದಿಯವರನ್ನು ಕಾಡಿದೆ. ರಾಜಧರ್ಮದ ಈ ಪ್ರಶ್ನೆಗೆ ಉತ್ತರ ಹುಡುಕಿದ ಪುರಾಣಗಳಿಗೆ ನಿಶ್ಚಿತವಾಗಿ ಇದು ಹೀಗೆ ಎನ್ನಲಾಗಲಿಲ್ಲ. ಚಾರಿತ್ರಿಕ ಜಿಜ್ಞಾಸೆಗಳಲ್ಲಿಯೂ ಅದಕ್ಕೆ ಸಮರ್ಥ ಉತ್ತರ ಸಿಗಲಿಲ್ಲ. ಮನುಷ್ಯನ ವಿಧಿಯಂತೆ ಬದುಕಿಗೆ ಬೆಸೆದಿರುವ ಈ ರಾಜಕೀಯ ಅನಿವಾರ್ಯಕ್ಕೆ ಧಾರ್ಮಿಕ, ಸಾಮಾಜಿಕ ಹಾಗೂ ಸೈದ್ಧಾಂತಿಕ ನೆಲೆಗಳಲ್ಲಿ ತಾತ್ವಿಕ ಉತ್ತರಗಳನ್ನು ಹುಡುಕುವುದು ಆಧುನಿಕೋತ್ತರ ಕಾಲದ ಅಗತ್ಯವೂ ಆಗಿದೆ ಎಂದು ರಶ್ದಿ ನಂಬುತ್ತಾರೆ.

'ವಿಕ್ಟರಿ ಸಿಟಿ' ಕಾದಂಬರಿ ಪೋರ್ಚುಗೀಸನ ಬಾಯಲ್ಲಿ ಬಿಸ್ನಾಗ (BISNAGA) ಎಂದಾದ ವಿಜಯನಗರದ ಮಾತೆ ಬಯಸಿದ್ದು ಸ್ತ್ರೀ-ಪುರುಷ ಸಮಾನತೆ, ಸಾಂಸ್ಕೃತಿಕ -ಭೌಗೋಳಿಕ ಸಹೋದರತ್ವ ಸೌಹಾರ್ದದ ಸ್ವಾತಂತ್ರ್ಯಗಳನ್ನು. ಆದರೆ ಅಂತಹ ಆದರ್ಶಗಳ ವಿರುದ್ಧವಾಗಿ ಪ್ರಭುತ್ವದ ಹಿಂಸೆ ಕ್ರೌರ್ಯಗಳು ಬೆಳೆದಾಗ ಅವುಗಳನ್ನು ನಿಯಂತ್ರಿಸುವ ಮಾರ್ಗಗಳಾವುವು? ಎಂಬುದರ ಹುಡುಕಾಟಕ್ಕೆ ರಶ್ದಿ ಮತ್ತೊಂದು ಚಾರಿತ್ರಿಕ ಕಥನವನ್ನು ಬಳಸಿಕೊಂಡಿದ್ದಾರೆ. ವಿಜಯನಗರದ ಹುಟ್ಟಿನ ಆಶಯದಲ್ಲೆ ಅಡಗಿದ್ದ ಬಹುತ್ವದ ಮೂಲಶಕ್ತಿ ಕಳೆದುಹೋಗಲು ಕಾರಣಗಳೇನು? ಎಂಬುದು ರಶ್ದಿಯವರನ್ನು ತೀವ್ರವಾಗಿ ಕಾಡಿದೆ. ಹದಿನಾಲ್ಕನೆ ಕಾದಂಬರಿಯಲ್ಲೂ ತಮ್ಮ ಬರವಣಿಗೆಯ ಮ್ಯಾಜಿಕ್ ಅನ್ನು ಸಲ್ಮಾನ್ ರಶ್ದಿ ಉಳಿಸಿಕೊಂಡಿದ್ದಾರೆ. ಪಂಪ ಕಂಪನಳ ಆತಂಕ, ಪ್ರಶ್ನೆಗಳು ನಮ್ಮ ಪರಿಭಾಷೆಯಲ್ಲಿ ಹೇಳುವುದಾದರೆ ನಿಜವಾದ ರಾಜ್ಯಲಕ್ಷ್ಮಿಯ ಪ್ರಶ್ನೆಗಳೂ ಆಗಿವೆ. ❖

ಮೊದಲ ಓದು

ಕದಂಬ ಸಾಮ್ರಾಜ್ಯದ ಮಹಾಕಥನ

ಕನ್ನಡದ ಪ್ರಮುಖ ಕಾದಂಬರಿಕಾರರಲ್ಲಿ ಒಬ್ಬರಾದ ಸಂತೋಷ ಕುಮಾರ ಮೆಹೆಂದಳೆ ಅವರ ನೂತನ ಕಾದಂಬರಿ 'ವೈಜಯಂತಿಪುರ' ಕದಂಬ ಸಾಮ್ರಾಟ ಮಯೂರವರ್ಮನ ಮಹಾ ಚರಿತ್ರೆಯಾಗಿದೆ. ವರದಾ ನದಿ ತಟದಲ್ಲಿ ಘಟಿಸುವ ಮಹಾಕಥನವು ಸಣ್ಣ ಸಣ್ಣ ಅಧ್ಯಾಯಗಳ ರೂಪದಲ್ಲಿದ್ದರೂ, ಇಡೀ ಕೃತಿ ಸಾಕಷ್ಟು ಸಂಶೋಧನೆಗಳನ್ನು ಒಳಗೊಂಡಿದೆ ಎಂಬುದು ಓದುತ್ತ ಹೋದಂತೆ ತಿಳಿಯುತ್ತದೆ.

ಲೇಖಕರು ಮಯೂರವರ್ಮನ ಕಥೆಯ ಮೂಲಕ ಕದಂಬ ಸಾಮ್ರಾಜ್ಯವನ್ನು ಓದುಗರಿಗೆ ಪರಿಚಯಿಸುತ್ತ ಹೋಗುತ್ತಾರೆ. ಕನ್ನಡ ಮತ್ತು ಕರ್ನಾಟಕದ ಅಸ್ಮಿತೆಗೆ ಒಂದು ಸಾಮ್ರಾಜ್ಯ ಹೇಗೆ ಕಾರಣವಾಯಿತು ಎಂಬುದರ ವಿವರ ಕಾಣಿಸುತ್ತದೆ. 'ಇತಿಹಾಸವು ದಾರಿದೀಪವಿದ್ದಂತೆ. ತನ್ನನ್ನು ತಾನು ತೋರಿಸಿಕೊಳ್ಳುತ್ತಾ ಸಾಧನಾ ಪಥದಲ್ಲಿ ಮುನ್ನಡೆಯುವವರಿಗೆ ಇತಿಹಾಸವು ಮಾರ್ಗದರ್ಶಕ ದೀಪವಾಗುತ್ತದೆ. ಇತಿಹಾಸದ ಪ್ರತಿಯೊಂದು ಪುಟದಲ್ಲಿಯೂ ಸ್ವರ್ಣಾಕ್ಷರದಿಂದ ಕಂಗೊಳಿಸಬೇಕಾದ ಹೆಸರು ಮಯೂರವರ್ಮ' ಎಂದು ಸ್ವರ್ಣವಲ್ಲಿಯ ಗಂಗಾಧರೇಂದ್ರ ಶ್ರೀಗಳು ಕೃತಿಯ ಬೆನ್ನುಡಿಯಲ್ಲಿ ಹೇಳುತ್ತಾರೆ.



ಪು: 328 ₹375

ವೈಜಯಂತಿಪುರ


ಲೇ: ಸಂತೋಷಕುಮಾರ ಮೆಹೆಂದಳೆ

ಪ್ರ:ಸಾಹಿತ್ಯ ಲೋಕ ಪಬ್ಲಿಕೇಷನ್ಸ್

ಸಂ:9945939436

'ಶಾಸನಗಳನ್ನೂ ಒಳಗೊಂಡಂತೆ, ಸಂಶೋಧನಾ ಕೃತಿಗಳನ್ನು ಅಧ್ಯಯನ ಮಾಡಿರುವುದಕ್ಕೆ ಸಾಕ್ಷ್ಯವೆಂಬಂತೆ ಅಡಿ ಟಿಪ್ಪಣಿಯಲ್ಲಿ ಕೃತಿಸೂಚಿಯನ್ನು ಕೊಡಲಾಗಿದೆ. ಅಂದರೆ ಮೂಲ ಎಳೆಯಿಂದಲೇ ಕಾದಂಬರಿ ಬೆಳೆ ಬಂದಿದೆ ಎಂಬುದನ್ನೂ ಖಚಿತಪಡಿಸಲಾಗಿದೆ' ಎಂದು ಬರಗೂರು ರಾಮಚಂದ್ರಪ್ಪ ಕೃತಿಯ ಕುರಿತು ಬರೆಯುತ್ತಾರೆ. ಕದಂಬ ಸಾಮ್ರಾಜ್ಯ, ಆ ಕಾಲಘಟ್ಟ, ಸುತ್ತಮುತ್ತಲಿನ ಪರಿಸರ, ಮಯೂರ ವರ್ಮನ ಚರಿತ್ರೆ ಕುರಿತು ಅಧ್ಯಯನಯೋಗ್ಯ ಕೃತಿಯೂ ಹೌದು. ಜೊತೆಗೆ ಕಾದಂಬರಿಯಾಗಿಯೂ ಓದನ್ನು ಸವಿಯಬಹುದು ಎನ್ನುವಂತಹ ಹೊತ್ತಿಗೆಯಿದು.

ಗಾದೆಗಳು ಕಥೆಯ ರೂಪ ಪಡೆದಾಗ



ಪು: 84 ₹90

ಅಮ್ಮ ಹೇಳಿದ ಕಥೆಗಳು

ಲೇ: ಭಾರತೀ ಕಾಸರಗೋಡು

ಪ್ರ: ನ್ಯೂ ವೇವ್ ಬುಕ್ಸ್

ಸಂ: 9448788222

ಇತ್ತೀಚಿನ ವರ್ಷಗಳಲ್ಲಿ ಮಕ್ಕಳ ಸಾಹಿತ್ಯ ಲೋಕಕ್ಕೆ ಹೆಚ್ಚಿನ ಹೊತ್ತಿಗೆಗಳು ಸೇರ್ಪಡೆಯಾಗುತ್ತಿವೆ. ಮಕ್ಕಳನ್ನು ಸೆಳೆಯುವಂತಹ ವಿಷಯವುಳ್ಳ, ವಿನ್ಯಾಸವುಳ್ಳ ಕೃತಿಗಳು ಬರುತ್ತಿದ್ದು, ಇದಕ್ಕೆ ಹೊಸ ಸೇರ್ಪಡೆ 'ಅಮ್ಮ ಹೇಳಿದ ಕಥೆಗಳು'.

ಗಾದೆಗಳನ್ನೇ ಆಧಾರವಾಗಿಟ್ಟುಕೊಂಡು ಈ ಕೃತಿ ರಚಿಸಿದ್ದಾರೆ ಲೇಖಕಿ. ತಮ್ಮ ತಾಯಿ ಹೇಳುತ್ತಿದ್ದ ಜನಪದ ಗಾದೆಗಳು, ಅದಕ್ಕೆ ಪೂರಕವಾದ ಕಥೆಗಳನ್ನು ಮೆಲುಕುಹಾಕುತ್ತಾ, ಮತ್ತೊಂದಿಷ್ಟು ಕಡೆ ಆ ಕಥೆಗಳನ್ನು ತನ್ನ ಕಲ್ಪನೆಯಲ್ಲಿ ವಿಸ್ತರಿಸಿಕೊಳ್ಳುತ್ತಾ ಸಾಗಿದ್ದಾರೆ ಭಾರತೀ ಕಾಸರಗೋಡು. ಒಟ್ಟು ಇಪ್ಪತ್ತೈದು ಕಥೆಗಳ ಗುಚ್ಛ ಈ ಕೃತಿ.

ಕಥೆಯ ರೂಪದಲ್ಲಿ ಮಕ್ಕಳಿಗೆ ಗಾದೆಗಳನ್ನು ಪರಿಚಯಿಸುವ ಕೆಲಸ ಈ ಕೃತಿಯಲ್ಲಾಗಿದೆ. ಕಥೆಗಳ ಅಂತ್ಯದಲ್ಲಿ ಇಡೀ ಕಥೆಯ ಸಾರಾಂಶವನ್ನು ಗಾದೆಯ ರೂಪದಲ್ಲಿ ಇಲ್ಲಿ ಹೇಳಲಾಗಿದೆ. ಉದಾಹರಣೆಗೆ 'ಇನ್ನೊಬ್ಬರನ್ನು ಅನುಕರಣೆ ಮಾಡಬೇಡಿ, ಸ್ವಂತ ಬುದ್ಧಿ ಉಪಯೋಗಿಸಿ' ಎನ್ನುವ ಕಿವಿಮಾತು ಹೇಳುವ 'ಉರುಳಾಡಿ ಅತ್ತ' ಎನ್ನುವ ಕಥೆಯ ಕೊನೆಯಲ್ಲಿ 'ಸಂತೇಲಿ ಮಳೆ ಬಂದಾಗ ಉಪ್ಪಿನೋನು ಅತ್ರೆ ತೆಂಗಿನ ಕಾಯೋನು ಉರುಳಾಡಿ ಅತ್ತ' ಎಂಬ ಗಾದೆಯನ್ನು ಉಲ್ಲೇಖಿಸಲಾಗಿದೆ. ಹೀಗೆ ಕಪ್ಪು–ಬಿಳುಪಿನ ಚಿತ್ರಸಹಿತ ಕಥೆಗಳು ಇಲ್ಲಿವೆ.

ಕಥೆಯ ಭಾಷೆ ಬಹಳ ಸರಳವಾಗಿದೆ. ಬಣ್ಣದ ಚಿತ್ರಗಳಿದ್ದರೆ ಕಥೆಗಳು ಮಕ್ಕಳನ್ನು ಇನ್ನಷ್ಟು ಸೆಳೆಯುತ್ತಿದ್ದವು. ಬೆನ್ನುಡಿಯಲ್ಲಿ ನಮ್ಮ ಗ್ರಂಥಾಲಯಗಳು ಮಕ್ಕಳನ್ನು ಮತ್ತಷ್ಟು ಸೆಳೆಯಲು ಮಾಡಬೇಕಾಗಿರುವ ಬದಲಾವಣೆಗಳ ಬಗ್ಗೆಯೂ ಸೂಚ್ಯವಾಗಿ ಲೇಖಕಿ ಉಲ್ಲೇಖಿಸಿದ್ದಾರೆ. ❖

ಸ್ವರ ಪರಂಪರೆಯ ಪ್ರತಿನಿಧಿ ಬೋಡಸ್

ಶ್ರೀಮತಿದೇವಿ, ಮೈಸೂರು

ನುಡಿ ನಮನ

ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ, ಬದುಕಿನ ಚೌಕಟ್ಟಿನಲ್ಲಿ ಒಂದಿಷ್ಟೂ ಹೊಂದದಂತೆ ಕಾಣುವ ವ್ಯಕ್ತಿತ್ವ ಕೇದಾರ್ ಬೋಡಸ್ ಅವರದ್ದಾಗಿತ್ತು. ಸಂಗೀತದ ಜಗತ್ತಿನಲ್ಲಿ ನಡೆಯುವ ಹಲವು ಬಗೆಯ ಚಟುವಟಿಕೆ-ವ್ಯವಹಾರಗಳ ಮಧ್ಯೆ ಅವರ ಇರವು ಮತ್ತು ಅವರ ಗಾಯನದ ಹರಿವು 'ಅಸಂಗತ' ನಾಟಕವೊಂದರ ಪಾತ್ರದಂತೆ ಕಾಣುತ್ತಿತ್ತು. ಹಾಗಿದ್ದರೂ ಅವರ ಘನತೆಯಿಂದ ಕೂಡಿದ ವ್ಯಕ್ತಿತ್ವ ಮತ್ತು ಸಂಗೀತ ಸೂಜಿಗಲ್ಲಿನಂತೆ ಸೆಳೆಯುತ್ತಿತ್ತು.


> ಏಪ್ರಿಲ್ 24ರಂದು ಪಂಡಿತ್ ಕೇದಾರ್ ಬೋಡಸ್ ನಮ್ಮನ್ನಗಲಿದರು. ಗ್ವಾಲಿಯರ್ ಘರಾಣೆಯ ಶ್ರೇಷ್ಠ ಚಿಂತನಶೀಲ ಗಾಯಕರಾಗಿದ್ದ ಅವರನ್ನು ನೋಡಿದಾಗ-ಕೇಳಿದಾಗ 'ಅವರು ನಡುವಿನ ಕೊಂಡಿಯಲ್ಲ, ಬದಲಾಗಿ ಅವರು ಹಳೆಯ ಬಹುದೊಡ್ಡ ಪರಂಪರೆಯ ಪ್ರತಿನಿಧಿ' ಎನಿಸುತ್ತಿತ್ತು.

ನೀಳವಾದ ಅರೆ ನೆರೆತ ಗಡ್ಡ-ಮೀಸೆ, ಸ್ವಲ್ಪವೂ ನೀಟ್ ಆಗಿರದ ಸಡಿಲವಾದ ಕುರ್ತಾ ಪೈಜಾಮ, ತಲೆಯ ಮೇಲೊಂದು ಟೋಪಿ ಇವುಗಳೊಂದಿಗೆ ಕನ್ನಡಕದೊಳಗಿಂದ ಹೊಳೆಯುವ ತೇಜಸ್ವಿ ದೃಷ್ಟಿ ಹಾಯಿಸುತ್ತಾ ಅವರು ಹಾಡುವ ಭಂಗಿ ಮನಸ್ಸಿನೊಳಗೆ ಪಡಿಮೂಡಿದೆ.

ಗ್ವಾಲಿಯರ್ ಘರಾಣೆಯ ಪರಿಪಕ್ವ ಪಾಕ ಅವರ ಗಾಯನದಲ್ಲಿತ್ತು. ಬೋಡಸ್ ಅವರ ಪರಿವಾರವೇ ಸಂಗೀತಮಯವಾದದ್ದು. ವಿ.ವೀಣಾ ಸಹಸ್ರಬುದ್ಧೆ ಅವರೂ ಇದೇ ಕುಟುಂಬದಿಂದ ಬಂದವರು. ಕೇದಾರ್ ಅವರ ಅಜ್ಜ ಲಕ್ಷ್ಮಣರಾವ್ ಬೋಡಸ್ ಅವರು ಗಾಯನಾಚಾರ್ಯ ಪಂ.ವಿಷ್ಣು ದಿಗಂಬರ್ ಪಲುಸ್ಕರ್ ಅವರ ನೇರ ಶಿಷ್ಯರು. ತಮ್ಮ ಪ್ರತಿಭೆಯಿಂದ ಬಹು ಬೇಗ ಪಲುಸ್ಕರ್ ಅವರಿಂದ ಗುರುತಿಸಿಕೊಂಡ ಅವರು, ತಮ್ಮ ಮಗ ನಾರಾಯಣ ಬೋಡಸ್ ಅವರಿಗೂ ಸಂಗೀತಾಭ್ಯಾಸ ಮಾಡಿಸಿದರು. ಮುಂದೆ ಮೊಮ್ಮಗ ಕೇದಾರ್ ಅವರಿಗೂ ಬಾಲ್ಯದಿಂದಲೇ ಶಿಸ್ತುಬದ್ಧವಾದ ಅಡಿಪಾಯವನ್ನು ಹಾಕಿಕೊಟ್ಟರು. ಪಲುಸ್ಕರ್ ಅವರು ಕರಾಚಿಯಲ್ಲಿ ಸ್ಥಾಪಿಸಿದ ಗಂಧರ್ವ ಮಹಾವಿದ್ಯಾಲಯವನ್ನು ನಡೆಸುವ ಜವಾಬ್ದಾರಿಯನ್ನು ಹೊತ್ತವರು ಲಕ್ಷ್ಮಣರಾವ್. ಸಂಗೀತದ ಪ್ರಸಾರಕ್ಕಾಗಿ ಜೀವನವನ್ನೇ ಮುಡಿಪಾಗಿಟ್ಟ ಪಲುಸ್ಕರ್ ಪರಂಪರೆಯ ಕಲಾಕಾರರು ಬೋಡಸ್.

ಪುಣೆಯಲ್ಲಿ ನಡೆದ ಅವರ ಕೊನೆಯ ಕಾರ್ಯಕ್ರಮ ಮತ್ತು ಸಂದರ್ಶನದಲ್ಲಿ ಕೇದಾರ್ ತಮ್ಮ ಸಂಗೀತ ಶಿಕ್ಷಣ ಮತ್ತು ಗುರುಗಳ ಬಗ್ಗೆ ಸವಿಸ್ತಾರವಾಗಿ ಮಾತನಾಡಿದ್ದಾರೆ. ಬಾಲ್ಯದಲ್ಲಿ ಅಜ್ಜ ಅವರನ್ನು ಕಾಲಲ್ಲಿ ಕೂರಿಸಿಕೊಂಡು 'ರಾಮರಾಮ' ಎನ್ನುವುದನ್ನು ಸ್ವರಬದ್ಧವಾಗಿ ಕಿವಿಯಲ್ಲಿ ಉಸುರುತ್ತಾ, ಸ್ವರಗಳ ಪರಿಚಯ ಮಾಡಿಸುತ್ತಿದ್ದರಂತೆ. ಮುಂದೆ ವೃದ್ಧಾಪ್ಯದ ಕಾರಣದಿಂದ ಲಕ್ಷ್ಮಣರಾವ್ ಅವರಿಗೆ ಹೇಳಿಕೊಡುವುದು ಕಷ್ಟವಾದಾಗ ಬೋಡಸ್ ಅವರ ಸಂಬಂಧಿಯೇ ಆದ ಅಪರೂಪದ ಕಲಾಕಾರ, ಚಿಂತಕ, ಸಂಗೀತಜ್ಞ, ಸಂಶೋಧಕ ಪಂ.ಅಶೋಕ ರಾನಡೆ ಅವರ ಬಳಿ ಸುಮಾರು 30 ವರ್ಷಗಳ ಕಾಲ ಅಭ್ಯಾಸ ನಡೆಸಿದರು. ಕಟ್ಟುನಿಟ್ಟಿನ ಶಿಸ್ತಿಗೆ ತಮ್ಮನ್ನು ಒಳಪಡಿಸಿಕೊಂಡ ರಾನಡೆ ಗುರೂಜಿ ಬಳಿ ತಮ್ಮ ಅಭ್ಯಾಸ ಎಂಥ ಸವಾಲಿನದ್ದಾಗಿತ್ತು ಎಂಬುದನ್ನು ಕೇದಾರ್ ತಮ್ಮ ಆ ಸಂದರ್ಶನದಲ್ಲಿ ವಿವರವಾಗಿ ತಿಳಿಸಿದ್ದಾರೆ. ಆದರೆ, ಆ ಶಿಸ್ತಿನಿಂದ ತಮಗೆ ಜೀವನದಲ್ಲಿ ಮುಂದೆ ತುಂಬ ಅನುಕೂಲವಾದದ್ದನ್ನೂ ಸ್ಮರಿಸುತ್ತಾರೆ.

ಕೇದಾರ್ ಬೋಡಸ್ ಅವರ ಬಳಿ ಗ್ವಾಲಿಯರ್ ಘರಾಣೆಯ ಹಲವು ಧಾರೆಗಳ ಎಲ್ಲಾ ಖಾಸ್ ರಾಗಗಳು, ಅಪರೂಪದ ಬಂದಿಶ್‌ಗಳು, ಜೋಡ್ ರಾಗಗಳು, ಖ್ಯಾಲ್‌ನುಮಾ, ತರಾನಾಗಳು, ತಾಲದ ವಿವಿಧ ಮುಖಗಳನ್ನು ತೋರಿಸುವ ರಚನೆಗಳು ಹೀಗೆ ಬಹುದೊಡ್ಡ ಖಜಾನೆಯಿತ್ತು. ಅವರ ಗಾಯನ ನಿರ್ಮಲವಾದ ಜಲಧಾರೆಯಂಥದ್ದು. ಅದರಲ್ಲಿ ಸ್ವರ-ಲಯ-ರಾಗಗಳ ಅತ್ಯಂತ ಸೂಕ್ಷ್ಮ ಅಭ್ಯಾಸವಿತ್ತು. ತಾವು ರಾಗದೊಳಗೆ ಮುಳುಗಿ ಒಂದಾಗಿ, ಕೇಳುಗರನ್ನೂ ಆವರಿಸುವ ಭಾವತೀವ್ರತೆ ಇತ್ತು. ಕೇದಾರ್ ಅವರ ಗಾಯನದಲ್ಲಿ ನನ್ನ ಗುರುಗಳಾದ ನಾರಾಯಣ ಪಂಡಿತರು ಹೇಳುವ ಮಾನವೀಯಗೊಳಿಸುವ ಮತ್ತು ನಾಟಕೀಯಗೊಳಿಸುವ ಅಂಶಗಳಿದ್ದವು. ಅಲ್ಲಿ ಭರಪೂರವಾದ ತುಂಬುಕಂಠದ ಆಕಾರಯುಕ್ತ ಆಲಾಪ-ಸುಸ್ಪಷ್ಟ ಬೋಲ್ ಬನಾವ್‌ಗಳ-ಅರ್ಥಬದ್ಧವಾದ ಸ್ವರಾವಳಿಗಳ-ರಾಗದ ಸಾರವನ್ನೇ ತುಂಬಿಕೊಡಬಹುದಾದ ವೇಗದ ತಾನ್‌ಗಳಿಂದ ಕೂಡಿದ ಶಿಸ್ತುಬದ್ಧ ಆವರ್ತನವಿರುತ್ತಿತ್ತು. ಪ್ರತಿ ಕಾರ್ಯಕ್ರಮದಲ್ಲಿಯೂ ಅವರು ಹೊರತೆಗೆಯುತ್ತಿದ್ದ ರಾಗಗಳ ಮತ್ತು ಬಂದಿಶ್‌ಗಳ ಸರಕು, ಅವರ ಅಭ್ಯಾಸದ ಆಳ ಮತ್ತು ಪ್ರೀತಿಯನ್ನು ಹೇಳುತ್ತಿದ್ದವು. ಗಡ್ಡ ನೀವಿಕೊಳ್ಳುತ್ತಾ, ಕೈಯ ಬೆರಳುಗಳನ್ನು ಆಡಿಸುತ್ತಾ ಹಾಡುತ್ತಿದ್ದರೆ, ಹೊಳೆಯುವ ಕಂಗಳ ಮುಂದೆ ಇವರಿಗೆ ಆ ರಾಗದರ್ಶನವೇ ಆಗುತ್ತಿದೆಯೋ ಎಂಬಂತೆ ಭಾಸವಾಗುತ್ತಿತ್ತು. ಕಾರ್ಯಕ್ರಮವನ್ನು ಆರಂಭಿಸುವ ಮೊದಲು ತಬಲಾ, ಹಾರ್ಮೋನಿಯಂ ವಾದಕರು ಮಾತ್ರವಲ್ಲದೆ ತಂಬೂರ ನುಡಿಸುವ ತಮ್ಮ ಶಿಷ್ಯರಿಗೂ ನಮಸ್ಕರಿಸುವ ವಾಡಿಕೆಯನ್ನು ಅವರು ಇಟ್ಟುಕೊಂಡಿದ್ದರು.



ಕೇದಾರ್ ಬೋಡಸ್

ತಮ್ಮ ಗುರುಗಳಾದ ಅಶೋಕ ರಾನಡೆಯವರ ಆಣತಿಯಂತೆ ಯಾವುದಾದರೊಂದು ವಿಷಯದಲ್ಲಿ ಪದವಿ ಇರುವುದು ಅವಶ್ಯಕ ಎಂಬುದನ್ನು ಒಪ್ಪಿದ ಕೇದಾರ್ ಅವರನ್ನು ಸೆಳೆದದ್ದು ರಷ್ಯನ್ ಭಾಷೆ ಮತ್ತು ರಷ್ಯನ್ ಸಂಗೀತ. ಈ ವಿಷಯದಲ್ಲಿ ನಾಲ್ಕು ವರ್ಷಗಳ ಕೋರ್ಸ್ ಮಾಡುತ್ತಾ, ರಷ್ಯನ್ ಸಂಗೀತದ ಒಳ ಹೊರಗನ್ನು ಚೆನ್ನಾಗಿ ಅರಿತರು. ಅಲ್ಲಿನ ಸಂಚಾರಗಳನ್ನು ನಮ್ಮ ರಾಗಗಳಿಗೆ ಅನ್ವಯಿಸಿದಲ್ಲಿ, ಯಾವ ರೀತಿಯ ಹೊಸ ಎಫೆಕ್ಟನ್ನು ಪಡೆಯಬಹುದು ಎಂದೂ ವಿವರಿಸಿದ್ದಾರೆ.

ಅಶೋಕ ರಾನಡೆಯವರ ಶಿಷ್ಯೆ, ಕೇದಾರ್ ಅವರೊಂದಿಗೆ ಸಂಗೀತಾಭ್ಯಾಸ ಮಾಡಿದ ಗಾಯಕಿ ಕಲ್ಯಾಣಿ ಸಾಳುಂಕೆ ಅವರು ಕೇದಾರ್ ತೀರಿಕೊಂಡ ಮೇಲೆ ಸಂತಾಪ ವ್ಯಕ್ತಪಡಿಸುತ್ತಾ, ಕೇದಾರ್ ಅವರ ಇನ್ನೊಂದು ಸ್ನೇಹಮಯಿ-ಪ್ರೇಮಮಯಿ ಮುಖವನ್ನು ಪರಿಚಯಿಸಿದರು. ಗುರುಗಳ ಮುಂದೆ ಬರೆದುಕೊಳ್ಳಲು ಅನುಮತಿ ಇಲ್ಲದ ಕಾರಣ ಪಾಠದ ನಂತರ ಹಿರಿಯ ಸಹಪಾಠಿಯಾಗಿದ್ದ ಕೇದಾರ್ ಅವರು ಹೇಗೆ ನೆರವಾಗುತ್ತಿದ್ದರು, ಅಗತ್ಯದ ದಿನಗಳಲ್ಲಿ ತಮ್ಮನ್ನು ಮನೆಯವರೆಗೆ ಬಿಡಲು ಪ್ರತಿನಿತ್ಯ ಕೇದಾರ್ ಬಹುದೂರ ಪ್ರಯಾಣ ಮಾಡುತ್ತಿದ್ದುದರ ಬಗ್ಗೆ ಅವರು ಹೃದಯಸ್ಪರ್ಶಿಯಾಗಿ ಬರೆದುಕೊಂಡಿದ್ದಾರೆ. ಗ್ವಾಲಿಯರ್ ಘರಾಣೆಯ ಮತ್ತೋರ್ವ ಪ್ರಸಿದ್ಧ ಗಾಯಕಿ ವಿ.ಅಪೂರ್ವಾ ಗೋಖಲೆ 'ಕೇದಾರ್ ಅವರಂತೆ ಪ್ರೀತಿಯಿಂದ ವಿದ್ಯೆ ಪಡೆದವರನ್ನು, ಪಡೆದ ವಿದ್ಯೆಯನ್ನು ಜತನದಿಂದ ಕಾಪಾಡುತ್ತಲೇ ಅದರ ಬಗ್ಗೆ ಸತತವಾದ ಮನನ-ಚಿಂತನಗಳನ್ನು ನಡೆಸಿ ವಿದ್ಯೆಯನ್ನು ಬೆಳೆಸಿಕೊಂಡ ಇನ್ನೊಬ್ಬರನ್ನು ನಾನು ಕಂಡಿಲ್ಲ. ಹಾಗೆಯೇ ಅವರಂತೆ ವಿದ್ಯೆಯನ್ನು ಧಾರೆಯೆರೆಯುವವರನ್ನೂ ಕಂಡಿಲ್ಲ' ಎಂದಿದ್ದಾರೆ.

ಅವಿವಾಹಿತರಾಗಿ ಉಳಿದು ತಮ್ಮ 60 ವರ್ಷಗಳ ಜೀವನದಲ್ಲಿ ಕೇವಲ ಸಂಗೀತೋಪಾಸನೆ ಮಾಡಿದವರು ಕೇದಾರ್. ಅವರ ಶಿಷ್ಯರಲ್ಲಿ ಭಾಗ್ಯೇಶ್ ಮರಾಠೆ, ಪ್ರಾಜಕ್ತಾ ಮರಾಠೆ, ಶ್ರುತಿ ವಿಶ್ವಕರ್ಮಾ, ವಿಶ್ವೇಶ್ ಸರ್‌ದೇಶಪಾಂಡೆ ಮುಂತಾದವರು ಭರವಸೆ ಮೂಡಿಸಿದ್ದಾರೆ.

ಹುಬ್ಬಳ್ಳಿಯ ಗಂಗೂಬಾಯಿ ಗುರುಕುಲದಲ್ಲಿ ಗುರುಗಳಾಗಿ ಕೆಲವು ವರ್ಷ ಸೇವೆ ಸಲ್ಲಿಸಿದರೂ ಕೊನೆಯಲ್ಲಿ ಅಲ್ಲಿಂದ ಹೊರಬರಬೇಕಾಯಿತು. ನಮ್ಮ ಕರ್ನಾಟಕದಲ್ಲೇ ಹಲವು ಕಾಲ ಇದ್ದರೂ ಕೇದಾರ್ ಅವರ ಸಂಗೀತ ಸುಧೆಯನ್ನು ಸವಿಯುವ ಅವಕಾಶವನ್ನು ನಾವು ಪಡೆದದ್ದು ತುಂಬಾ ಕಡಿಮೆ. ❖

ಸಪ್ಪೆ ಅನ್ಬೇಡ, ಒಂದ್ಕಲ್ ಉಪ್ಪಾಕು ಅನ್ನು

ಮೊದಲ ಪುಟದಿಂದ...

ಇಂಥ ಸಂಗತಿಗಳು ಈ ಕಾಲದ ಅಮ್ಮಂದಿರ ಹೊಣೆಗಾರಿಕೆಯನ್ನು ಇನ್ನೂ ಹೆಚ್ಚಿಸುತ್ತವೆ. ಹೆಣ್ಣಿನ ಬಹುಪಾತ್ರಗಳಲ್ಲಿ ನಿರ್ಣಾಯಕವಾದುದು ತಾಯ್ತನದ ಪಾತ್ರವೇ. ಕಾಲ ಬದಲಾಗುತ್ತಿದೆ, ಅಪ್ಪಂದಿರು ಹೊಣೆಗಾರಿಕೆಯನ್ನು ಹೊರುತ್ತಿದ್ದಾರೆ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ ಅದನ್ನು ಸಾಮಾನ್ಯೀಕರಿಸಲು ಸಾಧ್ಯವೇ ಇಲ್ಲ. ಅದು ಮನೆ ಮನೆಯ ಬದಲಾವಣೆ ಎಂದು ಹೇಳಲಾಗುವುದಿಲ್ಲ.

ಆ ಕಾಲದ ಅಮ್ಮಂದಿರಿಗೆ ಆರೋ ಹತ್ತೋ ಕೈಗಳಿದ್ದವೇನೋ ಈ ಕಾಲದ ಅಮ್ಮಂದಿರಿಗೆ ಇಪ್ಪತ್ತು ಕೈಗಳಿದ್ದರೂ ಸಾಲದು. ಈ ಕಾಲದ ಅಮ್ಮಂದಿರು ಆ ಕಾಲದವರಿಗಿಂತ ಮಹತ್ವಾಕಾಂಕ್ಷಿಗಳು. ಅವರಿಗೆ ಮಕ್ಕಳು 'ಯಶಸ್ವಿ'ಯಾಗಬೇಕು ಎನ್ನುವ ಗುರಿ. ಅದು ಅವರ ನಿರ್ಣಯವೋ ಆಯ್ಕೆಯೋ ಆಗದಿರಬಹುದು, ಅದು ಈ ಕಾಲದ ಚಲನೆಯೇ ಇರಬಹುದು, ಆದರೆ ಈ ಒತ್ತಡ ಅವರ ಮೇಲೆ ಇರುವುದಂತೂ ನಿಜ. ಅವರನ್ನು ಎಲ್ಲ ಸಾಧ್ಯತೆಗಳಿಗೆ ಒಡ್ಡಿ ಅವರ ಆಯ್ಕೆಗೆ ಅವರನ್ನು ಬಿಡಬೇಕು ಎನ್ನುವ ನಂಬಿಕೆ ಅವರ ಕಾರ್ಯಭಾರವನ್ನು ಇನ್ನಿಲ್ಲದಂತೆ ಹೆಚ್ಚಿಸುತ್ತದೆ. ಸಂಗೀತ, ನೃತ್ಯ, ಅಬಾಕಸ್, ಈಜು, ಕ್ರಿಕೆಟ್, ಟೆನಿಸ್ ...ಈ ಪಟ್ಟಿ ಮುಗಿಯಲಾರದು. ಈ ಎಲ್ಲದಕ್ಕೂ ಅವರನ್ನು ತಾವೇ ಕಳಿಸಬೇಕು, ಇಲ್ಲವೇ ವ್ಯವಸ್ಥೆ ಮಾಡಬೇಕು, ಇಲ್ಲವೇ ಅಯ್ಯೋ ಯಾಕೆ ರಜಾದಲ್ಲೂ ಮಗೂನ ಮನೇಲಿ ಕೊಳೆ ಹಾಕಿದೀರಿ ಸೇರಿಸಿ ಎನ್ನುವ ಉಪದೇಶ ಕೇಳಬೇಕು. ಈ ಯಾವುದರ ಪರ, ವಿರುದ್ಧ ನನ್ನ ವಾದವಿಲ್ಲ. ತಾಯಿಯ ಅವಸ್ಥೆಯನ್ನು ಗುರುತಿಸುವ ಪ್ರಯತ್ನ ಮಾತ್ರ. ಇವತ್ತಿನ ಯಶಸ್ವಿ ವ್ಯಕ್ತಿತ್ವ ಮತ್ತು ಬದುಕಿನ ಮಾದರಿಗೆ ತಾಯಿಯಾದವಳು ಪಡಬೇಕಾದ ಪಾಡು ಇದು. ಈ ಎಲ್ಲವನ್ನೂ ತಾಯಂದಿರು ಶಕ್ತವಾಗಿ ಮಾಡಿ ಮುಗಿಸುವುದರ ಬಗೆಗಾಗಲೀ, ಅದರಿಂದ ಅವಳು ಪಡುವ ಸಂತೋಷವನ್ನಾಗಲೀ ನಾನು ಅಲ್ಲಗಳೆಯುತ್ತಿಲ್ಲ. ಆದರೆ ಎಲ್ಲವನ್ನೂ ನಿಭಾಯಿಸಿಯೂ ಅವಳಿಗೆ ಸಿಗಬೇಕಾದ ಅಧಿಕೃತತೆ, ಗೌರವ ಸಿಗದೇ ಇರುವುದು ಮಾತ್ರ ವಿಷಾದವನ್ನು ಹುಟ್ಟಿಸುತ್ತದೆ. ಭಾರತದ ಅನೇಕ ಮಧ್ಯ ವಯಸ್ಸಿನ ತಾಯಂದಿರು ಖಿನ್ನತೆಯಿಂದ ಬಳಲುತ್ತಿದ್ದಾರೆ ಎನ್ನುತ್ತದೆ ಅಧ್ಯಯನವೊಂದು. ಅದರ ಮೂಲ ಈ ಅತಿ ಒತ್ತಡವೇ ಇರಬಹುದು. ಇನ್ನೂ ಒಂದು ಅಂಶವಿದೆ. ಉದ್ಯೋಗಸ್ಥ ಅಮ್ಮಂದಿರು ಏನೆಲ್ಲ ಮಾಡಿಯೂ ಅವರಲ್ಲಿ ಅಕಾರಣವಾದ ಪಾಪಪ್ರಜ್ಞೆಯೂ ಇರುತ್ತದೆ. ಕ್ವಾಲಿಟಿ ಸಮಯವೂ ಸೇರಿದಂತೆ , ಊಟೋಪಚಾರ, ಶಿಕ್ಷಣ ಎಲ್ಲವನ್ನೂ ತಮ್ಮ ಶಕ್ತಿ ಮೀರಿ ನಿಭಾಯಿಸಿದ ಮೇಲೂ ನಮ್ಮಿಂದ ಏನೋ ಕೊರತೆಯಾಯಿತೇನೋ ಎನ್ನುವ ಭಾವವೊಂದು ಈ ಕಾಲದ ಅನೇಕ ಅಮ್ಮಂದಿರಲ್ಲಿ ಅಕಾರಣವಾಗಿ ಉಳಿದು ಅವರನ್ನು ಸತತವಾಗಿ ಕಾಡುತ್ತದೆ. ಇರಬೇಕಿಲ್ಲ, ಇದು ಅಕಾರಣ ಎಂದು ನಮ್ಮ ಬುದ್ಧಿ ಎಷ್ಟು ಹೇಳಿದರೂ ಅನೇಕ ಬಾರಿ ನಮ್ಮ ಮನಸ್ಸು ಇದನ್ನು ಒಪ್ಪುವುದಿಲ್ಲ. ಆ ಮಕ್ಕಳು ಯಶಸ್ವಿಯಾಗದೇ ಹೋದರಂತೂ ಸಾಯುವವರೆಗೂ ಅದು ಉಳಿಯುತ್ತದೆ. ಇದನ್ನೇ ನಾನು ಕರಾರು ಎಂದು ಹೇಳುತ್ತಿರುವುದು. ಗಂಡಾಳಿಕೆಯು ಅಗೋಚರವಾದ ಒಪ್ಪಂದಗಳಲ್ಲಿ ಹೆಣ್ಣನ್ನು ಕಟ್ಟಿ ಹಾಕುವುದರಲ್ಲಿ ನಿಸ್ಸೀಮ, ಅದರಲ್ಲಿ ಮುಖ್ಯವಾದುದು ತಾಯ್ತನದ್ದು. ಇದರಿಂದ ಪಾರಾಗಲು ಅಮ್ಮಂದಿರೂ ಮುಂದಾಗಬೇಕು. ಮತ್ತದೇ ಕಷ್ಟದ ಹಾದಿಯ ಪಯಣ ಇದು ಕೂಡ.

'ತಾಯ್ತನ' ಎನ್ನುವುದು ಒಂದು ಮನಃಸ್ಥಿತಿ ಮಾತ್ರವಲ್ಲ ಇದೊಂದು ಬದುಕಿನ ವಿನ್ಯಾಸ. ಅಮ್ಮಂದಿರ ದಿನದಂದು ನಾವು ಹೆಚ್ಚು ಯೋಚಿಸಬೇಕಾಗಿರುವುದು ಈ ಸಂಗತಿಯ ಬಗ್ಗೆ. ತಾಯ್ತನವೆಂದರೆ, ಅದೊಂದು ಅದಮ್ಯ ಜೀವನ ಪ್ರೀತಿ. ಜೀವ ಪ್ರೀತಿ. ತಾಯ್ತನವು ಎಂದಿಗೂ ಜೀವಿಗಳನ್ನು ದ್ವೇಷಿಸುವುದಿಲ್ಲ, ಬದುಕನ್ನು ನಿರಾಕರಿಸುವುದಿಲ್ಲ. ಏನೆಂಥ ಬಿಕ್ಕಟ್ಟಿರಲಿ ಅದನ್ನು ದಾಟಿ, ಈಜಿ, ಮೀರಿ, ಪಕ್ಕಕ್ಕಿರಿಸಿ ಬದುಕನ್ನು ಪ್ರೀತಿಸಬೇಕು ಎನ್ನುವ ಜೀವನ ಪಾಠವನ್ನು ಅಮ್ಮ, ಅಮ್ಮತನ ಕಲಿಸುವಂತೆ ಮತ್ತಾವುದೂ ಕಲಿಸಲಾರದು.

'ಸಪ್ಪೆ ಅನ್ಬೇಡ ಒಂದ್ಕಲ್ ಉಪ್ಪಾಕು ಅನ್ನು'

ಇದು ತಾಯ್ತನದ ಜೀವನ ಮೀಮಾಂಸೆ. ಎಷ್ಟು ಸರಳವಾದ ಆದರೆ ಘನವಾದ ನಡೆ ಮತ್ತು ನುಡಿ. ಸಪ್ಪೆ ಎನ್ನುವ ನೈರಾಶ್ಯಕ್ಕಿಂತ ಒಂದೇ ಒಂದು ಕಲ್ಲು ಉಪ್ಪು ಹಾಕಿಕೊಂಡು ಬದುಕನ್ನು ರುಚಿ ಮಾಡಿಕೊಳ್ಳುವ ದಾರಿ ಬದುಕಿಗೆ ನಾವು ಸಲ್ಲಿಸುವ ಗೌರವ. ಬದುಕು ಎಷ್ಟೇ ಕಷ್ಟಗಳನ್ನು ಎದುರಿಗೆ ತಂದು ನಿಲ್ಲಿಸಲಿ, ಬದುಕು ಹೆಣ್ಣಿಗೆ ಹುಟ್ಟುಗುಣವಾದ ಜೀವನ ಪ್ರೀತಿಯು ಮೀಮಾಂಸೆಯಾಗಿ ಬದುಕಿನ ದಾರಿಯಾಗಿ ರೂಪುಗೊಳ್ಳುವುದು ಅವಳ ತಾಯ್ತನದ ವಿಸ್ತಾರದಲ್ಲಿ. ಮತ್ತೆ ಹೇಳುತ್ತೇನೆ, ಇದನ್ನು ಕೇವಲ ಜೈವಿಕತೆಗೆ ಸೀಮಿತವಾಗಿಸುವ ಅಗತ್ಯವಿಲ್ಲ. 'ನಾನು ಅರ್ಧ ಹೆಣ್ಣು' ಎಂದ ಗಾಂಧಿ ತಾಯಾಗುವ ದಾರಿಯನ್ನು ತನ್ನ ಬದುಕಿನ ಕೊನೆಯ ದಿನಗಳ ಪರಮ ಗುರಿಯಾಗಿಸಿಕೊಂಡಿದ್ದರು. ಬೆಂಗಳೂರಿನಲ್ಲಿ ಅತ್ಯಾಧುನಿಕ ಮನೆ ಕಟ್ಟಿಸಿಯೂ ಹಿಂದೆ ನೀರೊಲೆ ಉಳಿಸಿಕೊಂಡು, ನಾನು ರಜಾಕ್ಕೆ ಬಂದಾಗಲೆಲ್ಲ ಒಲೆಗೆ ಉರಿ ಹಾಕಿ , ಎಣ್ಣೆ ಹಚ್ಚಿಕೊಂಡು ಸ್ನಾನ ಮಾಡಮ್ಮ ಎನ್ನುತ್ತಿದ್ದ ನನ್ನ ಅಪ್ಪಾಜಿ, ಎಷ್ಟೇ ಹೊತ್ತಿನಲ್ಲಿ ಸಿಕ್ಕರೂ 'ಊಟ ಆತೇನು' ಎಂದು ಕೇಳುತ್ತಿದ್ದ ಕಲಬುರಗಿ ಮೇಷ್ಟ್ರು, ನನಗಾಗದಿದ್ದ ಒಂದು ಸಂದರ್ಭದಲ್ಲಿ ನನ್ನ ತಂದೆ ತಾಯಿಯನ್ನು ವೈದ್ಯರ ಬಳಿ ಕರೆದೊಯ್ದ, ಅವರ ಮನೆಗೆ ಹೋದಾಗಲೆಲ್ಲ ಏನಾದರು ಕೊಟ್ಟೇ ಕೊಡುತ್ತಿದ್ದ, ಒಮ್ಮೆ ಏನೂ ಇರದಾಗ ಮನೆಯಲ್ಲಿದ್ದ ರಾಗಿ ಹಿಟ್ಟನ್ನು ಕೊಟ್ಟು ಬರೀ ಕೈಯಲ್ಲಿ ಕಳಿಸಬಾರದು ಎಂದ ಕಿ.ರಂ ಇವರಲ್ಲಿಯೂ ಇದ್ದ ಅಮ್ಮಂದಿರನ್ನು ಇವತ್ತು ನಾವು ನೆನೆಯಬೇಕು. ಎಲ್ಲರ ಬದುಕಿನಲ್ಲಿಯೂ ಇಂಥ ಕೆಲವು ಅಮ್ಮಂದಿರು ಇದ್ದೇ ಇರುತ್ತಾರೆ. ಇಂಥವರ ಸಂತತಿ ಸಾವಿರ, ಲಕ್ಷ, ಕೋಟಿಯಾಗಬೇಕು.

ಒಡಲಾಳದ ಸಾಕವ್ವನೋ, ಲಂಕೇಶರ ಅವ್ವನೋ, ಗರ್ಕಿಯ ತಾಯಿಯೋ ಇವರೆಲ್ಲರೂ ಜಗತ್ತಿನ ಎಲ್ಲ ಕಾಲದ ಅಮ್ಮಂದಿರು. ಕೆಎಸ್‌ನ ಅವರ 'ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ' ಕವಿತೆಯಲ್ಲಿನ ಅಮ್ಮ ಮಾತ್ರ ನಾವು ಆಶಿಸುತ್ತಿರುವ, ಕನಸುತ್ತಿರುವ ಅಮ್ಮ. ಆ ಅಮ್ಮನನ್ನು ಗುರುತಿಸುತ್ತಿರುವುದು ಮಗ ಎನ್ನುವುದು ಈ ನಮ್ಮ ಕಾಲದ ಅಗತ್ಯವನ್ನು ಇನ್ನೂ ಒತ್ತಿ ಹೇಳುತ್ತದೆ. ಅಪ್ಪತನವನ್ನು ಬೇಕಾದಾಗ ತನ್ನ ಸವಲತ್ತಾಗಿ ಬಳಸಿಕೊಳ್ಳುವ, ತನ್ನ ಉತ್ತರಾಧಿಕಾರಿಯ ಆಮಿಷ ತೋರಿಸಿ ಅಮ್ಮನನ್ನು ಬಿಟ್ಟು ಮಗನನ್ನು ಮಾತ್ರ ಸೆಳೆದುಕೊಳ್ಳುವ ಗಂಡಾಳಿಕೆಯ ಸ್ವಾರ್ಥ, ಕ್ರೌರ್ಯವನ್ನು ಮಗ ಧಿಕ್ಕರಿಸಿ ಹೇಳುತ್ತಾನೆ,

ಪರ್ವತಾರಣ್ಯಗಳ ಸಿಂಹ ಶಿಬಿರಗಳಲ್ಲಿ
ನನ್ನ ಬೆಳೆಸಿದಳಂತೆ ಅಗ್ನಿ ಕುವರಿ
ಆ ವಸುಂಧರೆಯ ಮಗ ನಾನು
ಪೊರೆದಳಂತಮೃತವನೆ ಸೂಸಿ

ತಾಯಿಯನ್ನು ಒಪ್ಪದ ನಿನ್ನ ಸಿಂಹಾಸನ ಕಸಕ್ಕಿಂತ ಕಡೆ ಎನ್ನುವ ಮೂಲಕ ಇಲ್ಲಿನ ಮಗ ತಾಯ್ತನದ ಕಡೆಗೆ ಚಲಿಸುತ್ತಾನೆ. ತಾಯ ಅಮೃತದ ಎದುರಿಗೆ ಅಧಿಕಾರ ಅವನಿಗೆ ವಿಷವಾಗಿ ಕಾಡುತ್ತದೆ.

ತಾಯ್ತನದ ಅಪೂರ್ವ ಶಕ್ತಿಯನ್ನೂ, ಯಾರ, ಯಾವುದರ ಹಂಗಿಲ್ಲದ ಅದರ ಸ್ವಯಂಪೂರ್ಣತೆಯನ್ನೂ ಕಾಣ್ಕೆಯಂತೆ ಕಟ್ಟಿಕೊಟ್ಟಿದ್ದಾರೆ ಕೆಎಸ್‌ನ ಇಲ್ಲಿ: ಈ ಸ್ವಯಂಪೂರ್ಣ, ಸ್ವಯಂದೀಪ್ತ ತಾಯ್ತನವನ್ನು ಲೋಕ ಆವಾಹಿಸಿಕೊಳ್ಳಲಿ, ತಾಯ ಪ್ರೀತಿಯ ಸಹಿಷ್ಣುತೆಯ, ಸಹಬಾಳ್ವೆಯ ದಾರಿ ದಕ್ಕಲಿ ಎಲ್ಲರಿಗೂ.

ಬಂದ ಬಾಗಿಲು ಮಣ್ಣು : ಬಿಡುವ ಬಾಗಿಲು ಮಣ್ಣು
ನಡುವೆ ಕಾಪಾಡುವುದು ತಾಯ ಕಣ್ಣು. ❖

ಭಾವಕೋಶದಲ್ಲಿ 'ಬಲರಾಮ'

ಮೊದಲ ಪುಟದಿಂದ...

ಹಿಂದಿನ ದಿನವಷ್ಟೇ ಅವರು, ಬಲರಾಮನ ಸಮಾಧಿಗೆ ಹೋಗಿ ಹಾಲು-ತುಪ್ಪ ಹಾಕಿ ಬಂದಿದ್ದರು.

ಅವರ ಪೂರ್ಣ ಹೆಸರು ತಿಮ್ಮಣ್ಣ. ಆದರೆ ಸುದೀರ್ಘ 19 ವರ್ಷ ಬಲರಾಮನೊಂದಿಗೆ ಬೆಸೆದುಕೊಂಡ ಬದುಕು ಅರಣ್ಯ ಇಲಾಖೆಯ ಎಲ್ಲರ ಪ್ರೀತಿಯ 'ತಿಮ್ಮ'ನನ್ನಾಗಿಸಿದೆ. ಅವರಿಬ್ಬರೂ ಬೇರೆಬೇರೆಯಲ್ಲ.

ಕೊಡಗಿನ ಸೋಮವಾರಪೇಟೆಯ ಕಟ್ಟೆಪುರದ ಅರಣ್ಯ ಪ್ರದೇಶದಲ್ಲಿ 1987ರಲ್ಲಿ ಸೆರೆಯಾಗಿ ಕ್ಯಾಂಪ್‌ಗೆ ಬಂದಂದಿನಿಂದ, ಇದೇ ಮೇ ತಿಂಗಳಲ್ಲಿ, 67ನೇ ವಯಸ್ಸಿನಲ್ಲಿ ಕ್ಷಯದಿಂದ ನರಳಿ ಕೊನೆಯುಸಿರೆಳೆಯುವವರೆಗೆ, ಬಲರಾಮನ ಜೀವನಚರಿತ್ರೆಯಲ್ಲಿ ತಿಮ್ಮಣ್ಣ ಅವರೊಂದಿಗಿನ ಸಹಜೀವನ ಮಹತ್ವದ ಘಟ್ಟ ಎಂಬುದು ಇಲಾಖೆಯವರಿಗೆ ಚೆನ್ನಾಗಿ ಗೊತ್ತು.

ಜಂಬೂಸವಾರಿ ನೋಡಿರುವವರಿಗೆ ಅದು 'ಜಂಬೂಸವಾರಿಯ ಅಲಂಕೃತ, ಆಕರ್ಷಕ ಆನೆ'ಯಷ್ಟೆ. ಆದರೆ, ಅರಸು ಪರಂಪರೆಯ ದಸರಾ ಉತ್ಸವದ ಚರಿತ್ರೆಯಲ್ಲಿ ದಾಖಲೆ ನಿರ್ಮಿಸಿರುವ 'ಜಂಬೂ ಸವಾರಿಯ ಬಲರಾಮ'ನಿಗೂ, ಉತ್ಸವದ ನಂತರ ಉಳಿಯುವ ಕಾಲದ 'ಕಾಡಿನ ಕ್ಯಾಂಪ್ ಜೀವಿ' ಬಲರಾಮನಿಗೂ ಅಜಗಜಾಂತರ.

ತಿಮ್ಮಣ್ಣನಂಥವರಿಗೆ, ಕ್ಯಾಂಪ್‌ನಲ್ಲಿರುವವರಿಗೆ, ಅಧಿಕಾರಿ, ಸಿಬ್ಬಂದಿಗೆ ಅದೊಂದು ಅಪರೂಪದ, ಸಾಧುಗುಣದ ಆನೆ. ತಿಮ್ಮಣ್ಣನವರ ಮಾತಿನಲ್ಲಿ ಹೇಳುವುದಾದರೆ, ಬಲರಾಮನೆಂಬ ಹೆಸರಿದ್ದರೂ ಅದು 'ಹಸುವಿನಂಥ ಸೌಮ್ಯ ಸ್ವಭಾವದ ಆನೆ'.

'ತುಂಬಾ ಸಾಧು. ಮದ ಕಟ್ಟಿದಾಗ ಮಾತ್ರ ನಾನೇ ಇರಬೇಕಿತ್ತು. ಬೇರೆ ಟೈಮಲ್ಲಿ ಯಾರಿದ್ದರೂ ನಡೀತಿತ್ತು. ಚಿಕ್ಕಮಕ್ಕಳೇ ಸಾಕಿತ್ತು. ಎಷ್ಟೇ ಶಕ್ತಿವಂತನಾದರೂ ಹಸು ತರಹ ಇದ್ದ. ಯಾರಿಗೂ ಹಾಯಂಗಿಲ್ಲ, ಒದೆಯಂಗಿಲ್ಲ' ಎನ್ನುವಾಗ ತಿಮ್ಮಣ್ಣ ಕಣ್ತುಂಬಿಕೊಂಡರೂ ಅಪ್ರಯತ್ನಪೂರ್ವಕವಾಗಿ ನಕ್ಕರು. ಅದು ಬಲರಾಮನೊಂದಿಗಿನ ಒಡನಾಟದ ಖುಷಿಯಲ್ಲದೆ ಬೇರೇನೂ ಆಗಿರಲಿಲ್ಲ.

ಅದು ಅವರಷ್ಟೇ ಕಂಡುಕೊಂಡ ಸತ್ಯವಾಗಿರಲಿಲ್ಲ. ಕ್ಯಾಂಪ್‌ನಲ್ಲಿದ್ದವರೆಲ್ಲರಿಗೂ ಅನುಭವಕ್ಕೆ ಬಂದಿದ್ದ ಸತ್ಯ. ಕಾಡಿನಿಂದ ಕ್ಯಾಂಪಿಗೆ ಬರುವ ಆನೆಗಳು ತಮ್ಮ ಸ್ಥಳದಲ್ಲಿ ನಿಲ್ಲದೆ ತುಂಟಾಟವಾಡಿದರೆ, ಬಲರಾಮ ಮಾತ್ರ ತನ್ನ ಹೆಸರುಳ್ಳ ಫಲಕದ ಕಬ್ಬಿಣದ ರಾಡ್ ಮೇಲೆ ಸೊಂಡಿಲು ಹಾಕಿ ಸಾತ್ವಿಕವಾಗಿ ನಿಂತುಬಿಡುತ್ತಿತ್ತು. ತಿಮ್ಮಣ್ಣ ಎದುರಿಗಿಲ್ಲದಿದ್ದರೂ ಸರಿ. ಅದು ಮಾವುತನೆಡೆಗಿನ ಶಿಸ್ತು, ವಿಧೇಯತೆಯ ಪ್ರತೀಕ. ಪ್ರತಿ ಜಂಬೂಸವಾರಿಯೂ ಯಶಸ್ವಿಯಾಗುತ್ತಿದ್ದುದು ಬಲರಾಮನ ಈ ಸದ್ಗುಣದಿಂದಲೇ. ಆದರೆ, ಕಟ್ಟೆಪುರದಲ್ಲಿ ಸೆರೆ ಸಿಕ್ಕ ಕಾಲಕ್ಕೆ ಅದು ಅತಿ ತುಂಟ, ಹಿಂಡಿನೊಂದಿಗೆ ತೋಟಗಳಿಗೆ ನುಗ್ಗಿ ಬೆಳೆನಾಶ ಮಾಡುತ್ತಿದ್ದ ಹೆಂಡಕುಡುಕ ದಾಳಿಕೋರ ಆನೆ ಎಂಬ ದಾಖಲೆಯೂ ಇದೆ.

ಸೆರೆಯಾಗುವ ಮುನ್ನ ಕಾಡಾನೆಯೊಂದಿಗೆ ಕಾಳಗಕ್ಕಿಳಿದು ಎಡಗಣ್ಣನ್ನು ಕಳೆದುಕೊಂಡು, ಬಲಗಣ್ಣಿನಲ್ಲೇ ನೋಡುತ್ತಿತ್ತು. ಅದರ ಒಕ್ಕಣ್ಣಿನ ದೃಷ್ಟಿ ಜಂಬೂಸವಾರಿಗೆ ಎಂದೂ ಅಡಚಣೆಯಾಗಿರಲಿಲ್ಲ. ಐದಾರು ವರ್ಷಗಳಿಂದ ಬಲಗಣ್ಣಿನ ದೃಷ್ಟಿಯೂ ಕ್ಷೀಣಿಸಿದ್ದರೂ ಕ್ಯಾಂಪ್‌ನಿಂದ ಕಾಡಿಗೆ ಹೋಗಿ ಬರುತ್ತಿತ್ತು. ಕ್ಯಾಂಪ್‌ನಲ್ಲಿದ್ದ ಚಿಕ್ಕ ಆನೆಗಳಿಗೆ ತರಬೇತಿಗೆ ಅದನ್ನು ಬಳಸಲಾಗುತ್ತಿತ್ತು.

ಮಾವುತ-ತರಬೇತಿ ಸರಿಯಾಗಿದ್ದರೆ ಆನೆಯೂ ಸರಿಯಾಗಿರುತ್ತದೆ ಎಂಬುದಕ್ಕೆ ತಿಮ್ಮ-ಬಲರಾಮ ಜೋಡಿ ಅತ್ಯುತ್ತಮ ನಿದರ್ಶನ. ಮಾವುತರಾದ ದೊಡ್ಡಣ್ಣ, ಗೋಪಾಲ ಮೂರು ಬಾರಿ ಅಂಬಾರಿ ಹೊರಿಸಿದ್ದು ಬಿಟ್ಟರೆ ಉಳಿದ 10 ಬಾರಿಯೂ ತಿಮ್ಮಣ್ಣನವರದ್ದೇ ನೇತೃತ್ವ. ಅಂಬಾರಿ ಹೊತ್ತ ಬಲರಾಮನೊಂದಿಗೆ ಫೋಟೊ ತೆಗೆಸಿಕೊಂಡಿರುವ ಅಸಂಖ್ಯ ಅಭಿಮಾನಿಗಳೂ ಇದಕ್ಕೆ ಸಾಕ್ಷಿ.


ಬಲರಾಮನನ್ನು ಸೆರೆಹಿಡಿಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ 'ಅಭಿಮನ್ಯು' ಈಗ ಕೆಲ ವರ್ಷಗಳಿಂದ ಜಂಬೂಸಾವರಿಯ ಉಸ್ತುವಾರಿ. ಕಾಲ ಹೇಗೆಲ್ಲಾ ಬದಲಾಗುತ್ತದೆ ನೋಡಿ.

'ದ್ರೋಣ'ನ ಅಕಾಲಿಕ ಮರಣದ ನಂತರದ ಸ್ಥಾನವನ್ನು ಸಮರ್ಥವಾಗಿ ತುಂಬಿದ ಕೀರ್ತಿ ಬಲರಾಮನದ್ದು. ಅವನಿಗಿಂತ ಮುಂಚೆ ಅರ್ಜುನನಿದ್ದ. ಐದಾರು ವರ್ಷ ಸಾಲಾನೆಯಾಗಿ ಉತ್ಸವದಲ್ಲಿ ಪಾಲ್ಗೊಂಡ ನಂತರ ಬಲರಾಮ ಅಂಬಾರಿ ಆನೆಯಾದ.

2012ರಿಂದ ಬಲರಾಮನಿಗೆ ಅಂಬಾರಿ ಹೊರುವ ಅವಕಾಶ ಕೊಟ್ಟಿರಲಿಲ್ಲ. 2020ರಿಂದ ಉತ್ಸವಕ್ಕೆ ಕರೆತಂದಿರಲಿಲ್ಲ.

ಚಿಟ್ಟಪ್ಪ ಡಾಕ್ಟರ್ ನೆನಪು: ಬಲರಾಮನ ಕುರಿತ ತಿಮ್ಮಣ್ಣನವರ ಭಾವಕೋಶದಲ್ಲಿ ಚಿಟ್ಟಪ್ಪ (ಡಾ.ಬಿ.ಸಿ.ಚಿಟ್ಟಿಯಪ್ಪ) ಡಾಕ್ಟರ್‌ಗೂ ಮುಖ್ಯಸ್ಥಾನವಿದೆ. ಅರಣ್ಯ ಇಲಾಖೆಯ ಪಶುವೈದ್ಯಾಧಿಕಾರಿಯಾಗಿದ್ದ ಚಿಟ್ಟಪ್ಪ ಡಾಕ್ಟರ್ ಕಾಲದಲ್ಲೇ ಬಲರಾಮನನ್ನು ಸೆರೆಹಿಡಿಯಲಾಗಿತ್ತು. ಹಿಡಿದ ಕಾಡಲ್ಲೇ ಪಳಗಿಸಿ, ಯಾವ ಕ್ಯಾಂಪ್‌ಗೆ ಕಳುಹಿಸಬೇಕೆಂದು ನಿರ್ಧರಿಸಿದ್ದರು. ಬಲರಾಮನೊಂದಿಗೆ ವಿಕ್ರಮನನ್ನೂ ಹಿಡಿದಿದ್ದರು. ಬಲರಾಮನ ಬ್ಯಾಚ್ ಆನೆ ರಾಜೇಂದ್ರ ಅಂತ ಇತ್ತು. ಅದು ಬಲರಾಮನಿಗಿಂತ ಒಳ್ಳೇ ಆನೆ. ಅದು ಮಾರಾಟವಾಯಿತು. ಆವಾಗಿನಿಂದ ಬಲರಾಮ ತಿಮ್ಮಣ್ಣನವರಿಗೆ ಪರಿಚಯ.

ದಸರಾ ಬಂತು... 'ಒಮ್ಮೆ ದಸರಾ ಬಂತು. ದ್ರೋಣನಿರಲಿಲ್ಲ. ಅಂಬಾರಿ ಹೊರುವಂಥ ಆನೆಯೇ ಇಲ್ಲ. ಆಗ ಮಾವುತರಾದ ದೊಡ್ಡಣ್ಣ, ಗೋಪಾಲ ಇದ್ದರು. ಅಣ್ಣಯ್ಯ ಸಾಹೇಬ್ರು ಡಿಸಿಎಫ್. ತಪ್ಪಿಸಿಕೊಂಡಿದ್ದ ಬಲರಾಮ ಆನೆಯನ್ನು ಹುಡುಕಿಸಿ ಹಿಡಿದು ನನಗೇ ಕೊಟ್ಟರು. ನನಗೆ ಲಕ್ಷ್ಮಣ ಆನೆಯೇ ಸಾಕು ಸಾರ್. ಬಲರಾಮನನ್ನು ಈಗ ನೋಡಿಕೊಳ್ಳುತ್ತಿರುವವರೇ ನೋಡಿಕೊಳ್ಳಲಿ ಎಂದೂ ಹೇಳಿದ್ದೆ. ಅವರು ಒಪ್ಪಲಿಲ್ಲ. ಅಲ್ಲಿಂದ ಒಬ್ಬ ಮಾವುತರು ಆರು ತಿಂಗಳು ನೋಡಿಕೊಂಡರು. ನಾನು ಆಗ ಟೆಂಪರರಿ ನೌಕರನಾಗಿದ್ದೆ. ಆರು ತಿಂಗಳ ಬಳಿಕ ನಾನೊಬ್ಬನೇ ನೋಡಿಕೊಳ್ಳುತ್ತಿದ್ದೆ. ಸಣ್ಣಪ್ಪನಿಗೆ ಜವಾಬ್ದಾರಿ ವಹಿಸಿದರು. ಅವ್ರು ರಿಟೈರು ಆದ ಮೇಲಿಂದ ಇದುವರೆಗೂ ನೋಡಿಕೊಂಡೆ'.



ಆಕರ್ಷಿಸಿದ್ದ ಸೌಮ್ಯ 'ಬಲರಾಮ'

ತಿಮ್ಮ–ಬಲರಾಮನ 'ಪ್ರಿಯತನ'

'ಪ್ರತಿಯೊಂದು ಮನೆಯಲ್ಲೂ ಗಂಡ–ಹೆಂಡ್ತಿ ನಡುವೆಯೇ ಹೊಂದಾಣಿಕೆ ಇರಲ್ಲ. ಗೆರೆ ಪರೆ ಬಂದುಬಿಡ್ತದೆ. ಬಲರಾಮನೊಂದಿಗೆ ಅಂಥ ಯಾವ ಒಡಕಿಲ್ಲದೆ ಹೊಂದಾಣಿಕೆಯಲ್ಲಿದ್ದೆ. ನಮ್ಮ ಪ್ರಿಯತನ ಅಷ್ಟು ಚೆನ್ನಾಗಿತ್ತು' ಎಂದು ತಿಮ್ಮಣ್ಣ ಕಣ್ತುಂಬಿಕೊಂಡರು.

ಆನೆ ಭಾಷೆಯ ಆಳ ಅಗಲವನರಿತಿದ್ದ ಅವರು, ಬಲರಾಮನೊಂದಿಗಿನ ಬಾಂಧವ್ಯಕ್ಕೆ'ಪ್ರಿಯತನ' ಎಂಬ ಪರಿಭಾಷೆಯನ್ನೂ ಕೊಟ್ಟರು.

'ಮಾವುತ ದೊಡ್ಡಣ್ಣನವರಿಗೆ ಸಹಾಯಕನಾಗಿದ್ದಾಗ, ಬಲರಾಮನ ಸರಪಳಿ ಬಿಚ್ಚುತ್ತಿದ್ದೆ. ಆ ವಿಶ್ವಾಸದ ಮೇಲೆ ಇಷ್ಟು ವರ್ಷ ನೋಡಿಕೊಂಡೆ. ಸೀನಿಯಾರಿಟಿ ಮೇಲೆ ಬಂದು ಹೋದವರಿಗೆಲ್ಲ ಅದು ಗೌರವ ಕೊಟ್ಟಿಲ್ಲ. ನನ್ನ ತಂದೆ ಸತ್ತಾಗಲೂ ನಾನು ಜೀವದ ಸಮೇತ ನೋಡಿಲ್ಲ. ಆದರೆ ಯಾವತ್ತೂ ಆನೆ ಹತ್ರನೇ ಇದ್ದೆ. ಗುಂಡಿಗೆ ಹಾಕೋ ಟೈಮಲ್ಲಿ ಹೋಗಿ ನೋಡಿದೆ ಅಷ್ಟೆ..'

ಅವರ ಮಾತುಗಳಲ್ಲಿ ಕಾಲ ಹಿಂದಕ್ಕೆ ಮುಂದಕ್ಕೆ ಚಲಿಸಿದರೂ ಭಾವಕೋಶ ಮಾತ್ರ ಬಲರಾಮನೊಂದಿಗೇ ನಿಲ್ಲುತ್ತಿತ್ತು.

2022ರ ಡಿಸೆಂಬರಿನಲ್ಲಿ ಭೀಮನಕಟ್ಟೆ ಕ್ಯಾಂಪ್ ಸಮೀಪ, ತೋಟಕ್ಕೆ ನುಗ್ಗಿತೆಂದು ರೈತರೊಬ್ಬರು ಗುಂಡು ಹಾರಿಸಿದ್ದರಿಂದ ಗಾಯಗೊಂಡಿದ್ದ ಬಲರಾಮ, ನಂತರ ಚೇತರಿಸಿಕೊಂಡಿತ್ತು.

'ನೋವಿದ್ದಾಗ ಮೈ ಇಳಿದಿತ್ತು. ಮತ್ತೆ ಮೈ ಬರುವಂಗೆ ಮಾಡಿದೆ. ದಶರದಲ್ಲಿ ಬಂದ ಆನೆ ತರಹ ಮಾಡಿದ್ದೆ. ಶರೀರದ ಮೇಲೆ ಸಮಸ್ಯೆ ಇದ್ದಿದ್ದರೆ, ಏನು ಬೇಕಾದರೂ ಮಾಡ್ತಿದ್ದೆ. ಡಾಕ್ಟ್ರನ್ನೂ ಕರೆಸ್ತಿರಲಿಲ್ಲ. ಕಾಡು ಔಷಧ ಚಕ್ಕೆ, ಪಕ್ಕೆ ಎಲ್ಲ ಬೆಂಕೀಲಿ ಹಾಕಿ ಸುಟ್ಟು ರೆಡಿ ಮಾಡ್ತಿದ್ದೆ. ಒಳಗಡೆ ಸಮಸ್ಯೆ ಆಗಿದ್ದರಿಂದ ನನಗೆ ಗೊತ್ತಾಗಲಿಲ್ಲ' ಎಂದು ತಿಮ್ಮಣ್ಣ ಮತ್ತೆ ಕಣ್ಣೀರಾದರು.

'ನಾನೊಬ್ಬ ಮಾವುತ, ಕಾವಾಡಿ ಎಂದು ಆನೆಯನ್ನು ನೋಡಿಕೊಳ್ಳುವುದಲ್ಲ. ನನ್ನ ಡಿಪಾರ್ಟ್‌ಮೆಂಟ್‌ನ ಅಧಿಕಾರಿ ಯಾರೇ ಬಂದರೂ ಧೈರ್ಯವಾಗಿ ಬಲರಾಮನನ್ನು ಮುಟ್ಟಿ ಹೋಗಬೇಕೆಂಬ ಭಾವನೆಯಲ್ಲೇ ಅದನ್ನು ನೋಡಿಕೊಂಡಿದ್ದೆ. ನನಗೆ 52 ವರ್ಷವಾಗಿರಬಹುದು. ಆನೆಗಳ ಆಯಸ್ಸು 120 ವರ್ಷ. ಆದರೆ ಈಗ ಮನುಷ್ಯರ ರೇಂಜಿಗೆ ಬಂದಿದೆ. ಗಾಯವಾಗದೇ ಇದ್ದಿದ್ದರೆ ಬಲರಾಮ ಇನ್ನೊಂದಿಪ್ಪತ್ತು ವರ್ಷ ಬದುಕಿರುತ್ತಿತ್ತು' ಎಂದು ತಿಮ್ಮಣ್ಣ ನೋವಿನ ನಿಟ್ಟುಸಿರಿಟ್ಟರು.

'ಒಂದು ವಾರ ನನ್ನ ಹೆಂಡ್ತಿ, ಮಕ್ಕಳಿಲ್ಲದಿದ್ದರೂ ಚಿಂತೆ ಇರಲಿಲ್ಲ. ನಾನು ಎದ್ದು ಬಿದ್ದು ಇದರ ಜೊತೆಲೇ ಇದ್ದೆ. 'ಎಲ್ರೂ ಆನೆ ಸಾಕ್ತಾರೆ, ನಿನ್ ತರಹ ಯಾರೂ ಸಾಕಲ್ಲ' ಅಂತ ನಮ್ಮನೆಯವರು ಬೈಯ್ತಿದ್ದರು. 'ಅದಿದ್ರೆ ನಮಗೆ ಊಟ, ಸುಮ್ಮನಿರು' ಎನ್ನುತ್ತಾ ಆನೆ ಕಡೆ ಬಂದ್ಬಿಡ್ತಿದ್ದೆ. ಈಗ ಅವರೂ ನನ್ನಷ್ಟೇ ದುಃಖ ಪಡ್ತಿದ್ದಾರೆ'.

'ಹುಣಸೂರು ತಾಲ್ಲೂಕಿನ ಶೆಟ್ಟಹಳ್ಳಿಯಲ್ಲಿ ಸರ್ಕಾರ ಕೊಟ್ಟಿರೋ ಮೂರು ಎಕರೆ ಜಮೀನನ್ನೂ ನೋಡಿಕೊಂಡಿದ್ದೇನೆ. ಇನ್ನೇನು ಮಳೆ ಹಿಡ್ದಾಗ ಕ್ಯಾಂಪ್‌ನಲ್ಲೇ ಸೆಟ್ಲ್ ಆಗನ ಅಂತಿದ್ದೆ. ಆದರೆ ಅಷ್ಟರಲ್ಲಿ ಬಲರಾಮನೇ ಇಲ್ಲ. ಇಲ್ಲಿಗೆ ಬಂದು ಏನ್ ಮಾಡೋದು'

ಅವರ ಪ್ರಶ್ನೆಗೆ ಯಾರಲ್ಲೂ ಉತ್ತರವಿಲ್ಲ. ❖

ಮುನ್ನೋಟ 14-05-2023 ರಿಂದ -20-05-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಅತಿಯಾದ ಆತ್ಮ ಗೌರವ ಇರುತ್ತದೆ, ಇದು ನಿಮಗೆ ತೊಂದರೆಯನ್ನು ತರುವ ಸಾಧ್ಯತೆ ಸಹ ಇದೆ. ಇಲ್ಲಸಲ್ಲದ ಚಿಂತೆಗಳು ಮನಸ್ಸನ್ನು ಆವರಿಸಿಕೊಳ್ಳುತ್ತದೆ. ಹಣದ ಒಳಹರಿವು ಸಾಮಾನ್ಯಗತಿಯಲ್ಲಿರುತ್ತದೆ. ಪಾಕ ಪ್ರವೀಣರಿಗೆ ಹೆಚ್ಚಿನ ಕೆಲಸಗಳು ದೊರೆತು ಸಂಪಾದನೆ ಹೆಚ್ಚುತ್ತದೆ. ಆಹಾರ ದೋಷದಿಂದ ಅನಾರೋಗ್ಯ ಉಂಟಾಗಬಹುದು. ಆಸ್ತಿಕೊಳ್ಳುವ ವಿಚಾರದಲ್ಲಿ ಆಸ್ತಿ ದಾಖಲೆ ಪರಿಶೀಲನೆ ಬಹಳ ಮುಖ್ಯ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಆತ್ಮವಿಶ್ವಾಸ ವೃದ್ಧಿಸಿಕೊಂಡು ಕೆಲಸ ಕಾರ್ಯಗಳಲ್ಲಿ ಮಗ್ನರಾಗುವಿರಿ. ಹಲವು ದಿನಗಳಿಂದ ಕುಟುಂಬದವರೊಡನೆ ಇದ್ದ ಮನಸ್ತಾಪಗಳು ದೂರವಾಗುತ್ತವೆ. ಗಿಡಮೂಲಿಕೆ ಔಷಧಿಯನ್ನು ನೀಡುವವರಿಗೆ ಬೇಡಿಕೆ ಹೆಚ್ಚಾಗುತ್ತದೆ. ವೃತ್ತಿಯಲ್ಲಿದ್ದ ಸಮಸ್ಯೆಗಳು ತನ್ನಿಂದ ತಾನೇ ಬಗೆಹರಿಯುತ್ತವೆ. ಬಟ್ಟೆ ವ್ಯಾಪಾರಿಗಳಿಗೆ ವ್ಯಾಪಾರ ಹೆಚ್ಚಾಗಿ ಲಾಭ ಬರುತ್ತದೆ. ಆಸ್ತಿ ವಿಚಾರದಲ್ಲಿ ಹೆಚ್ಚು ಹಣ ಪೋಲಾಗುವ ಸಾಧ್ಯತೆ ಇದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಸಂಗಾತಿಯ ಅಭಿಪ್ರಾಯಗಳು ನಿಮಗೆ ಸರಿ ಕಾಣದಿರಬಹುದು. ಕೋರ್ಟ್ ಕಚೇರಿ ವ್ಯವಹಾರಗಳಲ್ಲಿ ಸ್ವಲ್ಪಮಟ್ಟಿನ ನಿರಾಳ ಕಾಣುತ್ತದೆ. ವೈಯಕ್ತಿಕ ವಿಚಾರಗಳನ್ನು ಯಾರಲ್ಲಿಯೂ ಹಂಚಿಕೊಳ್ಳಬೇಡಿರಿ. ಸಾಂಬಾರ ಪದಾರ್ಥಗಳನ್ನು ರಫ್ತು ಮಾಡುವವರಿಗೆ ಉತ್ತಮ ಬೇಡಿಕೆ ದೊರೆತು ಹೆಚ್ಚಿನ ಆದೇಶಗಳು ದೊರೆಯುತ್ತವೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಹಿಂದಿನ ಕಠಿಣ ಪ್ರಯತ್ನಗಳು ಫಲಕಾರಿಯಾಗಿ ಬರುತ್ತವೆ. ಹಂಗಾಮಿ ಕೆಲಸ ಮಾಡುವವರಿಗೆ ಖಾಯಂ ಕೆಲಸ ದೊರೆಯುವ ಸಾಧ್ಯತೆ ಇದೆ. ವರ್ಗಾವಣೆಯನ್ನು ಬಯಸುತ್ತಿರುವವರಿಗೆ ಆಶಿಸಿದ ಸ್ಥಳಕ್ಕೆ ವರ್ಗಾವಣೆ ದೊರೆಯುತ್ತದೆ. ಉದ್ದಿಮೆಗಳಲ್ಲಿ ಕೆಲಸಗಾರರ ಕೆಲವೊಂದು ಬೇಡಿಕೆಗಳು ಈಡೇರುತ್ತವೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ದೊರೆಯುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ವ್ಯಾವಹಾರಿಕವಾಗಿ ಕೆಲವು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲು ಈಗ ಕಾಲ ಸೂಕ್ತವಾಗಿದೆ. ಗುತ್ತಿಗೆದಾರರಿಗೆ ಅವರ ಯೋಜನೆಗಳನ್ನು ಇತರರು ಅಪೇಕ್ಷಿಸುವಂತೆ ಮಾಡುವ ಸಾಮರ್ಥ್ಯ ಒದಗಿಬರುತ್ತದೆ. ಹವ್ಯಾಸಿ ಬರಹಗಾರರಿಗೆ ಹೇರಳವಾದ ಅವಕಾಶಗಳು ದೊರೆಯುತ್ತವೆ. ಉದ್ಯೋಗ ನಿಮಿತ್ತ ದೂರದ ಪ್ರಯಾಣವನ್ನು ಮಾಡಲೇಬೇಕಾದ ಅನಿವಾರ್ಯತೆ ಒದಗಲಿದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಗೃಹೋಪಕರಣಗಳನ್ನು ತಯಾರಿಸಿ ಮಾರುವವರಿಗೆ ಹೆಚ್ಚು ವ್ಯಾಪಾರವಾಗುತ್ತದೆ ಹಾಗೂ ಆದಾಯ ಬರುತ್ತದೆ. ಇನ್ನೊಬ್ಬರಿಗೆ ಹಣ ಕೊಡುವಾಗ ಅಥವಾ ತೆಗೆದುಕೊಳ್ಳುವಾಗ ಹೆಚ್ಚು ಎಚ್ಚರ ವಹಿಸಿರಿ. ಉದ್ದಿಮೆದಾರರು ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದರಿಂದ ಹೆಚ್ಚು ಉತ್ಪಾದನೆಯನ್ನು ಮಾಡಬಹುದು.ಮಿತ್ರರಿಂದ ಸಹಾಯ ದೊರೆಯುವ ಸೂಚನೆಗಳಿವೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಹಣ ಹೂಡಿಕೆ ವಿಚಾರದಲ್ಲಿ ಹೆಚ್ಚು ಎಚ್ಚರವಹಿಸಿರಿ, ಹಣ ಮುಳುಗುವ ಸಾಧ್ಯತೆಗಳಿವೆ. ಅನಿರೀಕ್ಷಿತ ಕೌಟುಂಬಿಕ ಸವಾಲುಗಳು ಬರಬಹುದು. ಉಡುಪನ್ನು ವಿನ್ಯಾಸ ಮಾಡುವವರಿಗೆ ಬೇಡಿಕೆ ಹೆಚ್ಚಾಗುತ್ತದೆ. ರಾಜಕೀಯ ಪ್ರಚಾರಕರಿಗೆ ಪ್ರಚಾರ ಮಾಡಲು ಸೂಕ್ತ ಹಣದ ವ್ಯವಸ್ಥೆ ಆಗುತ್ತದೆ. ವಿದೇಶದಲ್ಲಿರುವ ತಮ್ಮ ಸಂಗಾತಿಗಳನ್ನು ಈಗ ಹೋಗಿ ಸೇರಿಕೊಳ್ಳುವ ಅವಕಾಶ ದೊರೆಯುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಬಂಧುಗಳ ಸಂತೋಷ ಸಮಾರಂಭಕ್ಕೆ ಹೋಗಿ ಬರುವಿರಿ. ಸೃಜನಶೀಲ ಯೋಜನೆಗಳಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಳ್ಳುವಿರಿ. ರಾಜಕೀಯ ವ್ಯಕ್ತಿಗಳ ಒಡನಾಟ ಅನಾಯಾಸವಾಗಿ ದೊರೆಯುತ್ತದೆ. ಹಿರಿಯ ಅಧಿಕಾರಿಗಳಿಗೆ ಸಹೋದ್ಯೋಗಿಗಳ ಅಸಹಕಾರ ಎದುರಾಗಬಹುದು. ಮಕ್ಕಳ ಜೊತೆಯಲ್ಲಿ ಹೆಚ್ಚು ಕಾಲ ಕಳೆಯುವ ಅವಕಾಶವಿದೆ. ಆಮದು ವಸ್ತುಗಳನ್ನು ಮಾರಾಟ ಮಾಡುವವರಿಗೆ ವ್ಯಾಪಾರ ವೃದ್ಧಿಸುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಶಿಲ್ಪಿಗಳಿಗೆ ಹೆಚ್ಚು ಪ್ರೋತ್ಸಾಹ ದೊರೆಯುತ್ತದೆ, ಅದರಲ್ಲೂ ಮರದ ಮೂರ್ತಿಗಳನ್ನು ತಯಾರಿಸುವವರಿಗೆ ಬೇಡಿಕೆ ಹೆಚ್ಚುತ್ತದೆ. ರಫ್ತು ವ್ಯಾಪಾರದಲ್ಲಿ ಹಿನ್ನಡೆ ಅನಿಸಿದರು ವ್ಯಾಪಾರಕ್ಕೆ ಧಕ್ಕೆ ಇರುವುದಿಲ್ಲ. ಕಾರ್ಯ ಕ್ಷೇತ್ರದಲ್ಲಿ ನಿಮ್ಮ ಕೆಲಸಕಾರ್ಯಗಳಿಗೆ ಅಡ್ಡಿಯಾದರೂ ಅಂತಿಮ ಜಯ ನಿಮ್ಮದೇ ಆಗಿರುತ್ತದೆ. ಯಾವುದೇ ವ್ಯಕ್ತಿಯ ಹೊಗಳಿಕೆಯ ಮಾತಿಗೆ ಮರುಳಾಗಿ ಹಣ ಹೂಡಿಕೆ ಮಾಡಬೇಡಿರಿ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಅನ್ವೇಷಣೆಯ ಸ್ವಭಾವವು ನಿಮ್ಮ ವ್ಯಕ್ತಿತ್ವಕ್ಕೆ ಹೊಸತಿರುವನ್ನು ಕೊಡುತ್ತದೆ. ಔದ್ಯೋಗಿಕ ವ್ಯವಹಾರವನ್ನು ಮಾಡುವವರಿಗೆ ಹೊಸ ಮಾರುಕಟ್ಟೆಗಳು ತೆರೆದುಕೊಳ್ಳುತ್ತವೆ. ಕೃಷಿ ಕಾರ್ಯಗಳು ಭರದಿಂದ ಸಾಗುತ್ತವೆ. ಹಿರಿಯ ಇಂಜಿನಿಯರ್‌ಗಳ ಕೆಲಸ ಕಾರ್ಯಗಳಲ್ಲಿ ಸಾಕಷ್ಟು ಬದಲಾವಣೆಯನ್ನು ಕಾಣಬಹುದು. ಎಣ್ಣೆ ಕಾಳುಗಳನ್ನು ವ್ಯಾಪಾರ ಮಾಡುವವರಿಗೆ ಹೆಚ್ಚು ಅಭಿವೃದ್ಧಿ ಆಗುತ್ತದೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಬರುವ ಅವಕಾಶಗಳನ್ನು ಬಳಸಿಕೊಂಡಲ್ಲಿ ಇನ್ನೂ ಹೆಚ್ಚಿನ ಅವಕಾಶಗಳು ದೊರೆಯುತ್ತವೆ. ಸುಗಂಧ ವಸ್ತುಗಳನ್ನು ಮಾರಾಟ ಮಾಡುವವರಿಗೆ ಹೆಚ್ಚಿನ ವ್ಯಾಪಾರ ನಡೆದು ಲಾಭವಾಗುತ್ತದೆ. ಕೃಷಿ ಉತ್ಪನ್ನಗಳಿಂದ ಹೆಚ್ಚಿನ ಆದಾಯವನ್ನು ನಿರೀಕ್ಷಿಸಬಹುದು. ಹೆಚ್ಚು ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಅವಕಾಶಗಳು ದೊರೆಯುತ್ತವೆ. ಸಂಗಾತಿ ನಿಮ್ಮೆಲ್ಲ ಕೆಲಸ ಕಾರ್ಯಗಳಿಗೆ ಒತ್ತಾಸೆಯಿಂದ ಜೊತೆಗೆ ನಿಲ್ಲುತ್ತಾರೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಈ ಹಿಂದೆ ನಿಮ್ಮ ಮೇಲಿದ್ದ ಆಪಾದನೆಗಳು ಈಗ ನಿಧಾನವಾಗಿ ಕರಗ ತೊಡಗುತ್ತದೆ. ಎಲ್ಲರನ್ನು ಗೌರವಯುತವಾಗಿ ನಡೆಸಿಕೊಳ್ಳುವುದು ಬಹಳ ಮುಖ್ಯ. ವೃತ್ತಿಪರವಾಗಿ ಸ್ಥಳ ಬದಲಾವಣೆಯಿಂದ ಕಷ್ಟವಾಗಬಹುದೆಂಬ ಶಂಕೆ ಬೇಡ, ಅಲ್ಲಿಯೂ ಸೂಕ್ತ ಸಹಾಯ ದೊರೆಯುತ್ತದೆ. ಮನೆಯವರ ಸಹಾಯದಿಂದ ನಿಮ್ಮ ಹಣಕಾಸಿನ ತೊಂದರೆಗಳು ದೂರಾಗುತ್ತವೆ.

ಪದಬಂಧ 2789



ಮೇಲಿನಿಂದ ಕೆಳಕ್ಕೆ

1. 'ಮರಾ ಮರಾ' ಎಂದು ಹಿಂದು ಮುಂದು ಹೇಳಿದಾಗ ಸೀತಾಪತಿಯ ಜಪವಾಗುತ್ತೆ 4
2. ಅಂತಿಮವಾಗಿ ಸಿಗುವ ಶ್ರೇಷ್ಠ ಸ್ಥಾನ 5
3. ಕುಣ ದಾಡುವ ಮಯೂರ ಕಾಯಿಪಲ್ಯೆಯಲ್ಲಿ ಸೇರಿದೆ 5
4. ಪವಿತ್ರವಾದ ಓಟು ಹಾಕಲು ಸಿದ್ಧಪಡಿಸಿದ ಜಗುಲಿ 4
8. ಬೇವಿನ ಕಹಿಗೆ ಸಾಕ್ಷಿಯಾದ ತರಕಾರಿ 5
10. ಮನಸ್ಸು ತಿವಿಯಲು ಬಳಸಬಹುದಾದ ಹರಿತವಾದ ನುಡಿ 5
11. ವಿಧಿಯಾಟವನ್ನು ಬಿಂಬಿಸುವ ಜನ್ಮಪತ್ರ 3
13. ಕನ್ನಡವೆನೆ ಮನ ಕುಣಿದಾಗ ಕಿವಿ ಹೇಗೆ ನಿಲ್ಲಬಹುದು 3
14. ಕುಲವನ್ನು ಒಟ್ಟಾಗಿಸುವ ಗುಂಪು 3
17. ಗುಂಪಿನ ಒಡೆಯ ಗೌರಿ ತನಯ 5
18. ಗದ್ದುಗೆ ಹಿಡಿಯಲು ರಾಜಕಾರಣಗಳ ಓಟು ಬೇಡಿಕೆ 5
19. ಬೆಳ್ಳಿತೆರೆ ಮೇಲೆ ವಿರಾಜಿಸುವ ನಕ್ಷತ್ರ ಗುಂಪು 4
21. ನೂಲನ್ನು ಹಿಡಿದ ಉತ್ತರ ಭಾರತದ ಸಂಬಂಧಿ 4

ಎಡದಿಂದ ಬಲಕ್ಕೆ

2. ಕೊನೆಯಲ್ಲಿ ತೋಟ ಸೇರುವ ಗಾಳಿ 3
5. ಸಾಯುವ ಸಮಯಕ್ಕೆ ಹಾಜರಾಗುವ ಕಾಲದೇವನ ಸೇವಕ 5
6. ಒಂದು ವಿಷಯದಿಂದ ಮತ್ತೊಂದು ವಿಷಯಕ್ಕೆ ಮಾತು ಬದಲಿಸುವ ಕಲೆ 5
7. ಇದು ಬೃಹತ್ ಯಜ್ಞ 4
9. ಸಭೆಯಲ್ಲಿ ಎಸೆಯಬಹುದಾದ ಕುಕ್ಕುಟದ ತತ್ತಿ 4
12. ತಿಂಡಿಯ ಜೊತೆ ಇದು ರೋಚಕ 3
15. ಸಂಗೀತಕ್ಕೆ ಶಕ್ತಿ ಕೊಡುವ ಚರ್ಮವಾದ್ಯ 3
16. ಮುಟ್ಟಿಸಬಹುದಾದಂತಹ ಬಿಸಿ ಪಾದರಸದಂತಹ ಗುಣ 3
17. ಅಷ್ಟಸಿದ್ಧಿಗಳಲ್ಲಿ ರೆಕ್ಕೆ ಬಿಚ್ಚಿದ್ದು 3
19. ಹಾಲುಣಿಸಿದ ಅಮ್ಮನಿಗೆ ಜನ್ಮಜನ್ಮಗಳಲ್ಲಿ ತೀರಿಸಬಹುದಾದ ಸಾಲ 4
20. ಆತುರಾತುರದಲ್ಲಿ ತುರಿ 4
22. ಸಂಗೀತದಲ್ಲಿ ಹಾಡಿನ ವಿಸ್ತಾರಗಳ ಸಂಗ್ರಹ 5
23. ಹಾಡಿನ ಪಾದದಲ್ಲಿರುವ ಸೇವಕ 5
24. ಒಂದು ದೊಡ್ಡ ಕಾಲಾವಧಿಯ ಊಹೆ 3

ಪದಬಂಧ ಉತ್ತರ -2788

ಮೇಲಿಂದ ಕೆಳಕ್ಕೆ

1.ಖಳನಾಯಕ 2.ಗಜಾನನೆ 3.ರಾಮದಾಸ 4.ತ್ರಸರ 6.ಸುಮನ 7.ಕೆಳಮನೆ 8.ರುಚಿಕ 10.ಇಂಪುಕಂಪು 12.ಸಾಹಸಿ 14.ಮುಂಗಾರು 16.ನಿತ್ಯಾವತಾರ 18.ಹಿಮಾಲಯ 19.ನಗರಾಜ 21.ಕ್ಷಿತಿಜ

ಎಡದಿಂದ ಬಲಕ್ಕೆ

1.ಖಗಮೃಗ 3.ರಾಜತಂತ್ರ 5.ರಕ್ಷಿಸು 7.ಕೆನೆಮೊಸರು 9.ಕವಳ 10.ಇಂಧನ 11.ಮನಸಾ 13.ಕರಪು 14.ಮುಂಜಾನೆ 15.ಕಂಬನಿ 17.ಸಿಹಿನೆನಪು 20.ರುದ್ರಾಕ್ಷಿ 22.ಜವರಾಯ 23.ಜತಿಸ್ವರ

ಚಿನಾರ್ ಮರದ ಕಥಾಸಾರ



ಫಲಕಗಳಿರುವ ಚಿನಾರ್ ವೃಕ್ಷಗಳು

ಅಶೋಕ ಹಾಸ್ಯಗಾರ

‘ನಾನು ಚಿನಾರ್’, ಪ್ಲಾಟಿನಸ್ ಓರಿಯೆಂಟಲ್ಸ್ ಎಂದೂ ವೈಜ್ಞಾನಿಕ ಸಮುದಾಯದವರು ನನ್ನನ್ನು ಗುರುತಿಸುತ್ತಾರೆ. ನಾನು ಕಳೆದ ಸುಮಾರು ಮುನ್ನೂರ ಎಂಬತ್ತು ವರ್ಷಗಳಿಂದ ಈ ಮುಘಲ್ ಗಾರ್ಡನ್‌ನ ಶಾಲಿಮಾರ್ ಉದ್ಯಾನವನದಲ್ಲಿದ್ದೇನೆ. ನಾನು ಕಿರೀಟಪ್ರಾಯವಾಗಿ ಬಹು ವಿಸ್ತರಿತ ಅಪರೂಪದ ಟೊಂಗೆಗಳಿಂದ ಕಂಗೊಳಿಸುತ್ತಿದ್ದೇನೆ. ನಾನೊಬ್ಬ ಅನನ್ಯವಾದ ಸುಂದರ ವಾಸ್ತು ವಿನ್ಯಾಸದಲ್ಲಿ ಮತ್ತು ಪ್ರೀತಿ ಪ್ರೇಮದ ಸಂಕೇತವಾಗಿ ನೈಸರ್ಗಿಕ ಸಾಕ್ಷಿಯೆನಿಸಿದ್ದೇನೆ. ಜನರು ನನ್ನ ಮಡಿಲಲ್ಲಿ ಕುಳಿತುಕೊಂಡು ತಮ್ಮ ಅನುಭವ ಹಂಚಿಕೊಂಡು ನೆಮ್ಮದಿಯನ್ನು ಪಡೆಯುತ್ತಾರೆ. ನಾನು ಅವರ ಧೋರಣೆ, ಸದ್ಗುಣಗಳನ್ನು ನನ್ನೊಳಗೆ ಹೀರಿಕೊಂಡು ಸುಂದರ ಎಲೆಗಳಾಗಿ ಅರಳಿಕೊಳ್ಳುತ್ತೇನೆ. ನನ್ನ ಜೊತೆಯಲ್ಲಿಯೇ ಇನ್ನೂ ಅನೇಕ ಚಿನಾರ್ ಮರಗಳು ಕಾಶ್ಮೀರ ಕಣಿವೆಯ ಉದ್ದಗಲಕ್ಕೂ ನೆಲೆಯೂರಿ ಸೌಂದರ್ಯದ ಕಣಿಯೆನ್ನಿಸಿಕೊಂಡಿವೆ. ನನ್ನ ಇನ್ನಷ್ಟು ಬಂಧು-ಬಾಂಧವರನ್ನು ನೋಡಿ ಕಣ್ತುಂಬಿಕೊಳ್ಳಬೇಕೆಂದರೆ ಕಾಶ್ಮೀರದ ವಿವಿಧ ಕಡೆಗಳಲ್ಲಿರುವ ಮುಘಲ್ ಗಾರ್ಡನ್‌ಗಳಿಗೂ ಭೇಟಿ ನೀಡಬಹುದು.’

ಈ ಅರ್ಥ ಕೊಡುವ ಒಕ್ಕಣಿಕೆಯು ಕಾಶ್ಮೀರದ ಮುಘಲ್ ಗಾರ್ಡನ್‌ನ ಶಾಲಿಮಾರ್ ಉದ್ಯಾನದಲ್ಲಿ ಕೆಲವು ಬೃಹತ್ ಗಾತ್ರದ ಮರಗಳ ಕೆಳಗಡೆ ನಿಲ್ಲಿಸಿಟ್ಟ ಹಸಿರು ಬಣ್ಣದ ಫಲಕಗಳಲ್ಲಿದೆ. ಮರಗಳ ವರ್ಷದ ಸಂಖ್ಯೆ ಬೇರೆ ಬೇರೆಯಾಗಿದೆ ಎನ್ನುವುದನ್ನು ಬಿಟ್ಟರೆ ಉಳಿದ ವರ್ಣನೆಗಳು ಹೀಗೇ ಇವೆ. ಜಮ್ಮು ಮತ್ತು ಕಾಶ್ಮೀರ ಸರ್ಕಾರದ ಪುಷ್ಪಕೃಷಿ ಇಲಾಖೆಯ ನಿರ್ವಹಣೆಯಲ್ಲಿರುವ ಈ ಉದ್ಯಾನವು ಯುನೆಸ್ಕೋದ ವಿಶ್ವ ಪಾರಂಪರಿಕ ಪಟ್ಟಿಯಲ್ಲಿ ದಾಖಲಾಗಿದೆ. ಕಾಶ್ಮೀರ ಕಣಿವೆಯಲ್ಲಿ ವಿವಿಧ ಮಾದರಿಯ ಹಲವು ಉದ್ಯಾನಗಳಿದ್ದು, ಅವುಗಳಲ್ಲಿ ಈ ಚಿನಾರ್ ವೃಕ್ಷಗಳೇ ಆಕರ್ಷಣೆ. ಇವುಗಳಲ್ಲಿ ಅತ್ಯಂತ ಹೆಸರು ಮಾಡಿದ ಚಿನಾರ್ ವೃಕ್ಷಗಳೆಂದರೆ ದಾಲ್ ಸರೋವರದ ಮಧ್ಯೆ ಇರುವ ಚಾರ್ ಚಿನಾರ್ ನಡುಗಡ್ಡೆಯಲ್ಲಿರುವಂಥವು.



ದಾಲ್ ಸರೋವರದಲ್ಲಿನ ಚಾರ್ ಚಿನಾರ್

ಚಿನಾರ್ ವೃಕ್ಷಗಳ ಮೂಲ

ಚಿನಾರ್ ವೃಕ್ಷಗಳು ಕಾಶ್ಮೀರ ಕಣಿವೆಯ ಮೂಲ ವನಸ್ಪತಿಯಲ್ಲ. ಕಾಶ್ಮೀರಿ ಮುಸ್ಲಿಮರ ಪ್ರಕಾರ 14ನೇ ಶತಮಾನದಲ್ಲಿ ಇಸ್ಲಾಮಿ ಧಾರ್ಮಿಕ ಪ್ರವಚನಕಾರರು ಇರಾನ್‌ನಿಂದ ತಮ್ಮೊಡನೆ ಇದರ ಸಸ್ಯವನ್ನೋ, ಬೀಜವನ್ನೋ ತಂದಿದ್ದರು. ಕಾಶ್ಮೀರಿ ಹಿಂದೂಗಳ ನಂಬುಗೆಯ ಪ್ರಕಾರ, ಕಾಶ್ಮೀರದ ಹಿಂದೂ ಪವಿತ್ರ ಸ್ಥಳಗಳಲ್ಲಿ ಸಾಂಪ್ರದಾಯಿಕ ರೀತಿ ರಿವಾಜಿನಂತೆ ನೆಟ್ಟು ಬೆಳೆಸುತ್ತಿದ್ದರು. ಈ ಚಿನಾರ್ ವೃಕ್ಷಗಳು ಭವಾನಿದೇವಿಗೆ ಸಂಬಂಧಿಸಿದ್ದೆಂದು ಭಾವಿಸಲಾಗಿದೆ. ಛತ್ತರ್‌ಗಾಂವ್‌ನಲ್ಲಿರುವ ಒಂದು ಚಿನಾರ್ ವೃಕ್ಷವು ಅತ್ಯಂತ ಪ್ರಾಚೀನವಾದದ್ದೆಂದೂ, ಕ್ರಿ.ಶ. 1374ರಲ್ಲಿ ಇಸ್ಲಾಮಿ ಅನುಭಾವಿ ಸಯ್ಯದ್ ಅಬ್ದುಲ್ ಕೈಮ್ ಹಮದಾನಿ ಹಾಗೂ ಜೊತೆಗಾರ ಮೀರ್ ಸಯಿದ್ ಅಲಿ ಹಮದಾನಿ ಇರಾನಿನಿಂದ ತಂದು ನೆಟ್ಟಿದ್ದಾರೆಂದು ಹಲವು ಕಾಶ್ಮೀರಿಗಳು ಹೇಳುತ್ತಾರೆ.

> ಕಾಶ್ಮೀರದಲ್ಲಿನ ಚಿನಾರ್ ಮರಗಳು ಅಲ್ಲಿನ ಹಿರಿಮೆ. ಶರತ್ಕಾಲದಲ್ಲಿ ಅವು ತುಸು ಹಳದಿ ಬಣ್ಣಕ್ಕೆ ತಿರುಗಿದಾಗ ಶಾಲಿಮಾರ್ ಉದ್ಯಾನ ಕಳೆಗಟ್ಟುವುದನ್ನು ನೋಡಲೆಂದೇ ಪ್ರವಾಸಿಗರು ಭೇಟಿ ನೀಡುವುದು ಸಹಜ. ಆ ಮರಗಳ ಕಥಾಸಾರ ಇದೋ...

ಮುಂದೆ ಮುಘಲರು ಚಿನಾರ್ ವೃಕ್ಷಗಳನ್ನು ಕಾಶ್ಮೀರದ ಭೌಗೋಳಿಕ ಸೌಂದರ್ಯೀಕರಣಕ್ಕೆ ಬಳಸತೊಡಗಿದರಲ್ಲದೇ ಅದನ್ನು ತಮ್ಮ ಗೃಹವೈಭವಕ್ಕೆ, ಕಟ್ಟಿಗೆಯ ಕಲಾತ್ಮಕ ರಚನೆಗಳಿಗೆ ಉಪಯೋಗಿಸಲಾರಂಭಿಸಿದರು. ಅವರ ನಂತರ ಡೊಗ್ರಾ ರಾಜರೂ ಚಿನಾರ್ ವೃಕ್ಷಗಳ ಸಂರಕ್ಷಣೆಗೆ ಮುಂದಾದರು.

ಈ ವೃಕ್ಷಗಳ ಬಳಕೆಯು ವ್ಯಾಪಕವಾಗಿ ಆಗುತ್ತಿದ್ದಂತೆ ಅಕ್ರಮವಾಗಿ ಕಡಿಯತೊಡಗಿದ್ದರಿಂದ ಚಿನಾರ್ ವೃಕ್ಷಗಳ ಬೆಳವಣಿಗೆಗೆ ಧಕ್ಕೆಯುಂಟಾಗತೊಡಗಿತು. ಇದನ್ನರಿತ ಸ್ವತಂತ್ರ ಭಾರತದ ಜಮ್ಮು ಮತ್ತು ಕಾಶ್ಮೀರ ಸರ್ಕಾರವು 2009ರ ಮಾರ್ಚ್ 5 ರಂದು ಕಾಶ್ಮೀರದಲ್ಲಿ ಚಿನಾರ್ ವೃಕ್ಷಗಳನ್ನು ಕಡಿಯುವುದರ ಮೇಲೆ ನಿರ್ಬಂಧ ಹೇರಿತಲ್ಲದೆ, ಚಿನಾರ್ ವೃಕ್ಷವು ರಾಜ್ಯ ಸರ್ಕಾರದ ಸೊತ್ತೆಂದು ಘೋಷಿಸಿತು. ಯಾರೇ ಬೆಳೆಸಲಿ, ಎಲ್ಲೇ ಇರಲಿ ಅದನ್ನು ನೋಂದಾಯಿಸಿಕೊಳ್ಳಬೇಕು, ಬುಡದಲ್ಲಿ ಬಿಳಿ ಬಣ್ಣ ಬಳಿಯಬೇಕು ಎಂದು ಸರ್ಕಾರ ಆದೇಶಿಸಿತು. ಶ್ರೀನಗರ ಸಮೀಪವಿರುವ ನಸೀಮಾಬಾಗ ಎಂಬ ಮುಘಲ್ ಗಾರ್ಡನ್‌ನಲ್ಲಿ ಕಾಶ್ಮೀರ ಯುನಿವರ್ಸಿಟಿಯು ಸುಮಾರು 700 ಚಿನಾರ್ ವೃಕ್ಷಗಳನ್ನು ನೆಟ್ಟು ಹೆರಿಟೇಜ್ ಪಾರ್ಕನ್ನಾಗಿ ಅಭಿವೃದ್ಧಿಪಡಿಸುತ್ತಿದೆ.

ಮುಘಲ್ ಗಾರ್ಡನ್ ಶಾಲಿಮಾರ್

ಕ್ರಿ.ಶ 1619ರಲ್ಲಿ ಮುಘಲ್ ದೊರೆ ಜಹಾಂಗೀರನು ಈ ಉದ್ಯಾನವನ್ನು ರೂಪಿಸಲು ಕಾರಣನಾದ. ಇದು ಮುಘಲ್ ದೊರೆಗಳಿಗೆ ತೋಟಗಾರಿಕೆಯಲ್ಲಿರುವ ಸೌಂದರ್ಯಪ್ರಜ್ಞೆಯ ದ್ಯೋತಕವಾಗಿದೆ ಎನ್ನುವುದನ್ನು ವಿಶ್ವ ಪಾರಂಪರಿಕ ಪಟ್ಟಿಯಲ್ಲಿ ಸೇರ್ಪಡೆ ಮಾಡುವಾಗ ಪ್ರಸ್ತಾವನೆಯಲ್ಲಿ ಹೇಳಲಾಗಿದೆ. ಇದನ್ನು ಶ್ರೀನಗರದ ಕಿರೀಟ ಎಂದೂ ಬಣ್ಣಿಸಲಾಗುತ್ತದೆ. ಮುಘಲರ ಕಾಲದಲ್ಲಿ ಈ ಶಾಲಿಮಾರ್ ಉದ್ಯಾನವು ‘ರಾಯಲ್ ಗಾರ್ಡನ್’ ಆಗಿತ್ತು. ಜಹಾಂಗೀರನು ರ್‍ಹಾಬಕ್ಷ್ (ಆನಂದಾತಿರೇಕ) ಎಂದು ಉದ್ಗರಿಸಿದ್ದರೆ, ಕ್ರಿ.ಶ. 1630 ರಲ್ಲಿ ಅಧಿಕಾರಕ್ಕೆ ಬಂದಿದ್ದ ಶಾಹ್‌ಜಾನನು ಕಾಶ್ಮೀರದಲ್ಲಿರುವ ತನ್ನ ಗವರ್ನರ್ ಝುಫರ್‌ಖಾನ್‌ನಿಗೆ ಆದೇಶ ಮಾಡಿ, ಇನ್ನಷ್ಟು ಸೌಂದರ್ಯದಿಂದ ಕಂಗೊಳಿಸುವಂತೆ ಮಾಡಲು ಸೂಚಿಸಿದ್ದ. ನಂತರ ಅದನ್ನು ಫೈಝ್ ಬಕ್ಷ್ (ಸಮೃದ್ಧಿ) ಎಂದು ಕರೆದ.

ಆನಂತರ ಮಹಾರಾಜಾ ರಣಜಿತ್ ಸಿಂಗ್‌ನ ಅವಧಿಯಲ್ಲಿ ಶಾಲಿಮಾರ್ ಬಾಗ್‌ನಲ್ಲಿ ಯುರೋಪಿಯನ್‌ರಿಗೆ ಮತ್ತು ವಿಶೇಷ ಅತಿಥಿಗಳಿಗೆಂದು ನಿರ್ಮಿಸಿದ್ದ ಪೆವಿಲಿಯನ್‌ಗೆ ಮಾರ್ಬಲ್ ಅಳವಡಿಸಿದ್ದರೆ, ಮಹಾರಾಜಾ ಹರಿಸಿಂಗ್‌ನ ಅವಧಿಯಲ್ಲಿ ಇಡೀ ಉದ್ಯಾನವನ್ನು ವಿದ್ಯುದೀಕರಣದಿಂದ ಅಲಂಕಾರ ಮಾಡಲಾಗಿದೆ. ಹೀಗೆ ಬೇರೆ ಬೇರೆ ರಾಜರುಗಳ ಆಡಳಿತಾವಧಿಯಲ್ಲಿ ಶಾಲಿಮಾರ್ ಉದ್ಯಾನ ಅಭಿವೃದ್ಧಿಗೊಂಡು ಬೇರೆ ಬೇರೆ ಹೆಸರುಗಳನ್ನು ಪಡೆದುಕೊಂಡಿದೆಯಾದರೂ, ‘ಶಾಲಿಮಾರ್ ಬಾಗ್’ ಹೆಸರು ಮಾತ್ರವೇ ಜನಪ್ರಿಯವಾಗಿ ಉಳಿದಿದೆ.

